Clause 1, the Long Title, the Preamble and the Enacting formula were added to the Bill.

Motion to Pass

SRI A. LAKSHMISAGAR.--Sir, I beg to move:--

"That the Code of Criminal Procedure (Karnataka Amendment) Bill, 1985 be passed".

MR. SPEAKER.—That the question is.—

"That the Code of Criminal Procedure (Karnataka Amendment) Bill, 1985 be passed.

THE MOTION WAS ADOPTED AND BILL WAS PASSED

MOTION OF THANKS ON THE GOVERNOR'S ADDRESS

SRI J. A. FERNANDS (Nominated).—Mr. Speaker Sir, the Address of the Governor to the Joint Session of the Legislature is very interesting. Promise of clean and efficient administration by the Janatha Government is one of the hopes for the people of the State. People did not like one party rule in both States and at the Centre, People felt that Opposition Party Government in Karnataka i.e., Janathe Party Government has done wonderful work for the past two years, and therefore, they gave their mandate in favour of the Janatha Government to continue their unfinished task. If the same is not there both at the Centre as well as in States it would safeguard the interests of the people rather than agreeing to the dictates of the Centre without offering any remarks. Now the present Janath Government has received a clear mandate from the people Therefore, it is necessary that the Government should take immediate steps to tone up the administrative machisnery at all levels so that the people of Karnataka will be able to feel a change of Government. It is also hoped that the Janatha Government will wipe out corruption which has become a way of life in most of the countries. The Government has come out with a scheme called 'employment guarantee scheme'. it is a good one, but it requires tremendous amount of administrative work to ensure that the benefits would reach to the peesons to whom it is really intended. Distribution of rice sarees, dhotis, kurthas and other things at concessional rates require tremendous amount of administrative work. I hope these necessary things will be distributed to the poor people without any red-tapism.

11-30 A.M.

I mention this because in the old-age pension scheme that we have in the State, there is such a backlog that many of the people

have been asked to travel to the Thasildar's office and various departments at various levels atleast a dozen times. There are cases of old-age pension applications pending for a couple of years. Some of those who had applied for this pension have passed away. As a result, the scheme which is intended to benefit the senior citizens has failed to do so in many respects. It is also important that the intermediary should be completly eliminated in the various Government departments. I know for a fact that some pensions have been granted where corruption has been rampant. I would appeal to the Government to ensure that in all the departments where permits and licences are required, the middlemen are eliminated from the corridors of those offices.

In the question of Minority Development Corporation, this is one of the greatest hopes that the minorities have. If this Government can work out the scheme effectively and efficiently, I think it will be doing great service to the minorities. In fact, I had personal experience to take a loan from the Bank. To get a loan from the Bank, demands so much of effort that the small amount asked for is hardly worth for all the troubles. In some cases we have been able to get money from our few friends, but to get a loan from the Bank, we have to run up and down a dozen times. It is an impossibility to get a loan from the Bank, especially for the less fortunate and weaker sections of the minorities. I sincerely trust that in the development of the minorities and in the establishment of the Minorities Development Corporation, adequate representation should be given to those minorities who are really affected by the present economic squeez. Unless this is done, I am afraid that the situation is not likely to take a turn for the better.

Another request that I would like to make is that in particular reference to my own community, some reservation should be made for us in the State Government Undertakings as well as in Government offices. It is difficult proposition to get a job today. No doubt, while the Government is guaranteeing one job per member of the family. I don't think that this will perculate down to every family in the urban areas. It might work out in the rural sector. But in the urban areas, this is going to be a practically impossible task. Never the less, my best wishes that the Government would succeed in this venture.

I would like to point out with reference to reservation that hitherto there has been a very little emphasis paid to our community. I happen to represent a community and I am unlike any other M.L.A. here. I hope you will pardon me if I take little time over this

subject. If I am permitted to refer to Article 338 of the Constitution of India. there is a point made in this connection :

Sub-clause (3) reads as under :

> "In this article, references to the Scheduled Castes and Scheduled Tribes shall be construed as including references to such other backward classes as the President may, on receipt of the report of a Commission appointed under clause (1) of article 340, by order specify and also to the Anglo-Indian community."

In the year 1983, I raised this poi t on the floor of the House and I was assured that atleast in Karnataka, a Special Officer would be appointed to look into the conditions of the Anglo-Indian community. but that was in particular reference to the education scenerio. I honestly believe as I had experience for the last two years that a greater interest is required, otherwise this community will extinguish. It is not that we have not got the capacity. We have that capacity. But we need some recognition and your help. Unless the major communities come to our help, our situation is likelv to deteriorate further and the purpose of representing the community in the Legislative Assembly, which is a great privilege and honour, would be defeated.

This are the important points I would like to make. I hope that the Monsoon will be good one and in the coming years, the Karnataka State would increase in its prosperity. With these words, I thank the Chair for the opportunity given to me.

ಶ್ರೀ ಕೆ.ಎಚ್. ಪಾಟೀಲ್.—(ಗದಗ್) ಮಾನ್ಯ ಸಭಾಧ್ಯಕ್ಷರೇ, ನಮ್ಮ ರಾಜ್ಯದ ರಾಜ್ಯಪಾಲರು ಮಾಡಿದ ಭಾಷಣವನ್ನು ನಾನು ಬಹಳ ಕೂಲಂಕುಷವಾಗಿ ಕೇಳಿದ್ದೇನೆ ಹಾಗೂ ಮತ್ತೆ ಮತ್ತೆ ಓದಿದೆ. ಇದು ನಿಜವಾಗಿಯೂ ರಾಜ್ಯಪಾಲರ ಭಾಷಣವೇ ಎಂಬ ಪ್ರಶ್ನೆಯನ್ನು ನನಗೆ ನಾನೇ ಉತ್ತರ ಕೊಡುವ ಹಾಗೆ ಹಾಕಿಕೊಂಡೆ. ರಾಜ್ಯಪಾಲರು ನಿಜವಾಗಿಯೂ ನಮ್ಮ ಭಾರತದ ಘಟನೆಯನ್ನು ಎತ್ತಿ ಹಿಡಿಯುವ ಸಂಪ್ರದಾಯದಲ್ಲಿ ಅಗ್ರಗಣ್ಯರಾಗಿದ್ದಾರೆ. ನಿಜ, ಅವರು ರಾಜ್ಯಸರ್ಕಾರದ ಮಂಜೂರಾತಿಯನ್ನು ಪಡೆದ ಭಾಷಣವನ್ನೇ ಓದುವ ಸಂಪ್ರದಾಯ ಇದೆ. ಆದರೆ ಸ್ವಭಾವತಃ ರಾಜ್ಯಪಾಲರು ಸರ್ಕಾರವನ್ನು ಹಿಡಿತದಲ್ಲಿ ಇರಿಸಿ ಅವರಿಗೆ ಯೋಗ್ಯವಾದ ಬುದ್ಧಿವಾದ ಹೇಳಿ ಇಲ್ಲಿ ಯಾವ ಮಾತುಗಳನ್ನು ಇಡಬೇಕೆನ್ನುವ ಬಗ್ಗೆ ವಿವೇಕವನ್ನು ಹೇಳಿದ್ದರೆ ಹೆಚ್ಚು ಚೆನ್ನಾಗಿ ಇದು ಆಗುತ್ತಾ ಇತ್ತು. ಚುನಾವಣೆ ಮುಗಿದ ಕೂಡಲೇ ಬಹಳ ಪ್ರಭಲವಾದ ಬೆಂಬಲವನ್ನು ಈ ಸರ್ಕಾರ ಪಡೆದಿದೆ ಎನ್ನುವ ಭಯದಿಂದ ರಾಜ್ಯಪಾಲರು ಈ ಸರ್ಕಾರ ಏನೇನು ಹೇಳಿದೆಯೋ ಅದನ್ನು ಹೇಳಿದ್ದಾರೆ ; ಅರ್ಥಾತ್ ರಾಜ್ಯಪಾಲರ ಬಾಯಿ ಸರ್ಕಾರದ ಲೇಖಣಿಗೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಶ್ರೀಮತಿ ನಾಗರತ್ನಮ್ಮನವರು ಬಹಳ ಸ್ವಾರಸ್ಯವಾಗಿ ಈ ಭಾಷಣದ ಬಗ್ಗೆ, ರಾಜ್ಯಪಾಲರ ಬಗ್ಗೆ ವಿವರಣೆ ಕೊಟ್ಟಿದ್ದಾರೆ. ಆ ವಿವರಣೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕೆಲವು ಮಾತುಗಳನ್ನು ಹೇಳುತ್ತೇನೆ. ರಾಜ್ಯಪಾಲರು ಇಲ್ಲಿ ತಮ್ಮ ಕರ್ತವ್ಯವನ್ನು ಮರೆತಿದ್ದಾರೆ. ಈ ರಾಜ್ಯದ ಘಟನೆಗಳಿಗೆ ಹಿರಿಯರಾದ ರಾಜ್ಯಪಾಲರು ಕೇಂದ್ರ ಸರ್ಕಾರದ ನಿಲುಮೆಗೆ, ನೀತಿಗೆ ಒಳಪಟ್ಟವರಾಗಿರಬೇಕು. ಇವರು ಉಭಯ ಸರಕಾರಗಳಿಗೂ ಹೊಣೆಗಾರರಾಗಿ ಕೆಲಸ ಮಾಡಬೇಕು. ಇವತ್ತು ಇವರು ಹೇಳುವ ರೀತಿಯಲ್ಲಿ ಚುನಾವಣೆಗೂ, ಇವರಿಗೂ ಏನು ಸಂಬಂಧ? ಎಲ್ಲಮ್ಮನಗುಡ್ಡಕ್ಕೂ ಮುಲ್ಲಾ ಸಾಬರಿಗೂ ಏನು

ಸಂಬಂಧ? ಇದನ್ನು ಹೇಳಿಸುವುದಕ್ಕೆ ಏಕೆ ಈ ಸರ್ಕಾರದವರು ಇವರನ್ನು ಉಪಯೋಗ ಮಾಡಿಕೊಂಡಿದ್ದಾರೆ' ಪ್ರಾಯಶಃ ಸರ್ಕಾರದವರು ಬಹಳ ಬುದ್ಧಿವಂತಿಕೆಯಿಂದ ಈ ರಾಜ್ಯಪಾಲರನ್ನು "ಉಪಯೋಗ ಮಾಡಿ ಕೇಂದ್ರ ಸರ್ಕಾರದಿಂದ ತಾವು ಮಾಡಿದ ಕೃತ್ಯಗಳಿಗೆ ಬೆಂಬಲ ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಇವನ್ನೆಲ್ಲಾ ವಿವೇಚನೆ ಮಾಡಬೇಕಾಗುತ್ತದೆ. ಇವತ್ತು "ನವಯುಗ ಪ್ರಾರಂಭವಾಗಿದೆ" ಎಂದು ಹೇಳಿದ್ದಾರೆ. ಮಾನ್ಯ ದೇವೇಗೌಡರು ಪುನಃ ಮಂತ್ರಿಮಂಡಲಕ್ಕೆ ಬಂದಿದ್ದು ನವಯುಗವೇ ? ಅಥವಾ ಒಂದು ತಿಂಗಳ ಹಿಂದೆ ತಾನೇ ಅತ್ಯಂತ ಕನಿಷ್ಟ ಅವಧಿಯಲ್ಲಿ ಪರಾಭವಗೊಂಡ ಈ ಪಕ್ಷ ಒಂದೇ ತಿಂಗಳಲ್ಲಿ ಮಾಯಾಮಂತ್ರ ಮಾಡಿದ್ದು ನವಯುಗವೇ ? ಅಥವಾ ಜನತೆಯ ಬೆಂಬಲ ಇಲ್ಲದಿದ್ದರೂ ಅದು ಬಿರುವ ರೀತಿ ವರ್ತನೆ ಮಾಡಿದ ಸರ್ಕಾರ ಇಷ್ಟೊಂದು ಪ್ರಭಲವಾಗಿ ಇಲ್ಲಿಯವರೆಗೆ ನಿಂತಿದ್ದು ನವಯುಗವೇ ಎಂಬುದನ್ನು ನೋಡಬೇಕು. ೧ ತಿಂಗಳಲ್ಲಿ ಏನು ನವಯುಗ ಆಯಿತು ? ಮತ್ತೆ ಏನಾದರೂ ಹೆಚ್ಚು ಎಂದರೆ ಕ್ರಾಂತಿಕಾರಣ ಬದಲಾವಣೆ ಎಂದು ಹೇಳಬಹುದೇ ? ಅಧ್ಯಕ್ಷರೇ, ಕೇವಲ ೧.೯೦ ಪರ್ಸೆಂಟ್ ಮತಗಳನ್ನು ಹೆಚ್ಚು ಪಡೆದಿದ್ದು ನವಯುಗವೇ ? ಅಥವಾ ಇಷ್ಟು ಮತ ಗಳನ್ನು ಹೆಚ್ಚು ಪಡೆಯಬೇಕಾದರೆ ಪಟ್ಟ ಪರಾಕಾಷ್ಠೆ ಏನು ಗೊತ್ತೇ ?

ತಮಗೆ ಯೋಗ್ಯತೆ ಇಲ್ಲದಿದ್ದರೂ ಅಕ್ಕಿ ಕೊಡುತ್ತೇವೆಂದು ಹೇಳಿದರು. ಫೈನಾನ್ಸ್ ಡಿಪಾರ್ಟ್ ಮೆಂಟಿನವರನ್ನು ಕನ್‌ಸಲ್ಟ್ ಮಾಡಿ ಸ್ಕೀಂ ಮಾಡಿದೇವೆ ಎಂದು ಬೊಮ್ಮಾಯಿಯವರು ಹೇಳಿದರು. ಅದನ್ನು ಪತ್ರಿಕೆಗಳವರು ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬರೆದರು. ಬಡಪಾಯಿಗಳು ಅದನ್ನು ನಂಬಿದರು. ಇವರು ಹರಿಶ್ಚಂದ್ರನ ಅವತಾರ ಎಂದು ನಂಬಿದರು. ಮಾನ್ಯ ರಾಜ್ಯಪಾಲರೇ ಇವರನ್ನು ನಂಬಿದ್ದಾರೆ. ಇನ್ನು ಬಡಪಾಯಿಗಳು ನಂಬುವುದು ಏನು ದೊಡ್ಡ ಮಾತು ? ಇವರಿಗೆ ಜನ ಮತ ಕೊಟ್ಟಿದ್ದಾರೆ ಎಂದು ಹೇಳಿದ್ದಾರೆ. ಚುನಾವಣೆ ಯಾವರೀತಿಯಾಗಿ ನಡೆದಿದೆ ಎಂಬುದನ್ನು ಸಹ ತಾವು ಯೋಚನೆ ಮಾಡಬೇಕು. ಗೌರೀಬಿದನೂರಿನಲ್ಲಿ ರಿಗ್ಗಿಂಗ್ ಆಗಿದೆ ಎಂಬ ಕಾರಣಕ್ಕೆ ೧೧ ಪೋಲಿಂಗ್ ಬೂತ್‌ಗಳಲ್ಲಿನ ಮತಗಳನ್ನು ಎಣಿಸದೇ ಹಾಗೇ ಫಲಿತಾಂಶ ಪ್ರಕಟ ಮಾಡಿದರು. ೧೧ ಬೂತ್‌ಗಳಲ್ಲಿ ರಿಗ್ಗಿಂಗ್ ಆಗಿದೆ ಎಂದು ಸರ್ಕಾರಿ ಅಧಿಕಾರಿಗಳು ಹೇಳಿರುವಾಗ ಇನ್ನು ಎಷ್ಟು ಜಾಗಗಳಲ್ಲಿ ಇದೇರೀತಿ ರಿಗ್ಗಿಂಗ್ ಆಗಿದೆ ಎಂಬುದನ್ನು ವಿವೇಚನೆ ಮಾಡಬೇಕು. ಹಿಂದೆ ರೆವಿನ್ಯೂ ಮಿನಿಸ್ಟರಾಗಿದ್ದ ಮಾನ್ಯ ಹುಚ್ಚಮಾಸ್ತಿಗೌಡರ ಕ್ಷೇತ್ರದಲ್ಲಿ ೮ ಸಾವಿರಕ್ಕಿಂತ ಹೆಚ್ಚು ಜನ ಎರಡು ತಿಂಗಳ ಹಿಂದೆ ೧೭–೧೮ ವಯಸ್ಸಾಗಿದ್ದವರು ಇವತ್ತಿನ ದಿವಸ ೨೩ ವಯಸ್ಸಿನವರಾಗಿದ್ದಾರೆ. ಎರಡು ಮೂರು ತಿಂಗಳಲ್ಲಿ ಐದೈದು ವರ್ಷ ಬೆಳೆಯುತ್ತಾರಾ ? ಇದು ನಮಗೆ ಸಂಬಂಧಿಸಿದ ವಿಚಾರವಲ್ಲ ಎಂದು ನೀವು ಹೇಳ ಬಹುದು. ಕೇಂದ್ರ ಸರ್ಕಾರದ ಚುನಾವಣೆ ಆಯೋಗದವರ ಕೆಲಸ ಎಂದು ಹೇಳಬಹುದು. ಈ ಕೆಲಸ ವನ್ನು ಮಾಡಿದವರು ನಿಮ್ಮ ಅಧಿಕಾರಿಗಳು ಎಂಬುದನ್ನು ಮರೆಯುವುದಕ್ಕಾಗುತ್ತದೆಯೇ ? ಕೇಂದ್ರ ಸರ್ಕಾರದವರು ಇಲ್ಲಿ ಬಂದು ಬರೆಯುವುದಕ್ಕಾಗುತ್ತದೆಯೇ ? ಚುನಾವಣಾ ಆಯೋಗದವರೂ ಈ ಸರ್ಕಾರ ನ್ಯಾಯವಾಗಿ ಚುನಾವಣೆ ಮಾಡುತ್ತದೆ ಎಂಬುದನ್ನು ನಂಬುತ್ತಾರೆ. ನಿಮ್ಮ ಮೇಲೆ ವಿಚಾರಣೆ ಮಾಡಲಿಕ್ಕೆ ಸಮಿತಿ ನೇಮಿಸಲಿಲ್ಲ. ವೀಕ್ಷಕರನ್ನು ಕಳುಹಿಸಿಲ್ಲ. ಇದು ದುರ್ದೈವ. ಅದೇನೇ ಇರಲಿ, ನೀವು ಗೆದ್ದಿದ್ದೀರಿ. ನಾವು ಸೋತಿದ್ದೇವೆ. ನೀವು ಗೆದ್ದಿದ್ದೀರಿ ಎಂಬ ಭಾವನೆಯಿಂದ ನಾನು ಈ ಮಾತುಗಳನ್ನು ಹೇಳುತ್ತಿಲ್ಲ. ನಾವು ಸೋಲನ್ನು ಒಪ್ಪಿದ್ದೇವೆ. ನಿಮಗೆ ಮತ ಕಡಿಮೆ ಬಿದ್ದರೂ ನೀವೇ ರಾಜ್ಯವನ್ನು ಆಳಿ ಮಾನ್ಯ ದೇವೇಗೌಡರೇ.........

ಶ್ರೀ ಎಂ. ಎಸ್. ಪಾಟೀಲ್.— ಮಾನ್ಯ ದೇವೇಗೌಡರು ಮುಖ್ಯ ಮಂತ್ರಿಗಳಾದರೆ ನಾನು ಬೆಂಬಲ ಕೊಡುತ್ತೇನೆ. ನನಗೆ ಬಹಳ ಸಂತೋಷ.

ಶ್ರೀ ಆರ್. ಎನ್. ನಾಯಕ್.—ನನಗಂತೂ ಸಂತೋಷ ಅಷ್ಟಿಷ್ಟಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಚುನಾವಣೆ ವಿಷಯವನ್ನು ಮರೆಯೋಣ. ತಾವು ಬಹುಸಂಖ್ಯಾತ ರಾಗಿದ್ದೀರಿ. ಮಾನ್ಯ ಹೆಗಡೆಯವರು ಮುಖ್ಯ ಮಂತ್ರಿಗಳಾಗಿದ್ದಾರೆ. ನಾವು ವಿರೋಧಪಕ್ಷದಲ್ಲಿದ್ದೇವೆ. ಆದರೂ ಸಂತೋಷ. ಎಲ್ಲ ಕಾಲಕ್ಕೂ ಕಾಂಗ್ರೆಸ್ಸೇ ಅಧಿಕಾರದಲ್ಲಿ ಇರಬೇಕು ಎಂದು ಹೇಳಿದರೆ ಅದು ಸೂಕ್ತವಲ್ಲ. ಕೆಲವು ಸಂದರ್ಭದಲ್ಲಿ ಕಾಂಗ್ರೆಸ್ ವಿರೋಧಪಕ್ಷದಲ್ಲಿರಬೇಕು. ತಾವು ಅಧಿಕಾರದಲ್ಲಿದ್ದಾಗ ಏನು ಮಾಡುತ್ತೀರಿ ಎಂಬುದನ್ನು ಜನ ನೋಡಬೇಕು. ಪ್ರಜಾ ಪ್ರಭುತ್ವದಲ್ಲಿ ಒಂದೇ ಪಕ್ಷ ಅಧಿಕಾರ ದಲ್ಲಿರಬೇಕು ಎನ್ನುವುದು ಸಮರ್ಥನೀಯವಲ್ಲ. ನೀವು ಅನೇಕ ವಚನಗಳನ್ನು ಕೊಟ್ಟಿದ್ದೀರಿ. ಜನತೆ

ಅದನ್ನು ನಂಬಿದೆ. ಕಾಂಗ್ರೆಸ್‌ನವರು ಚೂರಿ ಚಾಕು ಸಂಸ್ಕೃತಿಯ ಜನ ಎಂದು ಹೇಳಿದ್ದೀರಿ. ತಾವು ಅಮೃತ ತಂದುಕೊಡುವವರು. ಮೊದಲಾದ ಬಣ್ಣನೆಯ ಮಾತುಗಳನ್ನು ಹೇಳಿ, ಜನ ನಂಬುವಂತೆ ಮಾಡಿ ಅಧಿಕಾರದಲ್ಲಿ ಬಂದಿದ್ದೀರಿ. ತಾವು ಕೊಟ್ಟ ಆಶ್ವಾಸನೆಗಳನ್ನು ಎಷ್ಟು ಕಾಲದಲ್ಲಿ ಈಡೇರಿಸುತ್ತೀರಿ ಎಂದು ಕೇಳಿದರೆ ಸಮರ್ಪಕವಾದ ಉತ್ತರವನ್ನು ಕೊಡುವುದಿಲ್ಲ. ನಾವು ಕೇಳಿದ ಪ್ರಶ್ನೆಗಳಿಗೆ ಒಂದು ದಿನವೂ ಸಮರ್ಪಕವಾದ ಉತ್ತರಗಳು ಬಂದಿಲ್ಲ. ಪರಿಶೀಲನೆ ಮಾಡುತ್ತೇವೆ, ನೋಡುತ್ತೇವೆ ಎಂದು ಸ್ಟೀರಿಯಾ ಟೈಪ್ ಉತ್ತರ ಕೊಡುವುದು ಬಿಟ್ಟರೆ ಬೇರೆ ಉತ್ತರವೇ ಇಲ್ಲ. ಉತ್ತರಗಳು ಕೂಡಾ ಮಂತ್ರಿಗಳ ಮಂಜೂರಾತಿಯಿಂದ ಬಂದಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಸೆಕ್ರೆಟರಿಯವರ ಸಹಿಯಲ್ಲಿ ಅದು ಬರುತ್ತದೆ. ತಮಗೆಲ್ಲಾ ಅನುಭವವಿರುವಂತೆ ಸದಸ್ಯರ ಪ್ರಶ್ನೆಗಳಿಗೆ ಉತ್ತರಗಳು ಸೆಕ್ರೆಟರಿಯವರ ಸಹಿಯಿಂದ ಬರುತ್ತಿರಲಿಲ್ಲ. ಮಂತ್ರಿಗಳ ಸಹಿಯಿಂದ ಉತ್ತರಗಳು ಪ್ರಿಂಟ್ ಆಗಬೇಕಾಗಿತ್ತು. ಅದೇಕೋ ಬದಲಾವಣೆಯಾಗಿದೆ. ನಾವೇನಾದರೂ ಕೇಳಿದರೆ ನೀವು ಹಿಂದೆ ಹಾಗೆ ಮಾಡಿದ್ದೀರಿ ಎಂದು ಹೇಳುತ್ತೀರಿ. ನಾವು ಹಿಂದೆ ತಪ್ಪು ಮಾಡಿರಬಹುದು. ಅದಕ್ಕೇ ಅಧಿಕಾರದಲ್ಲಿಲ್ಲ. ನೀವೂ ಅದೇ ಕೆಲಸ ಏತಕ್ಕೆ ಮಾಡುತ್ತೀರಿ ? ಏನಾದರೂ ಹೇಳಿದರೆ ಯಾವ ರಾಜ್ಯ ಸರಿಯಾಗಿ ಕೆಲಸ ಮಾಡಿಲ್ಲವೋ ಅದರ ಉದಾಹರಣೆ ಕೊಟ್ಟು ಅವರಿಗಿಂತ ನಾವು ಉತ್ತಮ ಎಂದು ಹೇಳುತ್ತೀರಿ. ಚಲೋ ಪ್ರದೇಶಕ್ಕೆ ಹೋಗಿ ನೋಡಿ. ಗುಜರಾತಿಗೆ, ಮಹಾರಾಷ್ಟ್ರಕ್ಕೆ ಹೋಗಿ. ಉತ್ತಮವಾದುದನ್ನು ತೆಗೆದುಕೊಳ್ಳಿ, ಉತ್ತಮವಾದುದನ್ನು ನೋಡಿ ರಾಜ್ಯವನ್ನು ಉತ್ತಮ ಮಾಡೋಣ, ನಾವೂ ಸಹಾಯ ಮಾಡುತ್ತೇವೆ. ನಾವು ಹೇಳುವುದನ್ನು ಕೇಳುವ ಸೌಜನ್ಯತೆ ಕಲಿಯಿರಿ. ಮಾನ್ಯ ರಾಜ್ಯಪಾಲರು ಕೊಟ್ಟ ನವಯುಗ ಈಗ ಪ್ರಾರಂಭವಾಗಿದೆ. ರಾಜ್ಯದ ಜನರಿಗೆ ಸ್ವಚ್ಛ ಹಾಗೂ ದಕ್ಷ ಆಡಳಿತವನ್ನು. ಮೌಲ್ಯಾಧಾರಿತ ರಾಜಕಾರಣವನ್ನು ನೀಡುವ ಭರವಸೆ ಕೊಡುತ್ತೇನೆಂದು ರಾಜ್ಯಪಾಲರು ಹೇಳಿದ್ದಾರೆ. ರಾಜ್ಯಪಾಲರು ಈ ಭರವಸೆಯನ್ನು ಏತಕ್ಕೆ ಕೊಡಬೇಕು ? ಅವರ ಕೈಯಲ್ಲಿ ಇದು ಆಗುತ್ತದೆಯೇ ? ಮಾನ್ಯ ಹೆಗಡೆಯವರಿಂದ ಮೌಲ್ಯಾಧಾರಿತ ರಾಜಕಾರಣವನ್ನು ಕೊಡಿಸುವುದಕ್ಕೆ ಇವರಿಗೆ ಸಾಧ್ಯವೆ ? ರಾಜ್ಯಪಾಲರು ಕಂಟ್ರೋಲಿಂಗ್ ಪವರ್ ಉಪಯೋಗ ಮಾಡಬಹುದೇ ಹೊರತು ಬೇರೇನೂ ಸಾಧ್ಯವಿದೆ ? ರಾಜಕಾರಣ ಎಂದರೆ ಬರೀ ಎಂ ಎಲ್.ಎ ಆಗುವುದು, ಮಂತ್ರಿ ಆಗುವುದು ಮಾತ್ರವಲ್ಲ. ವಿರೋಧಪಕ್ಷಗಳನ್ನು ಪ್ರಾಮಾಣಿಕವಾಗಿ ವಿಶ್ವಾಸಕ್ಕೆ ತೆಗೆದುಕೊಂಡು ಅವರು ಹೇಳತಕ್ಕ ಮಾತುಗಳನ್ನು ಕೇಳಿ ಯೋಗ್ಯವಾದ ಸಲಹೆಗಳನ್ನು ಸ್ವೀಕರಿಸಿ ಅವರ ಮನಸ್ಸಿಗೆ ತೃಪ್ತಿ ಮಾಡಿ ಜನತೆಯ ಬೆಂಬಲವನ್ನು ತೆಗೆದುಕೊಳ್ಳುವುದು ನಿಜವಾದ ರಾಜಕಾರಣ. ನೀವು ಎಂಥ ಮೌಲ್ಯಾಧಾರಿತ ರಾಜಕಾರಣ ಮಾಡುತ್ತೀರಿ ? ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ಈ ಪಕ್ಷದವರ ಬಗ್ಗೆ ದೊಡ್ಡ ಹೆಡ್ಡಿಂಗ್ ಕೊಟ್ಟು ಬರೆದಿದ್ದಾರೆ. ಅದನ್ನು ನೋಡಿದರೆ ಇವರ ಮೌಲ್ಯಾಧಾರಿತ ರಾಜಕಾರಣ ಗೊತ್ತಾಗುತ್ತದೆ. ಅದರಲ್ಲೇನು ಬಂದಿದೆ ಎಂಬುದನ್ನು ಉಲ್ಲೇಖ ಮಾಡುವುದಕ್ಕೆ ನಾನು ಇಷ್ಟಪಡುವುದಿಲ್ಲ

ಶ್ರೀ ಏಚ್. ಡಿ. ಚೌಡಯ್ಯ.—ನಾವು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯನ್ನು ಓದಿಲ್ಲ. ಅದರಲ್ಲೇನಿದೆ ಎಂಬುದನ್ನು ಸೂಚ್ಯವಾಗಿಯಾದರೂ ಹೇಳುವುದು ಉತ್ತಮ.

ಅಧ್ಯಕ್ಷರು.—ಆಮೇಲೆ ಓದಿ ನೋಡಿ.

ಶ್ರೀ ಕೆ. ಎಚ್. ಪಾಟೀಲ್.—ಮೌಲ್ಯಾಧಾರಿತ ರಾಜಕಾರಣವನ್ನು ಕೊಡುತ್ತೇವೆ ಎಂಬ ಮಾತನ್ನು ರಾಜ್ಯಪಾಲರು ಲಿಖಿತ ಮೂಲಕ ಜನತೆಗೆ ಹೇಳಿದ್ದಾರೆ. ಅದಕ್ಕಾಗಿ ನಾನು ಈ ಮಂತ್ರಿಮಂಡಲದವರನ್ನು ಕೇಳುತ್ತೇನೆ, ಇಲ್ಲಿಯವರೆಗೂ ನಿಮಗೆ ಆಗಿಲ್ಲ ಇನ್ನು ಮುಂದಾದರೂ ಕೊಡುತ್ತೀರಾ? ಈಗ ೧೨ ಗಂಟೆಗೆ ೧೦ ನಿಮಿಷ ಇದೆ. ೧೨ ಗಂಟೆ ಮೇಲಾದರೂ ಮೌಲ್ಯಾಧಾರಿತ ರಾಜಕಾರಣವನ್ನು ಪ್ರಾರಂಭ ಮಾಡುತ್ತೀರಾ ? ಯಾವುದು ಮೌಲ್ಯಾಧಾರಿತವಲ್ಲವೋ ಅದನ್ನು ತೆಗೆದುಹಾಕಿ. ನಿಮ್ಮಲ್ಲಿ ಚಾಕು ಚೂರಿ ಸಂಸ್ಕೃತಿ ಇರಲಿಲ್ಲವೇ ಎಂದು ಕೇಳಿದ್ದೀರಿ, ಹೌದು ನಮ್ಮಲ್ಲಿತ್ತು. ಅದಕ್ಕೋಸ್ಕರವೇ ಜನಸೇವೆ ಮಾಡಿದ ಪಕ್ಷವಾದರೂ ನಾವು ಮಾಡಿದ ತಪ್ಪಿಗಾಗಿ ಜನ ನಮ್ಮನ್ನು ಹೊರಗೆ ಹಾಕಿದ್ದಾರೆ. ನೀವು ಅದೇ ರೀತಿ ಮಾಡಬೇಡಿ ಎಂದು ಬುದ್ಧಿ ಹೇಳಿದ್ದೇವೆ. ತಂದೆ ಮಗನಿಗೆ ಚುಟ್ಟ ಸೇದಬೇಡ ಎಂದು ಹೇಳಿದರೆ ಮಗ ನೀನ್ಯಾಕೆ ಸೇದುತ್ತೀಯಾ ಎಂದರೆ ಯಾವ ರೀತಿ ಆಗುತ್ತದೋ ಅದೇ ರೀತಿ ಆಗಿದೆ ತಾವು ಹೇಳುವುದು. ಮಂತ್ರಿ ಮಂಡಲದಲ್ಲಿ ಲಂಚ ತಿನ್ನಬೇಡಿ ಎಂದು ಹೇಳಿದರೆ, ನೀವು ತಿನ್ನಲಿಲ್ಲವೇ ಎಂದು ಹೇಳುವುದು ಸರಿಯಲ್ಲ. ನಿಮಗೆ ಈಗ ಅವಕಾಶ ಸಿಕ್ಕಿದೆ. ಸರ್ಕಾರದ ಸವಲತ್ತುಗಳನ್ನು

ಉಪಯೋಗ ಮಾಡಿಕೊಂಡು ಸಂಪೂರ್ಣವಾದ ಸೊಬಗನ್ನು ಸವಿದು ಸುಖಮಯ ಜೀವನ ಸಾಗಿಸುವುದರ ಜೊತೆಗೆ ಸರ್ಕಾರದ ಬೊಕ್ಕಸದಿಂದ ರೊಕ್ಕ ತೆಗೆದುಕೊಂಡು ಜನಸೇವೆ ಮಾಡುವ ಕೆಲಸವನ್ನು ಮಾಡಿ. ಆ ಹಕ್ಕು ತಮ್ಮದು. ನಾವೂ ಜನಸಾಮಾನ್ಯರೊಡನೆ ಬೆರೆತು ಒಂದಾಗಿ ಅವರ ಕಷ್ಟ ಸುಖಗಳನ್ನು ಕೇಳಿಕೊಂಡು ಅವರಿಗೆ ಅನುಕೂಲ ಮಾಡಿಕೊಡುವಂತೆ ನಿಮಗೆ ತಿಳಿಸಿ ಹೇಳತಕ್ಕ ಹಕ್ಕು ನಮ್ಮದು. ಈ ಉಭಯತ್ರರ ಹಕ್ಕುಗಳನ್ನೂ ಉಪಯೋಗಿಸಿಕೊಂಡು ಪ್ರಜಾಪ್ರಭುತ್ವವನ್ನು ಸುಖಮಯವನ್ನಾಗಿ ಮಾಡೋಣ. ಇಂಥ ನವಯುಗವನ್ನು ಪ್ರಾರಂಭಿಸಿ, ಒಳ್ಳೆಯ ಕೆಲಸ ಮಾಡಿ ಅಧಿಕಾರದಲ್ಲಿರಿ. ನಾವು ಇದ್ದಲ್ಲೇ ಇರೋಣ. ಜನ ನಮಗೆ ಈ ಸದನದಲ್ಲಿ ಜನಸೇವೆ ಮಾಡುವಂಥ ಹುಕುಂ ಕೊಟ್ಟಿರುವುದರಿಂದ ವಿರೋಧಪಕ್ಷದಲ್ಲಿ ಜನಸೇವೆ ಮಾಡುತ್ತೇವೆ.

ಸ್ವಚ್ಛ ಆಡಳಿತ ಎಂದರೆ ಏನು ಸ್ವಾಮಿ ? ನಾವು ಸ್ವಚ್ಛ ಆಡಳಿತವನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಇದಕ್ಕೆ ನಾನು ಒಂದೇ ಒಂದು ಮಾತನ್ನು ಹೇಳಲೆ ? ಇಲ್ಲಿ ನಮಗೆ ಒಂದು ಸಿವಿಲ್ ಲಿಸ್ಟನ್ನು ಕೊಟ್ಟಿದ್ದಾರೆ. ಈ ಸಿವಿಲ್‌ಲಿಸ್ಟ್‌ನಲ್ಲಿ ಯಾರು ಯಾರಿದ್ದಾರೆ ಎಂಬುದನ್ನು ನೋಡಿಕೊಳ್ಳುವುದಕ್ಕೆ ಕೊಟ್ಟಿದ್ದಾರೆ, ನಾನು ಈ ಸದನದ ಸದಸ್ಯನಾದಮೇಲೆ ನನಗೆ ಈ ಲಿಸ್ಟನ್ನು ಕೊಟ್ಟಿದ್ದಾರೆ. ಇದರಲ್ಲಿ ೧೯೮೩ನೇ ಇಸವಿ ಜೂನ್ ೧ನೇ ತಾರೀಖಿನವರೆಗೆ ಮಾಹಿತಿ ಇದೆ. ನಾವು ದಕ್ಷ ಆಡಳಿತವನ್ನು, ಸ್ವಚ್ಛ ಆಡಳಿತವನ್ನು ಕೊಡುತ್ತೇವೆಂದು ಹೇಳುವವರು ೧೯೮೫ರವರೆಗೆ ಮಾಹಿತಿಗಳನ್ನು ಒದಗಿಸಲು ಆಗುತ್ತಿರಲಿಲ್ಲವೆ ? ಇವರು ಕೊಟ್ಟ ಲಿಸ್ಟನ್ನು ತೆಗೆದುನೋಡಿದಾಗ ಇವರು ಎಷ್ಟು ದಕ್ಷತೆಯಿಂದ ಕೆಲಸಮಾಡಿದ್ದಾರೆಂದು ತಿಳಿದು ಬಂತು. ಇದರಲ್ಲಿ ಸತ್ತವರ ಮಾಹಿತಿಯೂ ಕೂಡ ಇದೆ. ಈ ಸಿವಿಲ್‌ಲಿಸ್ಟನ್ನು ಓದುವುದರ ಬದಲು ನಾನು ಒಂದು ಪ್ರಶ್ನೆಯನ್ನು ಕೇಳಬಯಸುತ್ತೇನೆ. ಇವತ್ತು ಅನೇಕ ಮಂತ್ರಿಗಳು ಇಲ್ಲಿ ಇಲ್ಲ. ಮಂತ್ರಿಗಳ ಮೇಕರ್ಸ್ ಯಾರಿದ್ದಾರೆ ಎಂದರೆ ಮಾನ್ಯ ದೇವೇಗೌಡರು ಇದ್ದಾರೆ. ನಾನು ಇವರನ್ನೇ ಒಂದು ಮಾತನ್ನು ಕೇಳುತ್ತೇನೆ. ಮೌಲ್ಯಾಧಾರಿತ ಕೆಲಸಗಳನ್ನು ಮಾಡುತ್ತೇವೆಂದು ಹೇಳುವವರು ಹರಿಜನ ಗಿರಿಜನರಿಗೆ ಉಪಕಾರ ಮಾಡುವವರು, ದುರ್ಬಲ ವರ್ಗದವರನ್ನು ಮೇಲೆತ್ತುವವರು, ಹಿಂದುಳಿದ ವರ್ಗದವರನ್ನು ಉದ್ಧಾರ ಮಾಡುವವರು, ಕಾಂಗ್ರೆಸ್ (ಐ) ಪಕ್ಷದ ಪರವಾಗಿರತಕ್ಕ ಜನರ ಅಭಿಮಾನವನ್ನು ಗಳಿಸಿಕೊಳ್ಳುವವರು ನೀವು. ನಿಮ್ಮನ್ನು ನಾನು ಒಂದು ಪ್ರಶ್ನೆ ಕೇಳಬಯಸುತ್ತೇನೆ. ಈ ಸರ್ಕಾರದ ಕಾರ್ಯಾಲಯದಲ್ಲಿ, ಅಥವಾ ಇತರೇ ಇಲಾಖೆಗಳಲ್ಲಿರುವ ಮುಖ್ಯ ಹುದ್ದೆಗಳಿಗೆ (ಐ.ಎ.ಎಸ್. ಐ.ಪಿ.ಎಸ್.) ಎಷ್ಟು ಹರಿಜನಗಿರಿಜನರನ್ನು ನೇರವಾಗಿ ನೇಮಕಾತಿ ಮಾಡಿದ್ದೀರಿ ? ಹಿಂದುಳಿದವರ್ಗದವರಿಗೋಸ್ಕರ ಯಾವ ಯಾವ ಕಾರ್ಯಕ್ರಮಗಳನ್ನು ತಾವು ಹಾಕಿಕೊಂಡಿದ್ದೀರಿ ? ಇಂಥಾ ಮುಂತಾದ ವಿವರಗಳನ್ನು ಸದನದಮುಂದೆ ಇಡಬೇಕು.

ಮಾನ್ಯ ಅಧ್ಯಕ್ಷರೆ, ಇವರ ದಕ್ಷ ಆಡಳಿತದ ಬಗ್ಗೆ ಹೇಳುವುದಾದರೆ, ಇಲ್ಲಿ ಒಂದು ದೊಡ್ಡ ಪಟ್ಟಿಯೇ ಇದೆ. ಇದು ಸರ್ಕಾರಿ ಸ್ವಾಮ್ಯದಲ್ಲಿರತಕ್ಕ ಕಾರ್ಖಾನೆಗಳಿಗೆ ಸಂಬಂಧಪಟ್ಟಿದ್ದು. ಇದರಲ್ಲಿರುವುದನ್ನೆಲ್ಲಾ ನಾನು ಓದುವುದಕ್ಕೆ ಹೋಗುವುದಿಲ್ಲ. ಕೇವಲ ಒಂದೆರಡು ಕಾರ್ಖಾನೆಗಳ ಬಗ್ಗೆ ಮಾತ್ರ ತಮ್ಮ ಗಮನವನ್ನು ಸೆಳೆಯುತ್ತೇನೆ. ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್, ಮೈಸೂರು ಕಾಸ್ಮೆಟಿಕ್ಸ್, ಇವುಗಳಲ್ಲಿ ಸ್ವಲ್ಪಮಟ್ಟಿಗೆ ಲಾಭ ಆಗಿದೆ. ಕಂಠೀರವ ಸ್ಟುಡಿಯೋದಲ್ಲಿ ೮ ಸಾವಿರ ರೂ. ಲಾಭವಾಗಿದೆ. ಇವುಗಳನ್ನು ಬಿಟ್ಟರೆ ಇನ್ನುಳಿದ ಯಾವ ಸರ್ಕಾರೀ ಸ್ವಾಮ್ಯದಲ್ಲಿರುವ ಕಾರ್ಖಾನೆಗಳಲ್ಲೂ ಲಾಭ ಬಂದಿಲ್ಲ. ಹಾಗಾದರೆ ಇವರು ಇನ್ನೊಬ್ಬರಿಗೆ ಯಾವ ರೀತಿ ಬುದ್ಧಿವಾದ ಹೇಳುತ್ತಾರೆ ? ಪಂಚಾಯಿತಿ ಹಾಗೂ, ಮುನಿಸಿಪಾಲಿಟಿಯವರಿಗೆ ಇವರು ಏನಾದರೂ ಬುದ್ಧಿವಾದ ಹೇಳುವುದಕ್ಕೆ ಹೋದರೆ ಇವರ ಮಾತನ್ನು ಅವರು ಕೇಳುವುದೇ ಇಲ್ಲ. ಫಾರೆಸ್ಟ್ ಇಂಡಸ್ಟ್ರೀಸ್‌ನಿಂದ ಕೋಟಿಗಟ್ಟಲೆ ಲಾಭ ಬರುತ್ತದೆ. ಆದರೆ ಇವರು ಅದಕ್ಕೆ ಸರಿಯಾಗಿ ಗಮನವನ್ನು ನೀಡದೇ ಇರುವುದರಿಂದ ಅಲ್ಲಿ ಲಾಭ ಕಡಿಮೆಯಾಗಿದೆ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ ಇದರಲ್ಲಿ ನಿಜವಾಗಿಯೂ ರೈತರಾದವರಿಗೆ ಏನೇನೂ ಸಹಾಯ ಸಿಕ್ಕುತ್ತಿಲ್ಲ. ಇವರಿಗೆ ಬೇಕಾದವರಿಗೆ ಉದ್ದಾರಿ ಮಾಲು ಕೊಟ್ಟು, ಗೊಬ್ಬರ ಕೊಟ್ಟು, ಬೀಜ ಕೊಟ್ಟು ಕಳುಹಿಸಿದ್ದಾರೆ. ಆದರೆ ಅವರಿಂದ ಮತ್ತೆ ಆ ಸಾಲವನ್ನು ವಸೂಲ್ಮಾಡಿಲ್ಲ. ಈಗ ಸದನದಲ್ಲಿ ಮಾನ್ಯ ಸಹಕಾರ ಖಾತೆಯ ಸಚಿವರು ಇಲ್ಲ. ಅವರು ಇಲ್ಲಿ ಇದ್ದಿದ್ದರೆ ಕೆಲವು ವಿಚಾರಗಳನ್ನು ಹೇಳುತ್ತಿದ್ದೆ. ಇವರ ಇಲಾಖೆಯಲ್ಲಿ ಕೊಟ್ಟಿರತಕ್ಕ ಸಾಲದಲ್ಲಿ ೫೧ ಪರ್ಸೆಂಟ್ ಕೂಡ ಹಣ ವಸೂಲಾಗಿಲ್ಲ. ಇವರು ಕೊಟ್ಟಿರತಕ್ಕ ಹಣ ವಸೂಲಾಗಿಲ್ಲದಿರುವುದರಿಂದ ಇವರ ಸಂಪೂರ್ಣ ಜವಾಬ್ದಾರಿಯನ್ನೆಲ್ಲಾ ಈ ಶಾಖೆಯವರು ಹೊರಬೇಕಾಗಿದೆ, ಇವರು ಯಾವುದಾದರೂ

ಖಾಸಗಿ ಕಂಪನಿಯಲ್ಲಿ ಡೈರೆಕ್ಟರ್ ಆಗಿದ್ದಿದ್ದರೆ ಇವರನ್ನು ಎಷ್ಟುಸಾರಿ ಪ್ರಾಸಿಕ್ಯೂಟ್ ಮಾಡಬೇಕಾಗಿತ್ತೋ ಗೊತ್ತಿಲ್ಲ. ಕರ್ನಾಟಕ ಬ್ಯಾಕ್‌ವರ್ಡ್ ಕ್ಲಾಸ್ ಅಂಡ್ ಮೈನಾರಿಟೀಸ್ ಕಾರ್ಪೊರೇಷನ್ ಇದೆ, ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಇದೆ. ಕರ್ನಾಟಕ ವಿದ್ಯುತ್ ಕಾರ್ಖಾನೆ ಇದೆ, ಈ ಎಲ್ಲಾ ಕಾರ್ಖಾನೆಗಳು ಮತ್ತು ಕಾರ್ಪೊರೇಷನ್‌ಗಳಲ್ಲೂ ಹಣ ಪೋಲಾಗುತ್ತಿದೆ. ಆದರೆ ಖಾಸಗಿ ಕಾರ್ಖಾನೆಗಳಲ್ಲಿ ಮಾತ್ರ ನಷ್ಟವಾಗುತ್ತಿಲ್ಲ. ಕೇವಲ ಸರ್ಕಾರೀ ಕಾರ್ಖಾನೆಗಳಲ್ಲೇ ನಷ್ಟವಾಗಲು ಕಾರಣ ಏನು ? ಇಲ್ಲಿ ಕೆಲಸಮಾಡತಕ್ಕ ನೌಕರರು ಸರಿಯಾಗಿ ಕೆಲಸಮಾಡುತ್ತಿಲ್ಲವೇ ? ಅಥವಾ ಆ ನೌಕರರ ಬಗ್ಗೆ ಸರ್ಕಾರದವರಿಗೆ ಹಿಡಿತವಿಲ್ಲವೇ ? ಅಥವಾ ಅಂತರ್ಯಾತವಾಗಿ ಇವರು ಏನಾದರೂ ಇನ್‌ಕಂ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೋ, ಏನೋ ಗೊತ್ತಿಲ್ಲ. ಇದರ ಬಗ್ಗೆ ಸರ್ಕಾರ ಯೋಗ್ಯ ಗಮನಹರಿಸುವುದು ಒಳ್ಳೆಯದು. ಸರ್ಕಾರದ ಬಗ್ಗೆ ಬಹಳ ಒಳ್ಳೆಯ ಅಭಿಪ್ರಾಯ ಜನರಿಗೆ ಇದ್ದು ಇದರಿಂದ ಯೋಗ್ಯ ಆಡಳಿತವನ್ನು ಪಡೆಯಬೇಕೆಂದು ಇಚ್ಛೆಪಟ್ಟಿದ್ದಾರೆ. ನ್ಯಾಯವಾಗಿ ನಡೆದುಕೊಳ್ಳಬೇಕೆಂದು ಇತರರಿಗೆ ಬುದ್ಧಿವಾದ ಹೇಳುವ ಇವರು ಮೊದಲು ನ್ಯಾಯವಾಗಿ ನಡೆದುಕೊಳ್ಳಬೇಕು. ದಕ್ಷತೆಯಿಂದ ಆಡಳಿತವನ್ನು ನಡೆಸಬೇಕು. ಆದರೆ ಇವತ್ತು ಇವರ ಆಡಳಿತ ಎಷ್ಟರಮಟ್ಟಿಗೆ ದಕ್ಷತೆಯಿಂದ ನಡೆಯುತ್ತಿದೆ ಎಂಬುದಕ್ಕೆ ನಾನು ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ನನಗೆ ಒಬ್ಬರು ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರ ಈ ರೀತಿ ಇದೆ:

"I the undersigned H. D. Mariappa, son of Dasegowda aged about 70 years, resident of Hittalpura, Huliyurdurga wish to state that since beginning I am a humble Congress-man, I have got a substantial landed property in my village and Sri H. M. Krishne Gowda, who is supporting me in agricultural operations, My son Sri H. M. Balaram Raju advocate is also a congress party man. Since 1983, there are difference between my family members and the close relation of

I do not want to read the name.

"...Minister for Serieulture, Boriah, Kariappa son of Nanje Gowda, Boralinge Gowda...

Some more names are there

' causing troubles to me and my family members in all respects. They have committed even criminal offences like detroying fences..."

This is important.

"...mango plants put up in survey No. 260/90 which are in my exclusive possession and enjoyment till to-day. The above named persons have nothing to do with these property. Even the Police have booked cases in Crime No. 10/80, 31/84, 119/83, 38/84. Even the police at the place are afraid to proceed with the case since the Minister are very much interested in this."

This is the way of "Dhaksha" and "Swachcha adalitha" ?

"During the past parliamentary election, we voted for the Congress I. They did know that we would vote for the con-

gress I. I met several police officials upto the level of I.G.P. but so far I have not got any assurance from them. So as the last resort I am approaching you with a ray of hope that I may get justice from you.'

Mr. Speaker. what justice can I give ?...except making it known to the whole world through you to this House.

"In this connection I wish to inform you that the Minister is just like a wolf in the shape of sheep."

This is the value-based politics.. it is an example.

"He is the root cause for all these mischiefs. If these atrocities are not put to an end and if my family members are to leave my village my valuable property will be left to the fate of the God."

ಮಾನ್ಯ ದೇವೇಗೌಡರು ಇದರ ಬಗ್ಗೆ ಯೋಗ್ಯ ವಿಚಾರ ಮಾಡಬೇಕು. ಇಂಥ ಅನೇಕ ಮಾಹಿತಿಗಳು ಬೇರೆಬೇರೆ ಕಡೆಯಿಂದ ಬಂದಿವೆ. ಈ ವಿಚಾರವನ್ನು ನಿಯಮ ೩೩ರ ಕೆಳಗೆ ಸದನದಮುಂದೆ ತರಬೇಕೆಂದಿದ್ದೆ. ಆದರೆ ಸಾಧ್ಯವಾಗಲಿಲ್ಲ. ಇದರ ಬಗ್ಗೆ ವಾಗ್ಯುದ್ಧ ಮಾಡುವುದು ಬೇಡವೆಂದು ನಾನು ಸುಮ್ಮನಾದೆ. ಈಗ ನಾಳೆ, ನಾಡಿದ್ದರಲ್ಲಿ ಈ ಸಭೆ ಮುಗಿಯುತ್ತದೆ.

೧೨–೦೦ ಮಧ್ಯಾಹ್ನ

ನಿಯಮ ೩೩ರಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದರೂ ಏನಾಗುತ್ತದೆ ಎನ್ನುವುದಕ್ಕೆ ಒಂದು ಉದಾಹರಣೆ ಹೇಳುವುದಾದರೆ ಒಂದು ಊರು ಇತ್ತು. ಆ ಊರಲ್ಲಿ ಒಂದು ದಿವಸ ಜಾತ್ರೆ ನಡೆಯುತ್ತಿತ್ತು. ಆ ಜಾತ್ರೆಯಲ್ಲಿ ಒಬ್ಬ ತನ್ನ ಕೋಳಿಯನ್ನು ಕಳೆದುಕೊಂಡ. ಕೋಳಿಯನ್ನು ಕಳೆದುಕೊಂಡ ಮೇಲೆ ನನ್ನ ಕೋಳಿ ಹೋಯಿತು, ಏನು ಮಾಡಲಿ, ಏನು ಮಾಡಲಿ ಎಂದು ಹೇಳಿಕೊಂಡು ಓಡಾಡಲಿಕ್ಕೆ ಹತ್ತಿರ. ಹೀಗೆ ಓಡಾಡಲಿಕ್ಕೆ ಹತ್ತಿರ ಕೂಡಲೇ ಅಲ್ಲೇ ಇದ್ದ ಬುದ್ಧಿವಂತರು ಅಂದರೆ ಶ್ರೀಮತಿ ನಾಗರತ್ನಮ್ಮನಥವರು ಇಲ್ಲಿ ಒಂದು ದುರ್ಗಮ್ಮನ ಗುಡಿ ಇದೆ. ಅಲ್ಲಿಗೆ ಹೋಗಿ ದುರ್ಗಮ್ಮನಿಗೆ ಬೇಡಿಕೋ ನಿನ್ನ ಕೋಳಿ ಸಿಗುತ್ತದೆ, ಕಾಳಜಿ ಮಾಡಬೇಡ ಎಂದು ಹೇಳಿದರು. ಇವನು ಹೋಗಿ ಬೇಡಿಕೊಂಡ. ಕೋಳಿ ಸಿಕ್ಕಿದರೆ ದುರ್ಗಮ್ಮ ನಿನಗೆ ೧೦ ಕುರಿ ಬಲಿದಾನ ಕೊಡುತ್ತೇನೆಂದು ಅಂದನು. ಅದು ಬನ್ನೂರು ಕುರಿ. ನಾನ್ನೂರು ಐನೂರು ರೂಪಾಯಿ ಬೆಲೆ ಬಾಳತಕ್ಕಂಥದ್ದನ್ನು ಹತ್ತು ರೂಪಾಯಿ ಬೆಲೆಬಾಳತಕ್ಕಂಥ ಒಂದು ಕೋಳಿ ಹೋದದ್ದಕ್ಕೆ ಕೊಡುತ್ತೇನೆಂದನು ದೇವರನ್ನು ಪ್ರಾರ್ಥನೆ ಮಾಡಿದ ಮೇಲೆ ಸ್ವಲ್ಪ ಹೊತ್ತಾದ ಮೇಲೆ ಎಲ್ಲಿದಂಲೋ ಅವನ ಕೋಳಿ ಬಂದು ಆತನ ಹೆಗಲ ಮೇಲೆ ಕುಳಿತುಕೊಂಡಿತು. ಈಗ ಜನತಾ ಪಕ್ಷದವರಿಗೆ ಅಧಿಕಾರ ಸಿಕ್ಕಿರುವುದೂ ಕೂಡ ಹಾಗೇನೇ, ಹೀಗೆ ಕೋಳಿ ಕೂತಮೇಲೆ ಪೂಜಾರಿ ಕೇಳಿದ ಈಗ ಏನು ಹೇಳುತ್ತೀಯಪ ಎಂದು. ಆದಕ್ಕೆ ಅವನು ದೇವರು ಬಂದು ಕೇಳಲಿ ಆಗ ನಾನು ನೋಡಿಕೊಳ್ಳುತ್ತೇನೆಂದನು. ಇವರು ಕೊಟ್ಟಿರತಕ್ಕಂಥ ಭರವಸೆಗಳು ಮಂತ್ರಿಗಳಾಗಲಿ, ಕಂತ್ರಿಗಳಾಗಲಿ ಹಣೆ ಬರಹ ಹೆಚ್ಚು ಕಡಿಮೆ ಹೀಗಾಗಿದೆ ಇದು ಆಗಬಾರದು. ನಿಜವಾಗಿಯೂ ಜನತೆಗೆ ರಕ್ಷಣೆ ಕೊಡುತ್ತೇವೆಂದು ಹೇಳಿದ ಮೇಲೆ ಪ್ರಾಣವನ್ನಾದರೂ ಒತ್ತೆಯಿಟ್ಟು ರಕ್ಷಣೆಯನ್ನು ಕೊಡಬೇಕು. ನಾವಂತು ಅಧಿಕಾರದಲ್ಲಿಲ್ಲ, ನಿಜ ನಮಗಿಂತ ನೀವು ದೊಡ್ಡವರಾಗಿದ್ದೀರಿ. ನಾವು ಯಾವ ದೃಷ್ಟಿಯಲ್ಲಿಯೇ ಆಗಲಿ ಜನರಿಗೆ ತಿಳುವಳಿಕೆ ಹೇಳುವುದರಲ್ಲಿಯಾಗಲಿ ಅಥವಾ ನಿಮ್ಮ ಹಾಗೆ ಬಡಾಯಿ ಪ್ರಚಾರ ಮಾಡುವುದರಲ್ಲಿಯಾಗಲಿ ನಾವು ಫೇಲಾಗಿ ಕುಳಿತಿದ್ದೇವೆ. ಆದರೆ ನೀವು ಅಧಿಕಾರದಲ್ಲಿರತಕ್ಕವರು ಹೀಗೆ ಮಾಡಿದರೆ ಜನ ಸುಮ್ಮನೆ ಇರುವುದಿಲ್ಲ. ಜನ ನಮ್ಮ ಕಡೆಯೇ ಇದ್ದಾರೆಂದು ತಿಳಿದುಕೊಳ್ಳಬೇಡಿ. ಜನರು ನಮ್ಮ ಕಡೆಯೇ ಇದ್ದಾರೆಂದು ತಿಳಿದುಕೊಳ್ಳಬೇಡಿ. ಜನರು ನಮ್ಮ ಕಡೆಯೂ ಇದ್ದಾರೆ. ನಮ್ಮ ದಡ್ಡತನಕ್ಕೆ ನಾವು ಹೋಗಿದ್ದೇವೆ ಅಷ್ಟೇ. ನೀವು ಅಧಿಕಾರಕ್ಕೆ ಬಂದಿದ್ದೀರಿ,

ನೀವು ಡಿವೈಡ್ ಮಾಡುವುದರಲ್ಲಿ ನಿಷ್ಣಾತರಾಗಿದ್ದೀರಿ. ನಮ್ಮನ್ನು ಮಣ್ಣು ಮುಕ್ಕಿಸುವುದರಲ್ಲಿ ನಿಮ್ಮ ಜಾಣಕ್ಷತನ ಮೀರಿ ಹೋಗಿದೆ ರಾಮಕೃಷ್ಣ ಹೆಗಡೆಯವರಂತೂ ಅಧಿಕಾರಿಗಳನ್ನು ತಮ್ಮ ಕಕ್ಷೆಯಲ್ಲಿಟ್ಟುಕೊಂಡು ಎಲ್ಲೆಲ್ಲಿ ಹೇಗೆ ತಿದ್ದಬೇಕು. ಎಲ್ಲೆಲ್ಲಿ ಅವರನ್ನು ಹೇಗೆ ತಿರುಗಿಸಬೇಕು ಎನ್ನುವುದರಲ್ಲಿ ಬಹಳ ಜಾಣಾಕ್ಷರಿದ್ದಾರೆ. ಇದರಲ್ಲಿ ಇವರು ಬಹಳ ದಕ್ಷರಾಗಿದ್ದಾರೆಂದರೆ ಎರಡನೇ ಮಾತು ಆಡುವುದೇ ಬೇಕಾಗಿಲ್ಲ. ಮಾನ್ಯ ಸಭಾಪತಿಗಳೇ ನಾನು ಒಪ್ಪುತ್ತೇನೆ. ಇವರ ದಕ್ಷತೆ ಎಷ್ಟರಮಟ್ಟಿಗೆ ಇದೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಕರ್ನಾಟಕದಲ್ಲಿರತಕ್ಕಂಥ ಆಂಧ್ರ ಸ್ಟೀಲ್ ಫ್ಯಾಕ್ಟರಿಯಲ್ಲಿ ಅವರಲ್ಲಿ ಮ್ಯಾನೇಜರ್ ಆಗಿರತಕ್ಕಂಥವನ್ನು ಮತ್ತು ಮಾಲಿಕರನ್ನೇ ಹೊಡೆಯುವುದಕ್ಕೆ ಕೆಲಸಗಾರರು ಹೋಗಿರುತ್ತಾರೆ. ಇದರಿಂದಾಗಿ ಸ್ಟೀಲ್ ಫ್ಯಾಕ್ಟರಿಯನ್ನೇ ಬಂದ್ ಮಾಡಿದ್ದಾರೆ. ಆದ್ದರಿಂದ ಆ ಮಾಲಿಕರಿಗೆ ಪೋಲೀಸ್‌ರವರ ಕಡೆಯಿಂದ ರಕ್ಷಣೆಯನ್ನು ಕೊಡಬೇಕೆಂದು ಕೇಳಿದರೆ ಪೋಲೀಸರಿಂದ ರಕ್ಷಣೆಯೇ ಇಲ್ಲ. ಇದನ್ನು ಕೇಳಿದರೆ ನಮಗೆ ಇದಕ್ಕೂ ನೋಟೀಸ್ ಬೇಕು ಅಂತಾರೆ ಕೊಡಬೇಕೇ. ಹಾಗಾದರೆ ಇಲ್ಲಿ ನೀವು ಏತಕ್ಕೆ ಇರಬೇಕು ? ಸದನದ ಒಳಗೆ ಈ ರೀತಿ ಮಾತನಾಡಿದರೆ ಸರಿಯೇ ? ಮಂತ್ರಿಗಳಾದವರೂ ತಕ್ಷಣ ಅಧಿಕಾರಿಗಳನ್ನು ಅಪ್ರೋಚ್ ಮಾಡಿ, ಅಧಿಕಾರಿಗಳ ಮುಖಾಂತರ ಮಾಹಿತಿಯನ್ನು ತಿಳಿದು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿತ್ತು. ಅದು ಬಿಟ್ಟು ಫೈಲ್ ನೋಡಿ ಉತ್ತರ ಕಳುಹಿಸಿ ಕೊಡುತ್ತೇವೆಂದು ಹೇಳುವುದು, ಫೈಲ್ ಇಲ್ಲದೆ ಕೆಲವು ಸಂದರ್ಭಗಳಲ್ಲಿ ಉತ್ತರ ಹೇಳುವುದು ಇದೆಲ್ಲ ನಡೆಯುತ್ತಿದೆ. ಮಾನ್ಯ ಲಕ್ಷ್ಮೀಸಾಗರ್‌ರವರು ಫೈಲ್ ನೋಡುತ್ತಾರೆ. ಮಾನ್ಯ ದೇವೇಗೌಡರಂತಹವರು ಅವರು ಫೈಲ್ ನೋಡದೇ ಇದ್ದರೂ ನಡೆಯುತ್ತದೆ. ಆದರೆ ಫೈಲ್ ನೋಡಿ ಹೇಳುತ್ತೇನೆ, ಪರಿಶೀಲವೆ ಮಾಡುತ್ತೇವೆಂದು ಹೇಳುವುದು, ಮಾಹಿತಿ ಇದ್ದರೆ ನೋಡುತ್ತೇವೆ. ಇಲ್ಲದೇ ಇದ್ದರೆ ನೋಡುವುದಿಲ್ಲ ಎಂದರೆ ಇದು ಸರ್ಕಾರದ ದಕ್ಷತೆಯೇ ? ಸ್ವಾಮಿ ಇದರ ಬಗ್ಗೆ ವಿಶೇಷವಾಗಿ ಗಮನಕ್ಕೆ ತೆಗೆದುಕೊಳ್ಳಬೇಕು. ಈ ಸರ್ಕಾರ ದಕ್ಷವಾದ ಸರ್ಕಾರವಲ್ಲ. ನೀವೇ ತೀರ್ಮಾನ ಮಾಡಿ ದಕ್ಷವಾದ ಸರ್ಕಾರ ಹೌದೋ, ಅಲ್ಲವೋ ಎನ್ನುವುದನ್ನು ಇಷ್ಟಕ್ಕೂ ಕಿ–ಳಜನ ಆಫೀಸರ್‌ಗಳು ಇರುತ್ತಾರೆ. ಚೀಫ್ ಸೆಕ್ರೆಟರಿಯವರು ಇರುತ್ತಾರೆ, ಫೈನಾನ್ ಸೆಕ್ರೆಟರಿ ಇರುತ್ತಾರೆ ಡೆಪ್ಯುಟಿ ಸೆಕ್ರೆಟರಿ ಇರುತ್ತಾರೆ, ಅಂಡರ್ ಸೆಕ್ರೆಟರಿ ಇರುತ್ತಾರೆ, ನಿಮಗಿಂತಲೂ ಹೆಚ್ಚಿನ ಮಂದಿ ಅವರೇ ಇರುತ್ತಾರೆ. ಅವರ ಹತ್ತಿರ ಇರತಕ್ಕಂಥ ಟೆಲಿಪೋನ್ ಏತಕ್ಕೆ ಇರಬೇಕು ? ಮೊನ್ನೆ ಮಾತನಾಡಿದಾಗ ಟೆಲಿಫೋನ್ ಕೆಟ್ಟಿತ್ತು ಎಂದು ಹೇಳಿದರು. ನಿಮ್ಮಲ್ಲಿ ಹೇಳಿದರೆ ಹೋಗಲಿ ಬಿಡಿ ಎಂದು ಹೇಳಿದಿರಿ. ನಿಮಗೆ ಟೆಲಿಫೋನ್ ಸರಿಯಾಗಿಲ್ಲದಿದ್ದರೆ ಸರಿಯಾಗಿರತಕ್ಕಂಥ ವಯರ್‌ಲೆಸ್ ಟೆಲಿಫೋನ್ ಹಾಕಿಸಿಕೊಳ್ಳಿ. ನೀವು ಈಗ ಹೊಸದಾಗಿ ಅದನ್ನೆಲ್ಲ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಿ. ನವಯುಗ ಈಗ ಪ್ರಾರಂಭವಾಗಲಿಕ್ಕೆ ಹತ್ತಿದೆ. ನವಯುಗದಲ್ಲಿ ಪೋಲೀಸ್‌ನವರಿಗೆಲ್ಲ ವಯರ್‌ಲೆಸ್ ಸೆಟ್ ಎಲ್ಲ ಕೊಟ್ಟಿದ್ದೀರಿ. ಮಿನಿಸ್ಟರಿಗೂ, ಡೆಪ್ಯುಟಿ ಕಮಿಷನರಾರವರಿಗೂ ಈ ವಯರ್‌ಲೆಸ್ ಸೆಟ್‌ಗಳನ್ನು ತೆಗೆದುಕೊಂಡು ಬಿಟ್ಟರೆ ಆಗ ಎಲ್ಲ ಸರಿಹೋಗುತ್ತದೆ. ಈ ನವಯುಗದಲ್ಲಿ ನೀವು ಯಸಸ್ಸನ್ನು ಸಾಧಿಸಿರುವುದು ಎಂದರೆ ನಾಟಕ ರಂಗದಲ್ಲಿ ಇನ್ನು ಯಾವ ಯಾವ ರಂಗದಲ್ಲಿ ಯಶಸ್ಸನ್ನು ಸಾಧಿಸಿದ್ದೀರೋ ನನಗಂತೂ ಗೊತ್ತಿಲ್ಲ. ನಾಟಕ ರಂಗಧಲ್ಲಿ ಯಶಸ್ಸನ್ನು ಪಡೆದಿದ್ದೀರಿ ಚುನಾವಣೆ ಸಂದರ್ಭದಲ್ಲಿ ತಪ್ಪು ಆಶ್ವಾಸನೆಗಳನ್ನು ಕೊಡುವುದರಲ್ಲಿ ಯಶಸ್ಸನ್ನು ಪಡೆದಿದ್ದೀರಿ. ಇನ್ನು ಯಾವುಯಾವುದರಲ್ಲಿ ಎಂದು ಹೇಳಲಿ. ಮಾನ್ಯ ಸಭಾಪತಿಗಳೇ ಮುಖ್ಯವಾಗಿ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಹೋದ್ಯೋಗಿ ಮಂತ್ರಿಗಳಿಗೆ ಹೇಳಿರುತ್ತಾರೆ. ನೀವು ಯಾವಾಗಲೂ ಧಕ್ಷರಾಗಿರಬೇಕು, ಸೀಜರ್‌ನ ಹೆಂಡತಿ ಇದ್ದ ಹಾಗೆ ಇರಬೇಕೆಂದೆಲ್ಲಾ ಹೇಳಿರುತ್ತಾರೆ. ಇವರ ಪ್ರಾಮಾಣಿಕತೆ ದಕ್ಷತೆಯನ್ನು ವಿಚಾರ ವಿಮರ್ಶೆ ಮಾಡಿನೋಡೋಣವೇ ? ಇವರು ನಿಜವಾಗಿಯೂ ಇದನ್ನು ಸಾಧಿಸಲಾರರು ಮಾನ್ಯ ರಾಮಕೃಷ್ಣ ಹೆಗಡೆಯವರು ಸೌಜನ್ಯಯುತವಾಗಿ ಹೇಳಿಕೆಯಲ್ಲಿ ಹೇಳಿದ್ದಾರೆ ಮಂತ್ರಿಗಳಾಗಿರತಕ್ಕಂಥವರು ತಮ್ಮ ಪಿ.ಎ. ಗಳನ್ನು ನೇಮಿಸಿಕೊಳ್ಳತಕ್ಕಂಥ ಸಂದರ್ಭದಲ್ಲಿ ಇಂತಿಂಥವರನ್ನೇ ನೇಮಿಸಿಕೊಳ್ಳಬೇಕೆಂದು ಹೇಳಿರುತ್ತಾರೆ. ಆದರೆ ಮಾನ್ಯ ಬೊಮ್ಮಾಯಿರವರು ಬೇರೊಂದು ರೀತಿಯಿಂದ ಅದನ್ನು ಬದಲಾಯಿಸಿದ್ದಾರೆ. ಇದು ಬರೇ ಸರ್ಕ್ಯುಲರ್, ಆದರೆ ಆಗಬಹುದು ಬಿಟ್ಟರೆ ಬಿಡಬಹುದು ಎಂದು. ಇಷ್ಟು ಲಘುವಾಗಿ ಮಾತನಾಡಬಾರದು. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಒಂದು ಮಾತನಾಡಿದರೆ ಆ ಒಂದು ಮಾತಿಗೆ ಬೆಲೆ ಇರಬೇಕು,

ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಯಾವುದಾದರೂ ಒಂದು ಹೇಳಿಕೆಯನ್ನು ಕೊಟ್ಟರೆ ಆ ಹೇಳಿಕೆ ಘಟನಾತ್ಮಕವಾಗಿ, ಯಶಸ್ವಿಯಾಗಿರತಕ್ಕಂಥ ಹೇಳಿಕೆಯಾಗಿರಬೇಕು. ಇಲ್ಲದೆ ಹೋದರೆ ಆ ಸ್ಥಾನಕ್ಕೆ ಬೆಲೆ ಇಲ್ಲ. ಒಬ್ಬ ಮುಖ್ಯಮಂತ್ರಿಯವರು ಹೇಳಿರತಕ್ಕಂಥ ಮಾತಿಗೆ ಮಾನ್ಯ ಬೊಮ್ಮಾಯಿಯವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಕ್ಕೆ ನಿಜವಾಗಿಯೂ ನನಗೆ ಆಶ್ಚರ್ಯವಾಗುತ್ತದೆ. ಇದೆಂಥ ಸರ್ಕಾರ ? ಇದು ದಕ್ಷ ಸರ್ಕಾರವೆಂದು ತಾವು ಅಭಿಪ್ರಾಯ ಪಡುತ್ತೀರಾ ? ಅವರು ಈಗ ಯಾವುದರಲ್ಲಿ ಯಶಸ್ವಿಯಾಗಿದ್ದಾರೆಂದರೆ ಹಾನಿ ಮಾಡುವುದರಲ್ಲಿ ಯಶಸ್ಸನ್ನು ಪಡೆದಿದ್ದಾರೆ. ಓವರ್ ಡ್ರಾಫ್ಟ್ ಮಾಡುವುದರಲ್ಲಿ ಯಶಸ್ಸನ್ನು ಪಡೆದಿದ್ದಾರೆ. ಓವರ್ ಡ್ರಾಫ್ಟ್ ಮಾಡಿ ಕೇಂದ್ರ ಸರ್ಕಾರಕ್ಕೆ ವಿರುದ್ಧ ಟೀಕೆ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಬಗ್ಗೆ ನಿರ್ಭೀತರಾಗಿದ್ದಾರೆ. ಅವರಿಗೆ ಭೀತಿ ಎನ್ನುವುದೇ ಇಲ್ಲ. ಕೇಂದ್ರ ಸರ್ಕಾರವನ್ನು ಬಾಯಿಗೆ ಬಂದ ಹಾಗೆ ಬೈದಿದ್ದಾರೆ. ಅಷ್ಟೇ ಅಲ್ಲ ಗೌವರ್ನರ್ ಕಡೆಯಿಂದಲೂ ಬೈಯಿದ್ದಾರೆ. ಇದರಲ್ಲಿ ಅವರು ಯಶಸ್ಸನ್ನು ಸಂಪಾದಿಸಿದ್ದಾರೆ. ಇವರು ಹೇಳಿದ ಹಾಗೆ ಅಕ್ಕಿ ಹಂಚುವುದರಲ್ಲಿ ಯಶಸ್ವಿಯಾಗಿದ್ದರೆ, ವಸ್ತ್ರಗಳನ್ನು ಹಂಚುವುದರಲ್ಲಿ ಯಸಶ್ವಿಯಾಗಿದ್ದರೆ, ತಾಳಿ ಕಟ್ಟಿಸುವುದರಲ್ಲಿ ಯಶಸ್ವಿಯಾಗಿದ್ದರೆ ನಾನು ಒಪ್ಪುತ್ತಿದೆ. ಒಂದು ಹೊಸದಾದ ಇಂಡಸ್ಟ್ರಿಸನ್ನು ನಡೆಸುವುದರಲ್ಲಿಯೂ ಕೂಡ ಯಶಸ್ವಿಯಾಗಿಲ್ಲ. ಮಾನ್ಯ ಬೊಮ್ಮಾಯಿ ಯವರು ತಿಂಗಳಿಗೆ 1000 ಇಂಡಸ್ಟ್ರೀಸನ್ನು ತೆಗೆಯುತ್ತೇವೆಂದು ಫೈನಾನ್ಸ್ ಮಿನಿಸ್ಟರ್ ಆಗಿದ್ದಾಗ ಹೇಳಿದವರು ಈಗ ರೆವಿನ್ಯೂ ಖಾತೆಯನ್ನು ತೆಗೆದುಕೊಂಡಿರುತ್ತಾರೆ. ಈಗ ಲ್ಯಾಂಡ್ ಆಕ್ವಿಜಿಷನ್ ತೀವ್ರ ಮಾಡುತ್ತೇವೆಂದು ಹೇಳುತ್ತಿರುತ್ತಾರೆ. ಇದರಲ್ಲಿಯೂ ಆ ಯಶಸ್ವಿಯಾಗಿ ವಂತೆ ಯಾವ ಖಾತೆಯನ್ನು ತೆಗೆದುಕೊಳ್ಳುತ್ತಾರೆ ಏನು ಮಾಡುತ್ತಾರೋ ಕಾದು ನೋಡೋಣ.

ಇದಾದ ನಂತರ ಮಾನ್ಯ ಸಭಾಪತಿಯವರೇ, ಕೋ ಆಪರೇಟೀವ್ ವಿಷಯದಲ್ಲಿ ಯಶಸ್ಸನ್ನು ಸಾಧಿಸಿದ್ದಾರೆಯೋ ಎಂದು ಕೇಳಿದರೆ, ಶ್ರೀಮಾನ್ ಜಾಲಪ್ಪನವರು ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಪರವಾಗಿಲ್ಲ ಮಾನ್ಯ ಲಕ್ಷ್ಮಿಸಾಗರ್‌ರವರು ಇರುತ್ತಾರೆ. ಅವರು ತಿಳಿಸುತ್ತಾರೆಂದು ಭಾವಿಸುತ್ತೇನೆ. ರೈತಾಪಿ ಜನರ ಮೇಲೆ ಅಂತಃಕರಣ ಉಳ್ಳವರು. ಅವರಿಗೆ ಅನೇಕ ಸೌಲಭ್ಯಗಳನ್ನು ಕೊಡಬೇಕೆಂದು ಆಶಯವನ್ನು ಇಟ್ಟುಕೊಂಡಿರತಕ್ಕಂಥವರು. ಆ ಆಶೆ ಎಷ್ಟರಮಟ್ಟಿಗೆ ನೆರವೇರುತ್ತದೋ ನೋಡಬೇಕು. ಏತಕ್ಕೆಂದರೆ ಫೈನಾನ್ಸ್ ಡಿಪಾರ್ಟ್‌ಮೆಂಟ್ ಮಾನ್ಯ ರಾಮಕೃಷ್ಣ ಹೆಗಡೆಯವರ ಕೈಯಲ್ಲಿದೆ. ಮಾನ್ಯ ರಾಮಕೃಷ್ಣ ಹೆಗಡೆಯವರಿಗೆ ರೈತರ ಮೇಲೆ ಎಷ್ಟರಮಟ್ಟಿಗೆ ಅಂತಃಕರಣ ಇದೆ ಎನ್ನುವ ವಿಚಾರ ಹೇಳುವುದಾದರೆ ಅವರು ಹೈಯಸ್ಟ್ ಸ್ಟ್ಯಾಂಡರ್ಡ್‌ನಲ್ಲಿ ಇದ್ದಾರೆ. ಅವರು ತಮ್ಮ ತಮ್ಮ ಮಟ್ಟಕ್ಕಿಂತ ಕೆಳಗಡೆ ಇರತಕ್ಕಂಥವರನ್ನು ನೋಡುವುದಕ್ಕೆ ಆಗುವುದೇ ಇಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿ ಗಳು ಯಾವಾಗಲೂ ಚೈನಾದಲ್ಲಿ ಏನು ನಡೆಯುತ್ತಿದೆ, ಅಮೇರಿಕಾದಲ್ಲಿ ಏನು ನಡೆಯುತ್ತಿದೆ, ರಷ್ಯಾದಲ್ಲಿ ಏನು ನಡೆಯುತ್ತಿದೆ, ಮತ್ತು ಮಾನ್ಯ ರಾಜೀವ್ ಗಾಂಧಿಯವರ ಬಗ್ಗೆ ಮಾತನಾಡುತ್ತಿದ್ದಾರೆ ಕೇರಳ, ಮಹಾರಾಷ್ಟ್ರ ಬಾರ್ಡರ್ ಬಗ್ಗೆ ಏನು ನಡೆಯುತ್ತಿದೆ ಅದನ್ನೆಲ್ಲ ಹೇಳುತ್ತಾರೆ. ಅವರು ಗಮನವೆಲ್ಲ ಅಂತರ್‌ರಾಷ್ಟ್ರೀಯ ಮಟ್ಟದ್ದಾಗಿರುತ್ತದೆ. ಅವರು ಅಂತರ್‌ರಾಷ್ಟ್ರೀಯ ಮನುಷ್ಯ ರಾಗಿರುತ್ತಾರೆ. ಇಂಥ ಮಾನ್ಯ ರಾಮಕೃಷ್ಣ ಹೆಗಡೆಯವರು ಬಡವರ ಹಿತವನ್ನು ಹೇಗೆ ನೋಡುತ್ತಾರೆ. ? ರೈತಾಪಿ ಜನರಿಗೆ ಒಳ್ಳೆಯ ಅನುಕೂಲತೆಗಳನ್ನು ಕೊಡುತ್ತೇವೆಂದು ಹೇಳಿದರು, ಸಾಲಗಳಿಂದ ವಿಮುಕ್ತರನ್ನಾಗಿ ಮಾಡುತ್ತೇವೆಂದು ಹೇಳಿದರು. ಮಾನ್ಯ ಬೊಮ್ಮಾಯಿಯವರ ರಿಪೋರ್ಟ್‌ನ್ನು ಅನುಸರಿಸುತ್ತೇವೆಂದು ಹೇಳಿದರು. ಎಲ್ಲರಿಗೂ ಕಲ್ಯಾಣ ಮಾಡುತ್ತೇವೆಂದು ಹೇಳಿದರು. ರೈತಾಪಿ ಜನರಿಗೆ ಬೇಕಾದಷ್ಟು ಧಾರಣೆಯನ್ನು ಕೊಡುತ್ತೇವೆಂದು ಹೇಳಿದರು. ರೈತಾಪಿ ಜನರಿಗಾಗಿ ಕೆಲವೊಂದು ಇಂಡಸ್ಟ್ರಿಗಳನ್ನು ಪ್ರಾರಂಭ ಮಾಡುತ್ತೇವೆಂದೆಲ್ಲ ಹೇಳಿದರು.

ಡೈರಿ ಜನರಿಗೆ ಹೆಚ್ಚು ಬೆಲೆ ಮಾಡುತ್ತೇವೆ ಎಂದು ಹೇಳಿದರು ಬೆಂಗಳೂರಿಗೆ ಬಂದಕೂಡಲೇ ಹಾಲನ್ನು ಕಡಿಮೆ ಬೆಲೆಗೆ ಕೊಡುತ್ತೇವೆ ಎಂದು ಹೇಳಿದರು ಮಾನ್ಯ ಎಂ. ಎಸ್. ಕೃಷ್ಣನ್ ಅವರಿಗೆ ಸಮಾಧಾನ ವಾಗುವಂತೆ ಜೀವನಾವಶ್ಯಕ ಮೂಲಗಳನ್ನು ಕಡಿಮೆ ಬೆಲೆಗೆ ಕೊಡಿಸುತ್ತೇವೆ, ಎಂದು ಹೇಳಿದರು.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಕೊಡುತ್ತೇನೆ ಎಂದು ಹೇಳಿಲ್ಲ ಸ್ವಾಮಿ

ಶ್ರೀ ಕೆ. ಹೆಚ್. ಪಾಟೀಲ್.—ನೀವು ಅಲ್ಲಾ ಸರ್ಕಾರದವರು ಹೇಳಿದರು ಇವತ್ತು ಮಾಡಿದ್ದು ಏನು ? ಒಂದಾದರೂ ಇಲ್ಲ. ಹಿರಿಯರಾದಂಥ ಮಾನ್ಯ ದೇವೇಗೌಡರು ಪಿ.ಡಬ್ಲ್ಯೂ.ಡಿ. ಒಳಗೆ ಏನೋ

ಮಹತ್ತಾದುದನ್ನು ಸಾಧಿಸುತ್ತಾರೆಂದು ನೋಡಿದೆ. ನನಗೆ ಅವರ ಬಗ್ಗೆ ಗೌರವ ಇದೆ ಅವರು ಆಡುವುದು ಸ್ವಲ್ಪವಾದರೂ ಆಡಿದಂತೆ ಮಾಡುವುದು ಹೆಚ್ಚಿಗೆ ಆದರೆ ಇವರು ಮಾಡಿದ್ದೇನು? ಪಿ. ಡಬ್ಲ್ಯೂ. ಡಿ. ಒಳಗೆ ರ್ಗವರ್ಮೆನೇ ಇಸವಿಯಿಂದಲೂ ಕೆಲಸ ಮಾಡುತ್ತಿರುವ ನೌಕರರನ್ನು ಇನ್ನೂ ಕೂಡ ಟೆಂಪರರಿಯಾಗಿಯೇ ಇಟ್ಟಿದ್ದಾರೆ ಕೆಲವರನ್ನು ಖಾಯಂ ಆಗಿ ಮಾಡಿದ್ದಾರೆ ಇಲ್ಲವೆಂದು ನಾನು ಹೇಳುವುದಿಲ್ಲ ಯಾರ್‍ಯಾರು ಓಟು ಹಾಕುತ್ತೇವೆ ಎಂದು ಹೇಳಿದರೋ ಅವರೆನ್ನೆಲ್ಲಾ ಖಾಯಂ ಮಾಡಿದ್ದಾರೆ, ಅನೇಕ ಜನ ಇನ್ನೂ ತನಕ ಹಾಗೆಯೇ ಇದ್ದಾರೆ ಇದರ ಬಗ್ಗೆ ಏನು ಮಾಡಬೇಕು ? ನನ್ನ ಕಡೆಯಿಂದ ಏನು ಆಗುತ್ತದೆ ? ಇಲ್ಲಿ ಹೇಳುವುದನ್ನು ಬಿಟ್ಟರೆ, ಅದೂ ಕೂಡ ತಾವು ಅಪ್ಪಣೆ ಕೊಟ್ಟರೆ ಮಾತ್ರ ನಾವು ಭಾಷಣ ಮಾಡುತ್ತೇವೆ ಇಲ್ಲವಾದರೆ ಮೂಕರಾಗಿ ಕುಳಿತುಕೊಳ್ಳಬೇಕು ಅಷ್ಟೇ ಅಲ್ಲದೆ ಬೇರೆ ಇನ್ನೇನು ಮಾಡಲು ಸಾಧ್ಯ ? ಇದು ಇವರ ನವಯುಗದ ಒಂದು ಚಿತ್ರ.

ಇನ್ನು ಟ್ರಾನ್ಸ್ ಪೋರ್ಟ್‌ಗೆ ಹೋದರೆ ಬೆಂಗಳೂರು ಸರ್ಕಲ್ ನೊಳಗೇ ಹೆಚ್ಚು ಹಾನಿಯಾಗುತ್ತದೆ ಹುಬ್ಬಳ್ಳಿ ಸರ್ಕಲ್‌ನಲ್ಲಿ ಹಾನಿ ಆಗುವುದಿಲ್ಲ ಇದಕ್ಕೆ ಏನು ಕಾರಣ ? ಮಾನ್ಯ ಬಸವಲಿಂಗಪ್ಪನವರು ಇಲ್ಲಿ ತಿನ್ನುತ್ತಾರೆ ಎಂದು ಹೇಳಿದರು ಯಾರು ತಿನ್ನುತ್ತಾರೆ ಎಂದು ಪ್ರಶ್ನೆ ಹಾಕಿದರೆ ಮಂತ್ರಿಗಳು ಇಲ್ಲಿ ಸಮೀಪ ಇರುತ್ತಾರೆ ಅಲ್ಲಿ ದೂರ ಇರುತ್ತಾರೆ ಯಾವಾಗಲೂ ಮಂತ್ರಿಗಳು ದೂರ ಇದ್ದರೆ ಹಾನಿಯಾಗಬೇಕು. ಇಲ್ಲಿ ಹಾನಿಯಾಗಿರುವುದರ ಅರ್ಥ ಏನು ? ಇದರ ಒಳಗಿನ ಇಂಗಿತವನ್ನು ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕ. ಇಷ್ಟಾದರೂ ಇವರು ಗುಣಾರ್ಹ ಪ್ರಗತಿ ಸಾಧಿಸಿದ್ದೇವೆ ಎಂದು ಹೇಳಿಕೊಳ್ಳುವುದರಲ್ಲಿ ಅರ್ಥ ಇದೆಯೆ ? ರಾಜ್ಯಪಾಲರ ಭಾಷಣದಲ್ಲಿ ಇನ್ನೊಂದು ಮಾತನ್ನು ಹೇಳಿದ್ದಾರೆ "ಭಾರತ ಸರ್ಕಾರದೊಂದಿಗೆ ಸೌಹಾರ್ದಯುತ ಸಂಬಂಧನ್ನು ಕಾಪಾಡಿಕೊಂಡು ಬರಲು ನನ್ನ ಸರ್ಕಾರ ಶ್ರಮಿಸುತ್ತದೆ ಇದು ಸಾಧ್ಯವೇ ? ಏಕೆಂದರೆ ಮಾನ್ಯ ರಾಮಕೃಷ್ಣ ಹೆಗಡೆಯವರು ಆಡಿದ ಮಾತುಗಳನ್ನು ನೋಡಿದರೆ, ಉಗ್ರವಾದ ರೀತಿಯಲ್ಲಿ ವ್ಯಂಗ್ಯವಾಗಿ ಮಾತನಾಡಿದ್ದಾರೆ. ನಮ್ಮದು ಫೈನಾನ್ಸಿಯಲ್ ಸ್ಟೆಬಿಲಿಟಿ ಇರತಕ್ಕಂಥ ಸರ್ಕಾರ ಎಂದು ಹೇಳಿ ಅಜ್ಞಾನಿಯಾದ ಕೇಂದ್ರ ಸರ್ಕಾರ ಎನ್ನುವ ಅರ್ಥದಲ್ಲಿ ದೂರಿದ್ದಾರೆ. ಇದೇ ಮಾತನ್ನು ಮುನಿಸಿಪಾಲಿಟಿಯವರು ಇವರಿಗೆ ಹೇಳಿದರೆ ಇದರು ಏನು ಮಾಡುತ್ತಾರೆ ? ೨೦೦ ಕೋಟಿ ರೂಪಾಯಿ ಕೊರತೆ ಬಜೆಟ್ ಇರತಕ್ಕಂಥ ಸರ್ಕಾರಕ್ಕೆ ನಾಳೆ ದಿವಸ ಒಂದು ಮುನಿಸಿಪಾಲಿಟಿಯವರು ಹೇಳಿದರೆ ಆಗ ಇವರು ಏನ್ನು ಹೇಳುತ್ತಾರೆ ? ಸಹಕಾರ ಸಚಿವರಾದ ಮಾನ್ಯ ಜಾಲಪ್ಪನವರು ಸಹಕಾರ ಸಂಘಗಳು ತಪ್ಪು ಮಾಡಿದರೆ ಅಪವ್ಯಯ ಮಾಡಬೇಡಿ ಎಂದು ಹೇಳಿದಾಗ ಅವರು ನಿಮ್ಮದು ಯಾವ ಸರ್ಕಾರ ? ಎಂದು ಕೇಳಿದರೆ ನಿಮಗೆ ಸಿಟ್ಟು ಬರುವುದಿಲ್ಲವೇ ? ಕೇಂದ್ರದೊಡನೆ ವಾಗ್ಯುದ್ಧ ಮಾಡಿ ಮತ್ತೆ ಸೌಹಾರ್ದಯುತ ಸಂಬಂಧ ಎಂದು ಹೇಳುವುದು ನಿಜಕ್ಕೂ ಶೋಚನೀಯವಾದ ಮಾತೇ ಸರಿ.

ಆಮೇಲೆ "ಜನತಾಪಕ್ಷವು ಜನರಿಗೆ ನೀಡಿದ್ದ ಭರವಸೆಗಳು ರಾಜ್ಯದ ಆರ್ಥಿಕಸಂಪನ್ಮೂಲಗಳಿಗೆಗಂಭೀರ ಸವಾಲಾಗಿ ಪರಿಣಮಿಸಬಹುದಾದರೂ ನನ್ನ ಸರ್ಕಾರ ಅವುಗಳನ್ನು ಕಾರ್ಯರೂಪಕ್ಕೆ ತರುವುದು." ಮಾನ್ಯ ಅಧ್ಯಕ್ಷರೇ, ಇವತ್ತು ನಮ್ಮ ಪ್ರಮುಖರಾದಮಂತ್ರಿಯಾದತಹ ಪಾರ್ಲಿಮೆಂಟರಿ ಸಚಿವರು ಉತ್ತರ ಕೊಡುತ್ತಾ ನಮ್ಮಲ್ಲಿ ರೊಕ್ಕ ಇಲ್ಲ ಎಂದು ಹೇಳಿದರು ಕಾವೇರಿ ಯೋಜನೆಗೆ ೨೦೪ ಕೋಟಿ ರೂಪಾಯಿ ಸ್ಕೀಮ್ ಇದ್ದರೆ ೪ ಕೋಟಿ ಮಾತ್ರ ಮಂಜೂರು ಮಾಡಿದ್ದೇ ಉಳಿದ ಹಣ ಕೇಂದ್ರದಿಂದ ಬರಬೇಕು. ನೀವು ಸಹಾಯ ಮಾಡಿದರೆ ಕಾವೇರಿ ಯೋಜನೆಯನ್ನು ಮಾಡುತ್ತೇವೆ. ಎಂದು ಹೇಳಿದರು ಇದೇ ಏನುನೀವು ಜನತೆಗೆ ಕೊಡತಕ್ಕಂಥ ಕೊಡುಗೆ ? ನೀವು ಇಲ್ಲಿಗೆ ಬರಿ ಸ್ವಲ್ಪ ದಿವಸ ನಾವು ನೀವು ಕೂಡಿ ಕೆಲಸ ಮಾಡೋಣ.

ಒಬ್ಬ ಮಾನ್ಯ ಸದಸ್ಯರು.— ಕರೆಸಿಕೊಳ್ಳಿ.

ಶ್ರೀ ಕೆ. ಎಚ್. ಪಾಟೀಲ್.—ಕರೆಸಿಕೊಳ್ಳುವುದು ಬೇಡ ಮನೆಯ ಕೀಲಿಯನ್ನು ಕೈಗೆ ತೆಗೆದುಕೊಂಡಮೇಲೆ ಸಾಲ ಹೆಚ್ಚಾಗಿದೆ ಎಂದು ಹೇಳಿದರೆ ಹೇಗೆ ? ಕರ್ನಾಟಕದ ಜನ ಒಕ್ಕೊರಲಿನಿಂದ ನಿಮಗೆ ಅಧಿಕಾರವನ್ನು ಕೊಟ್ಟಿದ್ದಾರೆ ಈ ಅಗಮ್ಯವಾದ ಸ್ಥಾನವನ್ನು ನಿಮಗೆ ಬಿಟ್ಟುಕೊಟ್ಟಿದ್ದಾರೆ. ಹೀಗಿದ್ದಮೇಲೆ ಜನರಿಗೆ ಮುಖ್ಯವಾಗಿ ಬೇಕಾದ ಹವೆ, ನೀರು, ಶಿಕ್ಷಣ ಉದ್ಯೋಗವನ್ನು ಪುಕ್ಕಟ್ಟೆಯಾಗಿ ಕೊಡುವುದು ನಿಮ್ಮ ಕರ್ತವ್ಯ ತಾಳಿಯನ್ನು ಕೂಡ ಕೊಡಿಸಲಿಕ್ಕೆ ಹೊರಟಿದ್ದಾರೆ. ತಾಳಿ ಕೊಟ್ಟು ಇನ್ನೂ ಏನೇನು ಕೊಡುತ್ತಾರೋ ನೋಡೋಣ ಇಷ್ಟೆಲ್ಲ ಮಾಡುವಾಗ ಬೆಂಗಳೂರು ನಗರದ ಕಾವೇರಿ ಮೂರನೆ

ಯೋಜನೆಯನ್ನು ಮಾಡಲಿಕ್ಕೆ ಯೋಗ್ಯತೆ ಇಲ್ಲವೆಂದು ಮೇಲೆ ಇಂತಹ ಸರ್ಕಾರವನ್ನು ಯೋಗ್ಯ ಸರ್ಕಾರ ದಕ್ಷ ಸರ್ಕಾರವೆಂದು ಕರೆಯಬೇಕೇ ?

ಶ್ರೀ ಜೆ. ಎಚ್. ಪಟೇಲ್.—ನಾವು ತಾಳಿ ಹರಿದಿದ್ದು ನಾವು ತಾಳಿ ಕಟ್ಟಿದ್ದು.

ಶ್ರೀ ಕೆ. ಎಚ್. ಪಾಟೀಲ್.—ಯೋಗ್ಯವಾದ ಮಾತು ಹರಿದ ತಾಳಿಯನ್ನು ಇವರು ಕಟ್ಟುತ್ತಾರಂತೆ ಸಂತೋಷ ಎಲ್ಲಕ್ಕಿಂತಲೂ ಹೆಚ್ಚಾಗಿ ತಾಳಿ ಕಟ್ಟತಕ್ಕಂಥ ಯೋಚನೆ ಮಾನ್ಯ ಪಟೇಲರಿಗೆ ಈ ವಯಸ್ಸಿನಲ್ಲಿ ಏತಕ್ಕೆ ಬಂತೋ ಎಂದು ನನಗೆ ಯೋಚನೆ. ಮಾನ್ಯ ಪಾರ್ಲಿಮೆಂಟರಿ ಮಂತ್ರಿಯವರಿಗೆ ಈ ಯೋಚನೆಯಾಗಲೂ ಬಂದಿದ್ದರೆ ಅಡ್ಡಿ ಇರಲಿಲ್ಲ. ಈ ಯೋಚನೆ ಮಾನ್ಯ ಜೆ. ಎಚ್. ಪಟೇಲರಿಗೆ ಮಾತ್ರ ಬರಬಾರದಾಗಿತ್ತು ಏಕೆಂದರೆ ಇವರು ಸೋಶಲಿಸ್ಟ್ ತತ್ವವನ್ನು ಅಳವಡಿಸಿಕೊಂಡು ಬಂದಿರತಕ್ಕವರು ಮೌಲ್ಯಾಧಾರಿತ ರಾಜಕಾರಣದ ಮೇಲೆ ನಂಬಿಕೆಯಿಟ್ಟು ಪಾಲಿಸಿಕೊಂಡು ಬರತಕ್ಕಂಥವರು ಈ ಮೌಲ್ಯಾಧಾರಿತ ತತ್ವಗಳನ್ನು ಜಯಪ್ರಕಾಶ ನಾರಾಯಣರ ತತ್ವವನ್ನು ಸ್ವಲ್ಪವಾದರೂ ಅಮಲಿಗೆ ತರುವುದಕ್ಕೆ ಪ್ರಯತ್ನ ಮಾಡಿದರೆ ಜನ ಮೆಚ್ಚಿಯಾರು ಎಂದು ನಾನು ಕಳಕಳಿಯಿಂದ ಅವರಿಗೆ ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ, ''ಜನರಿಗೆ ನೀಡಿದ್ದ ಭರವಸೆಗಳು ಎಂದು ಹೇಳಿದ್ದಾರೆ. ಯಾವ ಜನರಿಗೆ ಕೊಟ್ಟ ಆಶ್ವಾಸನೆಗಳನ್ನು ಜಾರಿಗೆ ತರುವುದಕ್ಕೆ ಇಚ್ಛಿಪಡುತ್ತೀರಿ ? ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಹದಿನೇಟು ಪರ್ಸೆಂಟ್ ಕಾನ್ಸಿಟ್ಯೂಶನಲ್ ರಿಸರ್ವೇಷನ್ ಏನಿದೆ ಅದನ್ನಾದರೂ ಪೂರ್ತಿಯಾಗಿ ಮಾಡಿದ್ದೀರಾ ? ಮಾನ್ಯ ಜೆ. ಎಚ್, ಪಟೇಲರು ನೀವು ಏತಕ್ಕೆ ಮಾಡಲಿಲ್ಲ ಎಂದು ಕೇಳಿದರು ಇದು ನಮ್ಮ ಹಣೆಬರಹ ನಮ್ಮ ಹಾಗೆ ನೀವೂ ಕೂಡ ಆಗಬೇಕೇನು ? '' ನೀ ಇದ್ದಾಗ ನಾನು ನಾ ಇದ್ದಾಗ ನೀನು ಅಂತ ಆಗಬಾರದು ನಿಮ್ಮ ಪುಣ್ಯಕ್ಕೆ ಮತ್ತೆ ಅಧಿಕಾರಕ್ಕೆ ಬಂದಿದ್ದೀರಿ. ಮಾನ್ಯ ದೇವೇಗೌಡರು ಅಧಿಕಾರಕ್ಕೆ ಬಂದಿದ್ದಾರೆ ನಮ್ಮನ್ನು ಬೇಕಾದರೆ ಬಹಳ ವರ್ಷಗಳ ಕಾಲ ಇದೆ ಸದನದಲ್ಲಿ ಕುಳ್ಳಿರಿಸಿ ಪರವಾಗಿಲ್ಲ ಪಂಚಾಯತ್ ತಾಲ್ಲೂಕು ಬೋರ್ಡುಗಳಲ್ಲಿ ಅಧಿಕಾರಿಗಳನ್ನು ತುಂಬಿದ್ದೀರಿ ನಿಮ್ಮ ಮಸೂದೆಗೆ ರಾಷ್ಟ್ರಪತಿಯವರ ಅಂಗೀಕಾರ ಬಂದಿಲ್ಲವೆಂದು ಹೇಳುತ್ತೀರಲ್ಲ ಈಗಿರುವ ಕಾನೂನಿನಲ್ಲಿ ಇವುಗಳಿಗೆ ಚುನಾವಣೆಗಳನ್ನು ನಡೆಸುವುದಕ್ಕೆ ಬರುವುದಿಲ್ಲವೇನು ? ಕಾನೂನು ಸತ್ತಿದೆಯೇನು ? ಈ ಚುನಾವಣೆಯನ್ನು ಮುಂದಕ್ಕೆ ಹಾಕುವುದರ ಸಲುವಾಗಿ ಇದೊಂದು ಕುಂಟು ನೆಪವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಸಹಕಾರ ಸಂಘಗಳಿಗೆ ಚುನಾವಣೆ ನಡೆಸಲಿಕ್ಕೆ ಏನೋ ಧೈರ್ಯಮಾಡಿ ಆರ್ಡರ್ ಕೊಟ್ಟಿದ್ದಾರೆ, ಈ ಆರ್ಡರ್ ಎಲ್ಲಿಯವರೆಗೆ ನಿಲ್ಲುತ್ತದೆ. ಎಂದು ಹೇಳುವುದಕ್ಕೆ ಆಗುವುದಿಲ್ಲ ಕಾರವಾರ ಜಿಲ್ಲೆಯೊಳಗೋ ಹಾಸನ ಜಿಲ್ಲೆಯೊಳಗೋ ಏನಾದರೂ ತಕರಾರು ಆದರೆ ಈಆರ್ಡರನ್ನು ವಿತ್‌ಡ್ರಾ ಮಾಡಬೇಕಾಗುತ್ತದೆ ಇದು ಆಗುವುದು ಬೇಡ. ಈ ಗಟ್ಟಿಗತನ ಅವರಲ್ಲಿ ಬರಲಿ ಎಂದು ನಾನು ಪರಮಾತ್ಮನಲ್ಲಿ ಪ್ರಾರ್ಥನೆ ಮಾಡುತ್ತೇನೆ,

ಮಾನ್ಯ ಅಧ್ಯಕ್ಷರೇ, ಹೀಗೆ ಇವರು ಯಾವ ಉದ್ದೇಶದಲ್ಲಿಯೂ ಸಫಲತೆಯನ್ನು ಪಡೆಯಲ್ಲಿಕ್ಕೆ ಸಾಧ್ಯವಿಲ್ಲ. ಮಾನ್ಯ ಬಸವಲಿಂಗಪ್ಪನವರು ಮಾತನಾಡುವಾಗ ಒಂದು ಮಾತನ್ನು ಹೇಳಿದ್ದಾರೆ ಇವರ ಕೊನೆಗಾಲ ಹತ್ತಿರದಲ್ಲಿಯೇ ಇದೆ ಎಂದು ಈ ಪರಿಶಿಷ್ಟ ಜಾತಿಯವರು ಮತ್ತು ವರ್ಗದವರು ಏನೋ '' ಕಾಂಗ್ರೆಸ್ಸು ಹೋಗಲಿ ಹೋಗಲಿ '' ಎಂದು ಇವರಿಗೆ ಓಟು ಹಾಕಿದ್ದಾರಲ್ಲ ಅವರ ಮನಸ್ಸಿನಲ್ಲಿ ಇವತ್ತು ಏನಾಗಿದೆ ? '' ಯಪ್ಪ ಯಪ್ಪ ಇವರು ಮಾತ್ರ ಬೇಡಪ್ಪ ಅವರೇ ಬರ್ಲಿ ಬರ್ಲಿ '' ಎಂದು ಅವರು ಹಾರೈಸುವುದಂತೂ ಖಂಡಿತ. ಇದನ್ನು ತಿದ್ದುಪಡಿ ಮಾಡಿಕೊಳ್ಳುವುದು ಅತ್ಯಂತ ಅವಶ್ಯಕ ಈ ದೃಷ್ಟಿಯಿಂದ ತಡವಾದರೂ ಕೂಡ ಗಮನಹರಿಸಿ ಪರಿಶಿಷ್ಟ ಜಾತಿಯವರಿಗೆ ಕಲ್ಯಾಣವಾಗುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳಿರಿ.

ಇವೊತ್ತಿನದಿವಸ ಹರಿಜನ ಮತ್ತು ಗಿರಿಜನರ ಪೈಕಿ ಎಷ್ಟು ಜನ ಇಲಾಖಾ ಮುಖ್ಯಸ್ಥರಿದ್ದಾರೆಂಬುದನ್ನು ತಾವು ತನಿಖೆ ಮಾಡಿ ನೋಡಿ. ಹರಿಜನರಿಗೆ ಮೇಲಿನ ಪ್ರಮುಖ ಹುದ್ದೆ ಕೊಟ್ಟರೆ ಇನ್‌-ಎಫಿಷಿಯೆನ್ಸಿ ಆಗುತ್ತದೆ, ಮುಂದುವರೆದ ವರ್ಗದವರಿಗೆ ಮೇಲಿನ ಪ್ರಮುಖ ಹುದ್ದೆ ಕೊಟ್ಟರೆ ಎಫಿಷಿಯೆನ್ಸಿ ಬರುತ್ತದೆ ಎಂದು ಹೇಳಿ ತಾರತಮ್ಯ ಮಾಡುವುದು ಬಹುತೇಕವಾಗಿ ನಡೆದುಕೊಂಡು ಬಂದಿದೆಯೆಂಬ ಮಾತನ್ನು ಸಾಕಷ್ಟು ಸಲ ನೀವು ವಿರೋಧಪಕ್ಷದಲ್ಲಿದ್ದಾಗ ಹೇಳಿದ್ದಿರಿ. ಆಗ ಈ ತಾರತಮ್ಯವನ್ನು ಹೋಗಲಾಡಿಸಲು ನಮ್ಮ ಕಾಲದಲ್ಲಿ ಸಾಕಷ್ಟು ಪ್ರಯತ್ನ ಮಾಡಿದ್ದೇವೆ. ಈಗ ನೀವೇ ಅಧಿಕಾರಕ್ಕೆ ಬಂದಿದ್ದೀರಿ. ಆದ್ದರಿಂದ ಹಿಂದೆ ನೀವು ಹೇಳಿದ್ದನ್ನೇ ಈಗ ಸರಿಮಾಡದಿದ್ದರೆ ಹಾಗೂ

ಹೇಳಿದಂತೆ ನಡೆಯದಿದ್ದವರಿಗೆ ಏನೆಂದು ಹೇಳಬೇಕು ಎಂಬುದು ಮಾನ್ಯ ಜೆ. ಎಚ್. ಪಟೇಲ್ ಅವರಿಗೂ ಗೊತ್ತು.

ಇನ್ನು ಇದರಲ್ಲಿ ''ಕಳೆದ ವರ್ಷದ ಅವಧಿಯಲ್ಲಿ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಾಮಾನ್ಯವಾಗಿ ಶಾಂತಿಯುತವಾಗಿತ್ತು.'' ಎಂದು ಹೇಳಿದ್ದಾರೆ. ಆದರೆ ಇವರು ಕೋಲಾರದಲ್ಲಿ ಗೂಂಡಾ ಹಾರಿಸಲಿಲ್ಲವೇ ? ಗುಲ್ಬರ್ಗದಲ್ಲಿ ಪತ್ರಿಕಾ ಪ್ರಪಂಚದಲ್ಲಿದ್ದವರೊಬ್ಬರನ್ನು ಕೊಲೆ ಮಾಡಿದಾಗ ಶಾಂತಿ ಎಲ್ಲಿತ್ತು ? ಹುಬ್ಬಳ್ಳಿಯಲ್ಲಿ ಹಿಂದೂ ಮುಸ್ಲೀಮರ ಹೆಸರಿನಲ್ಲಿ ಗಲಾಟೆ ನಡೆಯಿತು. ಆ ಗಲಾಟೆಯಲ್ಲಿ ಕೆಲವರು ಸತ್ತಾಗ ಶಾಂತಿ ಎಲ್ಲಿತ್ತು ? ದಾವಣಗೆರೆ, ಬಿಜಾಪುರ, ಬಾಗಲಕೋಟೆ, ಚಿತ್ರದುರ್ಗ ಮುಂತಾದ ಕಡೆಗಳಲ್ಲಿ ಗಲಾಟೆಗಳು ನಡೆದಿದ್ದರೂ ಸಹ ಇಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸಾಮಾನ್ಯವಾಗಿ ಶಾಂತಿಯುತವಾಗಿತ್ತು ಎಂದು ಹೇಳಿದ್ದಾರೆ. ನನ್ನದೇ ಒಂದು ಉದಾಹರಣೆ ಕೊಡಬೇಕೆಂದರೆ, ಚುನಾವಣೆಗಳು ನಡೆದಾಗ ಪ್ರಚಾರ ಮಾಡುವಂತಹ ಹಕ್ಕು ಸಾಮಾನ್ಯವಾಗಿ ಎಲ್ಲರಿಗೂ ಇರುತ್ತದೆ. ಆದರೆ ನನಗೆ ಮಾತ್ರ ಚುನಾವಣೆಯಲ್ಲಿ ಪ್ರಚಾರ ಮಾಡದಂತೆ ಮಾಡಿದರು. ಗೂಂಡಾ ಜನರು ಯಾವ ಪಕ್ಷದವರೇ ಆಗಿರಲಿ, ಇಂತಹ ಜನರಿಂದ ಗಲಾಟೆ ಮಾಡಿಸಿ, ಒಬ್ಬರನ್ನು ಇನ್ನೊಬ್ಬರ ಮೇಲೆ ಎತ್ತಿ ಕಟ್ಟಿಸಿದರು. ಇದೇ ಕಾರಣದಿಂದ ಒಬ್ಬರು ಮತ್ತೊಬ್ಬರ ಮೇಲೆ ಪಯಣ ಮಾಡುವ ಪರಿಸ್ಥಿತಿಯನ್ನು ತಂದಿಟ್ಟರು. ಶ್ರೀ ರಾಜೀವಗಾಂಧಿ ಅವರು ಬಂದಾಗ ಮಾತ್ರ ಗದಗ ಮತದಾರರ ಕ್ಷೇತ್ರದಲ್ಲಿ ಲೌಡ್–ಸ್ಪೀಕರ್ ಹಾಕಲು ಅನುಮತಿ ಕೊಟ್ಟರು. ಇನ್ನುಳಿದ ಸಮಯದಲ್ಲಿ ಲೌಡ್–ಸ್ಪೀಕರ್ ಹಾಕಲು ಪೋಲೀಸರು ಅನುಮತಿ ಕೊಡಲಿಲ್ಲ. ಇಂಥಾದ್ದೆಲ್ಲಾ ನಡೆದಿರುವಾಗ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಶಾಂತಿಯುತವಾಗಿತ್ತು ಎಂದು ಯಾವ ರೀತಿಯಾಗಿ ಹೇಳುತ್ತಾರೆ ? ಲೌಡ್–ಸ್ಪೀಕರ್ ಹೋಗಲಿ, ನಮ್ಮ ಕಡೆಯ ಜನರು ಮನೆ ಮನೆಗೆ ಹೋಗಿ ಪ್ರಚಾರ ಮಾಡಲೂ ಸಹ ಅವಕಾಶ ಕೊಡಲಿಲ್ಲ ಈ ಸಲದ ಚುನಾವಣೆಯಲ್ಲಿ ನಮ್ಮ ಪಕ್ಷದಲ್ಲಿ ಹೊಸಬರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ಕೊಡಲಾಗಿತ್ತು. ಇವರಿಗೆಲ್ಲಾ ಅನುಭವ ಕಡಿಮೆ ಈ ಕಾರಣದಿಂದ ಆ ಸಮಯದಲ್ಲಿ ಒಂದು ರೀತಿಯ ಗಂಭೀರ ಪರಿಸ್ಥಿತಿ ಉಂಟಾಗುವಂತೆ ಪೋಲೀಸರ ಮೂಲಕ ವ್ಯವಸ್ಥೆ ಮಾಡಿಸಿದರು. ನಾನು ಎಲ್ಲರ ಮೇಲೂ ಆಪಾದನೆ ಮಾಡುವುದಿಲ್ಲ. ಅನೇಕ ಕಡೆಗಳಲ್ಲಿ ಆ ಸಮಯದಲ್ಲಿ ಈ ರೀತಿ ನಡೆದಿದೆ. ಚುನಾವಣೆ ಇನ್ನು ಎರಡು ದಿನಗಳು ಇವೆ ಎನ್ನುವ ಸಮಯದಲ್ಲಿ ಬಾಟಲಿಗೆ ಬದಲು ಪ್ಲಾಸ್ಟಿಕ್ ಕವರ್‌ಗಳಲ್ಲಿ ಸಾರಾಯಿಯನ್ನು ಹಂಚಿದರು. ಹಂಚಿಕೆ ಯಾರಿಂದ ಆಯಿತು ಎಂಬುದು ಇಲ್ಲಿ ಮುಖ್ಯ. ಪಕ್ಷದ ಕಾರ್ಯಕರ್ತರಿಂದ ಹಂಚಿಕೆಯಾಗಲಿಲ್ಲ. ಯಾರಿಗೂ ಅನುಮಾನ ಬರದ ರೀತಿಯಲ್ಲಿ ಕ್ರಮಬದ್ಧವಾಗಿ ಇದರ ಹಂಚಿಕೆಯಾಯಿತು.

ಒಬ್ಬ ಮಾನ್ಯ ಸದಸ್ಯರು.–ಪಾರ್ಲಿಮೆಂಟ್ ಚುನಾವಣೆಯಲ್ಲಿ ತಾವು ಯಾವ ರೀತಿ ಬಹುಮತದಿಂದ ಗೆದ್ದಿರಿ ?

ಶ್ರೀ ಕೆ. ಎಚ್. ಪಾಟೀಲ್.—ಆ ಸಮಯದಲ್ಲಿ ಕೂಡ ನಿಮ್ಮ ಪಕ್ಷವೇ ಅಧಿಕಾರದಲ್ಲಿತ್ತು ಈ ರೀತಿ ಸಾರಾಯಿಯನ್ನು ನಾನೇ ಬಂದು ಹಂಚಿದ್ದರೆ ಹಂಚಿಕೆ ಮಾಡಿದವರನ್ನು ನೀವು ಹಿಡಿಯಬೇಕಾಗಿತ್ತು. ಇಂತಹ ಜನರನ್ನು ಹಿಡಿಯದೇ ಇರುವುದು ನಿಮ್ಮ ಅಧಕ್ಷತೆಯನ್ನು ತೋರಿಸುತ್ತದೆ. ಎರಡು ಮೂರು ದಿವಸಗಳ ಕಾಲ ಈ ರೀತಿ ಹಂಚಿಕೆಯಾಗಿದ್ದು ಮಾನ್ಯ ಮಂತ್ರಿಗಳಿಗೆ ಗೊತ್ತಿದ್ದೂ ಸುಮ್ಮನಿದ್ದರೆ ಅದು ಸ್ವಚ್ಛ ಆಡಳಿತ ಆಗುವುದಿಲ್ಲ. ಇದು ನಿಮಗೆ ಗೊತ್ತಿಲ್ಲದಿದ್ದರೆ ಗೊತ್ತಿಲ್ಲ ಎಂದು ಹೇಳಿ. ಒಟ್ಟಿನಲ್ಲಿ ಇದನ್ನು ನಿಮ್ಮ ಪಾಲಿಗೇ ಬಿಡುತ್ತೇನೆ.

ಇನ್ನು ಇದರಲ್ಲಿ ೧೩೬ ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯನ್ನು ಒಳಗೊಂಡ ಸುಮಾರು ೧೫,೦೦೦ ಹಳ್ಳಿಗಳು ಅಭಾವ ಪರಿಸ್ಥಿತಿಯಿಂದ ತೊಂದರೆಗೊಳಗಾಗಿವೆ ಎಂದು ಹೇಳಿದ್ದಾರೆ. ಈ ರೀತಿ ತೊಂದರೆಗೊಳಗಾದ ಜನರಿಗೆ ಯಾವ ರೀತಿ ರಕ್ಷಣೆ ಕೊಟ್ಟಿದ್ದಾರೆ ಮತ್ತು ಇದಕ್ಕಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆಂಬುದು ಇಲ್ಲಿ ಮುಖ್ಯ. ಒಂದೊಂದು ಹಳ್ಳಿಯಲ್ಲಿ ನೂರು ಜನ ಲೇಬರರ್ಸ್ ಇರುತ್ತಾರೆಂದು ಲೆಕ್ಕ ಇಟ್ಟು ಕೊಂಡರೂ ಸಹ ೧೫ ಸಾವಿರ ಹಳ್ಳಿಗಳಲ್ಲಿರುವಂತಹ ೧೫ ಲಕ್ಷ ಜನರಿಗೆ ಇವರು ಕೂಲಿ ಕೆಲಸ ಒದಗಿಸಿದ್ದಾರೆಯೋ ? ಯಾವ ರೀತಿಯಿಂದ ಈ ಜನರಿಗೆ ರಕ್ಷಣೆ ಕೊಟ್ಟಿದ್ದಾರೆ ? ಬರಗಾಲ ನಿವಾರಣೆ ಮಾಡಲು ಇವರು ಏನೇನು ಕಾರ್ಯಕ್ರಮ ತೆಗೆದು ಕೊಂಡಿದ್ದಾರೆಂಬುದನ್ನು ನಾವು ತಿಳಿದು ಕೊಳ್ಳಬೇಕಾಗುತ್ತದೆ. ಇವರು ಮಾತೆತ್ತಿದರೆ ಕೇಂದ್ರ ಸರ್ಕಾರದ ಕಡೆ ತೋರಿಸುತ್ತಾರೆ. ಕೇಂದ್ರದವರು ನಮಗೆ ಹಣ

ಕೊಟ್ಟಿಲ್ಲವೆಂದು ಹೇಳುತ್ತಾರೆ. ಅವರು ಹಣ ಕೊಡದಿದ್ದರೆ ನಿಮ್ಮ ಹಣವನ್ನೇ ಖರ್ಚು ಮಾಡಬೇಕಾಗಿತು ನಾನು ವ್ಯವಸಾಯ ಮಂತ್ರಿಯಾಗಿದ್ದಾಗಲೂ ನಮ್ಮ ರಾಜ್ಯದಲ್ಲಿ ಬರಗಾಲ ಬಂದಿತ್ತು. ಗುಲ್ಬರ್ಗ, ಬೀದರ್ ಮುಂತಾದ ಬರಗಾಲ ಪೀಡಿತ ಪ್ರದೇಶಗಳಲ್ಲಿನ ರೈತರಿಗೆ ಬೀಜ ಹಂಚುವುದಕ್ಕೂ ಸಹ ನಮ್ಮಲ್ಲಿ ಹಣ ಇರಲಿಲ್ಲ. ಕೇಂದ್ರ ಸರ್ಕಾರದಿಂದ ನಮಗೆ ಹಣ ಬರುವುದು ತಡವಾದಾಗ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಿಂದ ಹಣ ಪಡೆದುಕೊಂಡು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ ಮೂಲಕ ಬಿತ್ತನೆ ಬೀಜವನ್ನು ಮನೆ ಮನೆಗೂ ಹೋಗಿ ಹಂಚಿದೆವು. ಇದಾದ ನಂತರ ನಮಗೆ ಕೇಂದ್ರದಿಂದ ಹಣ ಬಂತು. ಇದರಲ್ಲಿ ಜಾನುವಾರುಗಳಿಗೆ ಬೇಕಾದ ಮೇವಿನ ತೊಂದರೆಯ ಬಗ್ಗೆಯೂ ಹೇಳಿದ್ದಾರೆ. ಮೇವಿಗಾಗಿ ನೀವು ಬೇರೆ ಕಡೆಗಳಲ್ಲಿ ಹುಡಕಬೇಕಾಗಿಲ್ಲ. ದಾಂಡೇಲಿ ಹತ್ತಿರ ಗ್ರೀನ್ ಫಾಡರ್ ತಯಾರು ಮಾಡುವಂತಹ ಪ್ಲಾಂಟ್ ಇದೆ. ಇಲ್ಲಿ ಮೇವನ್ನು ಸಂಗ್ರಹ ಮಾಡಿ ಬೇರೆ ಕಡೆಗಳಿಗೆ ಕಳುಹಿಸಿಕೊಡುವಂತಹ ವ್ಯವಸ್ಥೆ ಮಾಡಬಹುದು. ಆದರೆ ಇದಕ್ಕೂ ಸಹ ಹಣ ಬೇಕೆಂದು ತಾವು ಕೇಳುತ್ತೀರಿ ? ಇಂತಹ ಸಂದರ್ಭಗಳಲ್ಲಿ ಆದಷ್ಟು ಕಡಿಮೆ ಖರ್ಚಿನಲ್ಲಿ ಮೇವನ್ನು ಸಾಗಿಸಿ ತೊಂದರೆಗೊಳಗಾದ ಜನರನ್ನು ಸಮಾಧಾನ ಮಾಡಬೇಕು. ತಾವು ಕಾಮಧೇನು ಇಟ್ಟುಕೊಂಡು ಒಂದು ಕಪ್ ಹಾಲಿಗಾಗಿ ಎಲ್ಲ ಕಡೆಯೂ ಅಲೆದಾಡುವುದು ಸರಿಯಲ್ಲ. ತಾವು ನಿರ್ಲಕ್ಷ್ಯ ತೋರಿಸದೆ ದಾಂಡೇಲಿ ಹತ್ತಿರವಿರುವ ಗ್ರೀನ್ ಫಾಡರ್ ಪ್ಲಾಂಟ್‌ನ್ನು ಸರಿಯಾಗಿ ಉಪಯೋಗ ಮಾಡಿಕೊಳ್ಳಿ ಎಂದು ಸಲಹೆ ಮಾಡುತ್ತೇನೆ. ಇಲ್ಲಿ ನೀವು ೧೫ ಸಾವಿರ ಹಳ್ಳಿಗಳು ಅಭಾವಕ್ಕೆ ಒಳಗಾಗಿದ್ದವು ಎಂದು ಹೇಳಿದ್ದೀರಿ. ಆದರೆ ಈ ಅಂಕಿ ಅಂಶಗಳು ಸರಿಯಲ್ಲವೆಂದು ಹೇಳ ಬಹುದು. ಏಕೆಂದರೆ, ಧಾರವಾಡ ಜಿಲ್ಲೆಗೆ ಸೇರಿದ ಅನೇಕ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ ರಾಣಿಬೆನ್ನೂರು, ಹಿರೇಕೆರೂರು, ಹಾವೇರಿ ತಾಲ್ಲೂಕ್‌ಗಳ ಅನೇಕ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿದೆ ಗದಗ್, ಮುಂಡರಗಿ ತಾಲ್ಲೂಕ್‌ಗಳು ಖಾಯಂ ಆದಂಥ ಬರಗಾಲ ಪ್ರದೇಶಗಳಾಗಿವೆ. ಇಂತಹ ಪ್ರದೇಶಗಳನ್ನು ಸುಧಾರಣೆ ಮಾಡಲು ಈ ಸರ್ಕಾರಕ್ಕೆ ಇನ್ನೂ ಆಗಿಲ್ಲ. ಆದರೂ ಜನರೂ ಇವರಿಗೆ ಮತ ಕೊಟ್ಟಿದ್ದಾರೆ. ಈಗ ಕೇಂದ್ರದವರು ಹಣ ಕೊಟ್ಟಿಲ್ಲವೆಂದು ಜನರಿಗೆ ಹೇಳುತ್ತಿದ್ದಾರೆ. ಇವರು ಚುನಾವಣೆಯ ಸಮಯದಲ್ಲಿ ಜನರಿಗೆ ಎರಡು ರೂಪಾಯಿಗಳಿಗೆ ಒಂದು ಕೆ. ಜಿ. ಅಕ್ಕಿ ಕೊಡುತ್ತೇವೆ, ಮಾಂಗಲ್ಯ ಸೂತ್ರ ಕೊಡುತ್ತೇವೆ, ಸೀರೆ, ಧೋತಿ, ಕೊಡುತ್ತೇವೆ, ಶಿಕ್ಷಣವನ್ನು ಪುಕ್ಕಟೆಯಾಗಿ ಕೊಡುತ್ತೇವೆ, ಸಿನಿಮಾ ತೆಗೆಯುವವರಿಗೆ ಸಬ್ಸಿಡಿ ಕೊಡುತ್ತೇವೆ ನಾಟಕ ಮಾಡುವವರಿಗೆ ಸಬ್ಸಿಡಿ ಕೊಡುತ್ತೇವೆಂದು ಹೇಳಿದ್ದಕ್ಕೆ ಮತ ಕೊಟ್ಟಿದ್ದಾರೆ. ಇದಕ್ಕೆಲ್ಲಾ ಇವರ ಹತ್ತಿರ ಸಾಕಷ್ಟು ಹಣ ಇದೆಯೇ ? ಇದಕ್ಕೆಲ್ಲಾ ಕೇಂದ್ರದ ಸಹಾಯವನ್ನು ಇವರು ಪಡೆಯಬೇಕಾಗುತ್ತದೆ. ಇಲ್ಲದಿದ್ದರೆ ಇವರ ಯೋಜನೆಗಳೆಲ್ಲಾ ಯದ್ವಾ ತದ್ವಾ ಆಗುತ್ತವೆ. ಈ ಮಾತನ್ನು ಮಾನ್ಯ ಶ್ರೀ ಜೆ. ಎಚ್. ಪಟೇಲರು ಒಪ್ಪುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಕುಡಿಯುವ ನೀರಿನ ಪೂರೈಕೆ ವಿಷಯದಲ್ಲಿ ಹೆಚ್ಚಿನದನ್ನು ಸಾಧಿಸಲಾಗಿದೆ ಮತ್ತು ಇದರ ಹೆಮ್ಮೆಯ ವಿಷಯವಾಗಿದೆ ಎಂದು ಹೇಳಿದ್ದಾರೆ. ಈ ಕೆಲಸಕ್ಕೆ ಕೇಂದ್ರದಿಂದ ಶೇಕಡಾ ನೂರರಷ್ಟು ಹಣ ಬರುತ್ತದೆ. ಆದ್ದರಿಂದ ಇದು ಜನತಾ ಸರ್ಕಾರದ ಸಾಧನೆ ಎಂದು ಹೇಳಿ ಕೊಳ್ಳಬೇಕಾಗಿಲ್ಲ. ಈ ಕೆಲಸಕ್ಕಾಗಿ ನಮ್ಮಲ್ಲಿ ಸಾಕಷ್ಟು ಬೋರಿಂಗ್ ಯಂತ್ರಗಳಿವೆ. ಈ ಕೆಲಸ ನೋಡಿಕೊಳ್ಳಲು ಇಂಜಿನಿಯರ್‌ಗಳೇ ಬೇಕೆಂದಲ್ಲ. ಕಿವುಡ, ಕುಂಟ ಮುಂತಾದವರಿಗೆ ಹೇಳಿದರೂ ಸಹ ಈ ಕೆಲಸ ನಡೆದುಕೊಂಡು ಹೋಗುತ್ತದೆ ಶ್ರೀಮತಿ ಇಂದಿರಾಗಾಂಧಿ ಅವರು ೧೯೮೦ನೇ ಇಸವಿಯಲ್ಲಿಯೇ ಇನ್ನು ಹತ್ತು ವರ್ಷಗಳಲ್ಲಿ ಎಲ್ಲ ಹಳ್ಳಿಗಳಿಗೂ ಕುಡಿಯುವ ನೀರನ್ನು ಒದಗಿಸುವ ವ್ಯವಸ್ಥೆ ಆಗಬೇಕೆಂದು ಹೇಳಿದ್ದರು. ಆದ್ದರಿಂದ...

ಶ್ರೀ ವೇದಾಂತ ಹೆಮ್ಮಿಗೆ.-ಹಾಗಿದ್ದರೆ ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಏತಕ್ಕೆ ಈ ಕೆಲಸವನ್ನು ತ್ವರಿತಗತಿಯಿಂದ ಮಾಡಲಿಲ್ಲ ?

೧೨-೩೦ ಪಿ.ಎಂ.

ಶ್ರೀ ಕೆ ಹೆಚ್. ಪಾಟೀಲ್.—ಈ ಬೋರಿಂಗ್ ಮತ್ತು ಎಲೆಕ್ಟ್ರಿಸಿಟಿ ಏನು ಇದೆ ಅದೆಲ್ಲಾ ಕರ್ನಾಟಕದಲ್ಲಿ ಕಾಂಗ್ರೆಸ್ ಗೌರ್ನಮೆಂಟ್ ಇದ್ದಾಗಿನಿಂದ ಕೇಂದ್ರ ಸರ್ಕಾರದಲ್ಲಿ ಶ್ರೀಮತಿ ಇಂದಿರಾಗಾಂಧಿಜೀ ಇದ್ದಾಗಿನಿಂದ ಮಾಡಿಕೊಂಡು ಬಂದಿದ್ದೇವೆ. ಕುಡಿಯುವ ನೀರನ್ನು ಪ್ರತಿಯೊಂದೂ ಹಳ್ಳಿಗೂ ಒದಗಿಸಬೇಕೆಂದು ನಮ್ಮ ಸರ್ಕಾರದ ಧ್ಯೇಯವಾಗಿತ್ತು. ಅನೇಕ ಮಂತ್ರಿಗಳೂ ಸಹ ಈ ದಿಸೆಯಲ್ಲಿ ಬಹಳಷ್ಟು ಕೆಲಸ ಮಾಡಿದ್ದಾರೆ. ದಿ. ಶ್ರೀಮತಿ ಇಂದಿರಾಜಿಯವರು ಪ್ರಧಾನ ಮಂತ್ರಿ

ಯಾಗಿದ್ದಾಗ ಇಡೀ ದೇಶದ ಅಭಿವೃದ್ಧಿಗಾಗಿ ದುಡಿಯುತ್ತಿದ್ದರು. ಈ ಬೋರಿಂಗ್ ಮಿಷನ್‌ಗಳು ಯಾವಾಗ ಬಂದವು ? ನಮ್ಮ ಸರ್ಕಾರ ಇದ್ದಾಗಲೇ ನಾವು ಬೋರಿಂಗ್ ಮಿಷನ್‌ಗಳನ್ನು ಖರೀದಿಸಿದ್ದೆವು. ನಾವು ಸಹ ಆಗ ಬೇಕಾದಷ್ಟು ಕೊಳವೆ ಬಾವಿಗಳನ್ನು ತೋಡಿಸಿದ್ದೆವು. ಈಗ ನೀವು ನೀರು ಬೇಡವಾದ ಸ್ಥಳಗಳಲ್ಲೆಲ್ಲಾ ಕೊಳವೆ ಬಾವಿಗಳನ್ನು ಹಾಕುತ್ತೀರಿ, ಬೇಕಾದ ಕಡೆಗಳಲ್ಲಿ ಹಾಕಿಸುವುದಿಲ್ಲ. ಇದಕ್ಕೆ ಉದಾಹರಣೆ ಹೇಳುವುದಾದರೆ, ಮಂಡ್ಯ ನಗರದಲ್ಲಿ ಎಸ್. ಎಂ. ಕೃಷ್ಣರವರ ಮನೆಯ ಮುಂದೆ ಕೊಳವೆ ಬಾವಿಯನ್ನು ಹಾಕಿಸಿದ್ದೀರಿ, ಏಕೆ ಅವರ ಮನೆಯ ಮುಂದೆ ಹಾಕಿಸಿದ್ದೀರಿ ? ಅವರಿಗೆ ನೀರಿನ ಆವಶ್ಯಕತೆ ಇತ್ತೇ ? ಅವರ ಮನೆಯ ಹತ್ತಿರ ನೀರಿಗೆ ಏನು ತೊಂದರೆ ಇರುವುದಿಲ್ಲ. ಅಂತಹ ಕಡೆಗಳಲ್ಲೆಲ್ಲಾ ಸುಮ್ಮನೆ ಏಕೆ ಹಾಕುತ್ತೀರಿ, ಕೆಲವು ಹಳ್ಳಿಗಳಲ್ಲಿ ನೀರೇ ಇರುವುದಿಲ್ಲ ಅಂತಹ ಕಡೆ ನೀವು ಹಾಕುವುದಕ್ಕೆ ಪ್ರಯತ್ನ ಮಾಡಿ ಎಂದು ಜನ ಹೇಳಿದರೂ ಕೇಳಲಿಲ್ಲ ಇನ್ನು ಚುನಾವಣೆ ಸಮಯ ಬಂದಾಗ ಬೇಡವಾದ ಸ್ಥಳಗಳಲ್ಲಿಯೂ ಕೊಳವೆ ಬಾವಿಗಳನ್ನು ಹಾಕುತ್ತೀರಿ, ಚುನಾವಣೆ ಮುಗಿಯುತ್ತಿದ್ದಂತೆ ಕೊಳವೆ ಬಾವಿಗಳ ಪೈಪುಗಳನ್ನು ಕಿತ್ತುಕೊಂಡು ಹೋಗುತ್ತೀರಿ. ಎಣಿಕೆ ಪೂರ್ಣವಾಗಿ ಮುಗಿದ ಮೇಲಾದರೂ ಕಿತ್ತುಕೊಂಡು ಹೋಗಿ ಅಲ್ಲಿಯವರೆವಿಗಾದರೂ ಬಿಡಿ ಎಂದು. ಸಾರ್ವಜನಿಕರು ನಿಮ್ಮವರು ಬಿಡುವುದಿಲ್ಲ. ಇಂತಹ ಕೆಲಸಗಳನ್ನು ನೀವು ಮಾಡುತ್ತೀರಿ.

ಇನ್ನು ಅಕ್ಕಿಯನ್ನು ಸರಬರಾಜು ಮಾಡುವ ಬಗ್ಗೆ ಹೇಳಬೇಕಾದರೆ, ಚುನಾವಣೆ ಇನ್ನು ಎರಡು ಮೂರು ದಿವಸಗಳು ಇವೆ ಎನ್ನುವಾಗ ೨ ರೂಪಾಯಿಗೆ ೧ ಕೇಜಿ ಅಕ್ಕಿಯನ್ನು ಎಲ್ಲರಿಗೂ ಕೊಡುತ್ತೇವೆಂದು ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೀರಿ. ಅದನ್ನು ಶ್ರೀಮಾನ್ ದೇವೇಗೌಡರೂ ಸಹ ನಮ್ಮ ಸರ್ಕಾರ ೨ ರೂಪಾಯಿಗೆ ೧ ಕೇಜಿ ಅಕ್ಕಿಯನ್ನು ಇನ್ನು ಮೇಲೆ ಮಾರಾಟ ಮಾಡುತ್ತೇವೆಂದು ಹೇಳಿದ್ದಾರೆ. ನಿನ್ನೆ ಅಕ್ಕಿಯನ್ನು ಸರಬರಾಜು ಮಾಡುವ ವಿಷಯವನ್ನು ಕೇಳಿದಾಗ, ಇನ್ನೂ ಆ ಸ್ಕೀಮ್‌ನ್ನು ತಯಾರು ಮಾಡಿಲ್ಲ, ಇನ್ನು ೬ ತಿಂಗಳೊಳಗಾಗಿ ಈ ಯೋಜನೆಯನ್ನು ಕಾರ್ಯಗತ ಮಾಡಲು ಮಾನ್ಯ ಮಂತ್ರಿಗಳು ಯೋಚಿಸುತ್ತಿದ್ದಾರೆಂದು ಹೇಳುತ್ತೀರಿ. ಈ ರೀತಿ ೨ ರೂಪಾಯಿಗೆ ೧ ಕೇಜಿ ಅಕ್ಕಿಯನ್ನು ಸರಬರಾಜು ಮಾಡುತ್ತೇವೆಂದು ಜನರಿಗೆ ಭರವಸೆ ಕೊಟ್ಟಿದ್ದೀರಲ್ಲಾ, ಅದಕ್ಕೆ ತಗಲುವ ಅಧಿಕ ವೆಚ್ಚವನ್ನು ಭರಿಸಲು ಯಾವ ಯೋಜನೆ ಹಾಕಿಕೊಂಡಿದ್ದೀರಿ ? ನೀವು ಒಂದು ಸ್ಕೀಮನ್ನು ಇಟ್ಟುಕೊಂಡರೆ ಅದನ್ನು ಸರಿಯಾಗಿ ಮಾಡಬೇಕು, ಸುಮ್ಮಸುಮ್ಮನೇ ಭರವಸೆಗಳನ್ನು ಕೊಡಬಾರದು. ೨ ರೂಪಾಯಿಗೆ ೧ ಕೇಜಿ ಅಕ್ಕಿಯನ್ನು ಕೊಡಲು ಇನ್ನು ಎಷ್ಟು ವರ್ಷಗಳು ನಿಮಗೆ ಬೇಕಾಗುತ್ತವೆ ಎಂಬುದನ್ನಾದರೂ ನಮಗೆ ಹೇಳಿ. ಅದೂ ಅಲ್ಲದೆ ಈಗ ಅಕ್ಕಿಯ ರೇಟ್ ಜಾಸ್ತಿಯಾಗುತ್ತಿದೆ. ಶ್ರೀಮಾನ್ ಬಸವಣ್ಣಪ್ಪನವರು ಹೈದರಾಬಾದಿಗೆ ಕೆಲವು ಆಫೀಸರುಗಳನ್ನು ಕಳುಹಿಸಿಕೊಟ್ಟರು. ಅವರುಗಳು ಗುಪ್ತವಾಗಿ ಹೋಗಿ ಅಲ್ಲಿ ವಿಚಾರ ಮಾಡಿಕೊಂಡು ಬಂದಿದ್ದಾರೆ. ಶ್ರೀ ಎನ್. ಟಿ. ರಾಮರಾಯರು ಆಂಧ್ರದ ಜನತೆಗೆ ಯಾವ ರೀತಿ ಕಡಿಮೆ ಬೆಲೆಗೆ ಅಕ್ಕಿಯನ್ನು ಮಾರಾಟ ಮಾಡುತ್ತಿದ್ದಾರೆ ಹಾಗೂ ಅವರು ಯಾವ ಯೋಜನೆಯನ್ನು ಹಾಕಿಕೊಂಡಿದ್ದಾರೆ ಎಂಬುದನ್ನು ಆ ಆಫೀಸರ್‌ಗಳು ತಿಳಿದುಕೊಂಡು ಬಂದಿರಬಹುದೆಂದು ಕಾಣುತ್ತದೆ. ಶ್ರೀ ಎನ್. ಟಿ. ರಾಮರಾಯರು ನಾಟಕ ಮಾಡುವವರು, ಅವರ ತರಹ ನೀವು ಮಾಡುವುದಕ್ಕಾಗುವುದಿಲ್ಲ. ಅಲ್ಲಿಯದು ಅಲ್ಲಿಗೆ, ಇಲ್ಲಿಯದು ಇಲ್ಲಿಗೆ. ಮಾನ್ಯ ಅಧ್ಯಕ್ಷರೇ, ನಾನು ಇಂದು ಜ್ಯೋತಿಷ್ಯ ಹೇಳುತ್ತಿದ್ದೇನೆ. ಇವರಿಗೆ ೨ ರೂಪಾಯಿಗೆ ೧ ಕೇಜಿ ಅಕ್ಕಿಯನ್ನು ಸರಬರಾಜು ಮಾಡಲು ಸಾಧ್ಯವಾಗುವುದಿಲ್ಲ. ಈಗ ಇವರು ಎಲ್ಲರಿಗೂ ಈ ಅಕ್ಕಿಯನ್ನು ಸರಬರಾಜು ಮಾಡುವುದಿಲ್ಲ, ಕೇವಲ ಬಡವರಿಗೆ ಮಾತ್ರ ೨ ರೂಪಾಯಿಗೆ ೧ ಕೆಜಿ ಅಕ್ಕಿಯನ್ನು ಸರಬರಾಜು ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಮ್ಮ ಸಮಾಜದಲ್ಲಿ ಯಾರು ಬಡವರು ಯಾರು ಶ್ರೀಮಂತರು ಎಂಬುದನ್ನು ಯಾವ ಆಧಾರದ ಮೇಲೆ ನಿರ್ಧಾರ ಮಾಡಬೇಕು ? ಮಾನ್ಯ ಅಧ್ಯಕ್ಷರೇ, ನೀವು ಸಹ ಇಲ್ಲಿ ಕೆಲಸ ಮಾಡುತ್ತಿದ್ದೀರಿ, ನಿಮಗೆ ಬರುವ ಸಂಬಳದಲ್ಲಿ ನೀವು ನಿಮ್ಮ ಖರ್ಚನ್ನು ತೂಗಿಸಿಕೊಂಡು ಹೋಗಬೇಕಾಗುತ್ತದೆ. ಈಗ ಹೇಳಿ ನೀವು ಬಡವರೋ, ಶ್ರೀಮಂತರೋ ? ಸರಿಯಾಗಿ ನೋಡುವುದಕ್ಕೆ ಹೋದರೆ ಯಾರು ಶ್ರೀಮಂತರಲ್ಲ. ಅಂದರೆ ಇವರು ಎಲ್ಲರಿಗೂ ಅಕ್ಕಿಯನ್ನು ಸರಬರಾಜು ಮಾಡಬೇಕಾಗುತ್ತದೆ. ಆ ರೀತಿ ಮಾಡಲು ಅವರಿಗೆ ಸಾಮರ್ಥ್ಯ ಇದೆಯೆ ?

ಇನ್ನು ಇಂಡಸ್ಟ್ರೀಗಳ ಬಗ್ಗೆ ಹೇಳುವುದಾದರೆ. ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ಉದ್ಯೋಗಾವಕಾಶಗಳನ್ನು ಹೆಚ್ಚಿಸಲಾಗುವುದು ಎಂದು ಹೇಳಿದ್ದಾರೆ, ಇದನ್ನು ಮಾಡುತ್ತಾರೆಂದು ಆಶಯ ಮಾಡೋಣ. ಇದನ್ನು ಮಾಡುವುದಕ್ಕೆ ತಡ

ಮಾಡಬಾರದು. ಇವರು ಹೇಗೆ ಇಂಡಸ್ಟ್ರೀಗಳಿಗೆ ಉತ್ತೇಜನ ಕೊಡುತ್ತಿದ್ದಾರೆ ಎಂದರೆ ೮೦ ಪರ್‌ಸೆಂಟ್ ಎಲೆಕ್ಟ್ರಿಸಿಟಿಯನ್ನು ಖೋತ ಮಾಡುವ ಮೂಲಕ ಇವರು ಉದ್ದಿಮೆಗಳನ್ನು ಹಿಂದಕ್ಕೆ ತಳ್ಳಲು ಹೊರಟಿದ್ದಾರೆ. ೮೦ ಪರ್‌ಸೆಂಟ್ ಎಲೆಕ್ಟ್ರಿಸಿಟಿಯನ್ನು ಖೋತ ಮಾಡಿದರೆ ಯಾವುದಾದರೂ ಉದ್ದಿಮೆಗಳು ಉಳಿಯುತ್ತವೆಯೇ ? ಎಲೆಕ್ಟ್ರಿಕ್‌ನ್ನು ಉತ್ಪಾದನೆ ಮಾಡಲು ಜನರೇಟರುಗಳ ಸೇವೆ ಪಡೆಯಬೇಕೆಂದರೆ ಅವುಗಳೂ ಇಲ್ಲ. ದೊಡ್ಡ ಪ್ರಮಾಣದ ಜನರೇಟರುಗಳನ್ನು ಸ್ಥಾಪನೆ ಮಾಡುವ ಕಡೆ ಯಾರು ಗಮನವನ್ನೇ ಹರಿಸುತ್ತಿಲ್ಲ. ಎಲೆಕ್ಟ್ರಿಸಿಟಿ ಡಿಪಾರ್ಟ್‌ಮೆಂಟಿನಲ್ಲಿರುವ ಇಂಜಿನೀಯರ್‌ಗಳು, ಹಾಗೂ ಸೂಪರ್‌ವೈಜರ್ಸ್‌ಗಳು ಎಲೆಕ್ಟ್ರಿಸಿಟಿಯನ್ನು ಸುಧಾರಣೆ ಮಾಡುವ ಕಡೆ ಯೋಚನೆ ಮಾಡದೆ ಅವರು ಹಣವನ್ನು ದೋಚಲು ಹೋಗುತ್ತಾರೆ. ಇಂತಹ ಕಡೆ ಮಾನ್ಯ ವಿದ್ಯುತ್ ಮಂತ್ರಿಗಳಾದ ಶ್ರೀಮಾನ್ ಜೆ. ಹೆಚ್. ಪಟೇಲರು ಗಮನಹರಿಸಿ ಇಂತಹ ಅವ್ಯವಸ್ಥೆಯನ್ನು ತಡೆಗಟ್ಟಲು ಪ್ರಯತ್ನಿಸಬೇಕು. ಹಾಗೂ ಎಲೆಕ್ಟ್ರಿಸಿಟಿಯನ್ನು ಆದಷ್ಟು ಹೆಚ್ಚು ಇಂಡಸ್ಟ್ರೀಗಳಿಗೆ ಕೊಡುವ ಹಾಗೆ ಏರ್ಪಾಡು ಮಾಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ ೧೯೮೨ನೇ ಇಸವಿಯಲ್ಲಿ ಕಾಂಗ್ರೆಸ್‌ನವರು ೧೦೦ ಪರ್‌ಸೆಂಟ್ ಕರೆಂಟ್‌ನ್ನು ಕಟ್ ಮಾಡಿರಲಿಲ್ಲವೇ, ಅದು ಶ್ರೀಮಾನ್ ಪಟೇಲರಿಗೂ ಗೊತ್ತಿಲ್ಲವೇ ?

ಶ್ರೀ ಕೆ. ಹೆಚ್. ಪಾಟೀಲ್.—ನಾವು ೧೦೦ ಪರ್‌ಸೆಂಟ್ ಕರೆಂಟ್‌ನ್ನು ಕಟ್ ಮಾಡಿದಾಗ ಮಾನ್ಯ ದೇವೇಗೌಡರು ನಮಗೆ ಉಪದೇಶ ಮಾಡಿದರು ಆಗ ನಾವು ತಕ್ಷಣ ೧೦೦ ಪರ್‌ಸೆಂಟ್ ಖೋತವನ್ನು ತೆಗೆದುಹಾಕಿದೆವು.

ಶ್ರೀ ಜೆ. ಹೆಚ್. ಪಟೇಲ್.—ನಮ್ಮ ರಾಜ್ಯದಲ್ಲಿ ಈಗಿರತಕ್ಕಂತ ಪರಿಸ್ಥಿತಿಯಲ್ಲಿ ನಾವು ಇದ್ದರೂ ಅಷ್ಟೇ ನೀವು ಇದ್ದರೂ ಅಷ್ಟೇ, ಇದೇ ಪರಿಸ್ಥಿತಿ ಇರುತ್ತಿತ್ತು.

ಶ್ರೀ ಕೆ. ಹೆಚ್. ಪಾಟೀಲ್.— ಎಲೆಕ್ಟ್ರಿಸಿಟಿ ಇಲಾಖೆಯಲ್ಲಿ ಅನೇಕ ಅಧಿಕಾರಿಗಳು ಬಹಳ ಅಧ್ಯಕ್ಷರಾಗಿದ್ದಾರೆ, ಅಪ್ರಾಮಾಣಿಕರಾಗಿದ್ದಾರೆ, ಅವರು ಏನು ಮಾಡುತ್ತಾರೆ ಗೊತ್ತೆ ? ಮನೆಗಳಲ್ಲಿ ಹಾಗೂ ಇಂಡಸ್ಟ್ರೀಸ್‌ನ್ನು ಖರ್ಚುಮಾಡಿದ್ದಾರೆ ಎನ್ನುವುದನ್ನು ತೋರಿಸಲು ಮೀಟರುಗಳನ್ನು ಸರಿಯಾಗಿ ಓಡದಂತೆ ಮಾಡಿ ೫೦ ಪರ್‌ಸೆಂಟ್ ಅವರು ತಿಂದು ೨೫ ಪರ್‌ಸೆಂಟ್ ಅವರಿಗೆ ಕೊಟ್ಟು ಇನ್ನು ಉಳಿದ ೨೫ ಪರ್‌ಸೆಂಟ್‌ನ್ನು ಮಾತ್ರ ಸರ್ಕಾರಕ್ಕೆ ಬರುವಂತೆ ಮಾಡುತ್ತಿದ್ದಾರೆ. ಇದನ್ನು ಮಂತ್ರಿವರ್ಯರು ಅರಿಯಬೇಕು. ಇಂತಹ ಅಪ್ರಾಮಾಣಿಕ ಕೆಲಸಗಳನ್ನು ಮಾಡುವವರಿಗೆ ಸರಿಯಾದ ಶಿಕ್ಷೆಯನ್ನು ಕೊಡಬೇಕು. ಹಾಗು ಎಲೆಕ್ಟ್ರಿಸಿಟಿ ಸರಿಯಾಗಿ ಎಲ್ಲರಿಗೂ ಸಿಗುವಂತೆ ವ್ಯವಸ್ಥೆ ಮಾಡಬೇಕು.

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೆ, ಈ ಸದನದ ಗಮನಕ್ಕೆ ತರುವುದೇನೆಂದರೆ, Electricity is not that kind of energy like coal or water. It cannot be stored. ಎಲೆಕ್ಟ್ರಿಕ್ ಉತ್ಪತ್ತಿ ಆದ ತಕ್ಷಣ ಅದು ಡಿಸ್ಟ್ರಿಬ್ಯೂಟ್ ಆಗಲೇಬೇಕು, ಅದನ್ನು ನಾವು ಸ್ಟೋರ್ ಮಾಡುವುದಕ್ಕಾಗುವುದಿಲ್ಲ. ಎಲೆಕ್ಟ್ರಿಸಿಟಿಯನ್ನು ನಾವು ಗೋಡನ್‌ನಲ್ಲಿ ಸ್ಟೋರ್ ಮಾಡಿ ಬೇರೆಯವರಿಗೆ ಅಧಿಕ ಬೆಲೆಗೆ ಮಾರಾಟ ಮಾಡುತ್ತಿದ್ದೇವೆಂದು ನೀವು ತಿಳಿದುಕೊಂಡಿರುವಂತೆ ಕಾಣುತ್ತಿದೆ. ಆದಷ್ಟು ಹೆಚ್ಚಿಗೆ ಎಲೆಕ್ಟ್ರಿಕ್‌ನ್ನು ಉತ್ಪಾದನೆ ಮಾಡಲು ನಾವು ಶ್ರಮಿಸುತ್ತೇವೆಂದು ಹೇಳುತ್ತೇನೆ. ಎಲೆಕ್ಟ್ರಿಕ್ ಕಡಿಮೆಯಾದಾಗ ಕಟ್ ಮಾಡಲೇಬೇಕಾಗುತ್ತದೆ.

ಶ್ರೀ ಕೆ. ಎಚ್, ಪಾಟೀಲ್.—ಮಾನ್ಯ ಜೆ. ಎಚ್. ಪಾಟೀಲರ ಹತ್ತಿರ ನಾವು ಸಾಹಿತ್ಯವನ್ನು ಕಲಿಯಬೇಕು. ಜನರಿಗೆ ಚುಚ್ಚು ಮಾತನ್ನು ಆಡುವುದನ್ನು ಕಲಿಯಬೇಕು. ಇದನ್ನು ನಾನು ಒಪ್ಪುತ್ತೇನೆ. ಆದರೆ ಎಲೆಕ್ಟ್ರಿಸಿಟಿ ಸ್ಟೋರ್ ಮಾಡಬೇಕೆ? ಬೇಡವೇ? ಎಂಬುದನ್ನು ನಾನು ಅವರಿಂದ ಕಲಿಯಬೇಕಾಗಿಲ್ಲ. ನನಗೆ ಅನುಭವ ಇದೆ. ಅವರಿಗೆ ಸಹಾಯ ಮಾಡುವುದಕ್ಕೋಸ್ಕರ, ಎಲೆಕ್ಟ್ರಿಸಿಟಿ ಜನರೇಟ್ ಮಾಡಬೇಕು, ಹಳ್ಳಿಗಳೊಳಗಿನ ಮಲೀನವನ್ನು ಕೂಡಿ ಹಾಕಿ, ಆ ಮಲೀನದಿಂದಲೇ ಎಲೆಕ್ಟ್ರಿಸಿಟಿ ಹುಟ್ಟಿಸಿ ನಮ್ಮಂಥಹ ಹಳ್ಳಿಯವರು ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ ಸಹಾಯ ಮಾಡಬೇಕೆನ್ನುವ ಯೋಜನ ನಮ್ಮಲ್ಲಿದೆ ಈ ಯೋಜನೆಯನ್ನು ಕಾರ್ಯಗತ ಮಾಡಲಿಕ್ಕೆ ನಾನು ಪ್ರಯತ್ನ ಮಾಡಲಿಕ್ಕೆ ಹತ್ತಿದ್ದೇನೆ. ನಮ್ಮಲ್ಲಿರತಕ್ಕಂತಹ ಸೆಂಗಾ ಚಕ್ಕದಿಂದ ವಿದ್ಯುತ್ ಉತ್ಪಾದನೆ ಮಾಡುವ ದಿಶೆಯಲ್ಲಿಯೂ ನಾನು ಕಾರ್ಯತತ್ಪರನಾಗಿದ್ದೇನೆ. ತನ್ಮೂಲಕ ಎಲೆಕ್ಟ್ರಿಸಿಟಿ ಬೋರ್ಡ್‌ನವರಿಗೆ

ಸಹಾಯ ಮಾಡಬೇಕೆನ್ನುವ ಯೋಜನೆಯೂ ಇದೆ. ನಾನು ಎಲೆಕ್ಟ್ರಿಸಿಟಿ ಹೇಗೆ ಸ್ಟೋರ್ ಆಗುತ್ತದೆ, ಹೇಗೆ ಡಿಚಾರ್ಜ್ ಆಗುತ್ತದೆ ಎನ್ನುವ ವಿಷಯದಲ್ಲಿ ಅನುಭವ ಹೊಂದಿದ್ದೇನೆ. ಒಂದು ವೇಳೆ ಎಲೆಕ್ಟ್ರಿಸಿಟಿ ಇಷ್ಟು ಕಡಿಮೆ ಪ್ರಮಾಣದಲ್ಲಿ ಇದ್ದರೆ ಈ ಎಲೆಕ್ಟ್ರಿಸಿಟಿ ಉದ್ದಿಮೆಗಳು ಹೇಗೆ ನಡೆಯುತ್ತವೆ? ಆವಾಗ ಏನು ಮಾಡುತ್ತಾರೆ ಗೊತ್ತೇ? ನೀವು ಕೊಟ್ಟಿರತಕ್ಕಂತಹ ೫೦ ಎಚ್.ಪಿ.ಯನ್ನು ಹೆಚ್ಚು ಕಡಿಮೆ ಮಾಡುತ್ತಾರೆ. ೧೦೦ ಇರುವವರಿಗೆ ೫೦ ಕೂಡಾ ಕೊಡುತ್ತಾರೆ. ಕೊಟ್ಟು ಹಣ ಹೊಡೆಯುತ್ತಾರೆ. ಇವುಗಳನ್ನೆಲ್ಲಾ ನೀವು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಿ. ಅದನ್ನು ಬಿಟ್ಟು ನಾವು ಏನಾದರೂ ಹೇಳಿದ ಕೂಡಲೇ ಚುಚ್ಚು ಮಾತುಗಳಿಂದ ತಡೆಯುವುದಕ್ಕೆ ಪ್ರಯತ್ನ ಮಾಡಬೇಡಿ. ಯಾರೋ ಮಾಡಿದ ತಪ್ಪುಗಳಿಂದ ನಿಮ್ಮ ಮೇಲೆಯೂ ಅಪಾದನೆಗಳು ಬರುತ್ತವೆ. ನೀವು ಇದರಲ್ಲಿ ಶಾಮೀಲು ಆಗಿದ್ದೀರಿ ಎಂದು ತಿಳಿದುಕೊಳ್ಳುತ್ತಾರೆ. ನೀವು ಹೀಗೆ ಪವರ್ ಕಟ್ ಮಾಡುತ್ತಾ ಹೋದರೆ ಇಂಡಸ್ಟ್ರೀಗಳು ಹೇಗೆ ಮುಂದುವರಿಯಲು ಸಾಧ್ಯ? ಅವುಗಳನ್ನು ಮುಚ್ಚಬೇಕಾಗಿ ಬರಬಹುದು. ಇಂಡಸ್ಟ್ರಿಗಳು ಬಂದ್ ಆದರೆ ಇಂಡಸ್ಟ್ರೀ ಮಂತ್ರಿ ಹೇಗೆ ಉಳಿಯುತ್ತಾರೆ? ಇಂಡಸ್ಟ್ರೀ ಹೇಗೆ ಉಳಿಯುತ್ತದೆ? ಲೇಬರರ್ಸ್ ಹೇಗೆ ಉಳಿಯುತ್ತಾರೆ? ಕ್ರಾಂತಿಯಾಗುತ್ತದೆ. ಹಾಗಾದರೆ ಈಗ ಎರಡು ರೂಪಾಯಿಗಳಿಗೆ ಕೊಡುವ ಅಕ್ಕಿಯನ್ನು ಒಂದು ರೂಪಾಯಿಗೆ ಕೊಡಬೇಕಾಗಿ ಬರುತ್ತದೆ. ಅದನ್ನೂ ತೆಗೆದುಕೊಳ್ಳಲಿಕ್ಕೆ ದುಡ್ಡನ್ನೂ ನೀವು ಕೊಡಬೇಕಾಗುತ್ತದೆ. ಅದಕ್ಕಾಗಿ ನೀವು ಎಲೆಕ್ಟ್ರೀಸಿಟಿ ಜನರೇಟ್ ಮಾಡುವುದಕ್ಕೆ ಪ್ರಯತ್ನ ಮಾಡಿ. ಬಯೋಗ್ಯಾಸ್ ಇಂಡಸ್ಟ್ರೀಯಿಂದ ಬರೆ ಮನೆಮನೆಗೆ ಗೊಬ್ಬರ, ಗ್ಯಾಸ್ ಕೊಡುವುದಿಲ್ಲ ಅದರಿಂದಲೇ ದೊಡ್ಡ ಪ್ರಮಾಣದಿಂದ ಎಲೆಕ್ಟ್ರಿಕ್ ಉತ್ಪಾದನೆಯ ಬಗ್ಗೆಯೂ ಮಾನ್ಯ ಚೌದರಿಯವರು ಅನೇಕ ಯೋಜನೆಗಳನ್ನು ಮಾಡಿದರು. ಹಳ್ಳಿಗಳಲ್ಲಿನ ಹೊಲಸನ್ನು ಕೂಡಿಸಿ ಅದರಿಂದಲೇ ಎಲೆಕ್ಟ್ರಿಸಿಟಿ ಹುಟ್ಟಿಸಿ, ೫ ಸಾವಿರ ಕಿ.ವ್ಯಾಟ್ಸ್ ಜನರೇಟ್ ಮಾಡುವಂತಹ ಕ್ರಮವೂ ಬಂದಿದೆ. ಅಂತಹವುಗಳನ್ನು ಮಾಡಲಿಕ್ಕೆ ಪ್ರಯತ್ನಿಸಿ. ಅವುಗಳಿಗೆ ಹಣ ಕೊಡಿಸಿ. ಅವುಗಳಿಗೆ ಸರಕಾರದಿಂದ ದುಡ್ಡು ಇಲ್ಲದಿದ್ದರೂ ಬ್ಯಾಂಕ್‌ಗಳ ಮೂಲಕ ಹಣ ಕೊಡಲು ಗ್ಯಾರಂಟಿ ಕೊಡಿ. ನಾನೂ ಒಂದು ಸೊಸೈಟಿಗೆ ಗ್ಯಾರಂಟಿ ಕೇಳಿದ್ದೆ. ಎಲ್ಲರೂ ಕೊಡಬೇಕೆಂದು ಹೇಳಿದರು, ಆದರೆ ಕ್ಯಾಬಿನೆಟ್‌ನಲ್ಲಿ ಇದು ಬಂದಾಗ ನನಗೆ ಏನು ಉತ್ತರ ಕೊಟ್ಟಿದ್ದಾರೆ ಎಂದರೆ, ಸೌಂಡ್ ಪ್ರಾಪೊಸಿಷನ್ ಇದ್ದ ಸೊಸೈಟಿಯವರಿಗೆ ಈ ಸ್ಕೀಮ್ ಮಾಡಬೇಕೇ ಹೊರತು ಬೇರೆಯವರು ಮಾಡುವುದು ವಿಹಿತವಲ್ಲವೆಂದು ಗ್ಯಾರಂಟಿ ಕೇಳಿದ್ದಕ್ಕೆ ಉತ್ತರಿಸಿದರು. ಕೇಂದ್ರ ಸರಕಾರದವರು ಸಹಾಯ ಮಾಡಲಿಕ್ಕೆ ತಯಾರಾಗಿದ್ದಾರೆ, ಆರ್.ಇ.ಸಿ.ಯವರು ಸಹಾಯ ಮಾಡಲಿಕ್ಕೆ ತಯಾರಾಗಿದ್ದಾರೆ. ಆದರೆ ನಮ್ಮಲ್ಲಿಂದ ಈ ಟ್ರಾಯಲ್ ಸ್ಕೀಮ್‌ಗೆ ಗ್ಯಾರಂಟಿ ಸಿಗಲಿಲ್ಲ. ಮೂರು ವರ್ಷಗಳ ಕಾಲ ಪ್ರಯತ್ನ ಮಾಡಿ, ಗ್ಯಾರಂಟಿ ಸಿಗಲಿಲ್ಲವೆಂದು ಕೈಬಿಟ್ಟೆ, ಆದರೆ ಈಗ ಪುನಃ ಕೇಂದ್ರ ಸರಕಾರದವರು, ಆರ್.ಇ.ಸಿ ಯವರು ವಿಚಾರ ಮಾಡುತ್ತಾ ಇದ್ದಾರೆ. ಕಾದು ನೋಡಬೇಕು. ಇದರಿಂದ ವಿದ್ಯುತ್ ಉತ್ಪಾದನೆ ಹೆಚ್ಚಿಸಬಹುದೆಂದು ನನ್ನ ನಂಬಿಕೆ, ಈಗ ಇರುವ ಉದ್ಯಮಗಳಿಗೆ ನಿಮಗೆ ವಿದ್ಯುತ್ ಕೊಡಲು ಆಗದಿದ್ದರೆ, ಇನ್ನೂ ನೀವು ವಿಜಯನಗರ ಉಕ್ಕು ಕಾರ್ಖಾನೆಗೆ ವಿದ್ಯುತ್ ಎಲ್ಲಿಂದ ಕೊಡುತ್ತೀರಿ? ಇದರಿಂದ ನಾವು ಆ ಕೈಗಾರಿಕೆಯನ್ನು ಕಳೆದು ಕೊಳ್ಳುವುದಿಲ್ಲವೇ? ಬೇಗನೇ ಕೊಡಲಿಕ್ಕೆ ಪ್ರಯತ್ನಿಸಿ. ಸುಮ್ಮನೇ ರಾಮಕೃಷ್ಣ ಹೆಗಡೆಯವರು ನಾವು we will give electricity ಎಂದು ಹೇಳಿದ್ದಾರೆ. ನೀವು ಎಲೆಕ್ಟ್ರಿಸಿಟಿ ಪ್ರೊಡಕ್ಷನ್ ಚಾಲೂ ಮಾಡಿ, ಎರಡೂ ಕಡೆ ಮುಗಿದಾಗ ವಿಜಯನಗರ ಉಕ್ಕು ಕಾರ್ಖಾನೆ ಬರುತ್ತದೆ. ಒಂದು ವೇಳೆ ಕಾರಣಾಂತರಗಳಿಂದ ಅದನ್ನು ಕಳೆದುಕೊಂಡರೆ ಅದರ ಸಂಪೂರ್ಣವಾದ ಹೊಣೆಗಾರಿಕೆ ನಿಮ್ಮ ಮೇಲೆ ಬರುತ್ತದೆ.

ಶ್ರೀ ಜೆ. ಎಚ್. ಪಟೇಲ್.—೧೯೭೭ನೇ ಇಸವಿಯಲ್ಲಿ ನಾವು ಎಲೆಕ್ಟ್ರಿಸಿಟಿ ಕೊಡುವ ಭರವಸೆ ಕೊಟ್ಟಿದ್ದೆವು. ಆಗ ನಮಗೆ ಅಷ್ಟು ತೊಂದರೆ ಇರಲಿಲ್ಲ. ನಮ್ಮ ಸರಕಾರದ ಬೊನೋಫೈಡ್ಸನ್ನು ಮಾನ್ಯ ಕೆ. ಎಚ್. ಪಾಟೀಲರು ಹೇಳುತ್ತಿಲ್ಲ. ಈಗಲೂ ಕೇಂದ್ರ ಸರಕಾರದವರಲ್ಲಿ ಮನವಿ ಮಾಡಿ ಕೊಳ್ಳುತ್ತಿದ್ದೇವೆ, ನೀವು ವಿಜಯನಗರ ಕಾರ್ಖಾನೆಯನ್ನು ಕೊಡಿ, ಆವಾಗ ನಾವು ಎಲೆಕ್ಟ್ರಿಸಿಟಿ ಕೊಡುವ ಮಟ್ಟದಲ್ಲಿ ಇರುತ್ತೇವೆ. ಆಗ ರಾಯಚೂರು ಥರ್ಮಲ್ ಪ್ಲ್ಯಾಂಟ್ ರೆಡಿಯಾಗುತ್ತದೆ. ಕಾಳಿ ಎರಡನೇ ಸ್ಟೇಜ್ ಆಗುತ್ತದೆ, ಆಮೇಲೆ ಇನ್ನೂ ಎರಡು ಮೂರು ಘಟಕಗಳಿಂದ ಇನ್ನೂ ಒಂದು ಸಾವಿರ ಮೆಗಾವಾಟ್ಸ್ ಪವರ್ ಹೆಚ್ಚು ಮಾಡಿಕೊಳ್ಳುತ್ತೇವೆ. ಇದರಿಂದಾಗಿ ಮಾನ್ಯ ಕೆ. ಎಚ್. ಪಾಟೀಲ್‌ರವರಿಗೆ, ಕೇಂದ್ರ ಸರಕಾರಕ್ಕೆ ಎಲೆಕ್ಟ್ರಿಸಿಟಿಯ ಬಗ್ಗೆ ಚಿಂತೆ ಬೇಡ, ಮೊದಲು ಕಾರ್ಖಾನೆ ಕೊಡುವುದರ ಬಗ್ಗೆ ದುಡ್ಡು ಖೋಡಿಸಿದರೆ ಸಾಕು ಎಂದು ನನ್ನ ಅಭಿಪ್ರಾಯ.

ಶ್ರೀ ಕೆ. ಎಚ್. ಪಾಟೀಲ್.—ನನಗೆ ತುಂಬಾ ಸಂತೋಷವಾಗುತ್ತಿದೆ. ಮಾನ್ಯ ಜೆ. ಎಚ್. ಪಟೇಲ್‌ರವರು ಪುನರಪಿ ಆಶ್ವಾಸನೆಯನ್ನು ಧೃಡೀಕರಿಸಿದ್ದಾರೆ. ಎಲೆಕ್ಟ್ರಿಸಿಟಿ ಕೊಡುತ್ತೇವೆಂದು ಹೇಳಿದ್ದಾರೆ. ಕೊಡುವುದಾದರೆ, ಕೇಂದ್ರ ಸರಕಾರದವರೊಡನೆ ನೆಗೋಷಿಯೇಶನ್ ಮಾಡಲಿ. ಕೇಂದ್ರ ಸರಕಾರದವರೂ ಪಾರ್ಲಿಮೆಂಟ್‌ನೊಳಗೆ ಆಶ್ವಾಸನೆ ಕೊಟ್ಟಿದ್ದಾರೆ. ಮಾನ್ಯ ಸಾಠೆಯವರು ಹೇಳಿದ್ದಾರೆ, ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಸಿದ್ಧರಿದ್ದರೆ, ಕಾರ್ಖಾನೆ ತೆಗೆದುಕೊಳ್ಳಿರಿ ಎಂದು.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ವಿಚಾರದ ಬಗ್ಗೆ ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕಿಂತ ನಾವು, ನೀವು ಜೊತೆ ಸೇರಿ, ವಿಜಯನಗರದ ಉಕ್ಕಿನ ಕಾರ್ಖಾನೆಯನ್ನು ಯಾವರೀತಿ ತರಬೇಕು ಅದಕ್ಕೆ ಪ್ರಯತ್ನ ಮಾಡೋಣ. ಪ್ರಧಾನ ಮಂತ್ರಿಗಳ ಜೊತೆಗೆ ಮುಖ್ಯ ಮಂತ್ರಿಯವರು ಚರ್ಚೆ ಮಾಡಿದ್ದಾರೆ. ಚರ್ಚೆಯ ವಿಷಯವನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುವುದಿಲ್ಲ. ನಾವು ಎಲ್ಲರೂ ಅದನ್ನು ಪಡೆಯುವುದಕ್ಕೆ ಒಗ್ಗಟ್ಟಿನಿಂದ ಪ್ರಯತ್ನ ಪಡೋಣ.

ಶ್ರೀ ಕೆ. ಎಚ್. ಪಾಟೀಲ್.—ಅಧ್ಯಕ್ಷರೇ, ಮಾನ್ಯ ಬೊಮ್ಮಾಯಿಯವರಿಗೆ ಒಗ್ಗಟ್ಟಿನ ಸೌಜನ್ಯ ಈಗ ಬಂದಿದೆ. ಅದಕ್ಕಾಗಿ ನಾವು ಒಪ್ಪೋಣ. ಒಗ್ಗಟ್ಟಿನಿಂದ ನಾವೂ, ಅವರೂ ಕೂಡಿ ಪ್ರಯತ್ನ ಮಾಡೋಣ.

ಸ್ವಾಮಿ, ಇವೊತ್ತು ಸರಕಾರ, ಕಾರ್ಮಿಕ ಸಂಘಗಳ ಹಾಗೂ ಮಾಲೀಕರುಗಳ ಜಂಟಿ ಸಮಿತಿಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಈ ಜಂಟೀ ಸಮಿತಿ ಯಾವಾಗಲೂ ಹೊಂದಾಣಿಕೆಯಾಗುವುದಿಲ್ಲ. ಮೊದಲು ಕಾರ್ಮಿಕ ವರ್ಗದವರುಗಳ ಹಿತವನ್ನು ಅನುಸರಿಸಿ ಇಲ್ಲದಿದ್ದರೆ ಏನಾಗುತ್ತದೆ, ಇಲಿ, ಹಾವು ಮತ್ತು ಮುಂಗುಸಿಯನ್ನು ಒಂದು ಕಡೆ ಹಾಕಿದ ಹಾಗೆ ಆಗುತ್ತದೆ. ತೋಳ, ಕುರಿಯನ್ನು ಒಂದು ಕಡೆ ಇಟ್ಟ ಹಾಗೆ ಆಗುತ್ತದೆ. ಇದು ಸರಿಯಾಗಿ ಆಗುವುದಿಲ್ಲ, ಇದಕ್ಕಾಗಿ ಇದನ್ನು ಪರಾಮರ್ಶಿಸಬೇಕೆಂದು ನಾನು ಕಾರ್ಮಿಕ ಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು "ಕೃಷಿ ಹಾಗೂ ಕೈಗಾರಿಕಾ ಬೆಳವಣಿಗೆಗೆ ಇವರೆಡಕ್ಕೂ ಸಾಕಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿ ಇರಬೇಕೆಂಬ ಅಂಶವನ್ನು ನನ್ನ ಸರಕಾರ ಮನಗಂಡಿದೆ". ಎಂದು ಹೇಳಿಸಿದ್ದರೆ ಯಾವ ಕೈಗಾರಿಕೆ ಬಗ್ಗೆ ಇವರು ಎಲೆಕ್ಟ್ರಿಸಿಟಿಯನ್ನು ಮೀಸಲಾಗಿಟ್ಟಿದ್ದಾರೆ? ಯಾವುದಕ್ಕೂ ಕೂಡ ಇಲ್ಲದಹಾಗೆ ಮಾಡಿದ್ದಾರೆ. ಎಲ್ಲದಕ್ಕೂ ಕಾಂಗ್ರೆಸ್‌ನವರನ್ನು ಎತ್ತಿ ತೋರಿಸುತ್ತಾರೆ. ಕಾಂಗ್ರೆಸ್‌ನವರ ಒಳ್ಳೆಯ ಕಾರ್ಯಗಳನ್ನು ಮಾನ್ಯ ಲಕ್ಷ್ಮೀಸಾಗರ್‌ರವರು ಇಲ್ಲಿ ಉದ್ಧರಿಸಲು ಪ್ರಯತ್ನ ಮಾಡುವುದಿಲ್ಲ, ಈಗ ಎಲೆಕ್ಟ್ರಿಸಿಟಿ ೮೫ ಪರ್ಸೆಂಟ್ ಮಾಡಿ ಇದನ್ನು ಫ್ರೀ ಇಡಬಹುದಾಗಿತ್ತು. ಇದನ್ನು ಫ್ರೀ ಇಡದಿದ್ದರೆ, ಒಂದು ಆಯಿಲ್ ಎಕ್ಸ್‌ಪೆಲ್ಲರ್ ಎರಡು ನೂರು ಎಚ್.ಪಿ. ಎಲೆಕ್ಟ್ರಿಸಿಟಿ ಇದ್ದರೆ, ನೀವು ೭೦–೮೦ ಪರ್ಸೆಂಟ್ ಕಟ್ ಮಾಡಿದರೆ, ಅದು ನಿಂತು ಹೋಗುತ್ತದೆ, ನಿಂತ ಮೇಲೆ ತೆಗೆಯಬೇಕಾದರೆ ಒಂದು ತಿಂಗಳು ಬೇಕಾಗುತ್ತದೆ. ಒಮ್ಮೆ ಜಾಮ್ ಆಯಿತು ಎಂದರೆ, ಅದನ್ನು ಬಿಚ್ಚಿ ಓವರ್‌ಆಯಿಲ್ ಮಾಡಬೇಕು. ವ್ಯವಹಾರದ ಬುದ್ಧಿ ವಿಚಾರ ಮಾಡುವುದು ಮಂತ್ರಿಮಂಡಲದ ಕಾರ್ಯ. ಅದು ಆಫೀಸರ್‌ಗೆ ಆಗುವುದಿಲ್ಲ. ಅವರು ತಮಗೆ ಬೇಕಾದರೆ ಮಾತ್ರ ಮಾಡಿಕೊಳ್ಳುತ್ತಾರೆ ನಿಮ್ಮನ್ನು ಏಕೆ ಇಟ್ಟಿದ್ದಾರೆ ಎಂದರೆ, ಎಲ್ಲಿ ಗೊತ್ತು ಮಾಡಬೇಕು, ಎಲ್ಲಿ ಮಾಡಬಾರದು ಎಂಬ ವ್ಯವಹಾರ ಜ್ಞಾನವನ್ನು ಉಪಯೋಗ ಮಾಡುವುದಕ್ಕೆ ಈ ಮಂತ್ರಿಮಂಡಲ ಇರುವುದು. ಜನರ ಕಲ್ಯಾಣಕ್ಕೋಸ್ಕರ, ಜನರ ಒಳಿತಿಗೋಸ್ಕರ ಕೆಲಸ ಕಾರ್ಯಗಳನ್ನು ಮಾಡಬೇಕೇ ವಿನಹ ಜನರಿಗೆ ಅಕಲ್ಯಾಣವಾಗತಕ್ಕಂತಹ ಕೆಲಸವನ್ನು ಮಾಡದಂತೆ ನೀವು ಆಫೀಸರ್‌ಗಳನ್ನು ಇಲಾಖೆಯನ್ನು ಹಿಡಿತದಲ್ಲಿ ಇಟ್ಟುಕೊಳ್ಳಲು ನಿಮ್ಮ ಪ್ರಯತ್ನ ಬುದ್ಧಿ, ಚಾತುರ್ಯವನ್ನು ಉಪಯೋಗ ಮಾಡಬೇಕಾಗುತ್ತದೆ. ಇದನ್ನು ತಮಗೆ ಹೇಳ ಬಯಸುತ್ತೇನೆ.

ಅಧ್ಯಕ್ಷರೇ, ಗ್ರಾಮೀಣ ಪ್ರದೇಶದ ರೈತರು, ಕೃಷಿಕಾರ್ಮಿಕರಿಗೆ ವಿಮಾ ಸೌಲಭ್ಯವನ್ನು ಕಲ್ಪಿಸುವ ಸಾಧ್ಯತೆಯ ಬಗ್ಗೆ ನನ್ನ ಸರಕಾರ ಪರಿಶೀಲಿಸುತ್ತದೆ ಎಂದು ಹೇಳಿದ್ದೀರಿ ಎಷ್ಟನ್ನು ಪರಿಶೀಲಿಸುತ್ತೀರಿ? ಎಷ್ಟು ಮಾತುಗಳನ್ನು ಹೇಳಿದ್ದೀರಿ ಒಂದಾದರೂ ನಡೆಸುವುದಕ್ಕೆ ಸಾಧ್ಯವೇ? ನೀವು ವಿಮಾ ಯೋಜನೆ ಕೊಡುವುದಕ್ಕೆ ಸಾಧ್ಯವೇ? ನಿಮಗೆ ಹಾಗೆ ಮಾಡತಕ್ಕಂತಹ ವಿಚಾರ ಇದ್ದರೆ ಅವರು ವಿಮಾ ಕಂಪನಿಗೆ ಕಟ್ಟತಕ್ಕಂತಹ ಕಂತನ್ನು ಕೊಡಲಿಕ್ಕೆ ಪ್ರಯತ್ನ ಮಾಡಿ. ಅದನ್ನು ಕೊಡುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ. ಇಂತಹ ಯಾವುದು ಸಾಧ್ಯವಿಲ್ಲವೊ ಅಂತಹ ಮಾತುಗಳನ್ನು ರಾಜ್ಯಪಾಲರ ಬಾಯಿಂದ ಹೇಳಿಸುತ್ತಿದ್ದೀರಿ;

ನಾವು ನೀವು ರಾರಣೆಗಳು. ಒಮ್ಮೆ ತಪ್ಪು, ಒಪ್ಪು ಹೇಳಂತ್ತೇವೆ, ಹೇಳಿಸಿಕೊಳ್ಳುತ್ತೇವೆ, ಕೇಳಿಸಿಕೊಳ್ಳುತ್ತೇವೆ. ಸಿಟ್ಟಾಗುತ್ತೇವೆ, ಸುಮ್ಮನೇ ಇರುತ್ತೇವೆ. ಆದರೆ ರಾಜ್ಯಪಾಲರ ಹುದ್ದೆಯನ್ನು ಇಂತಹ ತಪ್ಪು ದಾರಿಗೆ ಎಳೆಸಲಿಕ್ಕೆ ಪ್ರಯತ್ನ ಮಾಡುವುದನ್ನು ನೋಡಿದರೆ, ನನಗೆ ಬಹಳಷ್ಟು ವಿಷಾದವೆನಿಸುತ್ತದೆ.

ರಾಜ್ಯಪಾಲರ ಬಾಯಿಂದ ಇಂತಹ ಮಾತುಗಳನ್ನು ತಾವು ಹೇಳಿಸಿರುವುದನ್ನು ನೋಡಿದರೆ ನನಗೆ ಬಹಳ ದುಃಖವಾಗುತ್ತದೆ. ಇವತ್ತು ರಾಜ್ಯದಲ್ಲಿ ವಿದ್ಯುಚ್ಛಕ್ತಿ ಇಲ್ಲ. ರಾಜ್ಯದಲ್ಲಿ ಸ್ಟೊರೇಜ್ ಕೆಪ್ಯಾಸಿಟಿ ಇಲ್ಲ. ಇನ್ನು ಜನತಾ ಸರ್ಕಾರದವರು ಭಾಗ್ಯಜ್ಯೋತಿ ಕಾರ್ಯಕ್ರಮ ಜಾರಿಗೆ ತಂದರು ಈ ಯೋಜನೆಯನ್ನು ಜಾರಿಗೆ ತಂದಾಗ ಜನ ತುಂಬಾ ತೃಪ್ತಿಪಟ್ಟುಕೊಂಡರು. ಪ್ರತಿಯೊಂದು ಹರಿಜನ ಮತ್ತು ಗಿರಿಜನರಿಗೆ ಒಂದೊಂದು ದೀಪವನ್ನು ಹಾಕಿಸಿಕೊಡುತ್ತೇವೆಂದು ಹೇಳಿದರು. ಆಗ ಜನನಿಮ್ಮನ್ನು ರಾಮ, ಹರಿಶ್ಚಂದ್ರ ಇತ್ಯಾದಿ ರೂಪದಲ್ಲಿ ಕೊಂಡಾಡಿದರು ಆದರೆ ಇವತ್ತಿನ ದಿವಸ ಪರಿಸ್ಥಿತಿ ಏನಾಗಿದೆ ಎಂದರೆ ದೀಪಗಳನ್ನು ಕಿತ್ತುಕೊಂಡು ಹೋಗಿದ್ದಾರೆ. ಅಲ್ಲಿ ಬರೀ ವೈರಿಂಗ್ ಮಾಡಿರುವುದು ಮಾತ್ರ ನಮ್ಮ ಕಣ್ಣಿಗೆ ಬೀಳುತ್ತಿದೆ. ನೀವು ಏನು ವಚನವನ್ನು ಜನರಿಗೆ ಕೊಟ್ಟಿದ್ದೀರೋ ಆದರಂತೆ ನಡೆಯುವುದರಲ್ಲಿ ವಿಫಲರಾಗಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಪ್ರತಿಯೊಂದು ಬಡಕುಟುಂಬಕ್ಕೂ ಹಸುಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆದರೆ ಇದುವರೆವಿಗೂ ಯಾವ ಬಡ ಕುಟುಂಬಕ್ಕೂ ನೀವು ಹಸುಗಳನ್ನು ಕೊಡುವಂತಹ ಕೆಲಸ ಮಾಡಿಲ್ಲ. ಕೇಂದ್ರ ಸರ್ಕಾರದ ನೆರವಿನಿಂದ ನೀವು ಪ್ರತಿಯೊಂದು ಕುಟುಂಬಕ್ಕೂ ಒಂದೊಂದು ಹಸುವನ್ನು ಕೊಟ್ಟರೆ ಸಾಕು. ಅದು ಬಿಟ್ಟು ನೀವು ೨ ರೂಪಾಯಿಗ ಒಂದು ಕೆ. ಜಿ. ಅಕ್ಕಿಯನ್ನು ಕೊಡದಿದ್ದರೂ ಪರವಾಗಿಲ್ಲ ರೈತ ಅಕ್ಕಿಯನ್ನು ಕೊಂಡುಕೊಂಡು ತಿನ್ನುವಂತಹ ಪರಿಸ್ಥಿತಿಗೆ ಬರುತ್ತಾನೆ. ತಮಗೆ ಎಷ್ಟು ಹಸುಗಳು ಬೇಕೋ ಅಷ್ಟು ಹಸುಗಳನ್ನು ಬೇಕಾದರೆ ಬೇರೆ ರಾಜ್ಯಗಳಿಂದ ಖರೀದಿ ಮಾಡಿ. ನನಗೆ ತಿಳಿದ ಮಟ್ಟಿಗೆ ಇಂತಹ ಒಂದು ವ್ಯವಸ್ಥೆಯನ್ನು ಜರ್ಮನಿಯಲ್ಲಿ ಜಾರಿಗೆ ತಂದಿದ್ದಾರೆ. ಅಲ್ಲಿ ಪ್ರತಿಯೊಬ್ಬ ಸಾಮಾನ್ಯ ಪ್ರಜೆ ಕೂಡ ಸುಖವಾಗಿ ಜೀವನ ಮಾಡಿಕೊಂಡಿದ್ದಾನೆ. ನಾನು ಈ ವಿಷಯವನ್ನು ಪತ್ರಿಕೆಗಳಲ್ಲಿ ಸಹ ಓದಿದ ಜ್ಞಾಪಕ ಇದೆ. ಇನ್ನು ಹರಿಜನ ಮತ್ತು ಗಿರಿಜನರ ಬಗ್ಗೆ ಪ್ರಸ್ತಾಪ ಮಾಡುವುದಾದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹರಿಜನ ಮತ್ತು ಗಿರಿಜನರ ಅಭಿವೃದ್ಧಿಗಾಗಿ ಕಾರ್ಪೋರೇಷನ್ ಒಂದು ಇದೆ. ಆ ಅಭಿವೃದ್ಧಿ ಕಾರ್ಪೋರೇಷನ್ ಇವತ್ತು ದಿವಾಳಿಯಾಗತಕ್ಕಂಥ ಪರಿಸ್ಥಿತಿ ಬಂದಿದೆ. ಆ ಕಾರ್ಪೋರೇಷನ್‌ಗೆ ಒಬ್ಬ ಅಧ್ಯಕ್ಷರನ್ನು ಕೊಟ್ಟು ಅವರಿಗೆ ಒಂದು ಕಾರು ಒಂದು ಬಂಗಲೆ ಕೊಟ್ಟು, ಅವರಿಗೆ ಸಿಬ್ಬಂದಿಯನ್ನು ಕೊಟ್ಟ ಮಾತ್ರಕ್ಕೆ ಹರಿಜನ ಮತ್ತು ಗಿರಿಜನರ ಅಭಿವೃದ್ಧಿಯಾದಂತೆ ಎಂದು ತಾವು ಏನಾದರೂ ತಿಳಿದುಕೊಂಡಿದ್ದೀರೆನೋ ನನಗೆ ಗೊತ್ತಿಲ್ಲ. ಒಂದು ವೇಳೆ ಯಾರಿಗಾದರೂ ಸಹಾಯವಾಗಿದ್ದರೆ ಅದು ಕೈಚೀಲವನ್ನು ಹಿಡಿದುಕೊಂಡು ತಿರುಗಾಡುವವರಿಗೆ ಸಹಾಯವಾಗಿದ್ದರೂ ಆಗಿರಬಹುದು. ಅದು ಬಿಟ್ಟು ಬಡ ಹರಿಜನ ಮತ್ತು ಗಿರಿಜನರಿಗೆ ಯಾವ ಸಹಾಯ ಕೂಡ ಈ ಸರ್ಕಾರ ಮಾಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಹರಿಜನರ ಕೋಮಿಗೆ ಸೇರಿದ ಹೆಣ್ಣು ಮಗಳು ಎಂ. ಎ. ಪಿ. ಹೆಚ್. ಡಿ. ಇನ್ ಪೊಲಿಟಿಕಲ್ ಸೈನ್ಸ್ ಪಾಸ್ ಮಾಡಿಕೊಂಡಿದ್ದಳು. ಆಕೆ ಜನತಾ ಪಕ್ಷಕ್ಕೆ ಕೊಡಲಿಲ್ಲವೆಂದು ತಿಳಿದು ಆಕೆಯನ್ನು ಇವತ್ತು ಮನೆಗೆ ಕಳುಹಿಸಿದ್ದಾರೆ. ಆಕೆಯ ಹೆಸರು ಶಾಂತ ಹಲಗಿ ಎಂದು ಆಕೆಯನ್ನು ಮಾನ್ಯ ಮಂತ್ರಿಗಳಾದ ಶ್ರೀಮಾನ್ ರಾಚಯ್ಯನವರೇ ನೇಮಿಸಿದ್ದರು. ಇವತ್ತು ಆಕೆಗೆ ಏನು ಕುತ್ತು ಬಂತು ? ಇನ್ನು ಅಲ್ಪಸಂಖ್ಯಾತರ ಆಯೋಗವನ್ನು ಸರ್ಕಾರದವರು ನೇಮಕ ಮಾಡಿದ್ದಾರೆ. ಆ ಆಯೋಗದ ವರದಿ ಸರ್ಕಾರಕ್ಕೆ ಇನ್ನೂ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಆ ವರದಿ ಬಂದಿದ್ದರೆ ನಮಗೆ ಇನ್ನೂ ಬಂದಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸ್ವಾಮಿ ಅಲ್ಪಸಂಖ್ಯಾತರ ಆಯೋಗ ಅದು ರಾಜಕೀಯ ಕಮಿಟಿ ಅಲ್ಲ. ಆ ಆಯೋಗದ ವರದಿ ಸರ್ಕಾರಕ್ಕೆ ಬಂದಿದೆ. ಆ ವರದಿಯನ್ನು ಕ್ಯಾಬಿನೆಟ್‌ನಲ್ಲಿ ಇಟ್ಟು ಚರ್ಚೆ ಮಾಡಿದ್ದೇವೆ ಅದು ಮುದ್ರಣ ಮಾಡಿಸಿ ಮಾನ್ಯ ಸದಸ್ಯರಿಗೆ ಕೊಡುತ್ತೇವೆ.

ಶ್ರೀ ಕೆ ಹೆಚ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯಮಂತ್ರಿಗಳು ನೀರಿನ ವಿಚಾರದಲ್ಲಿ ಆಗಲಿ ಅಥವಾ ವಿದ್ಯುಚ್ಛಕ್ತಿ ವಿಷಯದಲ್ಲಿ ಆಗಲಿ ಮದ್ರಾಸಿಗೆ ಹೋಗಿ ಅಲ್ಲಿ ಮಾತುಕತೆ ಮಾಡಿರುವುದು ಪತ್ರಿಕೆಗಳಲ್ಲಿ ತಾವೆಲ್ಲಾ ನೋಡಿದ್ದೀರಿ. ಆದರೆ ಆ ರೀತಿ ಸ್ಟೇಟ್‌ಮೆಂಟ್ ಮಾಡುವಾಗ ವಿರೋಧ ಪಕ್ಷದ ಸದಸ್ಯರನ್ನು ಕೂಡ ತಾವು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡರೆ ಒಳ್ಳೆಯದು. ಅಂತಹ ಒಂದು

ಸೌಜನ್ಯ ಕೂಡ ನಿಮಗೆ ಇಲ್ಲ. ಹಿಂದೆ ಈ ರೀತಿಯಾಗಿ ಯಾರಾದರೂ ವಿರೋಧಪಕ್ಷವನ್ನು ಸಂಪರ್ಕಿಸದೆ ಏನಾದರೂ ಸ್ಟೇಟ್‌ಮೆಂಟ್ ಮಾಡಿದ್ದರೆ ಅವರ ಮೇಲೆ ಪ್ರಿವಿಲೇಜ್ ಮೋಷನ್ ಮೂವ್ ಮಾಡುತ್ತಿದ್ದರು ಆದರೆ ಈಗ ಆ ಒಂದು ಪರಿಸ್ಥಿತಿಗೆ ಯಾರೂ ಕೂಡ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ ತಮಗೆ ತಿಳಿದಿರುವ ಹಾಗೆ ಅನೇಕ ಸ್ಟೇಟ್‌ಮೆಂಟ್‌ಗಳನ್ನು ಮಾಡಿದ್ದಾರೆ. ಆದ್ದರಿಂದ ತಾವಾದರೂ ಕೂಡ ತಮ್ಮ ಕೊಠಡಿಗೆ ಕರೆಸಿ ಸ್ವಲ್ಪ ಬುದ್ಧಿ ಹೇಳಿದರೆ ಒಳ್ಳೆಯದು. ಇನ್ನು ನಮ್ಮ ಕರ್ನಾಟಕ ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆ ಜಾಸ್ತಿಯಾಗಿದೆ. ಸಾಮಾನ್ಯವಾಗಿ ಮಂತ್ರಿಗಳ ಮಕ್ಕಳು ಕೂಡ ಇವತ್ತು ನಿರುದ್ಯೋಗಿಗಳಾಗಿದ್ದಾರೆ. ತಾವು ಏನು ರಾಜ್ಯಪಾಲರ ಬಾಯಿಂದ ಈ ಮಾತುಗಳನ್ನು ಹೇಳಿಸಿದ್ದೀರಿ ಇದನ್ನು ನೋಡಿದರೆ ನನಗೆ ಬಹಳ ನೋವಾಗುತ್ತಿದೆ. ಇನ್ನು ಲೋಕಾಯುಕ್ತ ಮಸೂದೆಗೆ ರಾಷ್ಟ್ರಪತಿಗಳಿಂದ ಅಂಗೀಕಾರ ದೊರೆತಿದೆ, ಆದರೆ ಇದುವರೆವಿಗೂ ಕೂಡ ನೀವು ಲೋಕಾಯುಕ್ತರನ್ನು ನೇಮಕ ಮಾಡಿಲ್ಲ. ಕಾರಣವೇನು ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ತಮ್ಮ ಕಾರ್ಯಕ್ರಮ ಏನು ? ವಿರೋಧ ಪಕ್ಷದವರು ಏನಾದರೂ ಮಾತನಾಡಿದರೆ ನೀವು ಲೋಕಾಯುಕ್ತಕ್ಕೆ ಹೋಗಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ಇಲ್ಲಿ ಲೋಕಾಯುಕ್ತರನ್ನೆ ಇನ್ನು ನೇಮಕ ಮಾಡಿಲ್ಲ. ಲೋಕಾಯುಕ್ತರನ್ನು ನೇಮಕ ಮಾಡಲು ಇನ್ನು ಎಷ್ಟು ದಿವಸಗಳು ಬೇಕು ? ಲೋಕಾಯುಕ್ತರನ್ನು ನೇಮಕ ಮಾಡಲು ಇನ್ನು ಎಷ್ಟು ದಿವಸಗಳು ಬೇಕು ? ಲೋಕಾಯುಕ್ತರನ್ನು ನೇಮಕ ಮಾಡುವಾಗ ವಿರೋಧಪಕ್ಷದ ನಾಯಕರನ್ನು ಕರೆದು ಮಾತನಾಡಿ ನೇಮಕ ಮಾಡುತ್ತೇವೆಂದು ಸಹ ಹೇಳಿದ್ದರು. ಆದರೆ ಆ ಕೆಲಸವನ್ನು ಸಹ ಇನ್ನೂ ಮಾನ್ಯ ಮುಖ್ಯಮಂತ್ರಿಗಳು ಮಾಡಿಲ್ಲ. ಲೋಕಾಯುಕ್ತರನ್ನು ನೇಮಕ ಮಾಡಿದರೆ ನಾವು ಇಲ್ಲಿ ವಾದವಿವಾದಗಳು ಮಾಡುವುದು ಸ್ವಲ್ಪಮಟ್ಟಿಗಾದರೂ ಕಡಿಮೆಯಾಗಬಹುದು. ತಾವು ಜನರ ಕಣ್ಣಿಗೆ ಮಣ್ಣೆರಚುವಂತಹ ಕೆಲಸವನ್ನು ಮಾಡುತ್ತಿದ್ದೀರಿ. ಅಂತಹ ಕೆಲಸವನ್ನು ಮಾಡದೆ ಆದಷ್ಟು ಬೇಗ ಲೋಕಾಯುಕ್ತರನ್ನು ನೇಮಕ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮಾನ್ಯ ಸಭಾಧ್ಯಕ್ಷರೇ, ಇನ್ನೂ ಅನೇಕ ಮಹತ್ವಪೂರ್ಣವಾದ ಮಾತುಗಳನ್ನು ನಾವು ಇವತ್ತು ತಮ್ಮ ಮುಖಾಂತರ ಈ ಸದನದ ಗಮನಕ್ಕೆ ತರಬೇಕಾಗಿದೆ. ಇವತ್ತು ವ್ಯವಸಾಯಗಾರರಿಗೆ ಅವರು ಹೇಳಿದ ಬೆಳೆಗೆ ಬೆಲೆಗಳನ್ನು ನಿಯಂತ್ರಿಸುವ ವಿಷಯದಲ್ಲಿ ಆಗ್ರಿಕಲ್ಚರಲ್ ಪ್ರೈಸ್ ಕಮಿಷನ್ ಮತ್ತು ನ್ಯಾಷನಲ್ ಡೆವಲಪ್‌ಮೆಂಟ್ ಕೌನ್ಸಿಲ್ ಎದುರಿಗೆ ರೈತರ ಬೇಡಿಕೆಗಳನ್ನು ಇಟ್ಟು, ಬೆಲೆಗಳನ್ನು ಹೆಚ್ಚಿಸುವ ಜವಾಬ್ದಾರಿ ಸರಕಾರದ ಮೇಲಿದೆ. ಇದು ಕೇವಲ ಕೇಂದ್ರ ಸರಕಾರಕ್ಕೆ ಸಂಬಂಧಪಟ್ಟಿದ್ದು, ಅವರು ನೀವು ಮಾಡಿಕೊಳ್ಳಿ ಎಂದು ಹೇಳುವ ಹಾಗೆ ಇಲ್ಲ. ಇದಕ್ಕೆ ನೀವು ಟ್ರಸ್ಟೀಗಳು. ಕೆಲವು ಕೋ ಆಪರೇಟೀವ್ ಸೊಸೈಟಿಗಳಿಗೆ ಷೇರುಗಳನ್ನು ಕೊಟ್ಟಿದ್ದೀರಿ. ಕೊಡಿ. ಯಾವ ಯಾವ ಮಿಲ್ಲುಗಳಿಗೆ ನಿಯಮಗಳನ್ನು ಒತ್ತಾಯಿಸಬೇಕು, ಅಲ್ಲಿ ನಿಯಮಗಳನ್ನು ಕೆಳಕ್ಕೆ ಒತ್ತಿದ್ದೀರಿ. ಎಲ್ಲಿ ನಿಯಮಗಳನ್ನು ಅನುಸರಿಸುವುದಕ್ಕೆ ಹೋಗಿದ್ದೀರಿ. ಶಿರಹಟ್ಟಿ, ರಾಣೆಬೆನ್ನೂರಿನ ಮಿಲ್ಲುಗಳಿಗೆ ಹಣ ಕೊಟ್ಟಿದ್ದೀರಿ. ಆದರೆ ಅದೇ ನಿಯಮವನ್ನು ಅನುಸರಿಸಿ ಇನ್ನೊಂದು ಮಿಲ್ಲಿಗೆ ಅಂದರೆ ರಾಣೆಬೆನ್ನೂರಿನ ಸಹಕಾರಿ ನೂಲಿನ ಗಿರಣಿಗೆ ಕೊಟ್ಟಿಲ್ಲ. ಇದು ಸಾಧುವಾದ, ದಕ್ಷವಾದ, ಪ್ರಾಮಾಣಿಕವಾದ ನೀತಿಯೇ ? ಏಕೆಂದರೆ ಶ್ರೀಮಾನ್ ಕೋಳಿವಾಡ್‌ರವರು ವಿರೋಧ ಪಕ್ಷದಿಂದ ನಿಂತಿದ್ದಾರೆ, ಅವರ ಮಿಲ್ಲಿಗೆ ಕೊಡಬಾರದು, ಆದರೆ ಇನ್ನೊಂದು ಮಿಲ್ಲಿಗೆ ಕೊಡಬೇಕು. ಎಂದು ಮಾಡಿದ್ದೀರಾ ? ಎನ್.ಸಿ.ಡಿ.ಸಿ. ಯವರು ಹಾಗೂ ನೀವು ಯಾವುದಾದರೂ ನೆರವು ಕೇಳಿದಾಗ, ೫ ಪರ್ಸೆಂಟ್ ಷೇರ್ ಕೂಡಿಸಿದ್ದಾರೆಯೇ ಎಂದು ಕೇಳುತ್ತೀರಿ. ಮಾನ್ಯ ಜಾಲಪ್ಪನವರು ಕೇಳುತ್ತಾರೆ ಅದು ಸಾಧುವಾಗಿದೆ, ಕೂಡಿಸಿರಬೇಕು, ಆದರೆ ಷೇರು ಕೊಡಿಸಿ ಸಹ ನೀವು ಕೆಲವರಿಗೆ ಶೇರು ಕೊಟ್ಟಿಲ್ಲ. ದುಡ್ಡು ಕೊಟ್ಟು, ಒಂದು ವರ್ಷವಾದರೂ ಸಹ ಒಂದು ಪೈಸೆ ಖರ್ಚು ಮಾಡದೇ ಹೋಗಿರತಕ್ಕ ಅಧಿಕಾರ ವರ್ಗದವರ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ. ಇದಕ್ಕಾಗಿ ೧೬ ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದರೂ ಸಹ, ಅದರಲ್ಲಿ ಒಂದು ಪೈಸೆ ಖರ್ಚು ಮಾಡದ ರೀತಿಯಲ್ಲಿ ಇಟ್ಟಿರುವ ಸರಕಾರವನ್ನು ದಕ್ಷ ಸರಕಾರ ಎನ್ನಬಹುದೇ ? ಯಾವ ಉದ್ದೇಶಕ್ಕಾಗಿ ಇದನ್ನು ಮಾಡುತ್ತೀರಿ ಎಂಬ ಮಾತನ್ನು ಕೇಳಿದರೆ ತಾವು ನಿಜವಾಗಿಯೂ ಕೋಪ ಗೊಳ್ಳುತ್ತೀರಿ. ಇನ್ನೂ ಅನೇಕ ಯೋಜನೆಗಳಲ್ಲಿ ಹಣವನ್ನು ಸರಿಯಾಗಿ ಖರ್ಚು ಮಾಡುತ್ತಿಲ್ಲ. ಕಿಸಾನ್ ಫ್ಯಾಕ್ಟರಿಯವರು ಇದ್ದಾರೆ, ಅವರು ಕೋಲಾರ ಮತ್ತಿತರ ಕಡೆಗಳಿಂದ ಬರುವ ಟೊಮಾಟೋ ಬೆಳೆಗಾರರಿಗೆ ಎಷ್ಟು ನಿಕೃಷ್ಟವಾದ ಬೆಲೆಯನ್ನು ಕೊಡುತ್ತಿದ್ದಾರೆ ಎಂಬುದು ಸರಕಾರಕ್ಕೆ ಗೊತ್ತಿದೆಯೇ ?

ನಮ್ಮ ಸರಕಾರಕ್ಕೆ ಏನಾಗಿದೆ ? ಹಣ್ಣುಗಳನ್ನು ಪರಿಷ್ಕರಣ ಮಾಡುವ ಕಾರ್ಖಾನೆಗಳನ್ನು ಸರಕಾರದ ಮೂಲಕ ಹಾಕಿ ಅಥವಾ ಸಹಕಾರ ರಂಗದಲ್ಲಿ ಹಾಕಿ ರೈತರಿಗೆ ಅನುಕೂಲ ಮಾಡಿದರೆ ಅವರು, ನಿಮ್ಮನ್ನು ಹಾಡಿ ಹರಸುತ್ತಾರೆ. ಮಾನ್ಯ ದೇವೇಗೌಡರು ಹಾಸನದಲ್ಲಿ ಒಂದು ನೀರಾವರಿ ಯೋಜನೆಯನ್ನು ಕಡಿಮೆ ಮಾಡಿದರೂ ಪರವಾಗಿಲ್ಲ. ಅದೇ ಹಾಸನದಲ್ಲಿ ಹೇರಳವಾಗಿ ಬೆಳೆಯುತಕ್ಕ ಪೊಟಾಟೋ ಏನು ಇದೆ, ಎಷ್ಟು ಹೇರಳವಾಗಿ ಅದನ್ನು ಬೆಳೆಯುತ್ತಾರೆ, ಅದು ಯಾವ ಯಾವ ಕಡೆಗೆ ಹೋಗುತ್ತದೆ, ಅದನ್ನು ಪಡೆದು ಅಲ್ಲಿ ಒಂದು ಸ್ಟಾರ್ಚ್ ಮಾಡುವ ಕಾರ್ಖಾನೆ ತೆಗೆದರೆ, ಪೊಟಾಟೋ ಗ್ರೋಯರ್ಸ್ ನಿಮ್ಮನ್ನು ಅಂತಃಕರಣ ಪೂರ್ವವಾಗಿ ಹರಸುತ್ತಾರೆ. ರಾಜಕೀಯ ಜೀವನದಲ್ಲಿ ಒಬ್ಬೊಬ್ಬ ಮಂತ್ರಿಗಳು ಇಂತಹ ಒಂದೊಂದು ಕೆಲಸ ಮಾಡಿದರೆ ಜನರ ಅಭಿನಂದನೆಗೆ ಪಾತ್ರರಾಗುತ್ತಾರೆ. ಎಂಬ ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಇನ್ನೂ ಅನೇಕ ವಿಚಾರಗಳನ್ನು ಹೇಳಬೇಕೆಂದಿದ್ದರೂ ಸಹ, ತಾವು ಸೌಜನ್ಯಯುತವಾಗಿ ಹೆಚ್ಚು ಸಮಯವನ್ನು ನನಗೆ ಕೊಟ್ಟಿದ್ದೀರಿ. ತಮ್ಮ ಸೌಜನ್ಯವನ್ನು ನಾನು ದುರಪಯೋಗ ಮಾಡಿಕೊಳ್ಳುವುದಕ್ಕೆ ಇಚ್ಛೆಪಡುವುದಿಲ್ಲ. ಈ ಸರಕಾರ ರೈತಾಪಿ ಜನತೆಗೆ ಅನೇಕ ಕೆಲಸಗಳನ್ನು ಮಾಡಬೇಕಾಗಿದೆ. ಆ ಕಾರ್ಯಗಳನ್ನು ಮಾಡುವಾಗ ನಮ್ಮ ಕಡೆಯಿಂದ ಏನಾದರೂ ಸಲಹೆ, ಸಾಧನ ಅಥವಾ ಸಹಕಾರ ಬೇಕಾದಾಗ, ಅ ಪಕ್ಷದ ಜನರಿಗೆ ಸಂಪೂರ್ಣವಾದ ಸಹಕಾರವನ್ನು ಕೊಡಲಿಕ್ಕೆ ನಾವು ಸಮರ್ಥರಿದ್ದೀರಿ ಎಂದು ಹೇಳಿ, ಅನಿವಾರ್ಯವಾಗಿ, ಗೌರ್ನರ್ ಬಗ್ಗೆ ನನಗೆ ಎಷ್ಟೇ ಗೌರವ ಇದ್ದರೂ, ಗೌರ್ನರ್ ಸ್ಥಾನದ ಬಗ್ಗೆ ಎಷ್ಟೇ ಅಭಿಮಾನ ಇದ್ದರೂ, ಗೌರ್ನರ್‌ರವರು ಕೇಂದ್ರ ಸರಕಾರದ ಪ್ರತಿನಿಧಿಗಳಾಗಿ ಇಲ್ಲಿದ್ದಾರೆ ಎಂದು ಗೊತ್ತಿದ್ದರೂ, ಪ್ರೆಸಿಡೆಂಟ್‌ರವರ ಪ್ರತಿನಿಧಿಗಳಾಗಿ ಇಲ್ಲಿದ್ದಾರೆ ಎಂಬುದು ಗೊತ್ತಿದ್ದರೂ ಸಹ, ಈ ಸದನದಲ್ಲಿ ಅವರನ್ನು ಅಭಿನಂದಿಸುವ ಠರಾವು ಅವರು ಮಾಡಿರುವ ಭಾಷಣವನ್ನು ಅಭಿನಂದಿಸುವ ಠರಾವು ಏನಿದೆ ಅದನ್ನು ಪ್ರಬಲವಾಗಿ ವಿರೋಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಸಭೆಯು ಈಗ ಎದ್ದು ಮಧ್ಯಾಹ್ನ ೨-೦೦ ಗಂಟೆಗೆ ಮತ್ತೆ ಸೇರುತ್ತದೆ.

(ಸಭೆಯು ೧ ಗಂಟೆ ೫ ನಿಮಿಷಕ್ಕೆ ಎದ್ದು ಮತ್ತು ೨—೦೦ ಗಂಟೆಗೆ ಸೇರಲು ನಿಶ್ಚಯಿಸಿತು)

(House reassembled at 2—00 P. M.)

(ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ) ಪೀಠವನ್ನು ಅಲಂಕರಿಸಿದ್ದರು)

ಶ್ರೀ ಬಿ. ರಾಜುಗೌಡ (ಹನೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಜಂಟಿ ಅಧಿವೇಶನವನ್ನು ಉದ್ದೇಶಿಸಿ, ಮಾರ್ಚಿ ೧೮ರಲ್ಲಿ ಮಾಡಿದ ಭಾಷಣವನ್ನು, ಮನಸ್ಸಿಲ್ಲದಿದ್ದರೂ ಸ್ವಾಗತಿಸುತ್ತಾ, ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಯಾವುದೇ ರಾಜಕೀಯ ಪಕ್ಷ ರಾಜ್ಯದಲ್ಲಿ ದೊರೆಯಬಹುದಾದ ಸಂಪತ್ತಿನ ಅರಿವಿನ ಆಧಾರದ ಮೇಲೆ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆಗಳನ್ನೂ, ಭರವಸೆಗಳನ್ನೂ ಹೇಳಬೇಕೇ ವಿನಹ ಯದ್ವಾತದ್ವಾ ಸಂಪತ್ತಿನ ಅರಿವಿಲ್ಲದೇ ಘೋಷಣೆ ಮಾಡತಕ್ಕಂತಾದ್ದು ಸರಿಯಲ್ಲವೆಂದು ನನ್ನ ಅಭಿಪ್ರಾಯ. ಉನ್ನತ ಸ್ಥಾನದಲ್ಲಿರತಕ್ಕಂಥವರು ಯಾವುದೇ ವೇದಿಕೆಯ ಮೇಲೆ ನಿಂತು ಸಾರ್ವಜನಿಕರ ಮುಂದೆ ಏನು ಕಾರ್ಯಕ್ರಮಗಳನ್ನು ಹೇಳುತ್ತಾರೆ ಅವುಗಳನ್ನು ಕಾಲಕಾಲಕ್ಕೆ ಈಡೇರಿಸುತ್ತೇನೆಂದರೆ ಮಾತ್ರ ಭರವಸೆಗಳನ್ನು ಕೊಡತಕ್ಕಂತಾದ್ದು ವಿಹಿತವೆಂದು ನನಗನಿಸುತ್ತದೆ, ''ಹಾಸಿಗೆ ಇದ್ದಷ್ಟು ಕಾಲು ಚಾಚು'' ಎನ್ನುವ ಗಾದೆಯಂತೆ ರಾಜ್ಯದಲ್ಲಿ ಹಾಸಿಗೆ ಇದ್ದಷ್ಟು ಕೈ ಹಾಕಬೇಕೆಂದೂ ! ರಾಜ್ಯದ ಸಂಪನ್ಮೂಗಳ ಅರಿವಿಲ್ಲದೇ ಏತಕ್ಕಾಗಿ ರಾಜಕೀಯ ಪಕ್ಷಗಳು ತನ್ನ ಪ್ರಣಾಳಿಕೆಯಲ್ಲಿ ಘೋಷಣೆಗಳನ್ನೂ ಭರವಸೆಗಳನ್ನೂ ಕೊಡುತ್ತವೆ ಎನ್ನುವುದನ್ನು ವಿಶ್ಲೇಣೆ ಮಾಡಬೇಕಾಗುತ್ತದೆ, ಇಂತಹ ಒಂದು ವರ್ಣರಂಜಿತ ಭರವಸೆಗಳನ್ನು ಮತದಾರನ ಕಡೆಗೆ ಆಕರ್ಷಣೆ ಮಾಡುತ್ತವೆ ಎಂಬುದೇ ಮುಖ್ಯ ಉದ್ದೇಶ. ಬಹುಶ ; ಈ ಒಂದು ಪೊಳ್ಳು ಅಶ್ವಾಸನೆ, ಪೊಳ್ಳು ಭರವಸೆ ಕೊಟ್ಟಿದ್ದಾರೆ ಎನ್ನುವ ಸಂಕಲ್ಪದ ಮೇಲೆ ಮತ ಹಾಕಂತ್ತಾನೆ. ಇದನ್ನು ಯಾವುದೇ ರಾಜಕೀಯ ಪಕ್ಷವಾಗಲೀ ವಿಮರ್ಶೆ ಮಾಡಬೇಕು. ಬಹುಶಃ ಇವತ್ತಿನ ದಿವಸ ರಾಜಕಾರಿಣಿಗಳಲ್ಲಿ ಒಂದು ದುಶ್ಚಲ ಬಂದಿದೆ. ರಾಜ್ಯದ ಅಧಿಕಾರ ತೆಗೆದುಕೊಳ್ಳಬೇಕು ಎನ್ನುವ ಕೆಟ್ಟ ಉದ್ದೇಶಕ್ಕಾಗಿ ಇಲ್ಲದ ಸಲ್ಲದ ಪೊಳ್ಳು ಭರವಸೆಗಳನ್ನು ಕೊಡುತ್ತಿದ್ದಾರೆ ಎಂದು ನಾನಾದರೂ

ಹೇಳುವುದಕ್ಕೆ ಇಚ್ಛೆ ಪಡುತ್ತೇನೆ, ಒಂದು ವೇಳೆ ಕೊಟ್ಟಿರತಕ್ಕ ಭರವಸೆಗಳನ್ನು ಈಡೇರಿಸುತ್ತೇವೆಂದರೆ, ಆದರಿಂದ ರಾಜ್ಯದ ಆರ್ಥಿಕ ಸ್ಥಿತಿಯು ಮೇಲೆ ಎಂತಹ ದುಷ್ಪರಿಣಾಮ ಆಗಬಹುದು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಇದನ್ನು ಕೆಲವು ಉದಾಹರಣೆಗಳ ಮೂಲಕ ಹೇಳಲಿಕ್ಕೆ ಇಷ್ಟಪಡುತ್ತೇನೆ. ವಿಧವಾ ವಾಶಾಸನ, ಗರ್ಭಿಣಿಯರಿಗೆ ತೆರಿಗೆ ಭತ್ಯ, ವೃದ್ಧಾಪ್ಯ ವೇತನ, ನಿರುದ್ಯೋಗ ಭತ್ಯ, ತಾಳಿಯ ಭಾಗ್ಯ ಯೋಜನೆ, ದುರ್ಬಲವರ್ಗದವರಿಗೆ ಕೊಡತಕ್ಕ ಬಟ್ಟೆಗಳು—ಇವೇ ಮೊದಲಾದ ಅನೇಕ ಯೋಜನೆಗಳು ಉತ್ಪನ್ನರಹಿತವಾದವು. ಪ್ರತಿ ವರ್ಷ ಕೂಡ ಇಂತಹ ಅಂತಹ ಪದಾರ್ಥಗಳಿಗೆ ಹೆಚ್ಚಿನ ಹಣವನ್ನು ವೆಚ್ಚ ಮಾಡಬೇಕಾಗುತ್ತದೆ. ರಾಜ್ಯದ ಸಂಪನ್ಮೂಲಗಳ ಅರಿವಿಟ್ಟುಕೊಂಡು ಎಷ್ಟರಮಟ್ಟಿಗೆ ಅನುತ್ಪಾದನಾ ವೆಚ್ಚ ಮಾಡಬೇಕೋ ಅಷ್ಟನ್ನು ಮಾಡಿದರೆ ಎಲ್ಲರಿಗೂ ಒಳ್ಳೆಯದಾಗುತ್ತದೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಪ್ರತಿ ವರ್ಷ ಇಂತಹ ಅನುತ್ಪಾದನಾ ಪದಾರ್ಥಗಳಿಗೆ ಹೆಚ್ಚು ವೆಚ್ಚ ಮಾಡುವಾಗ ಉತ್ಪಾದನಾ ಪದಾರ್ಥಗಳಿಗೆ ಸಂಪನ್ಮೂಲ ಇರುವುದಿಲ್ಲ. ಇದರಿಂದ ಯಾವುದೇ ದೇಶವಾಗಲೀ, ರಾಜ್ಯವಾಗಲಿ ಪ್ರಗತಿಯಲ್ಲಿ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಒಂದು ಮುಖ. ಇನ್ನೊಂದು ಮುಖವನ್ನು ನೋಡಿದಾಗ ನಾವು ಕಾಣತಕ್ಕಂತಾದ್ದು ಏನು ? ಆಡಳಿತದಲ್ಲಿರತಕ್ಕ ದಕ್ಷ ರಾಜ್ಯಪಾಲರ ಭಾಷಣದಲ್ಲಿ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಯಾವ ಯಾವ ಭರವಸೆಗಳನ್ನು ಕೊಡಬೇಕು, ಅವೆಲ್ಲವನ್ನೂ ರಾಜ್ಯ ಸರ್ಕಾರ ಪೂರೈಸುವುದಕ್ಕೆ ಎಷ್ಟು ವೆಚ್ಚವಾಗುತ್ತದೆ ಎಂಬುದನ್ನು ಅಂದಾಜು ಮಾಡಿಲ್ಲವೆಂದು ಕಾಣುತ್ತದೆ. ಮಧ್ಯಮ ನೀರಾವರಿ, ಸಣ್ಣ ನೀರಾವರಿಗಳನ್ನು ತೆಗೆದುಕೊಂಡಾಗ ಇವೆಲ್ಲವನ್ನೂ ಕೂಡ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಪೂರೈಸುತ್ತೇವೆಂದು ಆಶ್ವಾಸನೆ ಕೊಟ್ಟಿದ್ದಾರೆ. ಲೋಕೋಪಯೋಗಿ ಮಂತ್ರಿಗಳು ಇಲ್ಲಿ ಇಲ್ಲ, ಭಾರಿ ನೀರಾವರಿ, ಮಧ್ಯಮ ನೀರಾವರಿ ಇವೆಲ್ಲವನ್ನೂ ಪೂರೈಸಬೇಕಾದರೆ ಐದು ಸಾವಿರ ಕೋಟಿ ರೂಪಾಯಿ ಆಗಬಹುದು. ಇದನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸಿದರೆ ಸಾಧ್ಯವಾಗುತ್ತದೆಯೇ? ಇವೆಲ್ಲಾ ಪೊಳ್ಳು ಆಶ್ವಾಸನೆ ಅಲ್ಲವೇ ? ಅಧ್ಯಕ್ಷರೇ, ನಮ್ಮ ಮಂಡಲ್ ಪಂಚಾಯಿತಿಯಲ್ಲಿ ೨೫೦ ಎಕರೆ ಪ್ರದೇಶವನ್ನು ನೀರಾವರಿಗೆ ಒಳಪಡಿಸುತ್ತೇವೆಂದು ಹೇಳಿದ್ದಾರೆ, ಇದಕ್ಕಾಗಿ ೧೫ ಲಕ್ಷ ರೂಪಾಯಿಗಳ ವೆಚ್ಚವಾಗಬಹುದು ಕೇಂದ್ರ ಸರ್ಕಾರದಿಂದ ಬರತಕ್ಕಸಂಪನ್ಮೂಲ, ರಾಜ್ಯದಿಂದ ಬರತಕ್ಕಸಂಪನ್ಮೂಲಗಳಿಂದಲೂ ಇದು ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

೧–೩೦ ಪಿ. ಎಂ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರ ಏನೆಂದರೆ ಎರಡು ಸಾವಿರ ಪ್ರಜಾಸಂಖ್ಯೆ ಇರತಕ್ಕಂಥಾ ಎಲ್ಲಾ ಗ್ರಾಮಗಳಿಗೂ ಕೂಡ ಕೊಳವೆಬಾವಿಗಳ ಮೂಲಕ ಕುಡಿಯುವ ನೀರಿನ ಸರಬರಾಜು ಮಾಡುತ್ತೇವೆಂದು ಹೇಳಿದ್ದಾರಲ್ಲಾ ಇದಕ್ಕೆ ಎಷ್ಟು ಕೋಟಿ ರೂಪಾಯಿ ಖರ್ಚಾಗುತ್ತದೆ ? ಮತ್ತು ದುರ್ಬಲವರ್ಗದವರಿಗೆ, ಹೆಂಗಸರಿಗೆ ಬಟ್ಟೆ ಬರೆ ಕೊಡುತ್ತೇವೆಂದು ಹೇಳಿದ್ದಾರಲ್ಲಾ ಇದಕ್ಕೆ ಎಷ್ಟು ಕೋಟಿರೂಪಾಯಿ ಖರ್ಚಾಗುತ್ತದೆ ಮತ್ತು ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ ಕೈಕೆಳಗೆಡಿಪಿ ಎಪಿ ಯೋಜನೆ, ಅಂತ್ಯೋದಯ ಯೋಜನೆ ಇನ್ನೂ ಇತರೇ ಫಲಾನುಭವ ಯೋಜನೆ, ಬರುತ್ತದೆ, ಇದಕ್ಕೆಲ್ಲಾ ಸಾವಿರಾರು ಕೋಟಿ ಖರ್ಚಾಗುತ್ತದೆಯಲ್ಲಾ, ಇಷ್ಟು ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ಸ್ಥಿತಿಯಲ್ಲಿ ಈ ಸರ್ಕಾರ ಇದೆಯೇ ? ಇದು ಸಾಧ್ಯವಾಗತಕ್ಕಂಥಾ ಕೆಲಸವೇ ? ಆದುದರಿಂದ ನಾನು ಹೇಳುವುದು ಈ ಕೆಲಸಗಳನ್ನು ಸರಿಯಾಗಿ ತೃಪ್ತಿಕರವಾಗಿ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು. ಇದರಿಂದ ತಾವು ತಿಳಿದುಕೊಳ್ಳಬೇಕು ದೇಶದಲ್ಲಿ ಉತ್ಪಾದನಾ ವೆಚ್ಚಕ್ಕೆ ಕುಂಠಿತವಾಗುತ್ತದೆ ಎಂದು. ಕರ್ನಾಟಕ ರಾಜ್ಯದಲ್ಲಿ ಆರ್ಥಿಕ ಸ್ಥಿತಿ ಉತ್ತಮವಾಗಬೇಕಾದರೆ ಪ್ರತಿಯೊಂದು ಕ್ಷೇತ್ರದಲ್ಲೂ ಸರಾಸರಿ ವರ್ಷವೊಂದಕ್ಕೆ ೭ ೨/೧ ಪರ್ಸೆಂಟ್ ಜಾಸ್ತಿ ಉತ್ಪಾದನೆ ಜಾಸ್ತಿಯಾಗಬೇಕು ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಈವಾಗ ನೋಡಿದರೆ ನೀವು ಅನುತ್ಪಾದನಾ ಬಾಬುಗಳಿಗೇನೇ ಜಾಸ್ತಿ ಖರ್ಚು ಮಾಡುತ್ತಿದ್ದೀರಿ. ಇದರಿಂದ ಉತ್ಪಾದನಾ ಬಾಬಿಗೆ ಹೆಚ್ಚು ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಾ ಇಲ್ಲ. ಅನುತ್ಪಾದನಾ ಬಾಬುಗಳು ಕಮೀಷನ್ ನೇಮಿಸತಕ್ಕಂಥಾದ್ದು, ವೃದ್ಧಾಪ್ಯ ವೇತನ ಕೊಡತಕ್ಕಂಥಾದ್ದು, ಗರ್ಭಿಣಿ ಸ್ತ್ರೀಯರಿಗೆ ಹೆರಿಗೆ ಭತ್ಯ ಕೊಡತಕ್ಕಂಥಾದ್ದು ದುರ್ಬಲ ವರ್ಗದವರಿಗೆ ಅನೇಕ ರಿಯಾಯಿತಿ ತೋರಿಸಿರುವುದು ಇತ್ಯಾದಿಗಳೇ ಆಗಿವೆ. ಇದರಿಂದ ಉತ್ಪಾದನೆ ಬಾಬಿಗೆಹೆಚ್ಚು ಖರ್ಚು ಮಾಡುವುದಕ್ಕೆ ಹೆಚ್ಚು ಹಣ ಇಲ್ಲವೆ ಆ ಕೆಲಸಗಳು ಕುಂಠಿತವಾಗುತ್ತವೆ.

ಶ್ರೀ ಬಿ. ರಾಚಯ್ಯ.—ಸಮಾಜದಲ್ಲಿ ದುರ್ಬಲ ವರ್ಗದವರಿಗೆ ಸಹಾಯ ಮಾಡಬಾರದು ಎಂದು ಹೇಳುತ್ತೀರಾ ?

ಶ್ರೀ ಜಿ. ರಾಜೂಗೌಡ.—ಅವರಿಗೆ ಸಹಾಯ ಮಾಡಬಾರದು ಎಂದು ಹೇಳುವುದಿಲ್ಲ, ಮಾಡಬೇಕು ಆದರೆ ನಮ್ಮ ರಾಜ್ಯದಲ್ಲಿ ಏನು ಆದಾಯ ಬರುತ್ತದೆ ಅದಕ್ಕನುಗುಣವಾಗಿ ಖರ್ಚು ಮಾಡಬೇಕು. ತಮಗೆ ಹೇಳಬೇಕಾದರೆ ನಮ್ಮ ರಾಜ್ಯದ ಆದಾಯ ೭೦೦ ಕೋಟಿ ರೂಪಾಯಿ ಇದ್ದರೆ ಈ ಅನುತ್ಪಾದನಾ ವೆಚ್ಚಕ್ಕೇನೇ ತಾವು ೫೦೦ ಕೋಟಿ ರೂಪಾಯಿ ಖರ್ಚು ಮಾಡುವುದಾದರೆ ಇನ್ನು ಉಳಿದ ೨೦೦ ಕೋಟಿ ರೂಪಾಯಿನಿಂದ ಉತ್ಪಾದನಾ ವೆಚ್ಚಕ್ಕೆ ಸಾಕಾಗುತ್ತದೆಯೋ ? ಸಾಕಾಗುವುದಿಲ್ಲ. ಇದರಿಂದ ಉತ್ಪಾದನಾ ಕಾರ್ಯಕ್ರಮಗಳೆಲ್ಲಾ ಹಿಂದಕ್ಕೆ ಹೋಗುತ್ತದೆ. ಆದುದರಿಂದ ಹಾಸಿಗೆ ಇದ್ದಷ್ಟು ನಾವು ಕಾಲು ಚಾಚಬೇಕೇ ವಿನಾ ಮುಂದೆ ಚಾಚುವುದಕ್ಕೆ ಹೋಗಬಾರದು.

ಶ್ರೀ ಬಿ. ರಾಚಯ್ಯ.—ಹಾಗಾದರೆ ಉತ್ಪಾದನೆ ಮಾಡುವ ವೆಚ್ಚಕ್ಕೆ ತೆರಿಗೆ ಹಾಕುವುದನ್ನು ನೀವು ಒಪ್ಪುತ್ತೀರಾ ?

ಶ್ರೀ ಜಿ. ರಾಜೂಗೌಡ.—ಒಪ್ಪುತ್ತೇನೆ. ಅಭಿವೃದ್ಧಿ ಕೆಲಸಕಾರ್ಯಗಳಿಗೆ ಖರ್ಚು ಮಾಡಬೇಕಾದರೆ ಅದಕ್ಕೆ ತೆರಿಗೆ ಹಾಕಲೇಬೇಕಾಗುತ್ತದೆ. ನಾನು ಹೇಳುತ್ತಾ ಇರುವುದು ರಾಜ್ಯದಲ್ಲಿ ಅನುತ್ಪಾದನಾ ಬಾಬುಗಳಿಗೆ ಹೆಚ್ಚು ಖರ್ಚು ಮಾಡುತ್ತೀರಲ್ಲಾ ಎನ್ನುವುದು ನನ್ನ ಭಾಷಣದ ತಿರುವು ಆ ದೃಷ್ಟಿಯಿಟ್ಟುಕೊಂಡು ನಾನು ಹೇಳುತ್ತಿದ್ದೇನೆ. ಇನ್ನೇನೂ ಅಲ್ಲ. ಅದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ಯಾವುದೇ ರಾಜಕೀಯ ಪಕ್ಷಗಳು ಪ್ರಣಾಳಿಕೆಯನ್ನು ಏನು ಬಿಡುಗಡೆ ಮಾಡುತ್ತಾರೆ, ಅವರು ದೇಶದ ಅಭಿವೃದ್ಧಿ ಕೆಲಸಕಾರ್ಯಗಳ ಕಡೆಗೂ, ಉತ್ಪಾದನೆ ಕಡೆಗೂ ಗಮನ ಇಟ್ಟುಕೊಂಡು ಮಾಡಬೇಕು. ಇದರಲ್ಲಿ ಅನುತ್ಪಾದನಾ ಪ್ರೋಗ್ರಾಂ ಇರುವುದೇ ಜಾಸ್ತಿಯಾಗಿದೆ. ತಮಗೆ ಹೇಳಬೇಕಾದರೆ ನೇಗಿಲು ಭಾಗ್ಯ, ತಾಳಿ ಭಾಗ್ಯ, ವೃದ್ಧಾಪ್ಯ ವೇತನ ಸ್ತ್ರೀಯರಿಗೆ, ಪುರುಷರಿಗೆ ಬಟ್ಟೆ ಕೊಡುವುದು, ಇನ್ನೂ ಅನೇಕ ಡಿ. ಪಿ. ಎಪಿ ಪ್ರೋಗ್ರಾಂ ಕೈಕೆಳಗೆ ಬರುವಂಥಾ ಯೋಜನೆಗಳೂ ಇವೆ.

ಶ್ರೀ ಬಿ. ರಾಚಯ್ಯ.—ಬಡವರು ಓಟು ಕೊಟ್ಟಿದ್ದಾರೆ. ಆ ದೃಷ್ಟಿಯನ್ನಿಟ್ಟುಕೊಂಡು ಮಾತನಾಡಿ.

ಶ್ರೀ ಜಿ. ರಾಜೂಗೌಡ.—ಸ್ವಾಮಿ, ಗೊತ್ತುಂಟು ನನ್ನದೃಷ್ಟಿಯಲ್ಲಿ ಉತ್ಪಾದನಾ ಬಾಬುಗಳಿಗೂ ಹೆಚ್ಚು ಖರ್ಚು ಮಾಡಬೇಕು ಎನ್ನುವ ದೃಷ್ಟಿಯಲ್ಲಿ ಹೇಳಿದೆ. ಅವರಿಗೆ ಕೊಡವೇಡಿ ಎಂದು ಹೇಳುವುದಿಲ್ಲ. ನನ್ನ ದೃಷ್ಟಿಯಲ್ಲಿ ಡಿ. ಪಿ. ಎ. ಪಿ. ಅಂದರೆ ದಂಡ, ಪಿಂಡ, ಅಂಡ ಪ್ರೋಗ್ರಾಂ ಅಂತ. ಲಂಗು ಲಗಾಮು ಇಲ್ಲದೆ ಗುಟುಕ್ ಅಂತ ನುಂಗುವ ಹಾಗೆ ಇರತಕ್ಕಂಥಾ ಪ್ರೋಗ್ರಾಮ್ ಇದು. ಯಾವುದೇ ಒಂದು ಕಾರ್ಯಕ್ರಮವನ್ನು ಅಧಿಕಾರಿಗಳಿಗೆ ವಹಿಸಿದಾಗ ಅದರಲ್ಲಿ ೩೦ ಪರ್ಸೆಂಟ್ ನಷ್ಟು ಹಣ ಅಧಿಕಾರಿಗಳಿಗೆ ಹೋಗುತ್ತದೆ. ಇನ್ನು ೨೦ ಪರ್ಸೆಂಟ್ ಹಣ ಕಂಟ್ರಾಕ್ಟರಿಗೆ ಹೋಗುತ್ತದೆ. ಇದರಿಂದ ಪ್ರೋಗ್ರಾಂ ಪ್ರಕಾರ ಯಾವ ಕೆಲಸವೂ ಸರಿಯಾಗಿ ಆಗುವುದಿಲ್ಲ. ಯಾವುದೇ ಕಾರ್ಯಕ್ರಮವೂ ಸರಿಯಾಗಿ ಅನುಷ್ಠಾನಕ್ಕೆ ತರುವುದಕ್ಕಾಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ಇನ್ನೊಂದು ವಿಚಾರ ಏನೆಂದರೆ ದೇಶದಲ್ಲಿ ಸರ್ಕಾರದ ಸಂಪತ್ತು ಏನು ಇದೆ ಅದು ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗಿದೆ. ಇದರ ಬಗ್ಗೆ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಉದಾಹರಣೆಗೆ ನಮ್ಮ ರಾಜ್ಯದಲ್ಲಿ ಹೆಂಡ ಸಾರಾಯಿ ಹರಾಜು ಏನು ಇದೆ ಅದು ಜಿಲ್ಲಾ ಮಟ್ಟದಲ್ಲಿ ಈಗ ನಡೆಯುತ್ತಾ ಇದೆ. ಇದರಿಂದ ಏನಾಗಿದೆ ಎಂದರೆ ಆ ಜಿಲ್ಲೆಯಲ್ಲಿ ಕೆಲವೇ ವ್ಯಕ್ತಿಗಳು ಅದರಲ್ಲಿ ಭಾಗ ವಹಿಸಿ ಅದನ್ನು ತೆಗೆದುಕೊಳ್ಳುತ್ತಿದ್ದಾರೆ, ಇದರಿಂದ ಸರ್ಕಾರ ಬಂಡವಾಳಶಾಹಿಗಳಿಗೆ ಪ್ರೋತ್ಸಾಹ ಕೊಟ್ಟಂತಾಗಿದೆ ಎಂದು ಹೇಳುತ್ತೇನೆ, ಅದಕ್ಕಾಗಿ ನಾನು ಹೇಳುವುದೇನೆಂದರೆ ಈಗ ಜಿಲ್ಲೆಯಲ್ಲಿ ಇದರ ಹರಾಜು ನಡೆಯುವುದಕ್ಕೆ ಬದಲಾಗಿ ಇದನ್ನು ತಾಲ್ಲೂಕಾ ಮಟ್ಟದಲ್ಲಿ ಮತ್ತು ಪ್ರತಿಯೊಂದು ಗ್ರಾಮೀಣ ಮಟ್ಟದಲ್ಲಿ ಹೆಂಡ ಸಾರಾಯಿ ಹರಾಜು ಇಡಿಸಿದರೆ ಆವಾಗ ಅಲ್ಲಿಯ ಅನೇಕ ಜನರು ಭಾಗವಹಿಸುತ್ತಾರೆ ಅಲ್ಲದೆ ಅದರಿಂದ ಸರ್ಕಾರದ ಬೊಕ್ಕಸಕ್ಕೂ ಕೂಡ ಹೆಚ್ಚು ಹಣ ಬರುತ್ತದೆ ಅಲ್ಲದೆ ಗ್ರಾಹಕರಿಗೆ ಉತ್ತಮವಾದ ಸರಕೂ ಸಹ ಸಿಗುತ್ತದೆ, ಹಾಗೆ ಮಾಡಬೇಕು ಎಂದು ಹೇಳುತ್ತೇನೆ.

ಮೂರನೆಯದಾಗಿ ಹೇಳಬೇಕಾದರೆ ಈಗ ಸರ್ಕಾರ ಕೆಲವು ಸಂದರ್ಭಗಳಲ್ಲಿ ಒಂದು ಇಕ್ಕಟ್ಟಿನ ಪರಿಸ್ಥಿತಿಗೆ ಒಳಗಾಗುತ್ತದೆ. ಉದಾಹರಣೆಗೆ ಹೇಳಬೇಕಾದರೆ ಯಾವುದಾದರೂ ಸಾರ್ವಜನಿಕರ ವಿಷಯ ಬಂದಾಗ, ಅದರ ಬಗ್ಗೆ ಒಂದು ಇಕ್ಕಟ್ಟಿನ ಪರಿಸ್ಥಿತಿ ಬಂದಾಗ ಆ ವಿಷಯವನ್ನು ಆಯೋಗಕ್ಕೆ ಹಾಕುತ್ತೇವೆ. ಆ ಬಗ್ಗೆ ಒಂದು ಆಯೋಗವನ್ನು ರಚಿಸುತ್ತೇವೆಂದು ಹೇಳಿಬಿಡುತ್ತಾರೆ. ಹೀಗಾಗಿ ಅನೇಕ ಸಣ್ಣಪುಟ್ಟ ವಿಷಯಗಳಿಗೂ ಕೂಡ ಆಯೋಗವನ್ನು ನೇಮಿಸಿದ್ದಾರೆ. ಕೆಲವು ಆಯೋಗಗಳ ರಿಪೋರ್ಟ್ ಅದರ ಬಗ್ಗೆ ಬಂದಿದ್ದರೂ ಸಹ ಅದನ್ನು ಸಭೆಯ ಮುಂದೆ ಇಟ್ಟು ಚರ್ಚೆ ಮಾಡಲಿಲ್ಲ. ಈ ವಿಚಾರವಾಗಿ ನಾನು ಒಂದು ವಿಷಯವನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ನಮ್ಮ ಭಾಗದ ಗೋಪಿನಾಥ ಗ್ರಾಮದಲ್ಲಿ ಒಂದು ಕೆರೆ ಒಡೆಯಿತು. ಅದರ ಪರಿಣಾಮವಾಗಿ ೪೮ ಹಸುಗಳು ಮತ್ತು ಮಕ್ಕಳುಗಳು ಸತ್ತು ಹೋದರು. ಆ ಕಾಲುವೆ ಒಡೆಯುವುದಕ್ಕೆ ಯಾರು ಜವಾಬ್ದಾರರು? ಅದರಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಎನ್ನುವುದನ್ನು ತಿಳಿಯಲು ಒಂದು ಆಯೋಗವನ್ನು ನೇಮಿಸಿದರು. ಆ ಆಯೋಗದವರು ಇದರ ಬಗ್ಗೆ ವಿಚಾರಣೆ ಮಾಡಿ ಸರ್ಕಾರಕ್ಕೆ ಒಂದು ವರದಿಯನ್ನು ಸಹ ಕೊಟ್ಟಿದ್ದಾರೆ. ಸರ್ಕಾರ ಆ ಆಯೋಗದ ವರದಿಯನ್ನು ಈ ಸಭೆಯ ಮುಂದೆ ಇಟ್ಟು ಅದನ್ನು ವಿಮರ್ಶೆ ಮಾಡಿ ಅದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ, ಯಾರಿಗೆ ಶಿಕ್ಷೆ ಕೊಡಬೇಕೆನ್ನುವುದರ ಬಗ್ಗೆ ಇದುವರೆಗೂ ಸರಿಯಾಗಿ ಒಂದು ವ್ಯವಸ್ಥೆ ಮಾಡಲಿಲ್ಲ. ಆ ಆಯೋಗದವರು ಈ ವಿಚಾರದಲ್ಲಿ ಏನು ವರದಿ ಕೊಟ್ಟಿದ್ದಾರೆ ಎನ್ನುವುದನ್ನೂ ನಾವು ಓದಿಲ್ಲ. ಸಾರ್ವಜನಿಕರಿಗೆ ಈ ರೀತಿಯಾಗಿ ಆಯೋಗವನ್ನು ನೇಮಿಸುತ್ತೇವೆಂದು ಹೇಳಿ ಅದರ ವರದಿಯನ್ನೂ ಇಲ್ಲಿ ಇಡದೆ ಕಣ್ಣು ತಪ್ಪಿಸಿದ್ದಾರೆ. ಇವರು ಈ ರೀತಿಯಾಗಿ ಕಣ್ಣುಮುಚ್ಚಾಲೆ ಆಟದಂತೆ ಮಾಡುತ್ತಿದ್ದಾರೆ. ಹೀಗೆ ಮಾಡಿದರೆ ಇದರಿಂದ ಸರ್ಕಾರಕ್ಕೆ ಹಣ ಎಷ್ಟು ಖರ್ಚಾಗುತ್ತದೆ? ಕಾಲ ವ್ಯಯ ಎಷ್ಟಾಗುತ್ತದೆ ಇದೆಲ್ಲಾ ನೋಡಬೇಡವೇ? ಯಾವುದಾದರೂ ಒಂದು ಆಯೋಗವನ್ನು ನೇಮಿಸಿದ್ದರೆ. ಆ ವರದಿಯಲ್ಲಿ ಏನು ಬರೆದಿದ್ದಾರೆ, ಅದರಲ್ಲಿ ಯಾರು ತಪ್ಪಿತಸ್ಥರೆಂದು ಹೇಳಿದ್ದಾರೆ ಅಂಥವರ ಮೇಲೆ ಸೂಕ್ತವಾದ ಕಾರ್ಯಕ್ರಮ ಕೈಗೊಳ್ಳಬೇಕು. ಈ ಬಗ್ಗೆ ನಾವೇನಾದರೂ ಮೊದಲು ಕೇಳಿದರೆ ಈ ಬಗ್ಗೆ ಆಯೋಗ ರಚನೆ ಮಾಡಿದ್ದೇವೆ ಅವರ ವರದಿ ಬರಲಿ ನೋಡೋಣ ಎಂದು ಹೇಳಿಬಿಡುತ್ತಾರೆ. ಹಾಗೆಯೇ ಅಭಿವೃದ್ಧಿ ಕೆಲಸಕಾರ್ಯಗಳ ಬಗ್ಗೆಯೂ ಎಷ್ಟೋ ಸುಳ್ಳು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ಮತ್ತು ಇಂಥ ಸುಳ್ಳು ಪುರಾವೆಗಳನ್ನು ಆಗಾಗ್ಗೆ ಕೊಟ್ಟರೆ...

ಶ್ರೀ ವೀರಣ್ಣ.—ಅಧ್ಯಕ್ಷರೇ, ಮಾನ್ಯ ಸದಸ್ಯರು ಸುಳ್ಳು ಎನ್ನುವ ಪದವನ್ನು ಉಪಯೋಗಿಸಿದ್ದಾರೆ. ಅದು ರೆಕಾರ್ಡ್‌ನಲ್ಲಿ ಹೋಗಿದೆ. ಆ ಪದವನ್ನು ತೆಗೆದು ಹಾಕಬೇಕು ಎಂದು ಹೇಳುತ್ತೇನೆ.

ಶ್ರೀ ಪಿ. ಜಿ ಆರ್ ಸಿಂಧ್ಯ.—ಮಾನ್ಯ ಸದಸ್ಯರು ಹೊಸದಾಗಿ ಈಗ ಪ್ರವೇಶ ಮಾಡಿದ್ದಾರೆ. ಅದು ಗೊತ್ತಿಲ್ಲವೇನೋ?

ಶ್ರೀ ಜೆ. ರಾಜೂಗೌಡ.—ನಾನು ಬಂದಿರುವುದು ಇದು 2ನೇ ಸಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕಳೆದ ಅಧಿವೇಶನದಲ್ಲಿ ತಾವು ಇರಲಿಲ್ಲ. ಇವರು ಸುಳ್ಳು ಅನ್ನುವ ಪದವನ್ನು ಪದೇ ಪದೇ ಹೇಳುತ್ತಿದ್ದಾರೆ. ಆ ರೀತಿ ತಿಳಿಸಬಾರದು ಎಂದು ಹೇಳುತ್ತೇನೆ

ಶ್ರೀ ಜಿ. ರಾಜೂಗೌಡ.—ಹಾಗಾದರೆ ಎಲ್ಲವನ್ನೂ ಸತ್ಯ ಸತ್ಯ ಎಂದು ಹೇಳಲೇ? ಸತ್ಯ ಇಲ್ಲದೇ ಇದ್ದುದನ್ನೂ ಸತ್ಯ ಸತ್ಯ ಎಂದು ಹೇಳಲೇ. ಇವೆಲ್ಲಾ ಸುಳ್ಳು ಅಲ್ಲದೆ ಮತ್ತೇನು? ತಮ್ಮ ಗಮನಕ್ಕೆ ತರುವುದಾದರೆ ಗೋಪಿನಾಥ ಗ್ರಾಮದಲ್ಲಿ ಕೆರೆ ಒಡೆದದ್ದು ಸುಳ್ಳೇ? ಅಲ್ಲಿ ೪೮ ಹಸುಗಳು ಮತ್ತು ಮಕ್ಕಳು ಸತ್ತಿದ್ದು ಸುಳ್ಳೇ? ಇದರ ಬಗ್ಗೆ ಆಯೋಗ ರಚಿಸಿದ್ದು ಸುಳ್ಳೇ. ಆಯೋಗದವರು ಇದರ ಬಗ್ಗೆ ವರದಿ ಕೊಟ್ಟಿದ್ದು ಸುಳ್ಳೇ?...

ಒಬ್ಬ ಮಾನ್ಯ ಸದಸ್ಯರು.—ಅವರು ಸತ್ಯಕ್ಕೆ ದೂರವಾದುದು ಎಂದು ಹೇಳಬಹುದು. ಸುಳ್ಳು ಎಂದು ಹೇಳಬೇಕಾಗಿಲ್ಲ.

ಶ್ರೀ ಪಟಪಟ್ಟಿ ರತ್ನಾಕರ.—ಅಧ್ಯಕ್ಷರೇ, ಅದಕ್ಕೆ ಪರ್ಯಾಯಪದವನ್ನು ಹೇಳದೆ ಕಾಲವೆ ಬಹಳ ಉದ್ದವಾಗುತ್ತದೆ, ಅವಾಗ ಟೈಂ ಇಲ್ಲ, ಎಂದು ಹೇಳಿ ಕೂರಿಸುತ್ತೀರಿ, ಆದ್ದರಿಂದ ಅವರು ಈ ಪದವನ್ನು ಹೇಳಿದರು.

ಅಧ್ಯಕ್ಷರು.—ನಿಮಗೆ ಮಾತನಾಡಲು ೩ ನಿಮಿಷ ಕೊಟ್ಟಿದ್ದೆ. ಈಗ ೭ ನಿಮಿಷವಾಯಿತು. ಬೇಗನೆ ಮುಗಿಸಿಬಿಡಿ.

ಶ್ರೀ ಜಿ. ರಾಜೂಗೌಡ.—ಬೇಗನೆ ಮುಗಿಸುತ್ತೇನೆ. ಈ ಗೋಪಿನಾಥ್ ಗ್ರಾಮದ ಕೆರೆ ಏನು ಒಡೆದಿತ್ತು ಅದರ ಬಗ್ಗೆ ಆಯೋಗದವರು ಏನು ವರದಿ ಕೊಟ್ಟಿದ್ದಾರೆ ಅದನ್ನು ಸಭೆಯ ಮುಂದೆ ಇಟ್ಟು, ಅದರಲ್ಲಿ ತಪ್ಪಿತಸ್ಥರು ಯಾರು ಇದ್ದಾರೆ ಅವರ ಬಗ್ಗೆ ಸೂಕ್ತವಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲದೆ ಅಲ್ಲಿ ಕಾಲುವೆ ಜಾಗದಲ್ಲಿ ನೀರು ಹರಿದು ಹೋಗಿ ಅದರಿಂದ ಅಲ್ಲಿ ಫಲವತ್ತಾದ ಜಮೀನುಗಳು ಕೊಚ್ಚಿ ಹೋಗಿ, ಅದರಿಂದ ಆ ಭಾಗದ ಅನೇಕರ ರೈತರುಗಳು ತೊಂದರೆಗೊಳಗಾಗಿದ್ದಾರೆ. ಅವರಿಗೆ ಸೂಕ್ತವಾದ ಪರಿಹಾರವನ್ನು ಕೊಡುವುದಕ್ಕೆ ಸರ್ಕಾರದವರು ಗಮನಹರಿಸಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ೫ ನಿಮಿಷಗಳ ಕಾಲ ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SMT. MUKTHARUNNISA (Narasimharaja).—Respected Speaker Sir, first of all I take privilege to thank you for allowing me to speak a few words here.

Sir, the Hon'ble Governor of Karnataka has narrated in his address on behalf of theGovernment on page No.6 and 7 about solving the problems of women. It is mentioned in the last line that a new "Thaliya Bhagya" will be introduced, under which mangala sutra will be presented by the Government. It is totally confusing and I wonder whether it is a women welfare scheme or men's welfare scheme because mangala sutra is given to the husband i.e. man who ties it to the woman i.e. his wife. India is a highly traditional country in the world and Indian marriages,whether they areHindus or Muslims or any othet community, are traditional and sacramental.It is highly sacred. Mangala sutra or "the Laccha" (in Muslims) is sacred for women. It is a sign of the marriage. While the Government has said that it will present mangala sutra, it has not said whether they are going to present gold or silver or any other metal as mangala sutra. If it is gold whether it is 16 carrates, or 22 carrats, etc is not mentioned. So, I would like to ask what type of mangala sutra you are going to present.

ಶ್ರೀ ವೇದಾಂತ ಹೆಮ್ಮಿಗೆ.—ತಾಳಿ ಕಟ್ಟಿಸಿಕೊಳ್ಳುವವರು ಗಂಡಸರೋ, ಹೆಂಗಸರೋ ಹೇಳಿ.

ಶ್ರೀ ಬಿ. ಸ್ವಾಮಿರಾವ್.—ಅವರು ವೇದಾಂತ ಹೇಳುತ್ತಾ ಇರುತ್ತಾರೆ, ಅವರು ಸುಮ್ಮನೆ ಕುಳಿತುಕೊಳ್ಳುವುದಕ್ಕೆ ತಾವು ಆದೇಶಕೊಡಬೇಕು.

ಶ್ರೀ ಪಟಸುಕ್ಕಿ ರತ್ನಾಕರ.—ಮಹಿಳೆಯರು ಮಾತನಾಡುವಾಗ ಈ ರೀತಿ ಅಡಚಣೆಯಾಗದಂತೆ ತಾವು ಆದೇಶ ಕೊಡಬೇಕು.

ಅಧ್ಯಕ್ಷರು.—ದಯುವಿಟ್ಟು ಕುಳಿತುಕೊಳ್ಳಿ.

SMT. MUKTHARUNNISA.—Sir, during the marriage the husband and the wife take oath to remain as life partners for ever and the husband ties the mangala sutra or the lachcha with religious verses or mantras chanted by the Pandit or the Moulvi in the presence of respectable persons. The Indian women worship their husbands and

perform pooja to the mangala sutra because it is sacred and a sign of the marriage. Here, I would like to say, the husband has to put the mangala sutra and he brings that. If he puts the black-bead as mangala sutra to his wife, the wife will accept that with love and affection. It is not the question whether it costs thousands of rupees or whether it is presented by the Government or others because it is the husband who has the right to tie mangala sutra to to his wife and not the Government. Only the husband has to bring that mangala sutra from his own money. It is a personal affair. I I am afraid, how the Government is interfering in the personal affairs of the husband and wife.

ಶ್ರೀ ವೇದಾಂತ ಹೆಮ್ಮಿಗೆ.—ತಾಳಿ ಇಷ್ಟು ತೊಲ ಇರಬೇಕು ಎಂದು ಸಲಹೆ ಕೊಡಿ.

ಶ್ರೀ ಎಂ. ಎಸ್, ಪಾಟೀಲ್ —ಅವರು ಮಾತನಾಡುವ ಕಾಲಕ್ಕೆ ಮಾತನಾಡಲಿ, ಈಗ ಈರೀತಿ ಏಕೆ ಮಧ್ಯೆ ಪ್ರವೇಶ ಮಾಡುತ್ತಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಮ್ಮ ದೇಶದಲ್ಲಿ ಎಷ್ಟೋ ಜನರಿಗೆ ತಾಳಿ ಕಟ್ಟು ವುದಕ್ಕೆ ಶಕ್ತಿ ಇರುವುದಿಲ್ಲ ಅರಿಶಿನದ ಬೇರ ಕಟ್ಟುತ್ತಾರೆ.

ಅಧ್ಯಕ್ಷರು.—ಸಭಾನಾಯಕರು ಉತ್ತರ ಕೊಡುತ್ತಾರೆ, ತಾವು ಕೂಡಿ,

SMT. MUKTHARUNNISA.—Mangala Sutra is most important than the millions of rupees of presentation. It is a traditional and religious practice and it is a sacred bondage between the husband and the wife So women are not so cheap to surrender their whole life to their husbands who are unfit to bring mangala sutra Instead of presenting mangala sutra, the Goverment can offer some presentation to the women by giving sewing machines or providing some capital to them to start cottage industries or small scale industries so that they can earn for their livelihood. Just presenting mangala sutra will not solve the problems of women or men. No religion will permit acceptance of mangala sutra offered by the Government. The Government is not encouraging women folk, but it is encouraging men folk by offering mangala sutra and creating disturbance in the sweet-married life of the couples in the long run. After sometime when petty quarrel starts, naturally the wife will tell the husband that you never brought a mangala sutra and how can you ask me anything. This will happen and you please think about it. In my opinion, the scheme is not for upliftment of women and it is not connected to the women welfare in the State. On the other hand it also discourages men folk to stand on their own legs. Apart from this, you are also undervaluing the women folk by presenting mangala sutra which is not useful for their livelihood. Let me know from the Government from where the Government is going to get money for implementation of this scheme and under which plan this scheme is

going to be introduced. I request the Government not to underestimate women by just giving a small presentation for their upliftment. It is not at all a scheme of upliftment. Instead of that you should think more a out women welfare. In Karnataka the women population is about 63%. So you have to organise in such a manner that they can earn their livelihood and live happily.

So, you have to organise programmes in such a way that they earn their livelihood and leave happilo forever.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ದಯಮಾಡಿ ಕ್ಷಮಿಸಬೇಕು, ಮಾನ್ಯ ಸದಸ್ಯಣಿಯವರು ಭಾಷಣದ ಮಾಡಿದ್ದನ್ನು ಕೇಳಿದ ಮೇಲೆ ಎರಡು ವಿಚಾರಗಳು ಜ್ಞಾಪಕಕ್ಕೆ ಬಂತು. ಮಾಂಗಳಸೂತ್ರವನ್ನು ಎಲ್ಲಾ ಧರ್ಮದವರು ಕಟ್ಟುವುದಿಲ್ಲವೆಂದು ಒಂದು ಅಭಿಪ್ರಾಯ ಇದೆ.

SRI Y. K. RAMAIAH.—In some community marriage is a contract Only in respect of Hindu's it is a sacred ceremony. So far as other communities are concerned it is a contract entered into an agreement.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ನಾನು ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಿಲ್ಲ. ಇವೊತ್ತು ಮಾಂಗಳಸೂತ್ರ ಕೊಡತಕ್ಕದ್ದು ಪ್ರಚಾರ ಸಾಧನವಾಗಬಾರದು. ಹಿಂದೂಧರ್ಮದಲ್ಲಿ ಕಟ್ಟತಕ್ಕದ್ದು ಕಂಡಿದ್ದೇವೆ ಮುಸಲ್ಮಾನ್ ಬಾಂಧವರಲ್ಲೂ ಕಟ್ಟತಕ್ಕದ್ದು ಇದೆ, ಅಲ್ಲಿ ಅಷ್ಟೊಂದು ಆಚರಣೆಯಲ್ಲಿಲ್ಲ ಎಂದು ಕೇಳಿದ್ದೇನೆ. ಕ್ರಿಶ್ಚಿಯನ್ ಧರ್ಮದಲ್ಲಿ ಅದು ಇಲ್ಲ, ಅಲ್ಲಿ ಮಾಂಗಳ ಸೂತ್ರ ಕಟ್ಟು ಬದಲು ರಿಂಗ್ ಕೊಡತಕ್ಕ ಪದ್ಧತಿ ಇದೆ. ಈಗ ಇವರು ಮಾಂಗಳಸೂತ್ರ ಕೊಡುತ್ತೇವೆಂದು ಹೇಳಿದರೆ, ಒಂದು ವರ್ಗಕ್ಕೆ ಕೊಟ್ಟು ಇನ್ನೊಂದು ವರ್ಗಕ್ಕೆ ಕೊಡದೇ ಇರುವಂತಾದ್ದು ಆಗಬಾರದು ಅದೇ ಕ್ರಿಶ್ಚಿಯನ್ ಜನಾಂಗಕ್ಕೆ ಮಾಂಗಳಸೂತ್ರ ಕೊಡುವ ಬದಲು ಉಂಗುರ ಕೊಡುತ್ತೇವೆಂದು ಹೇಳಬೇಕು. ಅದನ್ನು ಮಾಡದೇ ಹೋದರೆ ಒಂದು ಕಣ್ಣಿಗೆ ಸುಣ್ಣ, ಒಂದು ಕಣ್ಣಿಗೆ ಬೆಣ್ಣೆ ಇಟ್ಟಹಾಗೆ ಆಗುತ್ತದೆ. ಈಗ ಮಾಂಗಳಸೂತ್ರ ಅಂದರೆ ಅದು ಬಂಗಾರದ್ದೋ ಅಥವಾ ಬೇರಿನದೋ, ಅದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಬಂಗಾರದ್ದು ಕೊಡುತ್ತೇವೆಂದರೆ ಅರ್ಥ ಇದೆ. ಇವರ ಯೋಜನೆಯ ಅರ್ಥ ಹೇಗಿದೆ ಅಂದರೆ ಇವರು ಮಾಂಗಳ ಸೂತ್ರ ಕೊಡುವಂಥ ಯೋಜನೆ ಇಲ್ಲ, ಇವರು ಕೊಡಲಿಕ್ಕೆ ಪ್ರಾರಂಭ ಮಾಡಿದರು ಎಂದು ಇಟ್ಟುಕೊಳ್ಳೋಣ ಇವರು ನಾಳೆ ಕೇಂದ್ರಸರ್ಕಾರದವರು ಚಿನ್ನದ ಬೆಲೆ ಜಾಸ್ತಿ ಮಾಡಿದರು, ನಾವು ಚಿನ್ನದ ಮಾಂಗಳಸೂತ್ರ ಕೊಡೋಣ ಎಂದು ಇದ್ದೆವು ಎಂದು ನಾಳೆ ಕಾಂಗ್ರೆಸ್‌ನವರ ಮೇಲೆ ಗೂಬೆ ಕೂರಿಸತಕ್ಕಂತಾದ್ದು ಇದೆ ಎನ್ನುವುದು ಸ್ಪಷ್ಟವಾಗಿ ಕಂಡು ಬರುತ್ತಿದೆ.

ಶ್ರೀ ಬಿ. ರಾಚಯ್ಯ.—ಮಾಂಗಳಸೂತ್ರ ಎಂದು ಹೇಳಿದ್ದೇವೆ. ಚಿನ್ನ, ಬೆಳ್ಳಿ, ಯಾವುದು ಏನೇ ಇದೆ ಆಯಾಯ ಪದ್ಧತಿಗೆ ಅನುಸಾರವಾಗಿ ಬಡವರಿಗೆ ಕೊಡಬೇಕೆಂದು ಸರ್ಕಾರದ ಉದ್ದೇಶ ಇದೆ. ಮಾನ್ಯ ವಿರೋಧಪಕ್ಷದ ನಾಯಕರಿಗೆ ಚೆನ್ನಾಗಿ ಗೊತ್ತಿದೆ. ಸಮಾಜವಾದದಲ್ಲಿ ಅತ್ಯಂತ ತೀವ್ರಾಸಕ್ತಿಯನ್ನು ಉಳ್ಳವರು. ಆ ತರಹ ಸಂದರ್ಭ ಬಂದರೆ ಅದನ್ನು ಸ್ವಾಗತಿಸುತ್ತಾರೆಂದು ಭಾವಿಸಿರುತ್ತೇನೆ.

SMT. MUKTHARUNNISA.—Sir, in page 10 of the Governor's Address they have said :

My Government proposes to establish a separate Corporation for the development of minorities. The Corporation will provide seed money to unemployed young men to set up small industries...

They have said the Government will give Rs. 1 crore as capital for establishment of a Minority Development Corporation. I do

know when they are going to establish it because for the last 2 years the Janata Government is marking this statement but so far nothing has been done. Further the Government promises to provide seed money to unemployed young men to set up small industries or small business. Here I would like to know from the Government how many persons belonging to weaker sections and minorities have been given loans by the KSFC. How many unemployed youth will become old by the time the Government advances or sanction loan under this scheme, because every time the Janata Government makes statements but not implementing them sincerely. They remain only as statements on papers.

Another thing is, for the past three years non-kannada speaking people are drawing the attention of the Government to fill the Kannada Teachers posts in Urdu and other linguistic minority schools. Of course, during school days there were no kannada teachers and thus we were deprived of learning this beautiful language. But now we have lot of people holding Kannada Degrees. But still the Urdu Schools. do not have sufficient teachers to teach Kannada in these schools I therefore appeal to the Government to take immediate steps to fill the kannada teachers posts in Urdu and other linguistic minority schools.

The next point is, there is a proposal from the Government to have a separate Urdu Directorate for the welfare of Minorities. Our Hon'ble Minister for Education Sri Raghupathi announced some months back that the Government is going to set up an Urdu Directorate in Karnataka. I do not know when this assurance will be fulfilled by the Government and when it will start functioning. My only appeal to the Government atleast in future is that if the Government makes a statement I appeal them let there be some duration to implement the promises and assurances given to the people. Let the Government implement what it says within a specified period and deliver the goods in time to the people. With these words I thank the Chair and conclude.

ಶ್ರೀ ಕೆ. ಬಿ. ಕೋಳಿವಾಡ್ (ರಾಣಿಬೆನ್ನೂರು).–ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣವನ್ನು ನಾನು ಅನಿವಾರ್ಯವಾಗಿ ವಿರೋಧಿಸಿ ಕೆಲವು ಮಾತುಗಳನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾನು ಪ್ರತಿಯೊಂದಕ್ಕೂ ವಿಶ್ಲೇಷಣೆ ಕೊಡಲಿಕ್ಕೆ ಇಷ್ಟಪಡುವುದಿಲ್ಲ. ಮೊದಲನೆಯದಾಗಿ ಹೇಳಬೇಕೆಂದರೆ ಹಿಂದಿನ ಮಂತ್ರಿಮಂಡಲ ರಾಜೀನಾಮೆ ಕೊಡತಕ್ಕ ಸಂದರ್ಭದಲ್ಲಿ ಏನಾಯಿತು ಅಂದರೆ, ಮಾನ್ಯ ಮುಖ್ಯ ಮಂತ್ರಿಗಳು ಒಂದು ಸಾರಿ ರಾಜೀನಾಮೆ ಕೊಡುತ್ತೇನೆಂದು ಹೇಳಿದರು. ಮತ್ತೊಂದು ಸಾರಿ ರಾಜೀನಾಮೆ ಕೊಡುವುದಿಲ್ಲ ಎಂದು ಹೇಳಿದರು. ಅದರ ಬಗ್ಗೆ ನಾನು ಹೆಚ್ಚಿಗೆ ವಿಶ್ಲೇಷಣೆ ಕೊಡಲಿಕ್ಕೆ ಹೋಗುವುದಿಲ್ಲ. ರಾಜ್ಯಪಾಲರು ಒಂದನೇ ಪುಟದಲ್ಲಿ the people of Karnataka have given a massive mandate to the Janatha Party ಎಂದು ಹೇಳಿದ್ದಾರೆ. ಇದನ್ನು ಯಾರೂ ಒಪ್ಪಲಾರರು. ಕೇವಲ ೧.೯ ಮತಗಳು ಮಾತ್ರ ಹೆಚ್ಚಿಗೆ ಬಂದಿದೆ. ಅದರ ಬಗ್ಗೆ ಯಾವ

ರೀತಿ ಬಂದಿದೆ ಎನ್ನುವ ವಿಚಾರದಲ್ಲಿ ಈಗಾಗಲೇ ನಮ್ಮ ಪಕ್ಷದ ಹಿರಿಯ ಸದಸ್ಯರು ವಿವರಣೆಯನ್ನು ಕೊಟ್ಟಿದ್ದಾರೆ. ಅದೇ ಪ್ಯಾರದಲ್ಲಿ ಮುಂದೆ I assure that the immense faith that the people of Karnataka have shown to my Government will be redeemed by the Government by giving a clean and efficient administration and politics based on value and virtue. ಎಂದು ಹೇಳಿದ್ದಾರೆ. ಇನ್ನು ಮೂರನೇ ಪ್ಯಾರಾದಲ್ಲಿ ರಾಜ್ಯಪಾಲರ ಬಾಯಿಂದ ಏನು ಹೇಳಿಸಿದ್ದಾರೆ ಅಂದರೆ my Government will endeavour to maintain cordial relationship with the Covernment of India and seek their co-operation in achieving the primary objective of improving the lot of the people. ಎಂದು ಹೇಳಿಸಿದ್ದಾರೆ. ಈ ವಿಷಯದ ಬಗ್ಗೆ ನಾನು ಸ್ವಲ್ಪಮಟ್ಟಿಗೆ ವಿಶ್ಲೇಷಣೆ ಮಾಡಲಿಕ್ಕೆ ಇಷ್ಟಪಡುತ್ತೇನೆ. ಮಾನ್ಯ ರಾಮಕೃಷ್ಣ ಹೆಗಡೆಯವರು ಈ ಬಡ್ಜೆಟ್ ಮಂಡನೆಯಲ್ಲಿ ಮಾಡಿದಂಥ ಭಾಷಣವನ್ನು ನೋಡಿದರೆ ಇವರು ಎಷ್ಟರಮಟ್ಟಿಗೆ ಕೇಂದ್ರಸರ್ಕಾರದೊಡನೆ ತಮ್ಮ ಸಂಬಂಧವನ್ನು ಇಟ್ಟುಕೊಂಡಿದ್ದಾರೆ, ರಾಜ್ಯದ ಜನತೆಯ ಕಲ್ಯಾಣವನ್ನು ನೋಡುತ್ತಿದ್ದಾರೆ. ಕೇಂದ್ರಸರ್ಕಾರದ ಸಹಾಯವನ್ನು ಎಷ್ಟರಮಟ್ಟಿಗೆ ತೆಗೆದುಕೊಳ್ಳಲಿಕ್ಕೆ ಉತ್ಸುಕರಾಗಿದ್ದಾರೆ ಎನ್ನುವ ವಿಚಾರವನ್ನು ತಿಳಿಸಿ ಈ ವಿಷಯವನ್ನು ಮುಗಿಸುತ್ತೇನೆ. ಇನ್ನು ನಾಲ್ಕನೆಯ ಪ್ಯಾರಾದಲ್ಲಿ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಬಗ್ಗೆ ವಿಶ್ಲೇಷಣೆ ಮಾಡಿದ್ದಾರೆ ಅದರ ಬಗ್ಗೆ ಈಗಾಗಲೇ ಮಾನ್ಯ ಕೆ.ಹೆಚ್. ಪಾಟೀಲರು, ಕೋಲಾರದಲ್ಲಿ ಆದಂಥ ಗೋಲಿಬಾರ್ ಮತ್ತು ಹುಬ್ಬಳ್ಳಿಯಲ್ಲಿ ಆದಂಥಜಾತಿಯ ಗಲಭೆಯ ಬಗ್ಗೆ ಪ್ರಸ್ತಾಪ ಮಾಡಿ ಹೇಳಿದ್ದಾರೆ. ಲಾ ಅಂಡ್ ಆರ್ಡರ್ ವಿಚಾರದಲ್ಲಿ ನಾನೇ ಸ್ವತಃ ಗೃಹಮಂತ್ರಿಗಳಿಗೆ ಬರವಣಿಗೆಯ ಮೂಲಕ ಬರೆದು ಕೊಟ್ಟಿದ್ದೇವೆ. ಚುನಾವಣೆಯಾದ ನಂತರ ಕಾಂಗ್ರೆಸ್ ಜನತೆಯ ಮೇಲೆ ಎಷ್ಟೊಂದು ದೌರ್ಜನ್ಯ ನಡೆದಿದೆ, ನಡೆಯುತ್ತಿದೆ ಅದರ ಬಗ್ಗೆ ದೂರುಗಳನ್ನು ಕೊಡಲಾಗಿದೆ. ಚುನಾವಣೆಯ ಮತಗಳನ್ನು ಎಣಿಕೆ ಮಾಡುವ ಕಾಲದಲ್ಲಿಯೇ ಏನು ಮಾಡಿದ್ದಾರೆಎಂದರೆ ಸ್ವತಃ ಪೋಲೀಸ್ ಅಧಿಕಾರಿಗಳು ಹೊರಗಿನ ಜನರನ್ನು ಒಳಗಡೆ ಕರೆದುಕೊಂಡುಬಂದು ಚಿತಾವಣೆ ಮಾಡಿ ಬ್ಯಾಲೆಟ್ ಪೇಪರ್ ಸುಟ್ಟುಹಾಕುವಂತಾದ್ದು ನಡೆದಾಗ ಧಾರವಾಡ ಎಸ್.ಪಿ.ಅವರಿಗೆ ದೂರು ಕೊಟ್ಟಿದ್ದೇವೆ. ಈ ರೀತಿಯಲ್ಲಿ ಇವರು ಲಾ ಅಂಡ್ ಆರ್ಡರ್ ಮೇನ್‌ಟೈನ್ ಮಾಡುತ್ತಿದ್ದಾರೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

೨-೦೦ ಪಿ.ಎಂ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೇ, ಲಾ ಅಂಡ್ ಆರ್ಡರ್ ವಿಷಯದಲ್ಲಿ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ಕೇವಲ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ದೌರ್ಜನ್ಯ ನಡೆಯುತ್ತಿದೆ ಎಂಬುದು ಸರಿಯಲ್ಲ. ನಮ್ಮ ಕರ್ನಾಟಕದಲ್ಲಿ ಚುನಾವಣೆ ಬಹಳ ಶಾಂತ ರೀತಿಯಲ್ಲಿ ನಡೆದಿದೆ. ಮೊನ್ನೆ ತಾವೆಲ್ಲ ಗಮನಿಸಿರುವಂತೆ ಭಾರತದ ಚುನಾವಣಾ ಕಮೀಷನರ್ ಅವರೇ ಬೆಂಗಳೂರಿಗೆ ಬಂದಿದ್ದಾಗ ಶಾಂತ ರೀತಿಯಲ್ಲಿ ಚುನಾವಣೆಗಳು ನಡೆದುವು ಎಂದು ಪ್ರಸಂಶಿಸಿದ್ದಾರೆ. ಆದರ ಗಲಾಟೆಗಳು ಆಗಿಲ್ಲವೆಂದು ನಾನು ಹೇಳುತ್ತಿಲ್ಲ. ದುಷ್ಕರ್ಮಿಗಳ ವಿರುದ್ಧ ಕ್ರಮ ತೆಗೆದುಕೊಂಡಿದ್ದೇವೆ. ಚುನಾವಣೆಯಾದ ಮೇಲೆ ಪಕ್ಷಭೇದ ಸಲ್ಲದು. ನಮ್ಮ ಸರ್ಕಾರವಂತೂ ಅದನ್ನು ಕಠಿಣವಾಗಿ ಹತ್ತಿಕ್ಕುತ್ತದೆ. ಇದರಲ್ಲಿ ರಕ್ಷಿಸುವ ಪ್ರಶ್ನೆಯೇ ಇಲ್ಲ.

ಶ್ರೀ ಕೆ.ಹೆಚ್. ಪಾಟೀಲ್.—ಹಾಗೆ ಮಾಡಿದ್ದರೆ ಆಕ್ಷೇಪಣೆ ಇಲ್ಲ. ಮಾನ್ಯ ಗೃಹಮಂತ್ರಿಗಳು ಜನತಾ ಪಕ್ಷದಲ್ಲಿರುವುದರಿಂದ ಕಾಂಗ್ರೆಸ್ಸಿಗರಿಗೆ ರಕ್ಷಣೆ ಕೊಡುವುದು ಅವರ ಕರ್ತವ್ಯ. ನಿಮಗೆ ಧೈರ್ಯ ವಿದ್ದರೆ ನಾವು ನಿಮ್ಮೊಂದಿಗೆ ಸಹಕರಿಸುತ್ತೇವೆ.

ಶ್ರೀ ಬಿ. ರಾಚಯ್ಯ.-ಯಾರ್ಯಾರು ಗಲಾಟೆ ಮಾಡಿದ್ದಾರೆ ಅವರ ಮೇಲೆ ಕ್ರಮ ಕೈಗೊಂಡಿದ್ದೇವೆ. ಹಿಂದುಮುಂದು ನೋಡಿಲ್ಲ. ನೀವು ನಿಧಾನವಾಗಿ ಮಾತನಾಡಿ. ಕೋಪ ಬೇಡ.

ಶ್ರೀ ಕೆ. ಬಿ. ಕೋಳಿವಾಡ್.—ಚುನಾವಣೆಗಳಿಗಿಂತ ಪೂರ್ವದಲ್ಲಿ ಈ ಹರಿಜನರ ಗಿರಿಜನರ ಮೇಲೆ ಹಿಂದುಳಿದವರ ಮೇಲೆ ಆದಂಥ ದೌರ್ಜನ್ಯಗಳು ಸಾಕಷ್ಟು ಇವೆ. ಚುನಾವಣೆಯಾದನಂತರ ೧೦೦ಕ್ಕೆ

೯೦ರಷ್ಟು ಕಾಂಗ್ರೆಸ್ ಬೆಂಬಲಿಗರ ಮೇಲೆ ನಡೆದಿದೆ, ನೀವು ಎಲ್ಲಿ, ಹೇಗೆ ಮತ್ತು ಏಕೆ ಎಂದು ನಮ್ಮನ್ನು ವಿವರಣೆ ಕೇಳಿದರೆ ನಾವು ಕೊಡುವುದಕ್ಕಾಗುವುದಿಲ್ಲ.

ಇನ್ನು ಅಭಾವದ ಬಗ್ಗೆ ನಾನು ಹೇಳುವುದೇನೆಂದರೆ ೨೦೯ ಕೋಟಿ ರೂ.ಗಳನ್ನು ಕೇಂದ್ರ ಸರ್ಕಾರದಲ್ಲಿ ಕೇಳಿದ್ದಾರೆ. ಅದರಲ್ಲಿ ೪೦ ಕೋಟಿ ಮಾತ್ರ ಬಂದಿದೆ ಎಂದೂ ಹೇಳಿದ್ದಾರೆ. ಆದರೆ ಅದರಲ್ಲಿ ಎಷ್ಟು ಖರ್ಚಾಗಿದೆ ಎಂಬುದನ್ನು ಹೇಳಿಲ್ಲ. ಶ್ರೀಮತಿ ಇಂದಿರಾಗಾಂಧಿಯವರು ಬೆಂಗಳೂರಿಗೆ ಬಂದಾಗ ನಮ್ಮ ಪಕ್ಷದವರು ಕೇಳಿಕೊಂಡಾಗ ಬರಗಾಲ ಪರಿಹಾರಕ್ಕಾಗಿ ೧೦ ಕೋಟಿ ರೂ.ಗಳನ್ನು ಮಂಜೂರು ಮಾಡಿದರು. ಆದರೆ ಇವರು ವಿನಾಕಾರಣ ಕೇಂದ್ರ ಸಹಾಯ ಮಾಡುತ್ತಿಲ್ಲವೆಂದು ದೂರುತ್ತಿರುವುದು ಏನನ್ನು ತೋರುತ್ತದೆ ?

ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಹಿರೇಕೆರೂರು ಕೆಲಭಾಗ, ರಾಣೆಬೆನ್ನೂರು, ಹಾವೇರಿ ಹಾಗೂ ಮುಂಡರ್ಗಿ ಮುಂತಾದ ತಾಲ್ಲೂಕುಗಳು ಕ್ಷಾಮದಲ್ಲಿ ತೊಳಲುತ್ತಿವೆ. ಕ್ಷಾಮಪರಿಹಾರದಲ್ಲಿ ಕೂಲಿಗಾರರ ಕೈಗೆ ಕೆಲಸ ಅಂದರೆ ಕಾಮಗಾರಿಗಳಿಗೆ ಹಣ ತೊಡಗಿಸುವುದು ಎಂದರ್ಥ. ಕ್ಷಾಮ ಪರಿಹಾರಕ್ಕಾಗಿ ಅಪ್ಪರ್ ತುಂಗಭದ್ರಾ ಯೋಜನೆ ಮಾಡಿದರೆ ಲಕ್ಷಾಂತರ ಎಕರೆ ನೀರಾವರಿಯಾಗಿ ಹಿರೆಕೆರೂರು, ಮುಂಡರ್ಗಿ ತಾಲ್ಲೂಕುಗಳಲ್ಲಿ ಶಾಶ್ವತವಾದ ಕ್ಷಾಮ ಪರಿಹಾರವಾಗುತ್ತದೆ. ಮಧವಾಸ ಕೆರೆ ಏರಿ ಎತ್ತರಿಸಿದರೆ ರಾಣೆಬೆನ್ನೂರು ಹಿರೆಕೆರೂರು ಹಿರೆಕೆರೂರು ರಾಣೆಬೆನ್ನೂರು ತಾಲ್ಲೂಕುಗಳಲ್ಲಿ ಜಲಕ್ಷಾಮ ಇಂಗುತ್ತದೆ.

ಕ್ಷಾಮಪರಿಹಾರವೆಂದರೆ ರೈತನಿಗೆ ಸಹಾಯ ಮಾಡುವುದು ಎಂದರ್ಥ. ದನಗಳಿಗೆ ಮೇವನ್ನು ಒದಗಿಸಬೇಕು. ಪುಕ್ಕಟೆ ಬೀಜ ಕೊಡಬೇಕು. ಗೊಬ್ಬರ ಕೊಡಬೇಕು ಎಂದು ಹೇಳುತ್ತೇನೆ. ಬೆಳೆಯುವುದಕ್ಕೆ ಸಬ್ಸಿಡಿ ಸಾಲ ಕೊಡಬೇಕು.

ಇನ್ನು ಗ್ರಾಮೀಣ ನಿರುದ್ಯೋಗದ ಬಗ್ಗೆ ಹೇಳುವುದಾದರೆ ೫ ಮತ್ತು ೬ನೇ ಪ್ಯಾರಗಳಲ್ಲಿ ಇದನ್ನು ಪ್ರಸ್ತಾಪಿಸಿದ್ದಾರೆ. ೧೯೮೫ರ ರಾಜ್ಯಪಾಲರ ಭಾಷಣದಲ್ಲಿ ಸಹ ಅದನ್ನೇ ಹೇಳಿದ್ದಾರೆ. ಆದರೆ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳಲಾಗಿದೆ, ಮುಂದೆ ಯಾವ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿಯೇ ಇಲ್ಲ.

ಇನ್ನು ಒಕ್ಕಲುತನದ ಬಗ್ಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅಧ್ಯಕ್ಷರೇ, ರೈತನು ಏನೇನು ಬೆಳೆಯುತ್ತಾನೆ ಏನೇನು ಮಾಗುತ್ತಾನೆ ಆತನಿಗೆ ಏನೇನು ಸಹಾಯ ಸಿಕ್ಕುತ್ತದೆ ಎಂಬುದನ್ನು ಪಟ್ಟಿ ಮಾಡಬಯಸುವೆನು. ಜನತಾ ಸರ್ಕಾರದ ಪಾತ್ರವನ್ನು ಈ ವಿಷಯದಲ್ಲಿ ವಿಶ್ಲೇಷಣೆ ಮಾಡುತ್ತೇನೆ.

ಜಗತ್ತಿನಲ್ಲೆಲ್ಲ ಯಾವ ಒಬ್ಬ ಉದ್ಯಮಿಯು ಸೃಷ್ಟಿಸುವಂಥ ವಸ್ತುವಿಗಾಗಲಿ ಕಚ್ಚಾ ವಸ್ತುವಿಗಾಗಲೀ ಆತನೇ ಬೆಲೆ ನಿಗದಿಪಡಿಸುತ್ತಾನೆ. ಆದರೆ ನಮ್ಮ ರೈತನಿಗೆ ಮಾತ್ರ ಆ ಸ್ವಾತಂತ್ರ್ಯ ಇಲ್ಲ. ಇದನ್ನು ರೈತರು ಕೇಳಿದರೆ ಕೇಂದ್ರ ಸರ್ಕಾರ ಹೊಣೆ ಎಂದು ದೂರುತ್ತಾರೆ. ಆದರೆ ಇವರು ಏನು ಸಹಾಯ ಮಾಡಿದ್ದಾರೆ. ಕೇಂದ್ರ ಸರ್ಕಾರದ ಮೇಲೆ ಎತ್ತಿಹಾಕಿ ಜವಾಬ್ದಾರಿ ತಪ್ಪಿಸಿಕೊಳ್ಳುವ ಇವರು ರೈತರ ಅಭಿವೃದ್ಧಿ ಕಾರ್ಯದಲ್ಲಿ ೧೦–೧೫ ಕೋಟಿ ಖರ್ಚಾದರೂ ಪರವಾಗಿಲ್ಲ. ರೈತ ಬೆಳೆದ ಮಾಲಿಗೆ ನ್ಯಾಯ ಸಿಗತಕ್ಕಂಥ ವ್ಯವಹಾರವನ್ನು ತಾವು ಮಾಡಬೇಕೆಂದು ಒತ್ತಾಯಿಸುತ್ತೇನೆ. ಪ್ರತಿಯೊಂದು ಮನೆಯ ಒಬ್ಬರಿಗೆ ಒಂದು ಕೆಲಸವನ್ನು ಕೊಡುತ್ತೇವೆ ದು ಹೇಳಿದ್ದಾರೆ. ಅದೇ ರೀತಿ ಹಳ್ಳಿಯ ಪ್ರತಿ ರೈತನ ಕುಟುಂಬಕ್ಕೆ ಒಂದು ಇರಿಗೆ ಪಂಪ್‌ಸೆಟ್ ಅನ್ನು ಒದಗಿಸಿಕೊಟ್ಟಲ್ಲಿ ಗ್ರಾಮೀಣ ನಿರುದ್ಯೋಗ ಹೋಗುತ್ತದೆ ಎಂದು ಹೇಳುತ್ತೇನೆ.

ಒಕ್ಕಲುತನದಲ್ಲಿ ಟೆಕ್ನಿಕಲ್ ಕಾಲೇಜನ್ನು ಬಳಸಬೇಕು. ಯೂನಿವರ್ಸಿಟಿಗಳಾಗಬೇಕು. ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾಲಯ ಬರಲಿಲ್ಲ. ಹುಬ್ಬಳ್ಳಿಗೆ ವಿಮಾನ ನಿಲ್ದಾಣ ಆಗಬೇಕು. ಜನತಾ ಸರ್ಕಾರ ಇದರ ಬಗ್ಗೆ ಆಸಕ್ತಿ ವಹಿಸುತ್ತಾ ಇಲ್ಲ ಎಂದರೆ ತಪ್ಪಾಗಲಿಕ್ಕಿಲ್ಲ.

ರೈತರಿಗೆಂದು ಬಡ್ಡಿಯನ್ನು ಸೂಟಿ ಮಾಡುತ್ತಿದ್ದಾರೆ. ಆದರೆ ಅದರ ಉಪಯೋಗವಾಗುತ್ತಿರುವುದು ಸಿರಿವಂತರಿಗೆ ಮಾತ್ರ. ಶ್ರೀಮಂತರು ಅಧಿಕಾರದಲ್ಲಿರುವುದರಿಂದ ೧೦–೧೫ ವರ್ಷವಾದರೂ ಬಡ್ಡಿ ಕೊಡದೆ ಸರ್ಕಾರದ ಲಾಭ ಮಾಡಿಕೊಳ್ಳುತ್ತಿದೆ. ಬಡವನಿಗೆ ಇದು ಸಾಧ್ಯವಾಗುತ್ತಿಲ್ಲ. ರೈತರ ಸಲುವಾಗಿ ಶೇಕಡಾ ೭ ರಂತೆ ಬಡ್ಡಿಯನ್ನು ಮುಂದಿನ ಸೀಸನ್‌ವರೆಗೆ ರದ್ದತಿ ಮಾಡಿದರೆ ರೈತರಿಗೆ ಉಪಕಾರವಾಗುತ್ತದೆ.

ಇನ್ನು ಬೆಳೆ ವಿಮೆ ಬಗ್ಗೆ ಹೇಳಿದ್ದೀರಿ. ಇದು ಯಾವ ಭಾಗದಲ್ಲಿ ಜಾರಿಗೆ ಬಂದಿದೆಯೋ ಗೊತ್ತಿಲ್ಲ. ಸಹಕಾರ ಸಂಘಗಳಿಗೆ ಬಡ್ಡಿ ಸೂಟಿ ಬಿಡುತ್ತೇವೆಂದು ಹೇಳಿದ್ದೀರಿ. ಇವತ್ತಿನವರೆವಿಗೂ ಕೊಟ್ಟಿಲ್ಲ. ಕೆಲವೊಂದು ಸಹಕಾರಿ ಸಂಘಗಳಿಗೆ ಜಿಲ್ಲಾ ಸಹಕಾರಿ ಬ್ಯಾಂಕುಗಳಿಗೆ ಚುನಾವಣೆ ಬಂದಾಗ ಅನುಕೂಲ ವಾಗಲಿ ಎನ್ನುವ ದೃಷ್ಟಿಯಿಂದ ಬಡ್ಡಿ ವಿತರಣೆ ಮಾಡಿದ್ದೀರಿ. ಉಳಿದ ಸಂಘಗಳಿಗೆ ಮಾಡಿಲ್ಲ. ಇಂಥ ಮಲತಾಯಿ ಧೋರಣೆ ಏತಕ್ಕೆ ಮಾಡಿದ್ದೀರಿ. ನಮ್ಮ ರಾಜ್ಯಸರ್ಕಾರ ರೈತರ ಸಲವಾಗಿ ೭ ಸಹಕಾರಿ ಕ್ಷೇತ್ರದ ಮಿಲ್‌ಗಳಿಗೆ ರೆಕಮೆಂಡ್ ಮಾಡಿ, ಎನ್.ಸಿ.ಡಿ.ಸಿ ಗೆ ಕಳುಹಿಸಿದಿರಿ. ಎನ್.ಸಿ.ಡಿ.ಸಿ.ಯವರು ಅಪ್ರೂವ್ ಮಾಡುವುದಕ್ಕೆ ಮುಂಚೆ ತಮಗೆ ಬೇಕಾದವರಿಗೆ ೫೦:೫೦ ಲಕ್ಷಕ್ಕೆ ಕಮಿಟ್‌ಮೆಂಟ್ ಮಾಡಿದ್ದೀರಿ. ಹುಬ್ಬಳ್ಳಿ ಸಂಜಯ ಮಿಲ್‌ನವರು ಬಂದು ಕೇಳಿದರೆ ನಿಮ್ಮದು ಮಂಜೂರಾಗಬೇಕಾದರೆ ನೀವು ಜನತಾ ಪಕ್ಷಕ್ಕೆ ಸೇರಬೇಕೆಂದು ಹೇಳಿದ್ದೀರಿ. ಒಟ್ಟು ೭ ಮಿಲ್‌ಗಳಿಗೆ ಕಮಿಟ್‌ಮೆಂಟ್ ಮಾಡಿ, ಉಳಿದ ಎರಡು ಮಿಲ್‌ಗಳಿಗೆ ಮಾಡಿಲ್ಲ. ಕಾರಣ ಅವರು ಕಾಂಗ್ರೆಸ್ ಪಕ್ಷದವರಾದಂದರಿಂದ ಅವರಿಗೆ ಕಮಿಟ್‌ಮೆಂಟ್ ಮಾಡಿಲ್ಲ. ಸಹಕಾರಿ ಕ್ಷೇತ್ರದಲ್ಲಿ ರಾಜಕೀಯ ಬೆರಸುವುದಿಲ್ಲವೆಂದು ದೊಡ್ಡದೊಡ್ಡ ಅಕ್ಷರಗಳಲ್ಲಿ ಪ್ರಚಾರ ಮಾಡುತ್ತೀರಿ. ಕಾಂಗ್ರೆಸ್‌ಗೆ ಸೇರಿದ ಎರಡು ಮಿಲ್‌ಗಳಿಗೂ ಕೂಡ ಕಮಿಟ್ ಮಾಡಬೇಕು. ಸಹಕಾರಿ ಕ್ಷೇತ್ರದಲ್ಲಿ ಮಾತ್ರ ತಾರತಮ್ಯ ಮಾಡಬಾರದು.

ಇನ್ನು ಬಿರ್ಲಾ ಕಂಪನಿ ಬಗ್ಗೆ ಹೇಳುವುದಾದರೆ, ಈ ಕಂಪನಿಯಿಂದ ಹೊರ ದೂಡಲ್ಪಡುವ ಅಶುದ್ಧವಾದ ನೀರಿನಿಂದ ನಲವಾಗಲ್ಲು ಗ್ರಾಮಕ್ಕೆ ತುಂಬಾ ಹಾನಿಯಾಗುತ್ತಿದೆ. ಕಳೆದ ಮೂರು ವರ್ಷ ಗಳಿಂದಲೂ ಈ ಗ್ರಾಮವನ್ನು ಅಲ್ಲಿಂದ ವರ್ಗ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದರೂ ಇದು ವರೆವಿಗೂ ಆಗಿಲ್ಲ, ಈ ಗ್ರಾಮವನ್ನು ಆದಷ್ಟು ಬೇಗ ವರ್ಗ ಮಾಡಬೇಕೆಂದು ಸರ್ಕಾರದವರನ್ನು ಒತ್ತಾಯ ಪಡಿಸುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ತಾಳಿಯಭಾಗ್ಯ, ಎರಡು ರೂಪಾಯಿ ಅಕ್ಕಿ, ೨೦ ರೂಪಾಯಿಗೆ ಸೀರೆ ೨೦ ರೂಪಾಯಿಗೆ ಧೋತಿ ಕೊಡುತ್ತೇವೆಂದು ಹೇಳಿದ್ದೀರಿ. ನಾನು ಅಕ್ಕಿಯ ಬಗ್ಗೆ ಮಾತ್ರ ಮಾತನಾಡುತ್ತೇವೆ. ನಮ್ಮ ಭಾಗದಲ್ಲಿ ಅಕ್ಕಿ ತಿನ್ನುವವರು ಬಹಳ ಕಡಿಮೆ, ಜೋಳ ತಿನ್ನುವವರು ಇದ್ದಾರೆ, ಕೆಲವು ಭಾಗದಲ್ಲಿ ರಾಗಿ ತಿನ್ನುವವರು ಇದ್ದಾರೆ. ಅಕ್ಕಿ ಬಗ್ಗೆ ಹೇಳುವುದಾದರೆ ಸುಮಾರು ಒಂದು ಕೋಟಿ ಕುಟುಂಬಗಳಿಗೆ ದಿನಕ್ಕೆ ಎರಡು ಕೆ.ಜಿ.ಯಂತೆ ತಿಂಗಳಿಗೆ ೬೦ ಕೆ ಜಿ.ಯಂತೆ ೬೦ ಲಕ್ಷ ಕೆ.ಜಿ. ಅಕ್ಕಿ ಬೇಕಾಗುತ್ತದೆ. ಇದರ ಪ್ರಕಾರ ಒಂದು ವರ್ಷಕ್ಕೆ ೫೦ ಕೋಟಿ ರೂಪಾಯಿ ಬೇಕಾಗುತ್ತದೆ. ಇಷ್ಟು ಹಣ ಪೂರೈಸುವುದಕ್ಕೆ ನಿಮ್ಮಲ್ಲಿ ಆರ್ಥಿಕ ಅನುಕೂಲತೆ ಇದೆಯೇ ? ಬಡ ಜನತೆಯ ಕಣ್ಣಿಗೆ ಮಣ್ಣು ಹಾಕುವಂಥ ಕೆಲಸ ಏತಕ್ಕೆ ಮಾಡಬೇಕು ಇನ್ನು ವಿಧ್ಯಾಭ್ಯಾಸದ ಬಗ್ಗೆ ಹೇಳುವುದಾದರೆ, ಅನಾವಶ್ಯಕವಾಗಿ ಎಲ್ಲೆಲ್ಲಿಯೋ ಶಾಲೆಗಳನ್ನು ತೆರೆದಿದ್ದೀರಿ. ಕ್ವಾಂಟಿಟಿಗಿಂತ ಕ್ವಾಲಿಟಿಗೆ ಹೆಚ್ಚಿಗೆ ಮಹತ್ವ ಕೊಟ್ಟು. ವಿದ್ಯಾ ಕ್ಷೇತ್ರದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಬೇಕೆಂದು ಹೇಳುತ್ತೇನೆ ನಮ್ಮ ರಾಣಿಬೆನ್ನೂರಿಗೆ ಕಾನೂನು ಕಾಲೇಜು ಬಹಳ ಅವಶ್ಯಕತೆ ಇದೆ, ಇದುವರೆವಿಗೂ ಕೊಟ್ಟಿಲ್ಲ. ಮಂತ್ರಿಗಳಾದವರು ಜನತಾ ಪಕ್ಷಕ್ಕೆ ಮಾತ್ರ ಮಂತ್ರಿಗಳಲ್ಲ, ಇಡೀ ರಾಜ್ಯಕ್ಕೆ ಮಂತ್ರಿಗಳು ಎಂಬುದನ್ನು ಮರೆಯಬಾರದೆಂದು ಹೇಳುತ್ತೇನೆ. ಸ್ವಾಮಿ, ಸರ್ಕಾರದವರು ರಾಜ್ಯಪಾಲರ ಬಾಯಿಯಿಂದ ಇಲ್ಲ ಸಲ್ಲದ ಮಾತುಗಳನ್ನು ಆಡಿಸಿದ್ದಾರೆ. ಕೇಂದ್ರ ಸರ್ಕಾರದ ಜೊತೆ ಒಳ್ಳೆಯ ಸಂಬಂಧವನ್ನು ಇಟ್ಟು ಕೊಂಡು ರಾಜ್ಯದ ಅಭಿವೃದ್ಧಿ ಬಗ್ಗೆ ಹೆಚ್ಚಿನ ನಿಗಾವಹಿಸಲಿ ಎಂದು ಹೇಳಿ ರಾಜ್ಯಪಾಲರ ಭಾಷಣಕ್ಕೆ ವಿರೋಧವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಸನ್ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಪ್ರಥಮತಃ ತಮಗೆ ವಂದಿಸಿ, ಒಂದೆರಡು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಯವರು ಬಡ್ಜೆಟ್ ಮಾಡುವ ಸಮಯದಲ್ಲಿ ಮಹತ್ವದ ಮಾತುಗಳನ್ನಾಡಿದ್ದಾರೆ. ಹೊಸದಾಗಿ ಚುನಾಯಿತರಾಗಿ ಬಂದಿರತಕ್ಕ ಸದಸ್ಯರುಗಳನ್ನು ಸ್ವಾಗತಿಸುತ್ತಾ, ಹೆಚ್ಚಿನ ಪ್ರಾಮುಖ್ಯತೆ ಕೊಡುವ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ರಾಜ್ಯಪಾಲರ ಬಾಯಿಂದ ಜನತೆಯ ಆಶೋತ್ತರಗಳನ್ನು ಈಡೇರಿಸುತ್ತೇವೆ. ಜನತೆಯ ಮಾತಿಗೆ ಗೌರವ ಕೊಡುತ್ತೇವೆ, ಮೌಲ್ಯಾಧಾರಿತ ರಾಜಕೀಯ ನೀಡುತ್ತೇವೆಂದು ಹೇಳಿದ್ದಾರೆ. ಈ ಸಾರಿ ಚುನಾವಣೆಯಲ್ಲಿ ಜನತೆ ಜನತಾ ಪಕ್ಷಕ್ಕೆ ಹೆಚ್ಚು ಬೆಂಬಲ ಕೊಟ್ಟಿದ್ದಾರೆ. ಅದರಲ್ಲಿಯೂ ರಾಮಕೃಷ್ಣ ಹೆಗಡೆಯವರ ಮೇಲೆ ಅಪಾರ ವಿಶ್ವಾಸ ಇಟ್ಟು ಜನ ಬೆಂಬಲ ಕೊಟ್ಟು ಕಳುಹಿಸಿದ್ದಾರೆ. ಆದರೆ ಮಾನ್ಯ ಮುಖ್ಯಮಂತ್ರಿಯವರು ಬೊಂಬಾಯಿನಲ್ಲಿ ಮತ್ತು ಡೆಲ್ಲಿಯಲ್ಲಿ ೫ ವರ್ಷಗಳ ಕಾಲ

ರಾಜಕೀಯದಲ್ಲಿ ಇರುವುದಿಲ್ಲ. ಎನ್ನುವ ಮಾತನ್ನು ಆಡಿದ್ದಾರೆ, ಇದರ ಅರ್ಥ ಏನು ಎನ್ನುವುದು ನನಗೆ ಗೊತ್ತಾಗಲಿಲ್ಲ. ರಾಜ್ಯ ನಾಯಕತ್ವದಿಂದ ರಾಷ್ಟ್ರ ನಾಯಕತ್ವಕ್ಕೆ ಹೋಗುವಂಥ ಆಸಕ್ತಿ ಮುಖ್ಯಮಂತ್ರಿಯವರಿಗಿದೆಯೋ ಇದು ತೀರ್ಮಾನವಾಗಿದೆಯೋ ಎಂಬುದನ್ನು ತಿಳಿಸಬೇಕು. ಜನತೆಗೆ ಕೊಟ್ಟ ವಚನವನ್ನು ಮಾನ್ಯ ಮುಖ್ಯಮಂತ್ರಿಗಳು ಜನತೆಗೆ ಇಂದು ತಿಳಿಸಬೇಕಾಗಿದೆ.

ಕೇಂದ್ರಸರ್ಕಾರದ ಸಂಬಂಧದ ಬಗ್ಗೆ ಹೇಳುವುದಾದರೆ, ಕೇಂದ್ರಸರ್ಕಾರ ಇರುವುದು ಜನತೆಯ ಕಲ್ಯಾಣ ಮಾಡುವುದಕ್ಕಾಗಿಯೇ, ರಾಜ್ಯ ಸರ್ಕಾರ ಇರುವುದು ಜನತೆಯ ಕಲ್ಯಾಣ ಕಾರ್ಯಕ್ರಮಗಳನ್ನು ಮಾಡುವುದಕ್ಕಾಗಿಯೇ ಎಂಬುದನ್ನು ಮರೆಯಬಾರದು. ಕೇಂದ್ರದ ಜೊತೆ ಹೊಂದಾಣಿಕೆ ಇಟ್ಟುಕೊಂಡು, ಕರ್ನಾಟಕ ರಾಜ್ಯವನ್ನು ಹೆಚ್ಚು ಅಭಿವೃದ್ಧಿ ಹೊಂದುವಂತೆ ಮಾಡಬೇಕೆಂದು ಸರ್ಕಾರದವರಲ್ಲಿ ಹಾಗೂ ವಿರೋಧಪಕ್ಷದವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ವಿಜಯನಗರ ಉಕ್ಕು ಕಾರ್ಖಾನೆ ವಿಚಾರದಲ್ಲಿ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಜನತೆಗೆ ನೀಡಿದ ಭರವಸೆಗಳನ್ನು ನೆರವೇರಿಸದೆ ಮೋಸಮಾಡಿದರೆ ಏನು ಪರಿಣಾಮವಾಗುತ್ತದೆ ಎನ್ನುವುದಕ್ಕೆ ನಾನೇ ಸಾಕ್ಷಿಯಾಗಿ ನಿಂತಿದ್ದೇನೆ. ಬಲಿಷ್ಟ ಜನತಾ ಪಕ್ಷವನ್ನು ಬಿಟ್ಟು ಕಾಂಗ್ರೆಸ್ (ಐ) ಪಕ್ಷವನ್ನು ಬಿಟ್ಟು ಜನತೆ ನನಗೆ ಮತಕೊಟ್ಟು ಕಳುಹಿಸಿದ್ದಾರೆ. ಚಿಕ್ಕಮಗಳೂರು ನಗರಕ್ಕೆ ಕುಡಿಯುವ ನೀರು ಸರಬರಾಜಿಗೆ ದಿವಂಗತ ಶ್ರೀಮತಿ ಇಂದಿರಾ ಗಾಂಧಿಯವರ ಕೈಯಲ್ಲಿ ಶಿಲೆ ಹಾಕಿಸಿ, ಜನತೆ ಕಣ್ಣೀರಿನಲ್ಲಿ ಕೈ ತೊಳೆಯುವಂತೆ ಮಾಡಿದರು. ಇವತ್ತಿಗೂ ಕೂಡ ಕುಡಿಯುವ ನೀರು ಸರಿಯಾಗಿ ದೊರೆಯುತ್ತಿಲ್ಲ.

ಶ್ರೀ ಎಸ್. ಆರ್. ಲಕ್ಷ್ಮಯ್ಯ.—ಪ್ರಧಾನ ಮಂತ್ರಿಯವರು ಅಡಿಗಲ್ಲು ಹಾಕಬೇಕಾದರೆ ಅವರಿಗೆ ಜವಾಬ್ದಾರಿ ಇತ್ತು ಎನ್ನುವುದನ್ನು ತಾವು ಮರೆಯಬೇಡಿ.

ಶ್ರೀ ಪಿ. ರತ್ನಾಕರ್.—ರಾಜ್ಯ ಸರ್ಕಾರಕ್ಕೆ ಸ್ವಲ್ಪವೂ ಜವಾಬ್ದಾರಿ ಇಲ್ಲವೆ ?

ಶ್ರೀ ಐ. ಬಿ. ಶಂಕರ್.—ಶ್ರೀಮತಿ ಇಂದಿರಾಗಾಂಧಿಯನ್ನು ಚಿಕ್ಕಮಗಳೂರಿನ ಚಿಕ್ಕಮಗಳು ಎಂದು ಗೆಲ್ಲಿಸಿ ಕಳುಹಿಸಿದ್ದರು. ನಂತರ ಜನತಾ ಅಭ್ಯರ್ಥಿಯನ್ನು ಆರಿಸಿ ಕಳುಹಿಸಿದ್ದರು. ಈ ಸಾರಿ ಪಕ್ಷೇತರ ಅಭ್ಯರ್ಥಿಯಾಗಿ ನನ್ನನ್ನು ಆರಿಸಿ ಕಳುಹಿಸಿದ್ದಾರೆ. ಮಂತ್ರಿಯವರನ್ನೇ ಈ ಸಾರಿ ಸೋಲಿಸಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರ ಕೃಷಿ ಬಗ್ಗೆ ಮಾತನಾಡಿದ್ದಾರೆ. ಕೃಷಿ ಕಚೇರಿಗಳು ಜಿಲ್ಲಾ ಮಟ್ಟದಲ್ಲಿ ಏನಿವೆ, ಅಲ್ಲಿನ ಅಧಿಕಾರಿಗಳ ಸಂಖ್ಯೆಯನ್ನು ಲೆಕ್ಕ ಹಾಕಿದರೆ, ೪-೫ ಜನ ಕೂಡ ಅಲ್ಲಿ ಸಿಬ್ಬಂದಿ ಇಲ್ಲ. ಸಹಕಾರಿ ಕ್ಷೇತ್ರದಲ್ಲಿ ಬಡ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತಿಲ್ಲ. ೨,೦೦೦ ಜನ ಸಂಖ್ಯೆ ಇರತಕ್ಕ ಎಲ್ಲಾ ಹಳ್ಳಿಗಳಿಗೂ ಹೆಚ್ಚಿನ ಸೌಲಭ್ಯ ಒದಗಿಸಿಕೊಡುತ್ತೇವೆಂದು ಹೇಳಿದ್ದೀರಿ ಅದರಂತೆ ಒದಗಿಸಿಕೊಡಬೇಕೆಂದು ಹೇಳುತ್ತೇನೆ.

ಬಯಲುಸೀಮೆಯಲ್ಲಿರುವವರಿಗೆ ಬಹಳ ಅನುಕೂಲವಾಗುತ್ತದೆ. ಮಲೆನಾಡು ಪ್ರದೇಶದ ಶಾಸಕನಾಗಿ ಒಂದು ಮಾತು ಹೇಳುತ್ತೇನೆ. ಮಲೆನಾಡು ಪ್ರದೇಶದಲ್ಲಿ ಏನಾಗಿದೆ ಅಂದರೆ "ಸಮುದ್ರಕ್ಕೆ ನೆಂಟು ಉಪ್ಪಿಗೆ ಬಡತನ" ಅಂದಹಾಗೆ ನಮ್ಮಲ್ಲಿ ಈ ಅಳತೆಗೋಲನ್ನು ಇಟ್ಟುಕೊಂಡು ನೀರು ಸರಬರಾಜು ಮಾಡುವುದಕ್ಕೆ ಆಗುವುದಿಲ್ಲ. ಮಲೆನಾಡು ಪ್ರದೇಶಗಳಲ್ಲಿ ನೀರು ಸರಬರಾಜು ಮಾಡುವ ಬಗ್ಗೆ ಬೇರೆ ವ್ಯವಸ್ಥೆ ಮಾಡಿ. ಮಾನ್ಯ ಬಂಗಾರಪ್ಪನವರು ಕ್ರಾಂತಿರಂಗದ ಅಧ್ಯಕ್ಷರಾಗಿದ್ದಾಗ ಅವರು ನಮ್ಮ ನಾಯಕರಾಗಿದ್ದರು ಆಗ ಅವರು ಏಕನಾಯಕತ್ವ ಎಲ್ಲೂ ಇರಬಾರದೆಂದು ಹೇಳುತ್ತಿದ್ದರು. ಮಾನ್ಯ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿ ಮಾನ್ಯ ನಜೀರ್‌ಸಾಬ್‌ರವರು ಜಿಲ್ಲಾ ಪರಿಷತ್ ಮಸೂದೆಯನ್ನು ತಂದು, ಅಧಿಕಾರ ಬೆಂಗಳೂರಿನಲ್ಲೇ ಸೀಮಿತವಾಗಿರುವಂತೆ ಮಾಡಬಾರದು ಅದು ಚಿಕ್ಕಮಗಳೂರಿನವರೆಗೂ ಹೋಗಬೇಕು ಆಗ ಪ್ರತಿಯೊಬ್ಬರಿಗೂ ಅನುಕೂಲವಾಗುತ್ತದೆ.

ಭದ್ರಾಮೇಲ್ದಂಡೆ ಯೋಜನೆ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಹೇಳಬೇಕಾಗುತ್ತದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಶೇಕಡ ೧೦ರಷ್ಟು ಕಾಫಿ ಬೆಳೆ ಬೆಳೆಯಲಿಕ್ಕೆ ಅನುಕೂಲವಾಗಿದೆ. ಭದ್ರಾಮೇಲ್ದಂಡೆ ಯೋಜನೆಯನ್ನು ಕೈಗೆತ್ತಿಕೊಳ್ಳುವುದರಿಂದ ಸಾವಿರಾರು ಎಕರೆ ಭೂಮಿ ಹಾಳಾಗುವುದರ ಜೊತೆಗೆ ಕಾಡಿನ ಸಂಪತ್ತು ಹಾಳಾಗುತ್ತದೆ. ಸರ್ಕಾರ ತೆಗೆದುಕೊಂಡಿರುವ ತೀರ್ಮಾನವನ್ನು ಕೈಬಿಟ್ಟು ಚಿಕ್ಕಮಗಳೂರಿನ ವನಸಂಪತ್ತನ್ನು ಸಾವಿರಾರು ಎಕರೆ ಕಾಫಿ ತೋಟವನ್ನು ರಕ್ಷಿಸಬೇಕು ಅಲ್ಲಿನ ಜನಗಳು ರೊಚ್ಚಿಗೆದ್ದು ವಿಧಾನಸೌಧದವರೆಗೂ ಬರುವುದಕ್ಕೆ ಅವಕಾಶ ಮಾಡಿಕೊಡಬೇಡಿ. ಜನರಿಗೆ ತೊಂದರೆಯಾಗತಕ್ಕ ಯೋಜನೆಗಳನ್ನು ಕೈಬಿಡಬೇಕು.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವುದಾದರೆ, ಲೋಕೋಪಯೋಗಿ ಇಲಾಖೆಯ ಕೆಲಸ ಬಹಳ ಕುಂಠಿತವಾಗಿ ನಡೆಯುತ್ತಿದೆ. ಮಲೆನಾಡಿನಲ್ಲಿ ವರ್ಷೇ ವರ್ಷ ಮಳೆ ಬೀಳುವುದರಿಂದ ಮೇಂಟೇನೆನ್ಸ್ ಸರಿಯಾಗಿ ಆಗದೇ ಹೋದರೆ ರಸ್ತೆಗಳು ಪೂರ್ತಿ ಹಾಳಾಗುತ್ತವೆ. ನನ್ನ ಕ್ಷೇತ್ರದಲ್ಲಿ ಲೋಕೋಪಯೋಗಿ ಇಲಾಖೆಯ ಕೆಲಸ ಬಹಳ ಕಡಿಮೆ ನಡೆದಿದೆ. ಅದರ ಬಗ್ಗೆ ಅಂಕಿಅಂಶಗಳನ್ನು ನೋಡಿ ಪರಿಶೀಲನೆ ಮಾಡಬಹುದು. ಹೆಚ್ಚಿನ ರೀತಿಯಲ್ಲಿ ಲೋಕೋಪಯೋಗಿ ಇಲಾಖೆಯ ಕೆಲಸ ಕಾರ್ಯಗಳು ನಡೆಯುವಂತೆ ಅವಕಾಶ ಮಾಡಿಕೊಡಬೇಕು. ಜನತೆ ಸರ್ಕಾರದ ಕಾರ್ಯಕ್ರಮಗಳನ್ನು ಮೆಚ್ಚಿ ಮತ ನೀಡಿದ್ದಾರೆ, ಈ ಸರ್ಕಾರಕ್ಕೆ ಬೆಂಬಲ ಕೊಟ್ಟಿದ್ದಾರೆ ಆದನ್ನು ನೀವು ಅರ್ಥಮಾಡಿಕೊಂಡು ಜನತೆಗೆ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣವನ್ನು ನಾನು ಪೂರ್ಣ ಸ್ವಾಗತ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಗುರ ಮಿಟ್ಕಲ್).—ಮಾನ್ಯ ಸಭಾಧ್ಯಕ್ಷರೆ, ಸಭೆಯ ಮುಂದೆ ಮಂಡಿಸಿರತಕ್ಕ ರಾಜ್ಯಪಾಲರ ಭಾಷಣವನ್ನು ನಾನು ಸಂಪೂರ್ಣವಾಗಿ ವಿರೋಧಮಾಡುತ್ತಾ ಒಂದೆರಡು ಮಾತುಗಳನ್ನು ಹೇಳಲಿಕ್ಕೆ ಬಯಸುತ್ತೇನೆ. ಅನೇಕ ವಿಷಯಗಳನ್ನು ಮಾನ್ಯ ಮುಖ್ಯಮಂತ್ರಿಗಳನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ.

ಅಧ್ಯಕ್ಷರು.— ಮಾನ್ಯ ಸದಸ್ಯರು ೨ ಘಂಟೆ ೩೦ ನಿಮಿಷಕ್ಕೆ ತಮ್ಮ ಭಾಷಣವನ್ನು ಮುಗಿಸಬೇಕು.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನನಗೆ ಸಮಯ ಹೆಚ್ಚಿಗೆ ಕೊಡಬೇಕು. ರಾಜ್ಯಪಾಲರ ಭಾಷಣದಲ್ಲಿ ಮಾನ್ಯಮುಖ್ಯಮಂತ್ರಿಗಳು ಹೆಚ್ಚಿನ ರೀತಿಯಲ್ಲಿ ರಾಜಕೀಯ ಭಾಷಣವನ್ನು ಮಾಡಿದ್ದಾರೆಯೇ ಹೊರತಾಗಿ ಕಳೆದ ಎರಡು ವರ್ಷಗಳಿಂದ ಏನು ಕೆಲಸಕಾರ್ಯಗಳನ್ನು ಮಾಡಿದ್ದೇವೆ, ಸಮಾಜದಲ್ಲಿ ಏನು ಬದಲಾವಣೆ ಮಾಡಿದ್ದೇವೆ, ಆರ್ಥಿಕವಾಗಿ ಏನು ಬದಲಾವಣೆ ಮಾಡಿದ್ದೇವೆ, ಶೈಕ್ಷಣಿಕವಾಗಿ ಏನು ಬದಲಾವಣೆ ಮಾಡಿದ್ದೇವೆ ಎಂಬುದರ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡಿಲ್ಲ. ಕೇಂದ್ರದಲ್ಲಿ ಯಾವುದೇ ಸರ್ಕಾರವಿರಬಹುದು, ನಮ್ಮ ರಾಜ್ಯದಲ್ಲಿ ಯಾವುದೇ ಸರ್ಕಾರ ಅಧಿಕಾರದಲ್ಲಿರಬಹುದು ಆದರೆ ಇವರು ನಮ್ಮ ರಾಜ್ಯದಲ್ಲಿ ಯಾವರೀತಿ ಸರ್ಕಾರ ನಡೆದುಕೊಂಡು ಬಂದಿದೆ ಯಾವ್ಯಾವ ಪಕ್ಷಗಳು ಅಧಿಕಾರ ನಡೆಸಲಿಕ್ಕೆ ಬೆಂಬಲ ಕೊಟ್ಟಿವೆ ಅದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಕೊಟ್ಟು ಸುಮಾರು ೧೭–೧೮ ಪುಟಗಳ ಬಡ್ಜೆಟ್ ಭಾಷಣ ತಯಾರಿಸಿದ್ದಾರೆ. ೧೮ ಪುಟಗಳಲ್ಲಿ ಕೇಂದ್ರಸರ್ಕಾರವನ್ನು ಬೈಯ್ಯುವುದರಲ್ಲಿ, ಕೇಂದ್ರ ಸರ್ಕಾರವನ್ನು ದೂರುವುದರಲ್ಲೇ, ಕಾಲಹರಣ ಮಾಡಿದ್ದಾರೆ. ರಾಜ್ಯಪಾಲರ ಭಾಷಣದಲ್ಲೂ ಕೂಡ ಕಾಂಕ್ರೀಟ್ ಸಲಹೆಗಳನ್ನು ಕೊಟ್ಟಿಲ್ಲ. ಇಂಥಿಂಥಾ ಕೆಲಸಗಳನ್ನು ಮಾಡುತ್ತೇವೆಂದು ಹೇಳಿಲ್ಲ. ಹೇಳಿರುವುದರಲ್ಲಿ ಪ್ರತಿಯೊಂದರಲ್ಲೂ ರಾಜಕೀಯವಾಗಿ ಹೇಳಿದ್ದಾರೆ. ಏನು ಹೇಳಿದ್ದಾರೆಂದರೆ ಕುಡಿಯುವ ನೀರಿನ ಬಗ್ಗೆ, ದೀನ ದಲಿತರ ಬಗ್ಗೆ, ಹಿಂದುಳಿದವರ್ಗದವರ ಬಗ್ಗೆ ಹೆಚ್ಚು ಗಮನವನ್ನು ಕೊಟ್ಟಿದ್ದೇವೆ. ಅನೇಕ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆಂದು ಬಹಳ ಹೆಮ್ಮೆಯಿಂದ ಹೇಳಿದ್ದಾರೆ. ಒಂದು ಮಾತು ಹೇಳಬೇಕಾಗಿದೆ, ಇವತ್ತಿನ ಮುಖ್ಯಮಂತ್ರಿಗಳಾಗಿರತಕ್ಕವರು ಇಂದೇ ಇದೇ ಸದನದ ಮುಖ್ಯಸ್ಥರಾಗಿ, ಮಂತ್ರಿಗಳಾಗಿ, ನಾಲ್ಕು ಕೋಟಿ ಜನತೆಯ ಪರವಾಗಿ ಅವತ್ತು ಕೆಲಸ ಮಾಡಿದ್ದಾರೆ. ೧೦ ವರ್ಷಗಳ ಕಾಲ ರಾಜ್ಯದ ಮಂತ್ರಿಗಳಾಗಿ, ಅರ್ಥಮಂತ್ರಿಗಳಾಗಿ ಕೆಲಸಮಾಡುತ್ತಿದ್ದಾಗ ಏನು ಹೇಳುತ್ತಿದ್ದರು? ಆಗ ಎಲ್ಲಾ ಚೆನ್ನಾಗಿ ನಡೆಯುತ್ತಿತ್ತು, ಅವರ ಕಾಲದಲ್ಲಿ ಕೊಟ್ಟಂತಹ ಬಡ್ಜೆಟ್ ಭಾಷಣಗಳೇನು ? ಅವುಗಳಲ್ಲಿ ಕೇಂದ್ರಸರ್ಕಾರದ ವಿರುದ್ಧ ಏನಾದರೂ ಚಕಾರವಿದೆಯೋ ಎಂದರೆ ಇಲ್ಲ. ೧೯೬೭ ರಿಂದ ೧೯೭೧ರ ತನಕ ಎಲ್ಲವೂ ಕೇಂದ್ರದ ಜೊತೆ ಸರಿಯಾಗಿತ್ತು. ಆಗ ಕೇಂದಸರ್ಕಾರವನ್ನು ವಿರೋಧಮಾಡುವ ಶಕ್ತಿ ಇವರ ಹತ್ತಿರ ಇರಲಿಲ್ಲ. ನಿಜವಾಗಿಯೂ ನಿಮಗೆ ರಾಜ್ಯದ ಬಗ್ಗೆ ಅನುಕಂಪವಿದ್ದರೆ, ರಾಜ್ಯದ ಕಲ್ಯಾಣದ ಬಗ್ಗೆ ಅನುಕಂಪವಿದ್ದರೆ, ಇವತ್ತು ಏನು ಮಾತನಾಡುತ್ತಿದ್ದಾರೆ, ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆ, ಬಡ್ಜೆಟ್ ಭಾಷಣದಲ್ಲಿ ಏನು ಹೇಳಿದ್ದಾರೆ. ಇದೆಲ್ಲವನ್ನೂ ಕೂಡ ಹಿಂದೆ ಹೇಳಬೇಕಾಗಿತ್ತು, ಏತಕ್ಕೆ ಹೇಳಲಿಲ್ಲ? ಇದಕ್ಕೆ ಕಾರಣವೇನು? ಇವತ್ತು ಜನಗಳ ಮನಸ್ಸು ಪರಿವರ್ತನೆಯಾಗಿರಬೇಕಾದರೆ ಅದು ಕಾಂಗ್ರೆಸ್ (ಐ) ಪಕ್ಷದವರಿಂದಲೇ ಹೊರತು ನಿಮ್ಮಿಂದ ಜನಗಳ ಮನಸ್ಸು ಪರಿವರ್ತನೆಯಾಗಿಲ್ಲ. ಅದು ಹೇಗೆಂದರೆ ೧೯೭೮ರಲ್ಲಿ

ಕಾಂಗ್ರೆಸ್ ಪಕ್ಷ ಇಬ್ಭಾಗವಾಯಿತು. ಒಂದು ಸಂಸ್ಥಾ ಕಾಂಗ್ರೆಸ್ ಇನ್ನೊಂದು ಕಡೆ ಆಡಳಿತ ಕಾಂಗ್ರೆಸ್ ಯೆಂದು ೧೦ ಅಂಶಗಳ ಕಾರ್ಯಕ್ರಮದಿಂದ ಪಕ್ಷ ಒಡೆದು ಹೋಯಿತು. ಆಗ ಕರ್ನಾಟಕರಾಜ್ಯದಲ್ಲೂ ಸಹ ೧೯೭೨ರಲ್ಲಿ ಪ್ರಗತಿಪರವಾದ ಸರ್ಕಾರ ಸ್ಥಾಪನೆಯಾಯಿತು. ಅನೇಕ ಪ್ರಗತಿಪರವಾದ ಕಾರ್ಯಕ್ರಮಗಳನ್ನು ಆಚರಣೆಗೆ ತರಬೇಕೆನ್ನುವ ದೃಷ್ಟಿಯಿಂದ ಇದೇ ಮಾನ್ಯ ರಾಚಯ್ಯನವರನ್ನು ಕೂಡಿಸಿಕೊಂಡು ಅನೇಕ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಈಗ ತಾವೇನು ಹೊಸ ಹೊಸ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆಂದು ಏನು ಹೇಳುತ್ತಿದ್ದೀರಿ ಇವೆಲ್ಲಾ ಕಾರ್ಯಕ್ರಮಗಳನ್ನು ಯಾರು ಹಾಕಿದ್ದು ? ವಿಧವೆಯರಿಗೆ ಮಾಸಾಶನ ಕೊಡತಕ್ಕ ಕಾರ್ಯಕ್ರಮ ಏನಿದೆ ಅದನ್ನು ಹಾಕಿದರು ಯಾರು? ನೀವು ಮಾಡಿದ್ದೀರಾ, ಇಲ್ಲ. ಹಾಗಾದರೆ ನೀವು ಸಂಸ್ಥಾ ಕಾಂಗ್ರೆಸ್ ನಲ್ಲಿದ್ದಾಗ ಇದೇ ಮುಖ್ಯಮಂತ್ರಿಗಳು ಅರ್ಥಮಂತ್ರಿಗಳಾಗಿದ್ದಾಗ ಬಡ್ಜೆಟ್ ಭಾಷಣದಲ್ಲಿ ಆವತ್ತೇ ಹೇಳಬಹುದಾಗಿತ್ತು.

೨–೩೦ ಪಿ.ಎಂ.

ಈ ಕಾರ್ಯಕ್ರಮವನ್ನು ತೆಗೆದುಕೊಳ್ಳಬಹುದಿತ್ತು. ಇನ್ನೂ ಜನತಾ ಹೌಸಿಂಗ್ ಸ್ಕೀಮ್ ಇದೆ.......

ಶ್ರೀ ಬಿ. ರಾಚಯ್ಯ.—ವಯಸ್ಕರಿಗೆ ಪೆನ್‌ಷನ್ ಇಂಟ್ರೊಡ್ಯೂಸ್ ಮಾಡಿದ್ದು ಶ್ರೀ ರಾಮಕೃಷ್ಣ ಹೆಗಡೆಯವರು ಅರ್ಥಸಚಿವರಾಗಿದ್ದಾಗ ಅದು ೧೯೬೮ನೇ ಇಸವಿಯಲ್ಲಿಯೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾಡಿರಬಹುದು. ೧೯೬೮ನೇ ಇಸವಿಯಲ್ಲಿ ಎಷ್ಟು ಜನರಿಗೆ ವೃದ್ಧಾಪ್ಯವೇತನ ಕೊಟ್ಟಿದ್ದೀರಿ? ಅದರ ಅಂಕಿಅಂಶ ಕೊಟ್ಟರೆ ಅದನ್ನು ಒಪ್ಪಬಹುದು. ಈ ಕರ್ನಾಟಕ ರಾಜ್ಯದಲ್ಲಿ ಇಂದಿರಾ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅನೇಕ ಪ್ರಗತಿಪರವಾದ ಕಾರ್ಯಕ್ರಮ ಮಾಡಿದ್ದಾರೆ. ಅದಕ್ಕೂ ಇದಕ್ಕೂ ಹೋಲಿಸಿ ನೋಡಿದರೆ ವ್ಯತ್ಯಾಸವಿದೆ. ನಮ್ಮ ಕಾಲದಲ್ಲಿ ಆಗಲಿಲ್ಲವೆಂದು ನೀವು ಮಾಡಿರಬಹುದು. ಆದರೆ ಆಗ ನೀವು ಲ್ಯಾಂಡ್ ರೀಫಾರ್ಮ್ಸ್ ಮಾಡುವುದಕ್ಕೆ ಹೆದರುತ್ತಿದ್ದೀರಿ. ಲ್ಯಾಂಡ್ ಡಿಸ್‌ಪ್ಯೂಟ್ ಮಾಡುವುದಕ್ಕೆ ಹೆದರುತ್ತಿದ್ದೀರಿ, ಸ್ಪೆಷಲ್ ರಿಕ್ರೂಟ್‌ಮೆಂಟ್ ಮಾಡುವುದಕ್ಕೆ ಹೆದರುತ್ತಿದ್ದೀರಿ. ಬ್ಯಾಂಕಿಂಗ್ ನ್ಯಾಷನಲೈಸ್ ಮಾಡುವುದಕ್ಕೆ ವಿರೋಧ ಮಾಡಿದಿರಿ. ಜನತಾ ಹೌಸಿಂಗ್ ಸ್ಕೀಮ್ ನಮ್ಮ ಕಾಲದಲ್ಲಿ ಬಂತೇ? ಸ್ಪೆಷಲ್ ರಿಕ್ರೂಟ್‌ಮೆಂಟ್ ನಿಮ್ಮ ಕಾಲದಲ್ಲಿ ಬಂತೆ? ಹರಿಜನ ಗಿರಿಜನರಿಗೆ ಕಾರ್ಪೋರೇಷನ್‌ನಿಂದ ನಮ್ಮ ಕೈಯಿಂದ ೧೦ ಪರ್ಸೆಂಟ್ ಅನುಕೂಲವಾಗಿರಬಹುದು, ನೀವು ೨೦ ಪರ್ಸೆಂಟ್ ಮಾಡಿರಬಹುದು. ನೀವು ಜನರ ಮನಸ್ಸನ್ನು ಒಲಿಸಿಕೊಂಡು ಜನರ ಪರವಾಗಿ ಇರುವ ಸರ್ಕಾರ ಎಂದು ಹೇಳಿಕೊಂಡು, ೨೦ ಅಂಶದ ಕಾರ್ಯಕ್ರಮದಲ್ಲಿ ಎಕ್ಸ್‌ಟೆನ್‌ಷನ್ ಕೊಟ್ಟು, ಹೆಸರು ಬದಲಾವಣೆ ಮಾಡಿಕೊಂಡು ನಾವು ಮಾಡಿದ್ದು ಎಂದು ಹೇಳುವುದನ್ನು ಬಿಟ್ಟರೆ ಬೇರೆ ಯಾವ ಕೆಲಸ ಆಗಲಿಲ್ಲ. ಅದೂ ಆಗುವುದೂ ಇಲ್ಲ. ನಮ್ಮ ಕಾಲದಲ್ಲಿ ಇಂದಿರಾಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಮೇಲೆ ಸಾಮಾಜಿಕ ಪರಿವರ್ತನೆಯಾಗಿದೆ. ಶ್ರೀಮಾನ್ ಹಾವನೂರ್ ಅವರ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡಿ ಲಕ್ಷಾಂತರ ಬ್ಯಾಕ್‌ವರ್ಡ್ ಕ್ಲಾಸ್ ಜನರಿಗೆ ರಿಸರ್‌ವೇಷನ್ ಜಾಬ್ ಮತ್ತು ವಿದ್ಯಾಭ್ಯಾಸದ ಸೌಲಭ್ಯವನ್ನು ಕೊಡತಕ್ಕಂಥಾ ವ್ಯವಸ್ಥೆ ಮಾಡಿದ್ದೆವು. ಆ ಒಂದು ರಿಪೋರ್ಟ್ ಇದ್ದ ಕಾರಣ ನಾವು ಪ್ರಯತ್ನ ಪಟ್ಟಿದ್ದಕಾಗಿ, ಸಮಾಜ ಬದಲಾವಣೆ ಬಯಸಿದ್ದಕಾಗಿ ಇವತ್ತು ಅನೇಕ ಜನ ಬ್ಯಾಕ್‌ವರ್ಡ್ ಕ್ಲಾಸ್ ಲೆಜಿಸ್ಲೇಟರ್ಸ್ ಇದ್ದಾರೆ. ಹಿಂದಿನ ಪಟ್ಟಿ ತೆಗೆದು ನೋಡಿ. ಎಷ್ಟು ಜನ ಬ್ಯಾಕ್‌ವರ್ಡ್ ಕ್ಲಾಸ್ ಲೆಜಿಸ್ಲೇಟರ್ಸ್ ಇದ್ದರು, ಎಷ್ಟು ಜನ ಮೈನಾರಿಟೀಸ್ ಜನರಿಗೆ ತಾವು ಸಹಾಯ ಮಾಡಿದ್ದೀರಿ, ಎಷ್ಟು ಜನರನ್ನು ಲಿಂಗ್‌ವೆಸ್ಟಿಕ್ ಮೈನಾರಿಟೀಸ್‌ರನ್ನು ಶಾಸಕರನ್ನಾಗಿ ಮಾಡಿದ್ದೀರಿ ಅಂತ ಹೇಳಿ ನೋಡೋಣ, ಏಕೆಂದರೆ ಪೊಲಿಟಿಕಲ್ ಪವರ್ ಇದೆಯಲ್ಲಾ ಇದು ಎಲ್ಲಕ್ಕಿಂತ ಮಿಗಿಲಾದ ಶಕ್ತಿ. ಈ ಪೊಲಿಟಿಕಲ್ ಪವರ್‌ನಿಂದ ಸಾಮಾಜಿಕವಾಗಿ ಆರ್ಥಿಕವಾಗಿ, ಶೈಕ್ಷಣಿಕವಾಗಿ ಬದಲಾವಣೆ ತರಬಹುದು.

ಶ್ರೀ ಬಿ. ರಾಚಯ್ಯ.— ಅದನ್ನು ಮಾಡಿದವರು. ಶ್ರೀ ದೇವರಾಜ್ ಅರಸ್ ಅಂತ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಡಿ. ಶ್ರೀ ದೇವರಾಜ್ ಅರಸ್ ಅಂತ ಹೇಳಲಿಲ್ಲ. ಶ್ರೀ ವೇದಾಂತ ಹೆಮ್ಮಿಗೆಯವರು ೩೫ ವರ್ಷಗಳಿಂದ ಏನು ಮಾಡಿಲ್ಲ, ಮಾಡಿಲ್ಲ ಎಂದು ಬರೀ ವೇದಾಂತ ವನ್ನೇ ಹೇಳುತ್ತಿದ್ದರು...

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಮ್ಮ ಪಕ್ಷದ ವತಿಯಿಂದ ನಮ್ಮ ಸರ್ಕಾರ ಏನು ಮಾಡಿದೆ ಎನ್ನುವುದನ್ನು ಸ್ವಲ್ಪ ತಿಳಿದುಕೊಳ್ಳಿ. ಸುಮ್ಮನೆ ವಿರೋಧ ಮಾಡುವುದಕ್ಕೋಸ್ಕರ ವಿರೋಧ ಮಾಡ ಬೇಡಿ. ಯಾವ ಬ್ಯಾಕ್ ಗ್ರೌಂಡ್‌ನಲ್ಲಿ ಏನಿದೆ, ಈ ಪರಿಸರ ಬರಬೇಕಾದರೆ ಈ ವಾತಾವರಣ ಉಂಟಾ ಗಬೇಕಾದರೆ ಏನು ಕಾರಣ ಎನ್ನತಕ್ಕದ್ದನ್ನು ಅರ್ಥ ಮಾಡಿಕೊಳ್ಳಿ, ಸುಮ್ಮನೆ ವಿರೋಧ ಮಾಡಬೇಕು ಎನ್ನುವ ದೃಷ್ಟಿಯಿಂದ ಮಾತನಾಡಬೇಡಿ. ಒಂದು ರಾಜಕೀಯ ಸಾಮಾಜಿಕ ಬದಲಾವಣೆ ಈ ರಾಜ್ಯ ದಲ್ಲಿ ತಂದಮೇಲೆ ಇವತ್ತು ಅನೇಕ ಜನರಿಗೆ ಅದರಿಂದ ಅನುಕೂಲವಾಗಿದೆ. ಆದರೆ ಹಿಂದೆ ಎಂದೂ ಕೂಡ ಅವರಿಗೆ ಸಹಾಯ ಮಾಡಬೇಕು ಎನ್ನತಕ್ಕ ಮನಸ್ಸು ಮಾಡಿಲ್ಲ. ಇವತ್ತು ರಾಜಕೀಯವಾಗಿ ಮಾತನಾಡಿ ಕೇಂದ್ರದ ಮೇಲೆ ದೂರುವುದು ಕೇಂದ್ರದವರು ಹಣ ಕೊಟ್ಟಿಲ್ಲ ಎಂದು ಹೇಳತಕ್ಕಂಥಾ ಪ್ರವೃತ್ತಿ ಬೆಳೆದಿದೆ. ಅದು ಏಕೆ ಬೆಳೆದಿದೆಯೋ ಅವರಿಗೇ ಗೊತ್ತು. ಸುಮಾರು ೧೫,೦೦೦ ಹಳ್ಳಿಗಳು ಬರಗಾಲಕ್ಕೆ ತುತ್ತಾಗಿವೆ ಎಂದು ಹೇಳಿದ್ದಾರೆ. ಇವರು ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ಎಂದರೆ ೧೦೫ ಕೋಟಿ ಹಣವನ್ನು ಖರ್ಚು ಮಾಡಿದ್ದೇವೆ ಎನ್ನತಕ್ಕಂಥಾ ಮಾತನ್ನು ಹೇಳಿದ್ದಾರೆ. ೩೨ ಕೋಟಿ ರೂಪಾಯಿ ಕೇಂದ್ರ ಸರ್ಕಾರ ಕೊಟ್ಟಿದೆ. ಈಗಾಗಲೇ ೨೫ ಕೋಟಿ ಖರ್ಚಾಗಿದೆ, ಇನ್ನು ೭ ಕೋಟಿ ರೂಪಾಯಿ ಬಾಕಿ ಬರತಕ್ಕದ್ದು ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ೧೦೫ ಕೋಟಿ ರೂಪಾಯಿಗಳಲ್ಲಿ ತಾವು ಎನ್‌ಆರ್‌ಇಪಿ ಯಿಂದ ತೆಗೆದುಕೊಂಡ ಹಣ ಎಷ್ಟು? ಡಿಪಿಎಪಿ ಪ್ರೋಗ್ರಾಮ್‌ನಿಂದ ತೆಗೆದುಕೊಂಡ ಹಣ ಎಷ್ಟು! ಎಲ್‌ಆರ್‌ಜಿಪಿ ಯಿಂದ ತೆಗೆದುಕೊಂಡ ಹಣ ಎಷ್ಟು? ಕೇಂದ್ರ ಸರ್ಕಾರದ ನಿಯಮಾವಳಿ ಪ್ರಕಾರ ಖರ್ಚು ಮಾಡಿದ ಹಣ ಇಷ್ಟು ಎಂದು ಸವಿಸ್ತಾರವಾಗಿ ಹೇಳಿದ್ದರೆ, ನಾವು ಹೇಳಬಹುದಿತ್ತು, ಇವರು ಇಷ್ಟು ಹಣ ಖರ್ಚು ಮಾಡಿದ್ದಾರೆ ನಿಜವಾಗಿಯೂ ಕೇಂದ್ರಸರ್ಕಾರ ಇವರಿಗೆ ಅನ್ಯಾಯ ಮಾಡಿದೆ ಎಂದು ತಿಳಿದುಕೊಳ್ಳಬಹುದಿತ್ತು. ಶ್ರೀಮಾನ್ ರಾಮಕೃಷ್ಣ ಹೆಗಡೆ ಯವರು ೧೯೬೮ನೇ ಇಸವಿಯಲ್ಲಿ ಹಣಕಾಸಿನ ಮಂತ್ರಿಯಾಗಿದ್ದಾಗಲೂ ಕೂಡ ಸುಮಾರು ೧೬,೦೦೦ ಹಳ್ಳಿಗಳಿಗೆ ಈ ಕ್ಷಾಮ ಇತ್ತು ಎಂದು ಹೇಳಿದ್ದಾರೆ. ಪುಟ (೪)ರಲ್ಲಿ ತಮ್ಮ ಕಾಲದಲ್ಲಿ, ತಾವು ಆಗ ಬಹುಶಃ ಕಂದಾಯ ಸಚಿವರು ಇರಬಹುದು, ಆಗಲೂ ಕೂಡ ಕೇಂದ್ರ ಸರ್ಕಾರದಿಂದ ಸಹಾಯಧನ ೫.೧೩ ಲಕ್ಷ ಕೊಟ್ಟಿದ್ದಾರೆ. ತಾವು ಪ್ರಭಾವ ಬೀರಿ ಇನ್ನು ಹೆಚ್ಚಿಗೆ ತರಬಹುದಿತ್ತು. ಆದರೆ ತರಬಹುದಿತ್ತು. ಆದರೆ ತರುವುದಕ್ಕಾಗಲಿಲ್ಲ. ಆದುದರಿಂದ ಸುಮ್ಮನೆ ದೋಷಾರೋಪಣೆ ಮಾಡುವುದಕ್ಕೆ ಬದಲಾಗಿ ಹಿಂದೆ ಏನು ಮಾಡಿದ್ದೀರಿ ಎನ್ನು ವುದನ್ನು ಮೊದಲು ನೋಡಿ.

ಈಗ ತಮಗೆ ಗೊತ್ತಿದೆ ಪ್ಲಾನ್‌ನಲ್ಲಿ ೫ ಪರ್ಸೆಂಟ್ ಅಲೋ ಮಾಡುತ್ತಾರೆ. ಅದರ ಪ್ರಕಾರ ಕೊಡತಕ್ಕಂತಹ ವ್ಯವಸ್ಥೆ ಇರುತ್ತದೆ. ಆವಾಗ ಕೂಡ ೧೬ ಸಾವಿರ ಹಳ್ಳಿಗಳಲ್ಲಿ ಅಂದರೆ ೧೩೬ ತಾಲ್ಲೂಕುಗಳಲ್ಲಿ ಬರಗಾಲ ಬಂದಿದ್ದಂತಹ ಸಮಯದಲ್ಲಿ ಕೇಂದ್ರದಿಂದ ಬಂದದ್ದು ೫ ಕೋಟಿ ೧೩ ಲಕ್ಷ ರೂಪಾಯಿಗಳು. ಆದರೆ ಆವಾಗ ರಾಜ್ಯ ಸರ್ಕಾರ ಖರ್ಚು ಮಾಡಿದ್ದು ೨೦ ಕೋಟಿ ರೂಪಾಯಿಗಳು. ಇದು ಆದ ಮೇಲೆ ೧೯೭೭ರಲ್ಲಿ ಹೊಸ ಸರ್ಕಾರ ಬಂತು. ಆವಾಗ ಬಂದಂತಹ ಕೇಂದ್ರ ಸರ್ಕಾರದ ಸಹಾಯ ೩ ಕೋಟಿ. ಆದರೆ ಕಳೆದ ಸಾರಿ ಶ್ರೀಮತಿ ಇಂದಿರಾಜಿಯವರು ವಿಷಯವನ್ನು ಕೇಳಿದ ತಕ್ಷಣ ಇವರು ಕೇಳುವುದಕ್ಕಿಂತ ಮುಂಚಿತವಾಗಿಯೇ ೧೦ ಕೋಟಿ ರೂಪಾಯಿಗಳ ಸಹಾಯವನ್ನು ಅವರು ಇಲ್ಲಿಗೆ ಬಂದಿದ್ದಾಗ ಅನೌನ್ಸ್ ಮಾಡಿದರು. ಅವರು ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ಹೇಳುವಂತಹ ಸೌಜನ್ಯ ಕೂಡ ಇಲ್ಲದೇ ಹೋದರೆ ಇಂತವರಿಗೆ ನಾವು ಏನು ಹೇಳೋಣ ? ಆದರೆ ಇವತ್ತು ನೀರನ್ನು ಕೊಡಿ ಅಂದರೆ ಕೇಂದ್ರ ಸರ್ಕಾರ ಹಣ ಕೊಟ್ಟಿಲ್ಲ ಅಂತಾರೆ. ರಸ್ತೆ ಕೆಲಸ ಮಾಡಿ ಅಂದರೆ ಕೇಂದ್ರ ಸರ್ಕಾರ ಕೊಟ್ಟಿಲ್ಲ, ಜನಗಳಿಗೆ ಕೆಲಸ ಕೊಡಿ ಅಂದರೆ ಕೇಂದ್ರ ಸರ್ಕಾರ ಕೊಟ್ಟಿಲ್ಲ. ದನಕರುಗಳಿಗೆ ಮೇವಿಲ್ಲ, ಅದನ್ನು ಕೊಡಿ ಅಂದರೆ ಕೇಂದ್ರ ಸರ್ಕಾರ ಕೊಟ್ಟಿಲ್ಲ ಅಂತ ಹೇಳುತ್ತಾರೆ. ನೀವು ನಮ್ಮ ದೇಶವನ್ನು ಆಳುವಂತಹ ಜನ. ಶ್ರೀಮಾನ್ ರಘುಪತಿಯವರು ಲಗ್ನವಾಗಿಲ್ಲ ಅಂದರೆ ಅದಕ್ಕೆ ಕೇಂದ್ರ ಸರ್ಕಾರ ಹಣ ಕೊಟ್ಟಿಲ್ಲ ಅಂತ ಹೇಳಬಹುದು.

(ನಗು)

ಆದರೆ ಕೇಂದ್ರ ಸರ್ಕಾರದ ಜೊತೆಯಲ್ಲಿ ಜಗಳ ಯಾವ ರೀತಿ ಮಾಡುತ್ತಿದ್ದಾರೆಂದರೆ, ಇವರ ಕಾಲವನ್ನೆಲ್ಲಾ ಅದರಲ್ಲೇ ಕಳೆಯುತ್ತಿದ್ದಾರೆ. ನಿಮ್ಮದೂ ಒಂದು ಆಡಳಿತ. ಅದಕ್ಕಾಗಿ ಈ ಮಾತನ್ನು ಹೇಳುತ್ತಿದ್ದೇನೆ. ಹಿಂದೆ ಇದೇ ರೀತಿಯ ಪರಿಸ್ಥಿತಿ ಇದ್ದಾಗ ಎಷ್ಟರ ಮಟ್ಟಿಗೆ ಹಣವನ್ನು ಪಡೆದು ಕೊಂಡಿದ್ದರು ಎಂಬುದಕ್ಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ. ಇವರು ಹೇಳುತ್ತಾರೆ ಹಿಂದೆ ನಾವು ಅಂದರೆ ಗುಂಡೂರಾವ್ ಸರ್ಕಾರ ಅಧಿಕಾರದಲ್ಲಿದ್ದಾಗ ಎಲ್ಲ ಕಡೆ, ಗುಂಡು ಹಾಕಿದ್ರಿ, ರೈತರ ಮೇಲೆ ಗುಂಡು ಹಾಕಿದ್ರಿ ಅಂತ ಒಂದು ಕಾಯಂ ಆಪಾದನೆಯನ್ನು ನಮ್ಮ ಮೇಲೆ ಮಾಡುತ್ತಿದ್ದಾರೆ. ಆದರ ನಂತರ ಬಂದಂತಹ ನಿಮ್ಮ ಸರ್ಕಾರ ಏನು ಮಾಡಿದೆ ಎಂಬುದನ್ನು ಹೇಳುತ್ತಿದ್ದೇನೆ.

ಒಬ್ಬ ಮಾನ್ಯ ಸದಸ್ಯರು.—ಅದನ್ನು ಒಪ್ಪಿಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಒಪ್ಪಿಕೊಳ್ಳೋಣ. ಕೆಲವು ಸಾರಿ ಆ ರೀತಿ ಆಗಿರಬಹುದು. ಇದ್ದದ್ದನ್ನು ಒಪ್ಪಿಕೊಳ್ಳುತ್ತೇವೆ. ಅದೇ ರೀತಿ ಕೊಡುತ್ತೇವೆ. ಈಗಾಗಲೇ ನಮ್ಮ ಹಿರಿಯ ನಾಯಕರಾದ ಶ್ರೀಮಾನ್ ಕೆ.ಎಚ್. ಪಾಟೀಲ್‌ರವರು ಹೇಳಿದರು. ಪೋಲೀಸ್ ಫೈರಿಂಗ್ ಮಾಡಿದ್ದಾರೆ. ಬಿಜಾಪುರದಲ್ಲಾಯಿತು ಕೋಲಾರದಲ್ಲಾಯಿತು, ಹುಬ್ಬಳ್ಳಿಯಲ್ಲಾಯಿತು, ಬಳ್ಳಾರಿಯಲ್ಲಾಯಿತು ಈ ರೀತಿ ಇನ್ನೂ ಅನೇಕ ಕಡೆ ಪೋಲೀಸ್ ಫೈರಿಂಗ್ ಮಾಡಿದ್ದಾರೆ. ಅದರಲ್ಲೂ ಅನೇಕ ಜನ ಸತ್ತರು. ಅಂದರೆ ನೀವು ನಮ್ಮ ಕಡೆ ಸತ್ತರೆ ಗೋಲಿ ಅಂತ ಹೇಳುತ್ತಾರೆ. ಆ ರೀತಿ ಸತ್ತರೆ ಗೋಲಿ ಹೊಡೆದಿದ್ದೀರಾ ? ಅಥವಾ ಅಲ್ಲಿ ಸತ್ತಂತಹವರು ಬೊಂಬೆಗಳೇ ? ಅಥವಾ ಮಣ್ಣಿನ ಪುತ್ತಳಿಗಳೇ ? ಯಾರೇ ಅಧಿಕಾರದಲ್ಲಿರಲಿ. ಕಾನೂನು ಮತ್ತು ಸುವ್ಯವಸ್ಥೆಯನ್ನು ಮೈನ್‌ಟೈನ್ ಮಾಡುವಾಗ ಅದು ಆಗುತ್ತದೆ. ಆದರೆ ನಾನು ಈಗ ಹೇಳಿದ ಎಲ್ಲ ವಿಚಾರಗಳಲ್ಲೂ ಕೂಡ ಪೋಲೀಸ್ ಫೈರಿಂಗ್‌ನ ಅವಶ್ಯಕತೆ ಇರಲಿಲ್ಲ ಅಂತ ಹೇಳಿದ್ದಾರೆ. ಅದನ್ನು ಅವಾಯಿಡ್ ಮಾಡಬಹುದಾಗಿತ್ತು ಎಂಬುದಾಗಿ ಮೊನ್ನೆ ಕೊಟ್ಟಂತಹ ವರದಿಯಲ್ಲೇ ಹೇಳಿದ್ದಾರೆ. ನಾನೂ ಕೂಡ ಅದನ್ನು ನೋಡಿದ್ದೇನೆ. ಕೆಲವು ಕಡೆ ಎಕ್ಸೆಸ್ ಮಾಡಿದ್ದಾರೆ ಎನ್ನತಕ್ಕಂತಹದ್ದನ್ನೂ ಕೂಡ ಹೇಳಿದ್ದಾರೆ. ಯಾವಾಗಲಾದರೂ ಶಾಂತಿಯನ್ನು ಕಾಪಾಡಬೇಕಾದಂತಹ ಸಂದರ್ಭದಲ್ಲಿ ಇಂತಹದ್ದು ಅವಶ್ಯಕತೆ ಇದೆ ಎಂಬುದನ್ನು ತಾವು ಅರ್ಥಮಾಡಿಕೊಂಡಿದ್ದೀರೆಂದು ನಾನು ಭಾವಿಸುತ್ತೇನೆ. ಆದರೆ ಒಂದು ಸಣ್ಣ ತಪ್ಪಿಗೆ ಅದನ್ನೇ ಪದೇ ಪದೇ ಹೈಲೈಟ್ ಮಾಡಿ ಹೇಳುತ್ತಾರೆ. ಆದರೆ ತಮ್ಮ ಕಾಲದಲ್ಲಿ ಆದಂತಹ ಪೋಲೀಸ್ ಫೈರಿಂಗ್‌ನಲ್ಲಿ ಹತ್ತಾರು ಜನಗಳು ಸತ್ತರಲ್ಲಾ, ತಮಗೆ ಏನು ಹೇಳಬೇಕು ? ಅದಕ್ಕೆ ಉತ್ತರ ಹೇಳಿ. ಎರಡನೆಯದಾಗಿ ಇವರ ಕಾಲದಲ್ಲಿ ಬಡವರು ಯಾರು ಬದುಕುವ ಹಾಗೆ ಇಲ್ಲ. ಸಣ್ಣಪುಟ್ಟ ಅಧಿಕಾರಿಗಳಂತೂ ನೆಮ್ಮದಿಯಾಗಿ ಇರುವ ಹಾಗೇ ಇಲ್ಲ. ಏಕೆಂದರೆ ಇವರ ಮಾತನ್ನು ಕೇಳದೇ ಹೋದರೆ ೨೪ ಗಂಟೆಗಳಲ್ಲಿ ವರ್ಗ ಮಾಡುವುದು. ಈ ಎರಡು ವರ್ಷದ ಇವರ ಕಾಲದಲ್ಲಿ ಸಾವಿರಾರು ಜನರನ್ನು ವರ್ಗ ಮಾಡಿದ್ದೀರಿ. ಬಹುಶಃ ನಿಮಗಿಂತ ಹಿಂದೆ ಇದ್ದಂತಹ ಯಾವ ಸರ್ಕಾರವೂ ಇಂತಹ ಕೀಳುಮಟ್ಟಕ್ಕೆ ಹೋಗಿರಲಿಕ್ಕಿಲ್ಲ. ಈ ಎರಡು ವರ್ಷಗಳ ಅವಧಿಯಲ್ಲಿ ಒಬ್ಬ ಎಂ.ಎಲ್.ಎ. ಬಂದು ಇವರನ್ನು ವರ್ಗ ಮಾಡಿ ಅಂದರೆ ವರ್ಗ ಮಾಡುವುದು. ಮತ್ತೊಬ್ಬ ಎಂ.ಎಲ್.ಎ. ಬಂದು ಅದು ಸರಿಯಾಗಿಲ್ಲ, ಅವರನ್ನು ಬೇರೊಂದು ಕಡೆಗೆ ವರ್ಗ ಮಾಡಿ ಅಂದರೆ ವರ್ಗ ಮಾಡುವುದು. ಅವರದೇ ಜಾತಿಯವರನ್ನು ಬೇಕಾದಲ್ಲಿಗೆ ವರ್ಗ ಮಾಡುವುದು. ಏನೇ ಆಗಲಿ ಅಧಿಕಾರವನ್ನು ಇಟ್ಟುಕೊಳ್ಳಬೇಕು ಎನ್ನತಕ್ಕಂತಹ ದೃಷ್ಟಿಯಿಂದ,೪ ದಿವಸ ಆಡಳಿತವನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಇವರು ಅಡ್ಮಿನಿಸ್ಟ್ರೇಷನ್‌ನಲ್ಲಿ ವರ್ಗಾವಣೆ ಮಾಡಿ ಹೊಲಸು ಎಬ್ಬಿಸಿದ್ದಾರೆ. ಪ್ರತಿಯೊಂದು ೮ ದಿವಸಕ್ಕೆ ಒಂದು ಸಾರಿ ವರ್ಗ ಮಾಡಿದ್ದಾರೆ. ಸಬ್-ಇನ್ಸ್‌ಪೆಕ್ಟರ್‌ಗಳನ್ನಂತೂ ೨-೩ ತಿಂಗಳಿಗೊಂದು ಸಾರಿ ವರ್ಗ ಮಾಡಿದ್ದಾರೆ. ಹಿಂದುಳಿದ ಜಾತಿಗೆ ಸೇರಿದ ಒಬ್ಬ ಸಬ್-ಇನ್ಸ್‌ಪೆಕ್ಟರ್‌ನ್ನಂತೂ ಒಂದೇ ತಿಂಗಳಿನಲ್ಲಿ ೫-೬ ಸಲ ವರ್ಗಾವಣೆ ಮಾಡಿದ್ದಾರೆ. ಅವರ ಹೆಸರು ಹೊಣಗೇರಿ ಅಂತ. ಇಲ್ಲ ಇವರು ಹಿಂದುಳಿದ ವರ್ಗದವರು ಇಲ್ಲಿ ಸರಿಯಾಗುವುದಿಲ್ಲ ಬೇರೆ ಕಡೆಗೆ ವರ್ಗ ಮಾಡಿ ಅಂತ ಇವರ ಪಕ್ಷದ ಶಾಸಕರು ಹೇಳಿದರೆ ಮತ್ತೆ ಅಲ್ಲಿಂದ ವರ್ಗ ಮಾಡುವುದು. ಈ ರೀತಿಯಾಗಿ ನಿಮ್ಮ ಕಾಲದಲ್ಲಿ ಸಾವಿರಾರು ರೂಪಾಯಿಗಳನ್ನು ಬರೀ ವರ್ಗಾವಣೆಯ ಮೇಲೇ ಖರ್ಚು ಮಾಡಿದ್ದೀರಿ. ಅನೇಕ ನಿಷ್ಠಾವಂತ ಅಧಿಕಾರಿಗಳನ್ನೂ ಕೂಡ ವರ್ಗ ಮಾಡಿದ್ದೀರಿ. ಇದರಿಂದ ಸರ್ಕಾರಕ್ಕೆ ಲುಕ್ಸಾನು ಆಗಿದೆ. ಹೀಗಿದ್ದ ಮೇಲೆ ಮೌಲ್ಯಾಧಾರಿತ ರಾಜಕಾರಣ ಎಲ್ಲಿಂದ ಬಂತು ? ಎಂತಹ ಸರ್ಕಾರ ಅಂತ ತಾವು ಹೇಳಬೇಕು. ಇದನ್ನು ನಿಜವಾಗಿಯೂ

ಪರಿಶೀಲನೆ ಮಾಡಿ ಏನು ಮಾಡಿದ್ದೇವೆಂದು ನಿಮ್ಮ ಆತ್ಮ ಶೋಧನೆ ಮಾಡಿಕೊಂಡರೆ, ನೀವು ಆತ್ಮ ವಂಚನೆ ಮಾಡಿಕೊಂಡಿದ್ದೀರಿ ಎನ್ನತಕ್ಕಂತಹದ್ದನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ

ಮೂರನೆಯದು, ಇವರ ಕಾಲದಲ್ಲಿ ಪೊಲಿಟಿಕಲ್ ವಿಕ್ಟಿಮೈಜೇಸನ್ ಎಷ್ಟು ಎಂದರೆ, ಯಾರಾದರೂ ಒಳ್ಳೆಯ ಕೆಲಸವನ್ನು ಸಾಮಾನ್ಯ ಜನರಿಗೆ ಮಾಡಿದರೂ ಕೂಡ ಸಹಿಸುವುದಿಲ್ಲ ಹಿಂದೆ ಇದ್ದಂತಹ ಸರ್ಕಾರ ಇರಬಹುದು ಈಗ ಇರುವಂತಹ ಸರ್ಕಾರ ಇರಬಹುದು. ನಾವೂ ನೀವೂ ಕೆಲಸ ಮಾಡುವುದು ಯಾರಿಗೋಸ್ಕರ ? ಜನರಿಗೋಸ್ಕರ. ಜನರ ಕಲ್ಯಾಣವಾಗಬೇಕು ಜನ ಮುಂದೆ ಬರಬೇಕು. ಅವರ ಸಂಕಷ್ಟ ಪರಿಹಾರವಾಗಬೇಕು, ಎನ್ನತಕ್ಕಂತಹ ದೃಷ್ಟಿಯಿಂದ ಕೆಲಸಕಾರ್ಯಗಳಾಗ ಬೇಕು ಅಧಿಕಾರ ತಮ್ಮ ಕೈಯ್ಯಲ್ಲಿದೆ ಕೇಳತಕ್ಕಂತಹದ್ದು ನಮ್ಮ ಕೈಯ್ಯಲ್ಲಿ ಇದೆ. ಅನೇಕ ಕಡೆ ಬಡವರಿಗೆ ಒಂದು ಆಸ್ಪತ್ರೆಯನ್ನು ಮಾಡಿದ್ದರೆ, ಅವನ್ನು ಬೇರೊಂದು ಕಡೆಗೆ ಬದಲಾವಣೆ ಮಾಡುವುದು. ಯಾವುದಾದರೊಂದು ಹೈಸ್ಕೂಲು, ಆಸ್ಪತ್ರೆ ಮಲ್ಲಿಕಾರ್ಜುನ್ ಖರ್ಗೆಯವರ ಕ್ಷೇತ್ರದಲ್ಲಿದ್ದರೆ, ಅದನ್ನು ತೆಗೆದುಕೊಂಡು ಹೋಗಿ ವಿಶ್ವನಾಥರೆಡ್ಡಿಯವರ ಕ್ಷೇತ್ರಕ್ಕೆ ಹಾಕುವುದು. ಈ ತರಹ ಕೆಲಸ ನಡೆಯುತ್ತಿದೆ.

ಶ್ರೀ ಬಿ. ರಾಚಯ್ಯ.—ಶ್ರೀಮಾನ್ ಖರ್ಗೆಯವರು ಶಾಸಕರಾಗಿದ್ದಾರೆ. ಅವರು ಹಿಂದೆ ಮಂತ್ರಿಗಳೂ ಕೂಡ ಆಗಿದ್ದಂತಹವರು. ಸ್ಕೂಲು ಕಾಲೇಜುಗಳನ್ನು, ಹಾಗೂ ಆಸ್ಪತ್ರೆಗಳನ್ನು ಕೊಡುವಾಗ ಕೇವಲ ಪಕ್ಷದ ಆಧಾರದ ಮೇಲೆ ಮಾಡಿದ್ದಾರೆಂಬುದು ಸತ್ಯಕ್ಕೆ ದೂರವಾದ ಮಾತು. ಅವರು ಕೇಳಿದ್ದ ಕಡೆಯೂ ಶಾಲೆಗಳನ್ನು ಮಂಜೂರು ಮಾಡಿದ್ದೇವೆ. ಆದ್ದರಿಂದ ಯಾವುದೋ ಒಂದನ್ನು ತೆಗೆದುಕೊಂಡು ಹೇಳುವುದು ಬೇಡ. ಅದು ರಾಜಕೀಯ ಭಾಷಣವಾಗಿ ಹೋಗಿಬಿಡುತ್ತದೆ.

ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ.—ರಾಜಕೀಯವಾಗಿ ಮಾತನಾಡುತ್ತಿಲ್ಲ. ಇದ್ದುದನ್ನು ಇದ್ದ ಹಾಗೆ ಹೇಳುತ್ತಿದ್ದೇನೆ. ನನ್ನ ಕ್ಷೇತ್ರದಲ್ಲಿದ್ದ ಹೈಸ್ಕೂಲು ಅನ್ನು ಬೇರೆ ಕ್ಷೇತ್ರಕ್ಕೆ ವರ್ಗ ಮಾಡಿದಾಗ ಆ ವಿಚಾರವನ್ನು ಇಲ್ಲೇ ಪ್ರಸ್ತಾಪ ಮಾಡಿದಾಗ ಆ ರೀತಿ ಆಗಿದ್ದರೆ ಮತ್ತೊಂದು ಹೈಸ್ಕೂಲನ್ನು ಕೊಡುತ್ತೇನೆಂದು ಶ್ರೀಮಾನ್ ರಾಚಯ್ಯನವರು ಅಂದು ವಿದ್ಯಾಮಂತ್ರಿಗಳಾಗಿದ್ದಾಗ ಹೇಳಿದ್ದರು. ಆ ಮಾತು ಬೇರೆ. ಆದರೆ ಇರತಕ್ಕಂತಹ ಶಾಲೆಗಳನ್ನು ಒಂದು ಊರಿನಿಂದ ಇನ್ನೊಂದು ಊರಿಗೆ ಹಾಕುವುದು, ಈ ರೀತಿಯಾಗಿ ತಮ್ಮ ಮಂತ್ರಿಗಳೇ ಮಾಡಿದ್ದಾರೆ. ಆ ರೀತಿ ಬದಲಾವಣೆ ಏಕೆ ಮಾಡಬೇಕಾಗಿತ್ತು ? ಅದರಲ್ಲೂ ನಡೆಯುತ್ತಿದ್ದಂತಹ ಸ್ಕೂಲನ್ನು ಬದಲಾವಣೆ ಮಾಡುವುದು, ನಡೆಯುತ್ತಿದ್ದಂತಹ ಆಸ್ಪತ್ರೆಯನ್ನು ಬದಲಾವಣೆ ಮಾಡುವುದು. ವೆಟ್ರನರಿ ಆಸ್ಪತ್ರೆ, ನನ್ನ ಕ್ಷೇತ್ರವಾದ ಮೊಟ್ನಹಳ್ಳಿಯಲ್ಲಿತ್ತು. ಅದನ್ನು ತೆಗೆದುಕೊಂಡು ತಮ್ಮ ಕ್ಷೇತ್ರದ ಒಂದು ಊರಿಗೆ ಹಾಕುವುದು, ಈ ರೀತಿ ತಮ್ಮ ಮಂತ್ರಿಗಳೇ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಆ ತರಹ ಮಾಡತಕ್ಕಂತಹದ್ದು ಸರಿಯಲ್ಲ ಅಂತ ಹೇಳಿ ಮುಂದಕ್ಕೆ ಹೋಗಿ.

ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ.—ಈ ರೀತಿ ಅಡ್ಮಿನಿಸ್ಟ್ರೇಷನ್ ಇದ್ದರೆ ಇದೊಂದು ಒಳ್ಳೆಯ ಆಡಳಿತ ಕೊಡತಕ್ಕಂತಹ ಸರ್ಕಾರವೇ ? ಇನ್ನೊಂದು ಇದೇ ರೀತಿಯಾಗಿ ಮಾಡಿದ್ದಾರೆ. ಹಿರಿಯೂರಿನಲ್ಲಿ ಈ ರೀತಿಯಾಗಿರುವುದರ ಬಗ್ಗೆ ಸದಸ್ಯರಾದ ಶ್ರೀ ರಾಮಯ್ಯನವರ ಪ್ರಸ್ತಾಪ ಮಾಡಿದ್ದಾರೆ. ಆ ಹೈಸ್ಕೂಲನ್ನು ಹಿಂದೆ ಶ್ರೀಮಾನ್ ರಂಗನಾಥ್‌ರವರು ಇದ್ದಾಗ ಮಂಜೂರು ಮಾಡಿಸಿದ್ದರು. ಅದನ್ನು ಇನ್ನೊಂದು ಕಡೆ ಬದಲಾವಣೆ ಮಾಡಿದ್ದಾರೆ. ಮಂಡ್ಯದಲ್ಲೂ ಕೂಡ ಶ್ರೀಮಾನ್ ಮಾದೇಗೌಡರ ಕ್ಷೇತ್ರದಲ್ಲಿದ್ದಂತಹ ಆಸ್ಪತ್ರೆಯನ್ನು ತೆಗೆದುಕೊಂಡು ಹೋಗಿ ಇನ್ನೊಂದು ಕಡೆ ಹಾಕಿದ್ದಾರೆ. ಬರೀ ಸಿಫ್ಟಿಂಗ್ ಮಾಡುವುದೇ ಆಗಿದೆ. ಹೊಸದಾಗಿ ಏನು ಸೃಷ್ಟಿ ಮಾಡುವುದಕ್ಕಾಗುವುದಿಲ್ಲ. ಈ ಸರ್ಕಾರ ಬರೀ ಸಿಫ್ಟಿಂಗ್ ಸರ್ಕಾರ. ಒಳ್ಳೆಯ ಕೆಲಸವನ್ನು ಮಾಡಿ ಜನರ ಮನಸ್ಸಿನಲ್ಲಿ ಉಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿ. ಅದನ್ನು ಬಿಟ್ಟು ಈ ರೀತಿ ಮಾಡಿದರೆ, ಜನ ರೊಚ್ಚಿಗೆದ್ದರೆ ನಿಮ್ಮನ್ನು ಬಿಡುವುದಿಲ್ಲ. ೨ ಪರ್ಸೆಂಟ್ ಮೇಲೆ ಇದ್ದೀರಿ ಅಷ್ಟೆ. ನಮ್ಮದು ೪೧ ಪರ್ಸೆಂಟ್ ಆಗಿದ್ದರೆ, ನಿಮ್ಮದು ೪೩ ಪರ್ಸೆಂಟ್ ಮಾರ್ಜಿನಲ್ಲಿದ್ದೀರಿ ಅಷ್ಟೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವರು ನಮಗೆ ಬಹಳ ಬೆಂಬಲ ಇದೆ ಎಂದು ತಿಳಿದು ಕೊಂಡಿದ್ದಾರೆ. ಇವರಿಗೆ ಜನ ಬೆಂಬಲ ಇಲ್ಲ.

ಒಬ್ಬ ಮಾನ್ಯ ಸದಸ್ಯರು.—ಐದು ವರ್ಷ ಆದಮೇಲೆ ಗೊತ್ತಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಎಲ್ಲೋ ಆಕಸ್ಮಿಕವಾಗಿ ಇವರು ಗೆದ್ದಿದ್ದಾರೆ. ಆದರೂ ನಾವು ಶಾಶ್ವತ ಎಂದು ತಿಳಿದುಕೊಂಡು ಈ ರೀತಿ ವರ್ತನೆ ಮಾಡುವುದಕ್ಕೆ ಹೋಗಬೇಡಿ ಎಂದು ತಮ್ಮ ಮೂಲಕ ನಾನು ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಕರ್ನಾಟಕದಲ್ಲಿ ಚುನಾವಣೆ ನಡೆದಿದೆ, ಜನ ಜಾಗೃತರಾಗಿ ಮತ ನೀಡಿದ್ದಾರೆ. ಇಂಥದ್ದರಲ್ಲಿ ಇವರು ಆಕಸ್ಮಿಕವಾಗಿ ಎಂದು ಹೇಳುತ್ತಾರಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಇನ್ನೊಂದು ವಿಶೇಷ ವೇನೆಂದರೆ, ಇವರು ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುವಾಗ ರಾಜಕೀಯದ ಆಧಾರದ ಮೇಲೆ ಅನೇಕ ತೀರ್ಮಾನಗಳನ್ನು ತೆಗೆದುಕೊಂಡಿದ್ದಾರೆ. ಹೇಗೆಂದರೆ...

ಅಧ್ಯಕ್ಷರು.— ನೀವು ಬಹಳ ವೇಳೆ ತೆಗೆದುಕೊಂಡಿರಿ. ಇನ್ನೂ ಹೊಸ ಸದಸ್ಯರು ಮಾತನಾಡುವವರಿದ್ದಾರೆ, ಅವರಿಗೂ ಅವಕಾಶ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನು ಕೇವಲ ೭-೮ ಅಂಶಗಳಿವೆ. ನಾನು ಮಾತನಾಡುವುದೇ ಕಡಿಮೆ. ಸರ್ಕಾರಕ್ಕೆ ನಮ್ಮ ಮಾತು ಅರ್ಥವಾಗಬೇಕಾದರೆ ಸ್ವಲ್ಪ ವಿವರವಾಗಿ ಹೇಳಬೇಕಾಗುತ್ತದೆ.

ಅಧ್ಯಕ್ಷರು.—ಅದು ರಾಜಕೀಯ ಭಾಷಣವಾಗುತ್ತದೆಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಡ್ಜೆಟ್ಟಿನಲ್ಲಿ ಕೂಡ ರಾಜಕೀಯವಾಗಿ ಮಾತನಾಡಿದ್ದಾರೆ ಹೇಗೆಂದರೆ, ಅನೇಕ ಜನ ಸದಸ್ಯರು ಕೊಟ್ಟಂತಹ ಮಾಹಿತಿಯನ್ನು ನೋಡಿದರೆ ಎಲ್ಲೆಲ್ಲಿ ಜನತಾ ಶಾಸಕರು ಇದ್ದಾರೋ ಅಲ್ಲಿ ಹೆಚ್ಚು ಕಾರ್ಯವನ್ನು ತೆಗೆದುಕೊಂಡಿದ್ದಾರೆ, ಎಲ್ಲಿ ವಿರೋಧ ಪಕ್ಷದವರು ಇದ್ದಾರೋ ಅಲ್ಲಿ ಇಲ್ಲವೇ ಇಲ್ಲ. ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ ಮಿನಿಮಂ ನೀಡ್ ಪ್ರೋಗ್ರಾಂನಲ್ಲಿ ಒಂದೂ ಹೊಸ ಟ್ಯಾಂಕು ಇಲ್ಲ.

ಶ್ರೀ ಪಂಪಾಪತಿ.—ಅದು ಸರಿಯೋ ತಪ್ಪೋ ಎಂಬ ಬಗ್ಗೆ ಮಂತ್ರಿಗಳು ಉತ್ತರಿಸುತ್ತಾರೆ. ಯಾವ ಕಾಲದಲ್ಲಿ ರಾಜಕೀಯ ಪ್ರಭಾವಕ್ಕೆ ಒಳಗಾಗದೆ ಇಂಥ ಕೆಲಸ ಕಾರ್ಯಗಳು ನಡೆದಿವೆ ಎಂದು ಕೇಳುತ್ತೇನೆ ಅವರು ಅಧಿಕಾರದಲ್ಲಿದ್ದಾಗ ಅವರ ಕ್ಷೇತ್ರಕ್ಕೆ ಬೇಕಾದುದನ್ನು ಮಾಡಿಕೊಂಡಿಲ್ಲವೇ ? ಅಧಿಕಾರದಲ್ಲಿದ್ದವರು ಯಾರು ಬಿಟ್ಟಿದ್ದಾರೆ ? ನೀವೇನು ಆಪಾದನೆ ಮಾಡಿದ್ದೀರಿ, ಅದು ನಿಜವೋ ಸುಳ್ಳೋ ಎಂಬ ಬಗ್ಗೆ ಮಂತ್ರಿಗಳು ಉತ್ತರಿಸುತ್ತಾರೆ. ಆದರೆ ಕೆಲಸ ಕಾರ್ಯಗಳನ್ನು ಮಾಡಿಸುವ ವಿಚಾರದಲ್ಲಿ ಮತ್ತು ಕೆಲಸ ಕಾರ್ಯಗಳನ್ನು ಹಂಚುವ ವಿಚಾರದಲ್ಲಿ ಯಾರು ರಾಜಕೀಯ ಮಾಡಿಲ್ಲ, ಯಾರು ರಾಜಕೀಯ ಪ್ರಭಾವವನ್ನು ಉಪಯೋಗಿಸಿಕೊಂಡಿಲ್ಲ ?

ಶ್ರೀ ಉಮರಬ್ಬ.— ಈಗ ಅಧಿಕಾರದಲ್ಲಿದ್ದವರು, ಹಿಂದೆ ಅಧಿಕಾರದಲ್ಲಿದ್ದವರು ಹಂಚಿಕೊಂಡಿದ್ದಾರೆಂಬ ಚರ್ಚೆ ನಡೆಯುತ್ತಿದೆ. ಹಿಂದೆಯೂ ಅಧಿಕಾರದಲ್ಲಿಲ್ಲದೆ ಇಂದೂ ಅಧಿಕಾರದಲ್ಲಿಲ್ಲದೆ ಇರುವ ನನ್ನಂಥವರನ್ನು ಯಾರು ಬಲ್ಲರು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗ ಮುದ್ರಣವಾಗಿರುವ ಆಯವ್ಯಯದಲ್ಲಿ ವಿರೋಧ ಪಕ್ಷದ ಸದಸ್ಯರಿರುವ ಕ್ಷೇತ್ರಗಳಿಗೆ ಸಂಬಂಧಪಟ್ಟ ಹಾಗೆ ಕೆಲಸಗಳನ್ನು ತೆಗೆದುಕೊಳ್ಳುವ ಪ್ರಸ್ತಾಪ ಇಲ್ಲ. ೧೯೮೪-೮೫ರ ಆಯವ್ಯಯದಲ್ಲಿ ದೇವೇಗೌಡರು ಅನೇಕ ಕೆಲಸಗಳನ್ನು ಸೇರಿಸಿದ್ದರು. ಆದರೆ ಟೋಕನ್ ಗ್ರಾಂಟನ್ನು ಮಾತ್ರ ಒಂದು ಸಾವಿರ ರೂಪಾಯಿ ಇಟ್ಟಿದ್ದರು. ಆಮೇಲೆ ಅವರು ಏನು ಮಾಡಿದರು ಎಂದರೆ ಇನ್ನೇನು ಚುನಾವಣೆ ೩-೪ ತಿಂಗಳಲ್ಲಿ ಬರುತ್ತದೆ ಅನ್ನುವಾಗ ಯಾವುದಕ್ಕೆ ಬೇಕೋ ಅದಕ್ಕೆ ಮೂರನೇ ಒಂದು ಭಾಗ ಬಡ್ಜೆಟ್ ಪ್ರಾವಿಷನ್ ಮಾಡಿಕೊಂಡು ನಮ್ಮದನ್ನೆಲ್ಲ ಕೈಬಿಟ್ಟರು. ಕಳೆದ ೬ ತಿಂಗಳಿನಿಂದ ಅವರ ನಮ್ಮ ಭೇಟಿ ಆಗಲಿಲ್ಲ, ನಮ್ಮ ಭಾಗದಲ್ಲಿ ಯಾವ ಕೆಲಸ ಕಾರ್ಯಗಳನ್ನು ಮಾಡಿಲ್ಲ. ಅದನ್ನು ಬೇಕಾದರೆ ತಾವು ತರಿಸಿನೋಡಿ. ಸಂಬಂಧಪಟ್ಟ ಮಂತ್ರಿಗಳನ್ನು ಕರೆಸಿ ಚರ್ಚೆ ಮಾಡಿ. ೧೯೮೩ರಲ್ಲಿ ಚುನಾಯಿತರಾಗಿ ಬಂದವರು ನಾವು ಮತ್ತು ಅವರು. ಅವರ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಆಗಿದೆ, ಆದರೆ ನಮ್ಮ ಕ್ಷೇತ್ರದಲ್ಲಿ ಏಕೆ ಆಗಿಲ್ಲ ? ಅವರ ಎಸ್ಟಿಮೇಟ್‌ಗಳು ಅಪ್ರೂವ್ ಆದವು, ಆದರೆ ಆದರೆ ನಮ್ಮವು ಏತಕ್ಕೆ ಆಗಲಿಲ್ಲ ? ಒಂದು ಸಾವಿರ ರೂಪಾಯಿ ಟೋಕನ್ ಗ್ರಾಂಟ್ ಇಟ್ಟದ್ದನ್ನು ಇಟ್ಟದ್ದನ್ನು ಕೈಬಿಟ್ಟಿದ್ದಾರೆ. ಅಲ್ಲಿ ಜನತಾ ಪಕ್ಷ......

ಶ್ರೀ ಬಿ. ರಾಚಯ್ಯ.—ಕಾಂಗ್ರೆಸ್, ನಾನ್ ಕಾಂಗ್ರೆಸ್ ಎಂದು ಮಾಡಿಲ್ಲ. ನನ್ನ ಕ್ಷೇತ್ರದಲ್ಲಿ ಕೂಡ ಒಂದು ಸಾವಿರ ರೂಪಾಯಿ ಟೋಕನ್ ಗ್ರಾಂಟ್ ಕೊಟ್ಟ ಕೆಲಸ ಹಾಗೆ ಇದೆ. ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಕೆಲವಕ್ಕೆ ಅರ್ಧ ಕೊಟ್ಟು ಅಪ್ರೂವ್ ಮಾಡಿದ್ದೀರಿ. ಅಂಥದ್ದು ಒಂದೂ ಆಗಿಲ್ಲವೆಂದು ನೀವು ಹೇಳಿದ್ದನ್ನು ಕೇಳುತ್ತೇನೆ. ೧೯೮೩-೮೪ರಲ್ಲಿ ಮತ್ತು ೧೯೮೪-೮೫ರಲ್ಲಿ ಒಂದು ಸಾವಿರ ರೂಪಾಯಿ ಟೋಕನ್ ಗ್ರಾಂಟ್ ಇಟ್ಟಂಥದ್ದಕ್ಕೆ ಮೂರನೇ ಒಂದು ಭಾಗ ಬಡ್ಜೆಟ್ ಪ್ರಾವಿಷನ್ ಮಾಡಿ ಒಂದನ್ನೂ ಅಪ್ರೂವ್ ಮಾಡಿಲ್ಲವೆಂದರೆ ನಾನು ಹೇಳಿದ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ನಮ್ಮ ಕ್ಷೇತ್ರದಲ್ಲೂ ಕೆಲಸ ಆಗಿಲ್ಲ.

ಶ್ರೀ ಬಿ. ರಾಚಯ್ಯ.—ನಾನು ಹೇಳುತ್ತಿರುವುದು ಒಂದು ಕಡೆ ಅಲ್ಲ. ಒಂದು ಸಾವಿರ ರೂಪಾಯಿ ಟೋಕನ್ ಗ್ರಾಂಟ್ ಎಲ್ಲೆಲ್ಲಿ ಪ್ರೊವೈಡ್ ಮಾಡಲಾಗಿತ್ತೋ ಅಂಥ. ಅನೇಕ ಕಡೆಗಳಲ್ಲಿ ಹಾಗೆ ಆಗಿದೆ. ನಮ್ಮ ಕ್ಷೇತ್ರದಲ್ಲೂ ಕೂಡ ಹಾಗೆ ಆಗಿದೆ. ಒಂದು ಕ್ಷೇತ್ರದಲ್ಲ ಮಾತ್ರ ಆಗಿಲ್ಲವೆಂದು ಅಲ್ಲ.

ಅಧ್ಯಕ್ಷರು.—ಎಲ್ಲರಿಗೂ ಗೊತ್ತಾಗುತ್ತದೆ ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅಧ್ಯಕ್ಷರೆ, ತಮಗೂ ಗೊತ್ತಿದೆ ಆದ್ದರಿಂದ, ತಾವು ಸ್ವಲ್ಪ ಹೇಳಿದರೆ ಆಗುತ್ತದೆ, ಆ ಮಾತು ಬೇರೆ ಆದರೆ ನಾನು ಏತಕ್ಕೆ ಅವರನ್ನು ಕೇಳುತ್ತೇನೆಂದರೆ, ಅವರು ಹತ್ತರಲ್ಲಿ ಐದನ್ನಾದರೂ ಮಾಡಿಸಿಕೊಂಡಿದ್ದಾರೆ. ನಮ್ಮಲ್ಲಿ ಹತ್ತಕ್ಕೆ ಹತ್ತೂ ಹೋಯಿತಲ್ಲ. ಆದುದರಿಂದ ಈ ರೀತಿ ತಾರತಮ್ಯ ಮಾಡಬಾರದೆಂದು ಹೇಳುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಮಾಡಿದಂತಹ ರಸ್ತೆಗಳಲ್ಲಿ ಜನತಾ ಪಕ್ಷದವರು ನಡೆಯುತ್ತಾರೆ, ಕಾಂಗ್ರೆಸ್ ಪಕ್ಷದವರೂ ನಡೆಯುತ್ತಾರೆ, ಎಲ್ಲಾ ಪಕ್ಷದ ಜನರೂ ನಡೆಯುತ್ತಾರೆ ಆದ್ದರಿಂದ, ಸಾರ್ವಜನಿಕರಿಗೆ ಅನುಕೂಲವಾಗತಕ್ಕ ಕೆಲಸ ಕಾರ್ಯಗಳಲ್ಲಿ ತಾರತಮ್ಯ ಮಾಡಬಾರದೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ. ಶ್ರೀಮಾನ್ ಕೆ. ಹೆಚ್. ಪಾಟೀಲರು ಕೂಡ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ, ಧಾರವಾಡಕ್ಕೆ ಕೃಷಿ ವಿಶ್ವವಿದ್ಯಾನಿಲಯವನ್ನು ಕೊಡಬೇಕೆಂದು. ನಮ್ಮಲ್ಲಿ ಬೀದರ್, ಗುಲ್ಬರ್ಗ ಮತ್ತು ರಾಯಚೂರು ಹಿಂದುಳಿದ ಭಾಗಗಳು. ಇದು ಅನೇಕ ಸದಸ್ಯರಿಗೆ ಗೊತ್ತಿದೆ ಮತ್ತು ಸರ್ಕಾರಕ್ಕೆ ಕೂಡ ಇದರ ಅರಿವು ಇದೆ ಎಂದು ಭಾವಿಸಿದ್ದೇನೆ. ಏಕೆಂದರೆ ಇದರ ಹಿಂದೆ ನಾವು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಕಮಿಟಿ ಎಂದು ಒಂದು ಕಮಿಟಿಯನ್ನು ನೇಮಿಸಿದ್ದೆವು. ಆ ಕಮಿಟಿಯವರು ಒಂದು ವರದಿಯನ್ನು ಕೊಟ್ಟಂಥವರು ಶ್ರೀ ಬಾಲಸುಬ್ರಹ್ಮಣ್ಯಂ ಅವರು. ಇವತ್ತು ಅವರು ಮುಖ್ಯ ಮಂತ್ರಿಗಳಿಗೆ ಕಾರ್ಯದರ್ಶಿಯಾಗಿದ್ದಾರೆ. ಆ ವರದಿಯಲ್ಲಿ ನಮ್ಮ ಭಾಗದ ರಸ್ತೆ ಸಾರಿಗೆ ಶಾಲೆಗಳ ವಿಷಯದಲ್ಲಾಗಲಿ, ವಿದ್ಯಾಭ್ಯಾಸದ ವಿಷಯದಲ್ಲಾಗಲಿ. ಎಷ್ಟರ ಮಟ್ಟಿಗೆ ಹಿಂದುಳಿದಿದೆ ಎಂಬುದನ್ನೆಲ್ಲ ಸವಿಸ್ತಾರವಾಗಿ ಕೊಟ್ಟಿದ್ದಾರೆ. ಆದುದರಿಂದ ಅಲ್ಲಿ ಕೃಷಿ ವಿಶ್ವವಿದ್ಯಾದಿಲಯವನ್ನು ತೆರೆಯುವುದು ಒಳ್ಳೆಯದು. ಅದಕ್ಕೆ ರಾಯಚೂರಿನಲ್ಲಿ ಬೇಕಾದ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಇದೆ. ಅದಕ್ಕೆ ಏನೇನು ಬೇಕೋ ಆ ಎಲ್ಲಾ ವಾತಾವರಣ ಅಲ್ಲಿದೆ. ಹಿಂದೆ ಮಾನ್ಯ ಬಿ, ಎಲ್. ಗೌಡರು ಕೂಡ ಅಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ತೆರೆಯುತ್ತೇವೆಂದು ಹೇಳಿದ್ದರು.

ಶ್ರೀ ಕೆ. ಹೆಚ್. ಪಾಟೀಲ್,—ಮಾಡುತ್ತೇವೆಂದು ಹೇಳಿ ಕೈಬಿಟ್ಟರು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದು ಏನೇ ಇರಲಿ. ಇವತ್ತಿನ ದಿವಸ ಸರ್ಕಾರವಂತೂ ಇದೆ. ಇವತ್ತು ರಾಯಚೂರು ಮತ್ತು ಧಾರವಾಡದಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಮಾಡಿಕೊಟ್ಟರೆ ಆ ಭಾಗದ ವಿದ್ಯಾರ್ಥಿಗಳಿಗೆ ದೊಡ್ಡ ಸಹಾಯ ಮಾಡಿದಂತಾಗುತ್ತದೆಂದು ತಮ್ಮ ಮೂಲಕ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಕೊನೆಯದಾಗಿ, ಮಾನ್ಯ ಹೆಗಡೆಯವರು ಅವರಿಗೆ ಏನೇನು ಬೇಕಿತ್ತೋ ಅವೆಲ್ಲವನ್ನು ಮಾನ್ಯ ರಾಜ್ಯಪಾಲರ ಮುಖಾಂತರ ಹೇಳಿಸಿ ಒಂದು ರಾಜಕೀಯ ಕಹಿ ವಾತಾವರಣವನ್ನು ಉಂಟು ಮಾಡಿದ್ದಾರೆಂದರೆ ತಪ್ಪಾಗಲಿಕ್ಕಿಲ್ಲ. ಆದರೆ ಒಂದು ಮಾತು ಹೇಳುತ್ತೇನೆ. ಆ ಕಡೆ ಇರತಕ್ಕ ಮಿತ್ರರು

ನಾವು ಹಿಂದೆ ಸಂಸ್ಥಾ ಕಾಂಗ್ರೆಸ್ಸಿನಲ್ಲಿದ್ದೆವು, ಇವತ್ತು ಜನತಾ ಪಕ್ಷದ ವತಿಯಿಂದ ಅಧಿಕಾರಕ್ಕೆ ಬಂದಿದ್ದೇವೆಂಬುದನ್ನು ಮರೆಯಬಾರದು. ಹಿಂದೆ ಅಂದರೆ ೧೯೭೧ರಲ್ಲಿ ಶ್ರೀಮಾನ್ ಹೆಗಡೆಯವರು ಏನು ಒಂದು ಭಾಷಣವನ್ನು ಮಾಡಿದ್ದರು ಅದನ್ನು ನಾನು ಇಲ್ಲಿ ಕ್ವೋಟ್ ಮಾಡುತ್ತೇನೆ.

> "A we meet to-day, a n'w chapter in the political history in this country has been opened up. The fifth General Elections to the Lok Sabha are just over and the Prime Minister Smt. Indira Gandhi has scored an epoch-making victory. The massive support she got from the people of this country including the people of Mysore testifies that she is the undisputed leader of the country. Every democrat must respect the verdict of the people. The uncertainty that cloused the central leadership and its dependence on certain undesirable political forces must now come to an end and we should now be able to look forward to a period of stability and single-minded effort to bring prosperity to the millions of poor of the country."

ಈ ಮಾತನ್ನು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ೧೫ನೇ ಮಾರ್ಚ್ ೧೯೭೧ರಲ್ಲಿ ಹೇಳಿದ್ದು. ಮುಂದೆ ಏನು ಹೇಳುತ್ತಾರೆಂದರೆ, 'This state could take legitimate pride in the achievement in the 10years passed "

೩-೦೦ ಪಿ. ಎಂ.

ಈ ಸ್ಟೇಟ್‌ಮೆಂಟಿನ ಅರ್ಥ ಏನು ? ಮೇಲೆ ಹೇಳಿದ್ದು ಏನು ? ಕೆಳಗೆ ಹೇಳಿದ್ದು ಏನು ? ಇಷ್ಟೆಲ್ಲಾ ಹಿಂದೆ ಹೇಳಿದವರು ನಿಮಗೆ ಸ್ವಲ್ಪವಾದರೂ ಸೌಜನ್ಯ ಇಲ್ಲ. ಬಜೆಟ್ ಭಾಷಣದಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಹೆಸರನ್ನು ಪ್ರಸ್ತಾಪ ಮಾಡಲಿಲ್ಲ. ಅವರ ಕೊಲೆ ಆದಮೇಲೆ ಅವರ ಬಗ್ಗೆ ಒಂದು ವಾಕ್ಯವಾದರೂ ಬರೆಯುವುದಕ್ಕೆ ಏಕೆ ಹಿಂಜರಿದಿರಿ ? ಇದನ್ನು ನೋಡಿ ನಿಜವಾಗಿಯೂ ವ್ಯಥೆ ಪಡಬೇಕಾಗಿದೆ. "The country has witnessed a tragic event a few months ago" ಶ್ರೀಮತಿ ಇಂದಿರಾಗಾಂಧಿಯವರ ಹೆಸರನ್ನು ಮೆನ್‌ಷನ್ ಮಾಡುವುದು ಹಿಂಜರಿಯುತ್ತೀರಿ. ತಮಗೆ ಬೇಕಾದಾಗ ಅನ್‌ಡಿಸ್ಪ್ಯೂಟೆಡ್ ಲೀಡರ್ ಎಂದು ಹೇಳುತ್ತೀರಿ. ಇವತ್ತು ಏತಕ್ಕೆ ಹೇಳುವುದಿಲ್ಲ ? ಇವತ್ತು ರಾಜಕೀಯವಾಗಿ ಅವರ ಹೆಸರು ಹೇಳಿದರ ತಪ್ಪಾಗುತ್ತದೆಯೆ ? ಅವರ ನಿಧನದ ಬಗ್ಗೆ ಒಂದು ವಾಕ್ಯ ಹೇಳಿದ್ದರೆ ನಿಮ್ಮ ಗಂಟು ಏನು ಹೋಗುತ್ತಿತ್ತು ? ತಮ್ಮ ಈ ರೀತಿಯ ವರ್ತನೆ ಸರಿಯಲ್ಲ. ಗವರ್ನರ್ ಮುಂತಾದ ಅನೇಕ ಅಪ್ರಸ್ತುತವಾದ ಮಾತುಗಳನ್ನು ಹೇಳಿಸಿದ್ದೀರಿ. ಇಂಥ ಭಾಷಣಕ್ಕೆ ನಮಗೆ ಸಪೋರ್ಟ್ ಕೊಡುವುದಕ್ಕಾಗುವುದಿಲ್ಲವೆಂದು ಇಷ್ಟು ಮಾತ್ರ ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಸ್ವಲ್ಪ ಹೆಚ್ಚಿನ ಕಾಲ ಕೊಟ್ಟಿದ್ದಕ್ಕಾಗಿ ಅವರಿಗೂ ವಂದಿಸಿ ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಯು ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಲಿಖಿತ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸುತ್ತಾ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ. ಈ ಮೌಲ್ಯಾಧಾರಿತ ರಾಜಕಾರಣ ಎಂಬ ಶಬ್ದವನ್ನು ನಾನು ಇಲ್ಲಿ ಬಹಳ ದಿವಸಗಳಿಂದಲೂ ಕೇಳುತ್ತಿದ್ದೇನೆ. ಅದರ ಬಗ್ಗೆ ಕಾಂಟರ್‌ವರ್ಷಿಯಲ್ ಒಪೀನಿಯನ್ ಕಾಣುತ್ತಿದೆ. ನಮ್ಮ ರಾಜ್ಯಪಾಲರು "ಕರ್ನಾಟಕದ ಜನತೆ ಪ್ರಬುದ್ಧ ಜನತೆ, ಮೌಲ್ಯಾಧಾರಿತ ರಾಜಕೀಯದಲ್ಲಿ ನಿಷ್ಠೆಯುಳ್ಳ ಜನತಾ ಪಕ್ಷವನ್ನು ಆರಿಸಿರುವುದು ನನಗೆ ತುಂಬಾ ಸಂತೋಷವನ್ನುಂಟು ಮಾಡಿದೆ" ಎಂದು ಹೇಳಿದ್ದಾರೆ. ಅಂದರೆ ಜನತಾ ಪಕ್ಷಕ್ಕೆ ಅವರದೇ ಆದ ಮೌಲ್ಯಗಳಿವೆಯೇ ಎಂಬ ಪ್ರಶ್ನೆ ಒಂದು, ಇನ್ನೊಂದು ರಾಜಕೀಯ ಪಕ್ಷಕ್ಕೆ ಅಂಥ ಮೌಲ್ಯಗಳು ಇಲ್ಲವೇ ಎಂಬ ಅನುಮಾನ ಬರುತ್ತದೆ. ರಾಜ್ಯಪಾಲರು ಕೃಷಿ ಮತ್ತು ಶಿಕ್ಷಣ ವಿಭಾಗದ ಬಗ್ಗೆ ಹೇಳಿ ಔದ್ಯಮಿಕ ಸಂಬಂಧಗಳು ಒಟ್ಟಾರೆ ಯಥಾಸ್ಥಿತಿಯಲ್ಲಿತ್ತು ಎಂದು ಹೇಳಿದ್ದಾರೆ, ಯಥಾ

ಸ್ಥಿತಿಯಲ್ಲಿತ್ತು ಅಂದರೆ ಅರ್ಥ ಏನು ? ಎಲ್ಲೂ ಸ್ಟ್ರೈಕ್, ಲಾಕೌಟ್ ಆಗಿಲ್ಲ, ಪೋಲೀಸರಿಂದ ಲಾಠಿ ಚಾರ್ಜ್ ಆಗಿಲ್ಲ ಎಂಬ ರೀತಿಯಲ್ಲಿ ಈ ಮಾತನ್ನು ಹೇಳಿದ್ದಾರೆ. ಬಳ್ಳಾರಿಯಲ್ಲಿ ಕಾರ್ಖಾನೆ ಮೂರು ತಿಂಗಳು ಲಾಕೌಟ್ ಆಗಿತ್ತು. ಬಳ್ಳಾರಿ ಜಿಲ್ಲೆಯವರೇ ಕಾರ್ಮಿಕ ಮಂತ್ರಿಗಳಾಗಿದ್ದರು. ತುಂಗಭದ್ರ ಸ್ಟೀಲ್ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರು ಆಂಧ್ರ ಸರ್ಕಾರದಿಂದ ಕೊಟ್ಟಿರತಕ್ಕ ಇನ್‌ಸೆಂಟೀವ್‌ನಲ್ಲಿ ಒಂದು ತಿಂಗಳ ಸಂಬಳವನ್ನು ನಮಗೆ ಕೊಡಬೇಕೆಂದು ಮುಷ್ಕರ ಹೂಡಿದಾಗ ಮುಖ್ಯ ಮಂತ್ರಿಗಳು ಚುನಾವಣಾ ಪ್ರಚಾರಕ್ಕೆ ಬಂದಿದ್ದರು. ಅವರು ಕಾರ್ಮಿಕ ಮಂತ್ರಿಗಳು ಇಬ್ಬರೂ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದರು. ಆದರೆ ಆ ಆಶ್ವಾಸನೆ ಇನ್ನೂ ಈಡೇರಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಸ್ಪಿನ್ನಿಂಗ್ ಮಿಲ್ ಲೇ ಆಫ್ ಆಗಿದೆ ಎಂದು ಮುಖ್ಯ ಮಂತ್ರಿಗಳ ಮನೆ ಮುಂದೆ ಧರಣಿ ಕುಳಿತಿದ್ದರು. ಇಂಥ ನೂರಾರು ಉದಾಹರಣೆಗಳಿದ್ದರೂ ಔದ್ಯಮಿಕ ಕ್ಷೇತ್ರದಲ್ಲಿ ಶಾಂತಿ ನೆಲೆಸಿತ್ತು ಎಂದು ಹೇಳುವ ಮಾತು ಉತ್ಪ್ರೇಕ್ಷ ಎಂದು ನನಗನ್ನಿಸುತ್ತದೆ. ಮೊನ್ನೆತಾನೆ ಬೆಂಗಳೂರಿನಲ್ಲಿ ಕೆ.ಎಸ್.ಆರ್.ಟಿ.ಸಿ. ಕೆಲಸಗಾರರು ಸ್ಟ್ರೈಕ್ ಮಾಡಿದ್ದಾರೆ. ನೂರಾರು ಜನರನ್ನು ಸಸ್ಪೆಂಡ್ ಮಾಡಿ ವಿಕ್ಟಿಮೈಸ್ ಮಾಡಿದರು. ಕೆ.ಎಸ್.ಆರ್.ಟಿ.ಸಿ.ಯನ್ನು ಸಾರಿಗೆ ಸಂಸ್ಥೆ ಎಂದು ಕರೆಯುವುದಿಲ್ಲ. ಸೋರಿಗೆ ಸಂಸ್ಥೆ ಎಂದು ಕರೆಯುತ್ತಾರೆ, ಸಾರಿಗೆ ಮಂತ್ರಿಗಳು ಅದನ್ನು ಸಾರಿಗೆ ಸಂಸ್ಥೆಯಾಗಿ ಮಾಡುತ್ತೇವೆ ಎಂದು ಹೇಳಿದ್ದಾರೆ. ಅವರು ಅಲ್ಲಿ ನಡೆಯುತ್ತಿರುವ ಸೋರಿಕೆಯನ್ನು ತಡೆದರೆ ಬಹಳ ಸಂತೋಷ. ಮುಷ್ಕರ ಮಾಡಿದಂಥ ಕಾರ್ಮಿಕರನ್ನು ಸಸ್ಪೆಂಡ್ ಮಾಡುತ್ತೀರಿ. ಆದರೆ ಲಕ್ಷಗಟ್ಟಲೆ ತಿನ್ನುತ್ತಿರುವ ಅಧಿಕಾರಿಗಳ ಮೇಲೆ ಏತಕ್ಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ ! ಅವರು ತಿಂದಿರುವುದಕ್ಕೆ ಪುರಾವೆಗಳಿವೆ. ಅಧಿಕಾರಿಗಳು ೧೦೦ ರೂಪಾಯಿಗಿಂತ ಹೆಚ್ಚಿನ ಮೌಲ್ಯದ ಬಹುಮಾನವನ್ನು ಸ್ವೀಕರಿಸಬೇಕಾದರೂ ಕೆ.ಎಸ್.ಆರ್.ಟಿ.ಸಿ. ರೂಲ್ಸ್ ಅಡ್ಡ ಬರುತ್ತದೆ. ಆದರೂ ರಾಯಚೂರು ಜಿಲ್ಲೆಯಲ್ಲಿ ಬಹಿರಂಗವಾಗಿ ಸಾವಿರಾರು ಬಹುಮಾನಗಳನ್ನು ಸ್ವೀಕರಿಸಿರುವ ಸಂದರ್ಭಗಳಿವೆ. ಫೋಟೊ ಇದೆ. ಅದನ್ನು ಸಂದರ್ಭ ಬಂದಾಗ ತೋರಿಸುತ್ತೇನೆ. ತಮ್ಮ ಮೌಲ್ಯಾಧಾರಿತ ರಾಜಕಾರಣ, ದಕ್ಷ ಆಡಳಿತ ಎಂಬ ಪದಗಳ ಅರ್ಥ ನನಗೆ ಆಗುತ್ತಿಲ್ಲ. ಬರಗಾಲದ ಬಗ್ಗೆ ಮಾನ್ಯ ರಾಜ್ಯಪಾಲರು ಹೇಳಿದ್ದಾರೆ. ಬರಗಾಲದ ಬಗ್ಗೆ ಯೋಚನೆ ಮಾಡುವಾಗ ಮಳೆ ಏತಕ್ಕೆ ಕಡಿಮೆಯಾಗುತ್ತದೆ ಎಂಬುದನ್ನು ಆಲೋಚನೆ ಮಾಡಬೇಕು. ಮಳೆ ಏತಕ್ಕೆ ಕಡಿಮೆಯಾಯಿತು ಎಂಬುದನ್ನು ವೈಜ್ಞಾನಿಕವಾಗಿ ಆಲೋಚನೆ ಮಾಡಿದರೆ ಕಾಡುಗಳನ್ನು ಕತ್ತರಿಸುತ್ತಿರುವುದರಿಂದ ಆಗುತ್ತಿದೆ ಎಂದು ಹೇಳಬಹುದು. ನನ್ನ ಕ್ಷೇತ್ರವಾದ ಸೊಂಡೂರು ಕಾಡು ಹೆಚ್ಚಾಗಿರತಕ್ಕ ಪ್ರದೇಶ. ಅಲ್ಲಿ ಮೈನಿಂಗ್ ಇದೆ. ಡೀ-ಫಾರೆಸ್ಟ್ರೇಷನ್ ಮಾಡಿದ್ದಾರೆ ಅಲ್ಲಿ. ಕಾಡು ಕಡಿದಾಗ ಮತ್ತೆ ಅಲ್ಲಿ ಗಿಡ ನೆಡಬೇಕು ಎಂಬ ನಿಯಮ ಇದ್ದರೂ ಕೂಡ ಅದನ್ನು ಮಾಡುತ್ತಿಲ್ಲ. ಆದ್ದರಿಂದ ಕಾಡು ಹಾಳಾಗುತ್ತಿದೆ. ಗಂಧದ ಮರ ಕಳ್ಳಸಾಗಾಣಿಕೆ ಆಗುತ್ತಿದೆ. ಅದರ ಸಂರಕ್ಷಣೆ ಬಗ್ಗೆ ರಾಜ್ಯಪಾಲರು ಹೇಳಿಲ್ಲ. ಕಾಡುಗಳನ್ನು ಹಾಳು ಮಾಡಿರತಕ್ಕ ಶಕ್ತಿಯ ಮೇಲೆ ಸರ್ಕಾರದ ಕಾರ್ಯಕ್ರಮ ಏನು ? ಇದರ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತೂ ಇಲ್ಲ. ಬಡತನ ನಿವಾರಣೆ ಬಗ್ಗೆ ಬಹಳ ಮಾತನಾಡುತ್ತಾರೆ. ಬಡತನದ ಬಗ್ಗೆ ಎಲ್ಲರೂ ಮಾತನಾಡುತ್ತಾರೆ. ಸ್ವಾತಂತ್ರ್ಯ ಬರುವುದಕ್ಕೆ ಮೊದಲು ಮತ್ತು ನಂತರ ಎಲ್ಲರೂ ಬಡತನದ ಬಗ್ಗೆ ಮಾತನಾಡುತ್ತಲೇ ಇದ್ದಾರೆ. ಆದರೆ ಬಡತನ ಜಾಸ್ತಿಯಾಯಿತೇ ವಿನಹ ಕಡಿಮೆಯಾಗಿಲ್ಲ. ಈ ಸರ್ಕಾರ ಏನೋ ಒಳ್ಳೆಯ ಯೋಜನೆಗಳನ್ನು ಹಾಕಿಕೊಂಡಿದೆ. ಆದರೆ ಅದನ್ನು ಕಾರ್ಯರೂಪಕ್ಕೆ ತರುವುದು ಮುಖ್ಯ. ಅದು ಕಾರ್ಯರೂಪಕ್ಕೆ ಬರುತ್ತದೋ ಇಲ್ಲವೋ ಎಂಬುದು ನನ್ನ ಅನುಮಾನ. ತಾಳಿಭಾಗ್ಯ ಯೋಜನೆ ಎರಡು ರೂಪಾಯಿಗೆ ಒಂದು ಕೆ.ಜಿ. ಅಕ್ಕಿ ಕೊಡುವುದು ಇದೆಲ್ಲಾ ಕಾರ್ಯಕ್ರಮ ಇದೆ. ಇದರ ಬಗ್ಗೆ ಒಬ್ಬೊಬ್ಬರು ಒಂದೊಂದು ಅಭಿಪ್ರಾಯವನ್ನು ವ್ಯಕ್ತ ಪಡಿಸಿದ್ದಾರೆ. ಕೇಂದ್ರ ಮತ್ತು ರಾಜ್ಯದ ಸಂಬಂಧ ಸುಧಾರಿಸಬೇಕು ಎಂದು ಹೇಳಿದ್ದಾರೆ. ಆ ಮಾತನ್ನು ನಾನೂ ಒಪ್ಪುತ್ತೇನೆ. ಸಂವಿಧಾನ ತಿದ್ದುಪಡಿ ದಿಸೆಯಲ್ಲಿ ಆಗಬೇಕು ಎಂಬ ಅಭಿಪ್ರಾಯ ಇದೆ. ಇದರ ಬಗ್ಗೆ ಪರಿಶೀಲಿಸಲು ಸರ್ಕಾರಿಯಾ ಆಯೋಗ ಮಾಡಿರುವುದನ್ನು ನಾನು ಸ್ವಾಗತ ಮಾಡುತ್ತೇನೆ. ಕೇಂದ್ರ ಮತ್ತು ರಾಜ್ಯಗಳ ಸಂಬಂಧದ ಸುಧಾರಣೆಗೆ ನಾನೂ ಕೂಡ ಬೆಂಬಲ ವ್ಯಕ್ತಪಡಿಸುತ್ತೇನೆ. ವಿಧವೆಯರ ಮಾಸಾಶನದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ವಿಧವೆಯರಿಗೆ ಮತ್ತು ಗರ್ಭಿಣಿ ಸ್ತ್ರೀಯರಿಗೆ ಮಾಸಾಶನ ಕೊಡುತ್ತೇವೆಂದು ಹೇಳಿದ್ದರು. ಗರ್ಭಿಣಿ ಸ್ತ್ರೀಯರಿಗೆ ಹೆರಿಗೆಯಾಗುವ ಒಂದು ತಿಂಗಳ ಮುಂಚೆ ಹಣ ಕೊಡಬೇಕೆಂದು

ಇದೆ. ಆದರೆ ಹೆರಿಗೆ ಆದ ನಂತರ ಗಂಡ ಬಿ.ಡಿ.ಓ. ಆಫೀಸಿಗೆ ತಿರುಗಿದರೂ ಬಜೆಟ್ಟಿಲ್ಲ, ದುಡ್ಡಿಲ್ಲ, ಬಜೆಟ್‌ನಲ್ಲಿ ಹಣ ಬಂದರೆ ಕೊಡುತ್ತೇವೆ ಎಂದು ಉತ್ತರ ಬರುತ್ತಿದೆ. ನನ್ನ ಹತ್ತಿರ ಇದಕ್ಕೆ ಸಂಬಂಧ ಪಟ್ಟಂತೆ ದಾಖಲೆಗಳಿವೆ. ಗರ್ಭಿಣಿ ಸ್ತ್ರೀಯರು ಜನತಾ ಸರ್ಕಾರದ ಆಶಾಸನವನ್ನು ಕಾದುಕೊಂಡು ಕುಳಿತರೆ ೧೨ ತಿಂಗಳಿಗೆ ಹೆರಿಗೆ ಮಾಡಿಸಿಕೊಳ್ಳಬೇಕಾಗುತ್ತದೆ. ೯ ತಿಂಗಳಲ್ಲಿ ಆಗುವುದಿಲ್ಲ. ಈ ರೀತಿ ಆಗಬಾರದು. ಈ ಯೋಜನೆಯನ್ನು ಸರಿಯಾಗಿ ಕಾರ್ಯರೂಪಕ್ಕೆ ತರುವುದಕ್ಕೆ ಸರ್ಕಾರ ಪ್ರಯತ್ನ ಮಾಡಬೇಕೆಂದು ಹೇಳಬಯಸುತ್ತೇನೆ.

ಇನ್ನು ವೃತ್ತಿ ತೆರಿಗೆ ಬಗ್ಗೆ ಒಂದೆರಡು ಮಾತನಾಡುತ್ತೇನೆ. ಈ ಬಗ್ಗೆ ದೊಡ್ಡ ದೊಡ್ಡ ಭಾಷಣಗಳನ್ನು ಮಾಡಿ ಅಶ್ವಾಸನೆಗಳನ್ನು ಕೊಡುತ್ತಿದ್ದಾರೆ. ಮೊದಲು ಏನು ೧,೨೦೦ ರೂಪಾಯಿ ಬೇಸಿಕ್ ಪೇ ಮತ್ತು ಡಿ. ಎ. ಸೇರಿ ಇರುತ್ತಿತ್ತು ಅದನ್ನು ಲೆಕ್ಕಕ್ಕೆ ತೆಗೆದುಕೊಂಡು ವೃತ್ತಿ ತೆರಿಗೆ ಹಾಕುತ್ತಿದ್ದರು. ಆದರೆ ಇವತ್ತು ಯಾರಿಗೆ ಒಟ್ಟು ಸಂಬಳ ೧೫೦೦ ರೂಪಾಯಿ ಮೀರುತ್ತದೆ ಅಂಥ ವರಿಗೂ ವೃತ್ತಿ ತೆರಿಗೆ ಹಾಕಿದ್ದಾರೆ. ಇದರಿಂದಾಗಿ ನಿಮಗೆ ಯಾರು ಹೆಚ್ಚು ಮತವನ್ನು ಕೊಟ್ಟರೋ ಅಂಥ ಮಧ್ಯಮ ವರ್ಗದವರಿಗೆ ಹೆಚ್ಚು ತೊಂದರೆ ಆಗಿದೆ. ಬಸವನಗುಡಿಯಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡುವ ಸಮಯದಲ್ಲಿ ಇದನ್ನು ವಿತ್‌ಡ್ರಾ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ಇದನ್ನು ಹಿಂದಕ್ಕೆ ಪಡೆಯಬೇಕೆಂದು ಹೇಳುತ್ತೇವೆ. ಅಷ್ಟೇ ಅಲ್ಲದೆ ದೆಹಲಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆ ಆದ ನಂತರ ಸಿಖ್ಖರ ಮೇಲೆ ಏನು ಹತ್ಯೆ ನಡೆಯಿತು ಅದರಿಂದ ಸಾವಿರಾರು ಜನ ಸತ್ತು ಎಷ್ಟೋ ಜನ ನಿರ್ಗತಿಕರಾಗಿದ್ದಾರೆ. ಅವರ ಒಂದು ರಿಲೀಫ್ ಕಮಿಟಿಗೆ ಏನು ೧೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಅದು ಒಳ್ಳೆಯ ಕೆಲಸ. ಅದರ ಜೊತೆಗೆ ಕೇಂದ್ರ ಸರ್ಕಾರ ಒಂದು ಜ್ಯುಡಿಷಿಯಲ್ ಕಮಿಟಿಯನ್ನು ಮಾಡಿ ತಪ್ಪಿತಸ್ಥರನ್ನು ಕಂಡು ಹಿಡಿಯುವ ಬಗ್ಗೆ ಹೇಳಬೇಕಾಗಿತ್ತು. ಅದನ್ನು ಹೇಳಬೇಕೆಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ. ಅನಂತರ ಯೂನಿಯನ್ ಕಾರ್ಬೈಡ್ ದುರಂತದಲ್ಲಿ ನೊಂದಂತಹವರಿಗೆ ಏನು ೧೦ ಲಕ್ಷ ರೂಪಾಯಿ ಕೊಡಲಾಗಿದೆ ಅದನ್ನು ನಾನು ಸ್ವಾಗತಿಸುತ್ತೇನೆ. ಅದರ ಜೊತೆಯಲ್ಲಿ ಏನು ಈ ರೀತಿ ಜನ ಜೀವನದ ಮೇಲೆ ಆಟ ಆಡುವಂತಹ ಮಲ್ಟಿ ನ್ಯಾಷನಲ್ ಕಂಪನಿಗಳು ಇವೆ ಅಂಥವು ಕರ್ನಾಟಕದಲ್ಲಿ ಬರುವುದಕ್ಕೆ ಅವಕಾಶ ಕೊಡಬೇಡಿ. ಹಾಗೆ ಅವಕಾಶ ಕೊಟ್ಟರೆ ಅಲ್ಲಿಯ ರೀತಿ ಇಲ್ಲೂ ಸಾವಿರಾರು ಜನ ಸಾಯಬೇಕಾಗುತ್ತದೆ ಇದನ್ನು ಸರ್ಕಾರ ಗಮನದಲ್ಲಿ ಇಡಬೇಕೆಂದು ಹೇಳುತ್ತೇನೆ. ಇನ್ನು ಮುಖ್ಯವಾಗಿ ವಿಜಯನಗರ ಉಕ್ಕಿನ ಕಾರ್ಖಾನೆ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಹಕ್ಕು ಇದೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಆ ಕ್ಷೇತ್ರದಿಂದ ಬರುವಂತಹವನು ನಾನು. ಅಲ್ಲಿ ಏನು ಶಂಕು ಸ್ಥಾಪನೆ ಮಾಡಲಾಗಿತ್ತೋ ಅದು ಹಾಗೇ ನಿಂತಿರುವುದನ್ನು ನಾವು ದಿನಾ ಬೆಳಿಗ್ಗೆ ಎದ್ದಾಗ ಅದನ್ನು ನೋಡಬೇಕಾಗಿದೆ. ಈ ಕಾರ್ಖಾನೆ ಬಗ್ಗೆ ಎರಡೂ ಕಡೆ ಸದಸ್ಯರು ಮಾತನಾಡಿದ್ದಾರೆ. ಇವತ್ತು ಪವರ್ ಕೊಟ್ಟರೆ ಆ ಕಾರ್ಖಾನೆಯನ್ನು ಕೊಡುತ್ತೇವೆಂದು ಕಾಂಗ್ರೆಸ್ಸಿನವರು ಹೇಳುತ್ತಾರೆ. ವಿಜಯನಗರ ಉಕ್ಕು ಕಾರ್ಖಾನೆ ಮಾಡದೇ ಇರುವುದು ಕಾಂಗ್ರೆಸ್ಸಿನವರ ತಪ್ಪು ಎಂದು ಜನತಾದವರು ಹೇಳುತ್ತಾರೆ. ಆದರೆ ಈ ಬಗ್ಗೆ ಎರಡೂ ಪಕ್ಷಗಳವರ ತಪ್ಪು ಇದೆ ಎಂದು ನಾನು ಹೇಳುತ್ತೇನೆ. ಇದಕ್ಕೆ ಕಾರಣ, ಕೇಂದ್ರದಲ್ಲಿ ಇರುವ ಕಾಂಗ್ರೆಸ್ ಸರ್ಕಾರ ಆ ಬಗ್ಗೆ ಏನೂ ಮಾಡಿಲ್ಲ ಎನ್ನುವುದು ಒಂದಾದರೆ, ಜನತಾ ಪಕ್ಷ ಅಧಿಕಾರದಲ್ಲಿ ಇದ್ದಾಗ ಈ ಬಗ್ಗೆ ಏನೂ ಮಾಡಿತು ಎಂಬ ಬಗ್ಗೆಯೂ ನಾವು ನೋಡಬೇಕಾಗುತ್ತದೆ. ಜನತಾ ಪಕ್ಷ ಅಧಿಕಾರ ದಲ್ಲಿದ್ದಾಗ ಮಾನ್ಯ ಜಾರ್ಜ್ ಫೆರ್ನಾಂಡಿಸ್ ಅವರು ಕೈಗಾರಿಕಾ ಮಂತ್ರಿಗಳಾಗಿದ್ದಾಗ ಏನು ಹೇಳಿಕೆ ಕೊಟ್ಟರು ಎಂಬುದನ್ನು ನಾವು ನೋಡಬೇಕಾಗುತ್ತದೆ. ಆ ಸಮಯದಲ್ಲಿ ವಿಜಯನಗರ ಉಕ್ಕು ಕಾರ್ಖಾನೆ ಬಗ್ಗೆ ಒಂದೂ ಕೂಡ ಕಾಗದ ಪತ್ರ ಬಂದಿರಲಿಲ್ಲವೆಂದು ಗೊತ್ತಾಗುತ್ತದೆ. ರಾಜಕೀಯ ಭಿನ್ನಾಭಿ ಪ್ರಾಯಕ್ಕೆ ಮಾನ್ಯ ಬಿಜು ಪಟ್ನಾಯಕ್ ಅವರು, ಮಾನ್ಯ ಜಾರ್ಜ್ ಫೆರ್ನಾಂಡಿಸ್ ಅವರು ಸೇರಿಕೊಂಡು ಈ ಕಾರ್ಖಾನೆ ಬರದಹಾಗೆ ತಡೆಹಿಡಿದಿದ್ದಾರೆ. ಹಾಗೂ ಮಂಗಳೂರಿನಲ್ಲಿ ಅದೇನೋ ತೈಲ ಶುದ್ಧೀಕರಣ ಘಟಕ ಮಾಡುತ್ತೇವೆಂದು ಹೇಳಿದ್ದಾರೆ. ಈ ರೀತಿ ಮಾಡಿ ರಾಜಕೀಯ ಭಿನ್ನಾಭಿಪ್ರಾಯದಿಂದ ಆ ಕೈಗಾರಿಕೆಯ ವಿಷಯವನ್ನು ಬಿಟ್ಟು ಮತ್ತೆ ಆ ಬಗ್ಗೆ ಜನತಾ ಪಕ್ಷದವರು ಹೇಳಿದರೆ ಅದನ್ನು ನಾವು ಒಪ್ಪುವುದಕ್ಕೆ ತಯಾರು ಇಲ್ಲ. ಇದರಲ್ಲಿ ಕಾಂಗ್ರೆಸ್ಸಿನವರ ತಪ್ಪೂ ಇದೆ ಹಾಗೂ ನಿಮ್ಮದು ತಪ್ಪು ಇದೆ, ನಾವು ಈ ಕಾರ್ಖಾನೆ ಆಗಬೇಕೆಂದು ಹೋರಾಟ ಮಾಡಿ ಸುಮಾರು ೧೫೦೦ ಜನ ಸೈಕಲ್ ರ್‍ಯಾಲಿಯಲ್ಲಿ ಮನವಿ ಅರ್ಪಿಸಲು ಬಂದಾಗ ನಾನೂ ಕೂಡಾ ಸೈಕಲ್‌ನಲ್ಲಿ ಅಲ್ಲಿಂದ ಇಲ್ಲಿಗೆ ಬಂದಿದ್ದೇನೆ. ಆಗ ಮಾನ್ಯ

ಮುಖ್ಯಮಂತ್ರಿಗಳು ಕೊಟ್ಟ ಆಶ್ವಾಸನೆ ನನಗೆ ಇನ್ನೂ ನೆನಪು ಇದೆ. ಇನ್ನು ಒಂದು ತಿಂಗಳ ಒಳಗೆ ಎಲ್ಲಾ ಪಕ್ಷಗಳ ಆಲ್ ಪಾರ್ಟಿ ಡೆಲಿಗೇಷನ್‌ನ್ನು ಡೆಲ್ಲಿಗೆ ತೆಗೆದುಕೊಂಡು ಹೋಗುತ್ತೇನೆ ಹಾಗೂ ಅಗತ್ಯ ಬಿದ್ದರೆ. ಅವಶ್ಯವಾದರೆ ಕರ್ನಾಟಕ ರಾಜ್ಯದ ಬಂದ್ ಮಾಡುವುದಕ್ಕೂ ಕರೆ ಕೊಡುತ್ತೇನೆಂದು ಹೇಳಿದ್ದಾರೆ ಆಂಧ್ರದಲ್ಲಿ ಎನ್. ಟಿ. ಆರ್. ಅವರ ಸರ್ಕಾರ ಬಿದ್ದಾಗ ತಮ್ಮ ಬುನಾದಿ ಎಲ್ಲಿ ಸಡಿಸಲಾಗುತ್ತದೋ ಎಂದು ತಿಳಿದು ಕರ್ನಾಟಕ ಬಂದ್‌ಗೆ ಸಹಕಾರ ಮಾಡಿದಿರಿ. ಆದರೆ ವಿಜಯನಗರ ಉಕ್ಕಿನ ಕಾರ್ಖಾನೆ ಗೋಸ್ಕರ ಏತಕ್ಕೆ ಬಂದ್ ಮಾಡಲಿಲ್ಲ ? ಏಕೆ, ರಾಜಕೀಯವಾಗಿ ಯಾವುದೇ ರೀತಿಯ ಒತ್ತಡ ತಮಗೆ ಇದರಲ್ಲಿ ಬರುವುದಿಲ್ಲವೇ ? ಮೊನ್ನೆ ಪತ್ರಿಕೆಯಲ್ಲಿ ಮಾನ್ಯ ಹೆಗಡೆಯವರು ಹೇಳಿದ ಒಂದು ವಿಷಯವನ್ನು ನೋಡಿದೆ. ಕರ್ನಾಟಕದಲ್ಲಿ ಉಕ್ಕಿನ ಕಾರ್ಖಾನೆ ಮಾಡಲು ಸರಿ ಹೋಗದಿದ್ದರೆ ಬದಲಿ ಪರಿಹಾರ ಕೊಡಿ ಎಂದು ಹೇಳಿದ್ದಾರೆ. ಏಕೆ ಇವರು ಈ ರೀತಿ ಹೇಳಬೇಕಾಗಿತ್ತು ? ಎಂದರೆ ಅದನ್ನು ಕೈಬಿಡಬೇಕು ಎನ್ನುವ ವಿಷಯ ತಮ್ಮ ಮನಸ್ಸಿನಲ್ಲಿ ಇದೆಯೋ ಎಂದು ನಾನು ಕೇಳುತ್ತೇನೆ. ಇದನ್ನು ಕೈ ಬಿಡುವುದು ಬೇಡವೆಂದು ನಾನು ಕೇಳಿಕೊಳ್ಳುತ್ತೇನೆ. ಏನು ೧೯೮೩ ರಲ್ಲಿ ಫೀಜಿಬಿಲಿಟಿ ರಿಪೋರ್ಟ್‌ನ್ನು ಈ ಬಗ್ಗೆ ಕೇಂದ್ರಕ್ಕೆ ಕೊಡಲಾಗಿದೆ ಆದರಲ್ಲಿ ೧೦೦ ಪರ್ಸೆಂಟ್ ನಮ್ಮ ಕಡೆ ಇದೆ. ಅದರಲ್ಲಿ ೧ ಪರ್ಸೆಂಟ್ ಕೂಡಾ ಕಡಿಮೆ ಇಲ್ಲ. ಆ ಬಗ್ಗೆ ನನ್ನ ಹತ್ತಿರ ಪುಸ್ತಕಗಳು ಇವೆ. ಹಿಂದೆ ಇದ್ದಂತಹ ಎಂ. ಎಲ್. ಎ., ಎಂ. ಪಿ. ಗಳಿಗೆ ನಾನು ಆ ಪುಸ್ತಕಗಳನ್ನು ಹಂಚಿದ್ದೇನೆ. ಮಾನ್ಯ ಜೆ. ಎಚ್. ಪಟೇಲ್ ಅವರು ಕರೆಂಟ್ ಕೊಡಲು ಒಪ್ಪಿರುತ್ತಾರೆ ಆದ್ದರಿಂದ ನನ್ನ ಒಂದು ಅಭಿಪ್ರಾಯವೇನೆಂದರೆ, ಈ ಒಂದು ಸದನದ ವತಿಯಿಂದ ಕರ್ನಾಟಕ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಮೇಲೆ ವಿಜಯನಗರ ಉಕ್ಕು ಕಾರ್ಖಾನೆ ಪರವಾಗಿ ಒತ್ತಡವನ್ನು ತರಬೇಕೆಂದು ಹೇಳುತ್ತೇನೆ. ಇನ್ನು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಗೆ ರಕ್ಷಣೆ ಕೊಡುತ್ತೇವೆಂದು ಹೇಳುತ್ತ ಬಂದಿದ್ದಾರೆ. ಆದರೆ ಒಂದು ಉದಾಹರಣೆಯನ್ನು ನಾನು ಹೇಳುತ್ತೇನೆ. ನಮ್ಮ ಕ್ಷೇತ್ರದ ಒಂದು ಗ್ರಾಮದಲ್ಲಿ ಹರಿಜನರು ಮಠ ಪ್ರವೇಶ ಮಾಡಬಾರದು ಎಂದು ಹೇಳಿ ಸೋಶಿಯಲ್ ಬಾಯ್‌ಕಾಟ್ ಮಾಡಿದ್ದಾರೆ. ಇದು ಸಹಾ ಪತ್ರಿಕೆಗಳಲ್ಲಿ ಬಂದಿರುತ್ತದೆ. ಆದರೆ ಒಬ್ಬ ಮಂತ್ರಿಯೂ ಸಹಾ ಈ ಬಗ್ಗೆ ಒಂದು ಹೇಳಿಕೆಯನ್ನೂ ಕೊಡಲಿಲ್ಲ. ಇಷ್ಟು ಆದರೂ ನಮ್ಮ ಜಿಲ್ಲೆಯ ಉಸ್ತುವಾರಿಯನ್ನು ವಹಿಸಿಕೊಂಡಿದ್ದಂತಹ ಮಂತ್ರಿಯವರು ಒಂದು ಸಾರಿಯೂ ಆ ಕಡೆ ಇಣುಕಿ ನೋಡಲಿಲ್ಲ. ಆದರೆ ಹರಿಜನರ ಪರವಾಗಿ ಇದ್ದೇವೆ ಎಂದು ತಾವು ಹೇಳುತ್ತಿದ್ದೀರಿ. ಇಂತಹ ಉದಾಹರಣೆಗಳು ಬೇಕಾದಷ್ಟು ಇವೆ.

ಶ್ರೀ ಕೆ. ಬಿ. ಶಾಣಪ್ಪ.—ಟ್ರೆಜರಿ ಬೆಂಚ್‌ನಲ್ಲಿ ಯಾರೂ ಮಂತ್ರಿಗಳು ಇದ್ದ ಹಾಗೆ ಕಾಣುತ್ತಾ ಇಲ್ಲ ಏನೋ ಹುಡುಗ ಮಾತನಾಡುತ್ತಿದ್ದಾನೆ ಎಂದು ಹೇಳಿ ಎಲ್ಲರೂ ಹೊರಗೆ ಹೋದರೇನು ?

(ಗೊಂದಲ)

ಶ್ರೀ ಕೆ. ಎಚ್. ಪಾಟೀಲ್.—ನಾವು ಹೇಳಿದ ವಿಷಯ ಮಂತ್ರಿಗಳಿಗೆ ಹೇಗೆ ಗೊತ್ತಾಗುತ್ತದೆ ನಾವು ಹೇಳಿದ ವಿಷಯ ಇಲ್ಲಿ ರೆಕಾರ್ಡ್ ಆಗಿ ಅದು ಪುಸ್ತಕದಲ್ಲಿ ಹೋಗುತ್ತದೆ ಎಂದರೆ ನಾವು ಮಾತ ನಾಡುವುದನ್ನು ಬರೆದು ಕಳುಹಿಸಿದರೆ ಸಾಕಾಗುತ್ತದೆ. ಆಗ ಅದನ್ನು ಇನ್‌ಕಾರ್ಪೊರೇಟ್ ಮಾಡಿಬಿಡ ಬಹುದು. ಆದರೆ ನಾವು ಹೇಳಿದ್ದು ಅವರ ಕಿವಿಗೂ ಬೀಳಬೇಕಾಗುತ್ತದೆ. ಆಗಿಂದಾಗಲೇ ಅಧಿಕಾರಿ ಗಳಿಗೆ ಹೇಳಿ ಏನಾದರೂ ತಿದ್ದುಪಡಿ ಮಾಡುವುದಿದ್ದರೆ ಅದನ್ನು ಮಾಡಬಹುದು. ಹಾಗೂ ಮಂತ್ರಿಗಳ ಮೇಲೆ ಅಪಾದನೆ ಬಂದರೆ ಅದನ್ನು ತಿದ್ದುವ ಬಗ್ಗೆ ವಿಚಾರ ಮಾಡಬಹುದಾಗಿದೆ. ಇವತ್ತು ಯಾವ ರೀತಿ ಇಲ್ಲಿ ಕೆಲಸ ಕಾರ್ಯಗಳು ಆಗುತ್ತಿವೆ ಎನ್ನುವ ವಿಷಯ ಪತ್ರಿಕೆಗಳ ಮೂಲಕ ಜನತೆಗೆ ತಿಳಿಯ ಬೇಕಾಗಿದೆ. ಇವತ್ತು ಮಂತ್ರಿಗಳು ಇಲ್ಲದೇ ಇರುವುದರಿಂದ ಇಲ್ಲಿ ಗೋರ್ಕಲ್ಲ ಮೇಲೆ ಮಳೆ ಹುಯ್ದಂತೆ ಆಗಿದೆ. ನಮಗೂ ತಾಳ್ಮೆ ಎನ್ನುವುದು ಇದೆ. ಇವತ್ತು ಜನರ ಪ್ರತಿನಿಧಿ ಮಾತನಾಡುವಾಗ ಮಂತ್ರಿ ಗಳು ಇರಬೇಕಾಗುತ್ತದೆ. ಆದ್ದರಿಂದ ೨ ನಿಮಿಷ ನಿಧಾನವಾದರೂ ಸರಿಯೇ ಮಂತ್ರಿಗಳನ್ನು ಕರೆಸಿ ಆ ನಂತರ ಕಾರ್ಯಕಲಾಪಗಳನ್ನು ನಡೆಸೋಣ.

ಒಬ್ಬ ಮಾನ್ಯ ಸದಸ್ಯರು.—ಅವರ ಪ್ರಶ್ನೆಗಳಿಗೆ ಉತ್ತರ ಬರದಿದ್ದರೆ ಅವರು ಈ ರೀತಿ ಹೇಳ ಬೇಕು. ಆದರೆ......

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ರಾಜ್ಯಪಾಲರ ಭಾಷಣದ ಬಗ್ಗೆ ವಿರೋಧ ಪಕ್ಷದ ಮಾನ್ಯ ಸದಸ್ಯರೊಬ್ಬರು ಬಹಳ ಸೊಗಸಾಗಿ ಮಾತನಾಡುತ್ತಿದ್ದಾರೆ. ತುಲನಾತ್ಮಕವಾಗಿ ಮಾನ್ಯ ಭೂಪತಿಯವರು ಅಂಕಿಸಂಖ್ಯೆಗಳ ಸಹಿತ ವಿಚಾರಗಳನ್ನು ಮಂಡಿಸುತ್ತಿದ್ದಾರೆ. ಆದರೆ ಒಬ್ಬರೂ ಮಂತ್ರಿಗಳು ಕೂಡಾ ಇಲ್ಲ ಎಂದರೆ ನಿಜವಾಗಿಯೂ......

ಶ್ರೀ ಕೆ. ಎಚ್. ಪಾಟೀಲ್.— ಒಬ್ಬರಾದರೂ ಕ್ಯಾಬಿನೆಟ್ ಮಂತ್ರಿಗಳು ಇಲ್ಲಿ ಇರಬೇಕಾಗುತ್ತದೆ.

ಶ್ರೀ ವೀರಣ್ಣ.—ಮಾನ್ಯ ಪಾಟೀಲರು ಪದವನ್ನು ಉಪಯೋಗಿಸುವಾಗ ಹುಶಾರಾಗಿ ಉಪಯೋಗಿಸಬೇಕಾಗುತ್ತದೆ. ಒಬ್ಬರೇ ಮಂತ್ರಿಗಳು ಹಾಗೂ ಒಬ್ಬರೂ ಮಂತ್ರಿಗಳು ಎನ್ನುವ ಸಮಯದಲ್ಲಿ ಪದ ಉಪಯೋಗ ಮಾಡುವಾಗ ಅವರು ಜಾಣ್ಮೆಯಿಂದ ಅದನ್ನು ಉಪಯೋಗ ಮಾಡಬೇಕೆಂದು ಹೇಳುತ್ತೇನೆ ಈ ರೀತಿ ಪದ ಉಪಯೋಗ ಮಾಡುವಾಗ ನಾಲಿಗೆಯನ್ನು ಜಾಣ್ಮೆಯಿಂದ ಉಪಯೋಗ ಮಾಡಬೇಕಾಗುತ್ತದೆ. ವಿರೋಧ ಪಕ್ಷದ ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಒಪ್ಪಿಕೊಳ್ಳುತ್ತೇನೆ, ಮಾನ್ಯ ರಾಚಯ್ಯನವರು ಕ್ಯಾಬಿನೆಟ್ ಮಂತ್ರಿಗಳು ಮೇಲ್ಮನೆಯಲ್ಲಿ ಅವರಿಗೆ ಸಂಬಂಧಪಟ್ಟ ಒಂದು ವಿಚಾರ ಚರ್ಚೆಗೆ ಬಂದಿದ್ದುದರಿಂದ ಅವರು ಅಲ್ಲಿಗೆ ಹೋಗಿದ್ದಾರೆ. ಅವರ ಪರವಾಗಿ ನಾನು ಇಲ್ಲಿ ಕೂತಿದ್ದೇನೆ. ಇದುವರೆಗೆ ಮಾನ್ಯ ಸದಸ್ಯರು ಏನೇನು ಮುಖ್ಯ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ ಅದೆಲ್ಲವನ್ನೂ ಒಂದು ಅಂಶವನ್ನೂ ಕೂಡ ಬಿಡದಂತೆ ನಮೂದು ಮಾಡಿಕೊಂಡಿದ್ದೇನೆ. ತಾವು ಇಷ್ಟಪಟ್ಟರೆ ನಾನು ಗುರುತು ಹಾಕಿಕೊಂಡಿರುವ ಪ್ರತಿಯೊಂದು ವಿಷಯವನ್ನೂ ಹೇಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ಸ್ವಾಮಿ, ನೀವು ಏನು ಗುರುತು ಹಾಕಿಕೊಂಡಿದ್ದೀರಿ. ಗ್ಯಾಲರಿಯಲ್ಲಿ ಕುಳಿತಿರತಕ್ಕ ಅಧಿಕಾರಿಗಳೂ ಕೂಡ ಎಲ್ಲ ಅಂಶಗಳನ್ನೂ ಗುರುತು ಹಾಕಿಕೊಂಡಿದ್ದಾರೆ. ಆದರೆ ಅದು ಮುಖ್ಯವಲ್ಲ. ಮಾನ್ಯ ಸದಸ್ಯರು ಇಲ್ಲಿ ಏನು ಸಲಹೆ ಸೂಚನೆಗಳನ್ನು ಕೊಡುತ್ತಾರೆಂಬುದನ್ನು ಸಂಬಂಧಪಟ್ಟ ಮಂತ್ರಿಗಳು ಕಿವಿಯಿಂದ ಕೇಳಬೇಕು. ಅವಶ್ಯಕ ಬಿದ್ದರೆ ಅಲ್ಲೇ ಉತ್ತರವನ್ನೂ ಕೂಡ ಕೊಡಬೇಕು,

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ತಮಗೆ ತಾಳ್ಮೆ ಇದೆ. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ......

ಅಧ್ಯಕ್ಷರು.—ಮಾನ್ಯ ಸಚಿವರು ಒಬ್ಬರು ಇಲ್ಲಿ ಕೂತುಕೊಂಡು ತಾವು ಹೇಳುವ ಎಲ್ಲ ಅಂಶಗಳನ್ನೂ ಗುರುತು ಹಾಕಿಕೊಂಡು ಸಂಬಂಧಪಟ್ಟ ಮಂತ್ರಿಗಳು ಬಂದಾಗ ಅವರಿಗೆ ತಿಳಿಸುತ್ತಾರೆ. ಅವರು ನಿಮಗೆ ಸರಿಯಾದ ಉತ್ತರವನ್ನು ಕೊಟ್ಟರೆ ಆಯಿತೋ, ಇಲ್ಲವೋ ?

ಶ್ರೀ ಕೆ. ಹೆಚ್. ಪಾಟೀಲ್.—ಸ್ವಾಮಿ, ಮಂತ್ರಿಗಳು ಇಲ್ಲಿ ಕೂರುವುದಕ್ಕೆ ಆಗದಿದ್ದರೆ ಶ್ರೀಮಂತಿ ಲೀಲಾದೇವಿ ಆರ್. ಪ್ರಸಾದ್‌ರಂಥವರನ್ನಾದರೂ ಇಲ್ಲಿ ಕೂತುಕೊಳ್ಳುವಂತೆ ತಿಳಿಸಿ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಭೂಪತಿಯವರೆ ತಾವು ಭಾಷಣವನ್ನು ಮುಂದುವರಿಸಿ.

ಶ್ರೀ ಯು. ಭೂಪತಿ.—ಅಸಂಘಟಿತ ಕಾರ್ಮಿಕರ ಬಗ್ಗೆ ಕೆಲವು ಮಾತನ್ನು ಹೇಳಿದ್ದಾರೆ. ಸ್ವಾಮಿ ನನ್ನ ಕ್ಷೇತ್ರದಲ್ಲಿ ಮೈನಿಂಗ್ ಇದೆ. ಅಲ್ಲಿ ಸುಮಾರು ೨೦–೨೫ ಸಾವಿರ ಜನ ಕಾರ್ಮಿಕರಿದ್ದಾರೆ. ಅವರು ಕಷ್ಟಪಟ್ಟು ಬೆವರು ಸುರಿಸಿ ಕೆಲಸ ಮಾಡುವಂಥವರು. ಸಂಬಂಧಪಟ್ಟ ಮೈನಿಂಗ್ ಇನ್‌ಸ್ಪೆಕ್ಟರ್‌ವರು ಒಂದು ದಿವಸಕ್ಕೂ ಕೂಡ ಅಲ್ಲಿಗೆ ಹೋಗಿ ಅವರ ಕಷ್ಟಸುಖಗಳನ್ನು ಕೇಳಿಲ್ಲ. ಆದರೆ ಆ ಮೈನಿಂಗ್ ಓನರ್ ಯಾರು ಎಂಬುದು ಈ ಇನ್‌ಸ್ಪೆಕ್ಟರ್‌ರವರಿಗೆ ಚೆನ್ನಾಗಿ ಗೊತ್ತಿದೆ. ಇಂಥ ವಿಚಾರಗಳ ಕಡೆ ಸರ್ಕಾರ ಸೂಕ್ತ ಗಮನಹರಿಸಬೇಕೆಂದು ತಿಳಿಸಬಯಸುತ್ತೇನೆ.

ಇನ್ನು ತಮ್ಮ ಸರ್ಕಾರ ರೈತರಿಗೆ ಬಹಳ ರಿಯಾಯಿತಿಗಳನ್ನು ಕೊಟ್ಟಿದೆ ಎಂದು ಹೇಳುತ್ತೀದ್ದಿರಿ. ತಾವು ಕೊಟ್ಟಿದ್ದೀರಿ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಇಷ್ಟೆ ಸಾಲದು. ಇನ್ನೂ ಕೊಡಬೇಕಾದ ರಿಯಾಯಿತಿಗಳು ಬಹಳಷ್ಟು ಇವೆ. ಇದನ್ನು ಗಮನದಲ್ಲಿಟ್ಟುಕೊಂಡು ರೈತರು ಯಾವಾಗ ಬೇಡಿಕೆಯನ್ನು ತಮ್ಮ ಮುಂದಿಡುತ್ತಾರೆ ಅದನ್ನು ಕೂಡಲೇ ಗಮನಕ್ಕೆ ತೆಗೆದುಕೊಂಡು ಈಡೇರಿಸುವ ಪ್ರಯತ್ನ ಮಾಡಿ. ಇಲ್ಲದೇ ಹೋದರೆ ರೈತರು ತಮ್ಮನ್ನು ಮರೆಯುತ್ತಾರೆಂದು ಹೇಳಬಯಸುತ್ತೇವೆ.

ಮಾನ್ಯ ಅಧ್ಯಕ್ಷರೆ, ಇನ್ನೊಂದು ಮಾತನ್ನು ತಮಗೆ ಹೇಳಬೇಕೆಂದಿದ್ದೇನೆ. ನಮ್ಮ ದೇಶದ ರಾಜಕೀಯ ಮೌಲ್ಯಗಳ ಬಗ್ಗೆ ಮಾತನಾಡುವಾಗ ನಾವು ಒಂದು ಮಾತನ್ನು ಹೇಳುತ್ತಿರುತ್ತೇವೆ. ಈ ಸಂದರ್ಭದಲ್ಲಿ ನನಗೆ ಮಾನ್ಯ ಕುವೆಂಪುರವರ ಒಂದು ಉಕ್ತಿ ಜ್ಞಾಪಕಕ್ಕೆ ಬರುತ್ತದೆ. ಏಕೆಂದರೆ ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶ ಯಾವರೀತಿ ಇತ್ತು, ಇವತ್ತು ಯಾವರೀತಿ ಆಗಿದೆ ಎನ್ನುವ ಬಗ್ಗೆ ಬಹಳ ಸೊಗಸಾಗಿ ಹೇಳಿದ್ದಾರೆ.

‘ಹಿಂದೆ ಗುರುವಿದ್ದ. ಮುಂದೆ ಗುರಿಯಿತ್ತು.
ಸಾಗಿತ್ತು ವೀರರ ದಂಡು,
ಹಿಂದೆ ಗುರುವಿಲ್ಲ, ಮುಂದೆ ಗುರಿಯಿಲ್ಲ,
ಸಾಗಿದೆ ಹೇಡಿಗಳ ಹಿಂಡು,’

ಈ ಮಾತನ್ನು ನಾನು ಹೇಳಿದ್ದಲ್ಲ. ಮಾನ್ಯ ಕುವೆಂಪುರವರು ಹೇಳಿರತಕ್ಕದ್ದು. ಈ ಮಾತು ನಮ್ಮ ದೇಶದ ಪರಿಸ್ಥಿತಿಗೆ ನೂರಕ್ಕೆ ನೂರರಷ್ಟು ಅನ್ವಯವಾಗುತ್ತದೆ.

ಒಬ್ಬ ಮಾನ್ಯ ಸದಸ್ಯರು.—ಇದನ್ನು ಯಾವತ್ತು ಹೇಳಿದ್ದು, ಎಲ್ಲಿದೆ ಎಂಬುದನ್ನು ಹೇಳುತ್ತೀರಾ?

ಶ್ರೀಯುತ ಭೂಪತಿ —ಇದು ಯಾವ ಪುಸ್ತಕದಲ್ಲಿದೆ ಎಂಬುದನ್ನು ನಾನು ತಂದು ತೋರಿಸುತ್ತೇನೆ ವಿಷಯವನ್ನು ತಿಳಿದುಕೊಳ್ಳದೆಯೇ ಮಾತನಾಡತಕ್ಕ ಮೂಢ ನಾನಲ್ಲ. ಇವತ್ತು ನಮ್ಮ ರಾಜ್ಯದಲ್ಲಿ ರಾಜ್ಯಪಾಲರ ಹುದ್ದೆ ಇರಬೇಕೆ? ಬೇಡವೇ? ಎನ್ನುವ ಮಟ್ಟಕ್ಕೆ ಹೋಗಿದೆ. ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಬಹಳ ಉತ್ಪ್ರೇಕ್ಷೆಯಿಂದ ಹೇಳಿದ್ದಾರೆ. ಅದು ಏನಾದರೂ ಇರಲಿ ಜನತಾ ಸರ್ಕಾರದ ಮಂತ್ರಿಗಳಲ್ಲಿ ನಾನು ಕೇಳುವುದಾದರೂ ಇಷ್ಟೆ. ಕಾಂಗ್ರೆಸ್ ಸರ್ಕಾರಕ್ಕೆ ಹೋಲಿಸಿದರೆ ವಿರೋಧ ಪಕ್ಷದಲ್ಲಿರ ಬೇಕಾದ ನೀವು ಆಡಳಿತ ಪಕ್ಷದಲ್ಲಿ ಕುಳಿತಿದ್ದೀರಿ ಎಂಬುದನ್ನು ಮರೆಯಬಾರದು. ನಿಮಗೆ ಚಾಕಚಕ್ಯತೆ ಇದೆ, ನಾಲಿಗೆ ಚೂಟಿಯಾಗಿದೆ, ಆದ್ದರಿಂದ ಈ ರೀತಿ ಭಾಷಣ ಮಾಡುತ್ತಿದ್ದೀರಿ. ಕೇವಲ ಭಾಷಣ ಮಾಡುವುದರಿಂದಲೇ ನೀವು ಬುದ್ಧಿವಂತರು ಎಂದು ತಿಳಿದುಕೊಳ್ಳಬೇಡಿ. ನಿಮ್ಮ ಪಕ್ಷದ ಘೋಷಣೆಯಲ್ಲಿ ಹೇಳಿರುವುದನ್ನೆಲ್ಲಾ ನೀವು ಕಾರ್ಯಗತ ಮಾಡಲು ಆಸಕ್ತಿ ವಹಿಸಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶವನ್ನು ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೀರಯ್ಯಸ್ವಾಮಿ ಮಹಾಲಿಂಗಯ್ಯ (ಚಿಂಚೋಳಿ)—ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾನ್ಯ ಬಂಗಾರಪ್ಪನವರೂ ಮತ್ತು ಮಾನ್ಯ ಕೆ. ಹೆಚ್. ಪಾಟೀಲ್‌ರವರೂ ಮಾಡಿದ ವಾದಕ್ಕೆ ನನ್ನ ಸಂಪೂರ್ಣ ಬೆಂಬಲವನ್ನು ವ್ಯಕ್ತ ಪಡಿಸುತ್ತೇನೆ. ಆದರೆ ಹೆಚ್ಚಿನ ವಿಷಯಗಳನ್ನು ಹೇಳುವುದಕ್ಕೆ ಬಯಸದೆ ರಾಜ್ಯಪಾಲರ ಭಾಷಣದಲ್ಲಿ ಏನಿದೆ ಎಂಬುದನ್ನು ಪೂರ್ಣವಾಗಿ ಓದಿ ಮನನ ಮಾಡಿಕೊಂಡರೆ ಬಹಳಷ್ಟು ಕಡೆಗಳಲ್ಲಿ ಯಾವ ನಿರ್ದಿಷ್ಟವಾದ ಆಶ್ವಾಸನೆಗಳೂ ಇಲ್ಲದೆ ಕೇವಲ ಪರಿಶೀಲಿಸುತ್ತೇನೆ, ಉದ್ದೇಶಿಸಲಾಗಿದೆ. ಬಯಸುತ್ತೇನೆ ಎಂದು ಹೇಳಿರುವುದೇ ಕಂಡುಬರುತ್ತದೆ.

ಇನ್ನು ರಾಜ್ಯದಲ್ಲಿರತಕ್ಕ ರೈತರ ಬಗ್ಗೆ ಹೇಳುತ್ತಾ ನೀರಾವರಿಯ ಬಗ್ಗೆ ಹೊಸ ಶಾಸನದ ಮೇರೆಗೆ ರಚಿತವಾಗತಕ್ಕ ಪ್ರತಿಯೊಂದು ಮಂಡಲ್ ಪಂಚಾಯತ್ ಪ್ರದೇಶದಲ್ಲೂ ಕನಿಷ್ಠ ೨೫೦ ಎಕರೆಯಷ್ಟು ಜಮೀನನ್ನು ನೀರಾವರಿಗೆ ಒಳಪಡಿಸುವ ಉದ್ದೇಶ ಇಟ್ಟುಕೊಂಡಿರುವುದಾಗಿ ಹೇಳಿದ್ದಾರೆ. ಈಗ ನಮ್ಮ ರಾಜ್ಯದಲ್ಲಿ ಎಷ್ಟರಮಟ್ಟಿಗೆ ನೀರಾವರಿ ಸೌಲಭ್ಯವನ್ನು ಒದಗಿಸಲಾಗಿದೆ ಎಂಬುದು ತಮಗೆಲ್ಲರಿಗೂ ತಿಳಿದೇ ಇದೆ. ಆದರೆ ಮಾನ್ಯ ರಾಜ್ಯಪಾಲರು ತಿಳಿಸಿರುವಂತೆ ಪ್ರತಿಯೊಂದು ಮಂಡಲ್ ಪಂಚಾಯತ್‌ನಲ್ಲೂ ಕೇವಲ ೨೫೦ ಎಕರೆಯನ್ನು ಇವರು ನೀರಾವರಿಗೆ ಒಳಪಡಿಸುವುದು ಎಂದರೆ ಇದು ಏನೇನೂ ಸಾಲದು. ರೈತರು ಬೆಳೆದ ಮಾಲಿಗೆ ಸೂಕ್ತ ಬೆಲೆಯನ್ನು ಕೊಡಿಸುವ ವಿಚಾರದಲ್ಲಿ ಎಲ್ಲೂ ಸ್ಪಷ್ಟವಾದ ಹೇಳಿಕೆ ಇಲ್ಲ. ಆದ್ದರಿಂದ ಸರ್ಕಾರ ಈ ದಿಸೆಯಲ್ಲಿ ಯೋಗ್ಯ ಕ್ರಮವನ್ನು ತೆಗೆದುಕೊಂಡರೆ ಅನುಕೂಲವಾಗುತ್ತದೆ. ಉದ್ಯೋಗ ಖಾತರಿ ಯೋಜನೆಯಲ್ಲಿ ತಾರತಮ್ಯ ಇಲ್ಲದೆ ಇಡೀ ರಾಜ್ಯಕ್ಕೇ ಇದು ಅನ್ವಯಿಸುವಂತೆ ವಿಸ್ತರಿಸಲಾಗುವುದು ಎಂದು ಹೇಳಿದ್ದಾರೆ. ಇದು ಎಷ್ಟರಮಟ್ಟಿಗೆ ಸಾಧ್ಯ ಎಂಬುದನ್ನು ನೋಡಬೇಕು, ಅದೇ ರೀತಿ ೨ ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಒದಗಿಸಿ ಕೊಡುತ್ತೇವೆಂದು ಹೇಳಿದ್ದಾರೆ ಇದು ಸಾಧ್ಯವೇ. ಸಾಧ್ಯವಾದರೆ ಎಷ್ಟು ದಿವಸದವರೆಗೆ ಸಾಧ್ಯ ಎಂಬುದನ್ನು ನೋಡಬೇಕಾಗಿದೆ.

ಇನ್ನು ಸಣ್ಣ ಮತ್ತು ಅತಿ ಸಣ್ಣ ಉದ್ಯಮಗಳನ್ನು ಪ್ರೋತ್ಸಾಹಿಸುವ ಮತ್ತು ಕೈಗಾರಿಕಾ ಚಟುವಟಿಕೆ ರಾಜ್ಯದಾದ್ಯಂತ ಸಮಪ್ರಮಾಣದಲ್ಲಿ ಹರಡುವಂತೆ ನೋಡಿಕೊಳ್ಳುವ ತನ್ನ ಕಾರ್ಯ ನೀತಿಯನ್ನು ನನ್ನ ಸರ್ಕಾರ ಮುಂದುವರಿಸುತ್ತದೆ ಎಂದು ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿಕೊಂಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಅತಿ ಹಿಂದುಳಿದ ಪ್ರದೇಶವಾದ ಹೈದರಾಬಾದ್ ಕರ್ನಾಟಕದಲ್ಲಿ ಸಣ್ಣ ಉದ್ಯಮಗಳು ಬಹಳ ಕಡಿಮೆ ಸಂಖ್ಯೆಯಲ್ಲಿವೆ. ಕಳೆದ ಎರಡು ವರ್ಷದಲ್ಲಿ ಈ ಭಾಗದಲ್ಲಿ ಹೇಳಿಕೊಳ್ಳುವ ರೀತಿಯಲ್ಲಿ ಈ ಸರ್ಕಾರ ಸಣ್ಣ ಉದ್ಯಮಗಳನ್ನು ಸ್ಥಾಪಿಸಲು ಕ್ರಮವನ್ನು ಕೈಗೊಂಡಿಲ್ಲ. ಒಟ್ಟಾರೆ ಹೇಳುವುದಾದರೆ ಹೈದರಾಬಾದ್ ಕರ್ನಾಟಕದ ಬಗ್ಗೆ ಈ ಸರ್ಕಾರದವರು ಮಲತಾಯಿ ಧೋರಣೆಯನ್ನು ತಳೆದಿರುವಂತೆ ಕಾಣುತ್ತದೆ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುವುದಾದರೆ ಕ್ಯಾಬಿನೆಟ್ ಮಂತ್ರಿಮಂಡಲದಲ್ಲಿ ನಮ್ಮ ಜಿಲ್ಲೆಗೆ ಪ್ರಾತಿನಿಧ್ಯವನ್ನೇ ಕೊಟ್ಟಿಲ್ಲ. ಕಲ್ಬುರ್ಗಿ ಜಿಲ್ಲೆಯಿಂದ ನಮ್ಮ ಜನತಾ ಶಾಸಕರು ಯಾರೂ ಆರಿಸಿ ಬಂದಿಲ್ಲವೆಂದು ಜಿಲ್ಲೆಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯವನ್ನೇ ಕೊಟ್ಟಿಲ್ಲ. ನಮ್ಮ ಜಿಲ್ಲೆಯ ಅಭಿವೃದ್ಧಿಗಾಗಿ ಮಂಜೂರಾಗಿದ್ದ ೭೦ ಕೋಟಿ ರೂಪಾಯಿಗಳನ್ನು ಮಾನ್ಯ ಹೆಗಡೆಯವರೆ ಮಂತ್ರಿ ಮಂಡಲದ ಸದಸ್ಯರೊಬ್ಬರು ಬೇರೆ ಜಿಲ್ಲೆಗೆ ವರ್ಗಾಯಿಸಿದ್ದಾರೆಂದು ಕೇಳಿದ್ದೇನೆ. ಈ ಬಗ್ಗೆ ಸರ್ಕಾರ ಯಾವ ಹೇಳಿಕೆಯನ್ನೂ ಕೊಟ್ಟಿಲ್ಲ. ನಮ್ಮ ಹೈದರಾಬಾದ್ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆಯನ್ನು ಈ ಸರ್ಕಾರ ಮಾಡುತ್ತಿದೆ. ಇದು ಸರಿಯಲ್ಲ. ನಮ್ಮ ಭಾಗಕ್ಕೆ ಹೆಚ್ಚಿನ ಗಮನಕೊಡಬೇಕೆಂದು ಹೇಳಿ ಹೈದರಾಬಾದ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಏನು ರಚನೆ ಮಾಡಿದೆ ಅದರ ಸಲಹೆಗಳನ್ನು ಕಾರ್ಯಗತ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

೩-೩೦ ಪಿ. ಎಂ.

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನಾನು ವಂದನಾರ್ಪಣೆಗಳನ್ನು ಸಲ್ಲಿಸುತ್ತಾ ಕೇವಲ ಸಮಯದ ಇತಿಮಿತಿಯನ್ನು ಆದರಿಸಿ ಭಾಷಣವನು ಮುಗಿಸುತ್ತೇನೆ. ನಮ್ಮ ಅನೇಕ ಕಾಂಗ್ರೆಸ್ ಹಿರಿಯರು, ವಿರೋಧ ಪಕ್ಷದ ಘಟಾನುಘಟಿಗಳು ಮೌಲ್ಯಾಧಾರಿತ ರಾಜಕೀಯದ ಬಗ್ಗೆ ಮಾತನಾಡಿ ನಮ್ಮನ್ನು ಒಂದು ರೀತಿ ನೋಡುತ್ತಿದ್ದಾರೆಂದು ಹೇಳಿದರು. ಗ್ರೀತಿಹಿರಲ್ಲಿ ಮೌಲ್ಯಾಧಾರಿತ ರಾಜಕೀಯದ ಬಗ್ಗೆ ಮಾತನಾಡಿದರೆ ಅದನ್ನು ಒಂದು ಟೀಕಾಸ್ಪದವಾದ ಮಾತು ಎಂದು ತಿಳಿದುಕೊಳ್ಳಬಹುದು. ಕಳೆದ ಮೂವತ್ತೊಂದು ವರ್ಷದ ರಾಜಕೀಯ ಜೀವನದ ಎಲ್ಲ ಭಾಗಗಳನ್ನು ಹೊಲಸುಮಾಡಿ ಬಂದಿರತಕ್ಕಂಥ ಶ್ರೀಮಾನ್ ಕೆ. ಎಚ್. ಪಾಟೀಲರು ಮೌಲ್ಯಾಧಾರಿತ ರಾಜಕೀಯದ ಬಗ್ಗೆ ಮಾತನಾಡಿ ರಾಜ್ಯ ಸರ್ಕಾರದ ನೀತಿಯಮೇಲೆ ತಮ್ಮ ಭಾಷಣವನ್ನು ಮಾಡಿ, ರಾಜ್ಯಪಾಲರು ಕೂಡ ತಮಗೆ ಬಹಳ ಅಪಚಾರ ಮಾಡಿದ್ದಾರೆ ಎಂದು ಹೇಳಿದ್ದಾರೆ. ಅವರಿಗೆ ಒಂದು ಮಾತನ್ನು ಹೇಳಬಯಸುತ್ತೇನೆ. ಶ್ರೀಮಾನ್ ಕೆ. ಎಚ್. ಪಾಟೀಲರು ಅವರ ಸ್ನೇಹಿತರು ರಾಜ್ಯಪಾಲರ ಭಾಷಣವನ್ನು ಅಪಚಾರವೆಂದು ಭಾವಿಸಿಕೊಂಡರೆ ಕೇಂದ್ರ ಸರ್ಕಾರದ ರೈಲ್ವೆ ಸಚಿವರು ಮತ್ತು ಮಾನ್ಯ ಚರಣಸಿಂಗ್‌ರವರ ಭಾಷಣಕ್ಕೂ ಕೂಡ ಇದೇ ಅಲ್ಲವೇ ಅನ್ವಯಿಸುವುದು. ಇದರ ಬಗ್ಗೆ ಹೆಚ್ಚು ವಾದ ವಿವಾದಕ್ಕೆ ಹೋಗುವುದಿಲ್ಲ. ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ನಮ್ಮ ಸರ್ಕಾರ ರಚನೆಯಾಗಿ ಕರ್ನಾಟಕ ರಾಜ್ಯದಾದ್ಯಂತ ಕಲ್ಯಾಣ ರಾಜ್ಯವನ್ನಾಗಿ ಮಾಡಬೇಕೆಂದು ಒಂದು ಹೆಜ್ಜೆ ಮುಂದಿಟ್ಟಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿದರೆ ತಪ್ಪಾಗಲಾರದು. ನನ್ನ ಸಲಹೆ ಏನೆಂದರೆ ನಮ್ಮ ಸರ್ಕಾರವು ಚುನಾವಣೆಯ ಪ್ರಣಾಳಿಕೆಯಲ್ಲಿಯೂ ಮತ್ತು ರಾಜ್ಯಪಾಲರ ಭಾಷಣದಲ್ಲಿಯೂ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಮೊದಲನೆಯದಾಗಿ ಶಾಲಾಮಕ್ಕಳಿಗೆ ಪಠ್ಯಪುಸ್ತಕಗಳನ್ನು ಕೊಡುವುದು, ಒಂದು ಕುಟುಂಬದಲ್ಲಿ ಒಬ್ಬರಿಗೆ ಒಂದು ಉದ್ಯೋಗವನ್ನು ಕೊಡತಕ್ಕಂಥ ವಿಚಾರ, ೨ ರೂಪಾಯಿಗಳಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡತಕ್ಕಂಥ ವಿಚಾರ ಇವೇ ಮುಂತಾದುವು. ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡತಕ್ಕಂಥ ವಿಚಾರದ ಬಗ್ಗೆ ನಾನು ಒಂದು ವಿಚಾರವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಇದೆಲ್ಲ ಕಾಟಚಾರಕ್ಕೆ ಮಾಡತಕ್ಕಂಥ ಯೋಜನೆಗಳೇನು ಅಲ್ಲ. ನಮ್ಮ ಮುಂದೆಯೇ ಕೇಂದ್ರ ಸರ್ಕಾರದವರು ವಿಮಾನ ಪ್ರಯಾಣಿಕರಿಗೆ ಏನೋ ರಿಯಾಯಿತಿಯನ್ನು ಕೊಟ್ಟಿದ್ದಾರೆ. ದೂರದರ್ಶಕ ಯಂತ್ರಗಳಿಗೆ ಲೈಸೆನ್ಸ್ ರದ್ದುಮಾಡಿದ್ದಾರೆ. ನಾನು ಕೇಳುತ್ತೇನೆ. ಈ ಟಿ. ವಿ. ಯನ್ನು ಯಾರು ಸ್ವಾಮಿ ಹೆಚ್ಚಾಗಿ

ಉಪಯೋಗಿಸತಕ್ಕಂಥವರು ! ಈವತ್ತಿನದಿವಸ ಎಷ್ಟು ಪರ್ಸೆಂಟ್ ಬಡಜನರು ಉಪಯೋಗಿಸುತ್ತಾರೆ. ನೀವು ಇಟ್ಟಿರತಕ್ಕಂಥ ಕಾರ್ಯಕ್ರಮ ಬಡವರ ಪರವಾಗಿದಿಯೇ ? ನಿಮ್ಮ ಸರ್ಕಾರದ ಯೋಜನೆಗಳೆಲ್ಲ ಸರ್ಕಾರದ ಪರವಾಗಿದ್ದು ಬಳಿ ಕಾಗದದಲ್ಲಿದ್ದರೆ ಅದು ಕೈಗೆ ಸಿಗುತ್ತದೆಯೇ ? ಕಾಗದ ತೋರಿಸಲಿಕ್ಕೆ ಮಾತ್ರ ಉಳಿದಿದೆ. ಮಾನ್ಯ ವಿರೋಧಪಕ್ಷದ ಸದಸ್ಯರು ನಮ್ಮ ಜಿಲ್ಲೆಯಿಂದಲೇ ಬಂದಿರುತ್ತಾರೆ. ನಾವು ಕೂಡ ಶಾಸನ ಸಭಾ ಸದಸ್ಯರಾಗಿ ಬಂದು ಕೆಲವು ಸಲಹೆಗಳನ್ನು ಕೊಡಬಯಸುತ್ತೇವೆ. ಬಡವರ ಬಗ್ಗೆ ಅನುಕಂಪ ಹೊಂದಿ ಜನತಾ ಸರ್ಕಾರ ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುತ್ತೇವೆಂದು ತನ್ನ ಚುನಾವಣೆ ಪ್ರಣಾಳಿಕೆಯಲ್ಲಿ ಭರವಸೆಯನ್ನು ಕೊಟ್ಟಿದೆ. ನನ್ನ ಸಲಹೆಯಾದರೂ ಏನೆಂದರೆ ಸರ್ಕಾರ ಇದನ್ನು ಸ್ವೀಕಾರಮಾಡಿ ಜಾರಿಗೆ ತರಬೇಕು. ಎರಡು ರೂಪಾಯಿಗಳಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಟ್ಟು ೪೦ ಪೈಸೆಯನ್ನು ಸಬ್ಸಿಡಿ ರೇಟನಲ್ಲಿ ಕೊಟ್ಟು ಇದೆಲ್ಲ ಮಾಡುವುದರ ಬದಲಾಗಿ ೧೯೮೩ನೇ ಇಸವಿಯಿಂದಲೇ ನೂರಾರು ಅನ್ನ ಛತ್ರಗಳನ್ನು ತೆಗೆಯಲಿಕ್ಕೆ ಸಾಧ್ಯವೇ ಎನ್ನುವ ವಿಚಾರವನ್ನು ಮಾಡಬೇಕು. ಏತಕ್ಕೆಂದರೆ ಈಗ ಸಕ್ಕರೆ ಕಂಟ್ರೋಲ್‌ರೇಟ್ ಮೂರು ರೂಪಾಯಿಗಳಿಗೆ ಕೊಟ್ಟರೆ ಅದನ್ನು ಮೂರು ರೂಪಾಯಿಗಳಿಗೆ ಕೊಂಡು ಹೊರಗೆ ನಾಲ್ಕು ರೂಪಾಯಿಗಳಂತೆ ಮಾರಾಟ ಮಾಡತಕ್ಕಂಥ ಜನ ಬೇಕಾದಷ್ಟು ಇದ್ದಾರೆ. ಅದರಂತೆ ಅಕ್ಕಿಯನ್ನು ಕೂಡ ಎರಡು ರೂಪಾಯಿಗೆ ಒಂದು ಕೆ. ಜಿ. ಕೊಟ್ಟರೆ ಅದನ್ನು ಉಡುಪಿ ಹೋಟಲ್‌ಗೆ ಮತ್ತೊಂದು ಹೋಟೆಲ್‌ನವರಿಗೆ ಮೂರು ರೂಪಾಯಿನಂತೆ ಮಾರುತ್ತಾರೆ. ಆ ಹೋಟೇಲ್‌ನವರು ೮೦ ಪೈಸೆಗೆ ಒಂದು ಇಡ್ಲಿಯಂತೆ ಮಾರಾಟ ಮಾಡಿ ಮನೆಗಳಮೇಲೆ ಮನೆಗಳನ್ನು ಕಟ್ಟುತ್ತಿದ್ದಾರೆ. ೪೦ ಪೈಸೆ ಸಬ್‌ಸಿಡೈಸ್ ಮಾಡಿ ೨ ರೂಪಾಯಿ ಗಳಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುವುದಕ್ಕೆ ಬದಲಾಗಿ ೩೦೦ ಕಡೆ ಅನ್ನ ಛತ್ರವನ್ನು ಮಾಡಿ ಬಡವರಿಗೆ ಅನ್ನಹಾಕತಕ್ಕಂಥ ಕಾರ್ಯಕ್ರಮ ಸಾಧ್ಯವೇ ಎನ್ನುವ ವಿಚಾರನ್ನು ಸರ್ಕಾರದವರು ಅರ್ಥೈಸಿ ಕೊಳ್ಳುತ್ತಾರೆಯೇ ಎಂದು ಕೇಳುತ್ತೇನೆ. ಇದರ ಜೊತೆಗೆ ಈವತ್ತು ಮಾನ್ಯ ರಾಜ್ಯಪಾಲರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದು ಏನೆಂದರೆ ವಿಜಯನಗರದ ಉಕ್ಕಿನ ಕಾರ್ಖಾನೆ. ನಮ್ಮ ಎದುರು ಪಕ್ಷದ ಸರ್ಕಾರ ಅಧಿಕಾರದಲ್ಲಿದ್ದಾಗ ಮಾನ್ಯ ಗುಂಡೂರಾಯರು ಮುಖ್ಯ ಮಂತ್ರಿ ಗಳಾಗಿದ್ದು ಶ್ರೀಮತಿ ಇಂದಿರಾಗಾಂಧಿಯವರು ವಿಜಯನಗರದ ಉಕ್ಕಿನ ಕಾರ್ಖಾನೆಗಾಗಿ ಮುನ್ನೂರು ಕೋಟಿ ರೂಪಾಯಿಗನ್ನು ಮಂಜೂರುಮಾಡಿದ್ದಾರೆಂದು ಹೇಳಿ ಈ ಸದನದಲ್ಲಿ ಶ್ರೀಮತಿ ಇಂದಿರಾಗಾಂಧಿ ಯವರಿಗೆ ಅಭಿನಂದನೆಗಳನ್ನು ಸಲ್ಲಿಸಿದಂತದ್ದು ಈ ಸದನದ ಕಾರ್ಯಕಲಾಪಗಳಲ್ಲಿ ಇದೆ. ಬೇಕಾದರೆ ತೆಗೆದುನೋಡಿ. ವಿಜಯನಗರದ ಉಕ್ಕಿನ ಕಾರ್ಖಾನೆ ಸ್ಥಾಪನೆಯಾದರೆ ನಮ್ಮ ರಾಜ್ಯದಲ್ಲಿರತಕ್ಕಂಥ ಲಕ್ಷಾಂತರ ಯುವಕರಿಗೆ ಕೆಲಸ ಸಿಗುತ್ತದೆ. 'ವಿಜಯನಗರದ ಉಕ್ಕು ಕರ್ನಾಟಕದ ಹಕ್ಕು'' ಎಂದು ಹೋರಾಟ ಮಾಡಲು ಸಾವಿರಾರು ಜನ ಯುವಕರು ಬಳ್ಳಾರಿಯಿಂದ ಕಾಲು ನಡಿಗೆಯಲ್ಲಿಯೇ ನಡೆದು ಕೊಂಡು ಬಂದಿರುತ್ತಾರೆ. ಇಂಥ ಒಂದು ಪ್ರಮುಖ ವಿಚಾರಕ್ಕೆ ಕೇಂದ್ರ ಸರ್ಕಾರದವರು ಆದ್ಯತೆಯನ್ನು ಕೊಡದೆ ತೋರಣಗಲ್‌ನಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪನೆ ಮಾಡಲು ಹೊರಟ್ಟಿದ್ದಾರೆ. ವಿಜಯ ನಗರಕ್ಕೆ ಉಕ್ಕಿನ ಕಾರ್ಖಾನೆಯನ್ನು ಕೊಡುವ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಸಂಚನ್ನು ಹೂಡಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ವಿದ್ಯುಚ್ಛಕ್ತಿ ಇಲ್ಲ. ವಿದ್ಯುಚ್ಛಕ್ತಿಯ ಕೊರತೆ ಇದೆ, ಎಲ್ಲಿಯ ತನಕ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲವೋ ಅಲ್ಲಿಯತನಕ ಇದರ ಬಗ್ಗೆ ವಿಚಾರ ಮಾಡು ವಂತೆಯೇ ಇಲ್ಲವೆಂದು ಕೇಂದ್ರದ ಮಂತ್ರಿಗಳು ಹೇಳಿದ್ದಾರೆ. ಈ ರೀತಿಯಾಗಿ ಹೇಳಿಕೆ ನೀಡಿ ಸರ್ಕಾರದ ಮೇಲೆ ಗೂಬೆ ಕೂರಿಸುವ ಕಾರ್ಯದಲ್ಲಿ ಒಂದು ಗುಂಪು ಬಹಳ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದೆ ಎನ್ನುವುದು ನಮ್ಮ ಭಾವನೆಯಾಗಿದೆ.

ಇನ್ನು ಬಿಜಾಪುರ ಜಿಲ್ಲೆ ಒಂದು ದೊಡ್ಡ ಜಿಲ್ಲೆ. ಈ ಜಿಲ್ಲೆಯ ಮೂರನೇ ಒಂದು ಭಾಗ ಬರಗಾಲ ಪೀಡಿತ ಪ್ರದೇಶವಾಗಿದೆ. ರಾಜ್ಯಪಾಲರ ಭಾಷಣದಲ್ಲಿ ಈ ಜಿಲ್ಲೆಗೆ ಶಾಶ್ವತ ಬರಗಾಲ ಪರಿಹಾರ ಕಾಮ ಗಾರಿಗಳನ್ನು ತೆಗೆದುಕೊಳ್ಳುವ ಬಗ್ಗೆ ಯಾವ ಉಲ್ಲೇಖವು ಕೂಡ ಇಲ್ಲದಿರುವುದಕ್ಕೆ ಬಹಳ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಕಳೆದ ೩೦-೩೫ ವರ್ಷಗಳಿಂದ ನಮ್ಮ ಜಿಲ್ಲೆಯ ಉತ್ತರಭಾಗದ ರೈತರು ರಾಜ್ಯ ಪುನರ್ ವಿಸ್ತರಣೆ ವಿಚಾರದಲ್ಲಿ ನೀರಾವರಿ ಯೋಜನೆಗಳ ಬಗ್ಗೆಯೂ ಹೋರಾಟ ಮಾಡುತ್ತಲೇ ಬಂದಿರುತ್ತಾರೆ. ಬಿಜಾಪುರ ಬರಗಾಲದ ಕಾಮಗಾರಿಗಳ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಯಾವ ಉಲ್ಲೇಖವೂ ಕೂಡ ಇಲ್ಲದಿರುವುದು ನಮ್ಮ ದುರ್ದೈವವೆಂದು ಹೇಳಬೇಕಾಗಿದೆ. ಆದ್ದರಿಂದ ಬಿಜಾಪುರ ಜಿಲ್ಲೆಗೆ ಶಾಶ್ವತವಾದ ಪರಿಹಾರ ಯೋಜನೆಗಳನ್ನು ಒದಗಿಸುವ ಬಗ್ಗೆ ತೀವ್ರ ಗಮನವನ್ನು ಹರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸ್ಟೈಪೆಂಡರಿ ನೌಕರರ ಬಗ್ಗೆ ಹೇಳುವುದಾದರೆ ಚುನಾವಣೆ ಸಮಯದಲ್ಲಿ ಭರವಸೆಯನ್ನು ಕೊಟ್ಟಿದ್ದೀರಿ. ನಾವು ಗೆದ್ದು ಬಂದ ಒಂದೆರಡು ತಿಂಗಳಲ್ಲಿಯೇ ಸ್ಟೈಪೆಂಡರಿ ಪದವೀಧರರ ನೌಕರಿಯನ್ನು ಖಾಯಂ ಮಾಡುತ್ತೇವೆಂದು ಹೇಳಿದ್ದರು. ದಿನಾಂಕ ೨-೬-೧೯೮೫ರಿಂದಲೇ ಖಾಯಂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪತ್ರಿಕಾ ಕರ್ತರ ವಿಷಯದ ಬಗ್ಗೆ ಹೇಳುವುದಾದರೆ ನಾನು ಕೂಡ ಒಂದು ಸಣ್ಣ ಪತ್ರಿಕೆಯ ಸಂಪಾದಕನಾಗಿರುತ್ತೇನೆ. ಕೆಲವು ಸಣ್ಣ ಪತ್ರಿಕೆಗಳಿಗೆ ಸರ್ಕಾರವಾಗಲಿ ವಾರ್ತಾ ಇಲಾಖೆಯವರಾಗಲಿ ಏನು ಸಹಾಯವನ್ನು ಕೊಡಬೇಕೋ ಅದನ್ನು ಕೊಡುತ್ತಿಲ್ಲ. ಸಣ್ಣ ಪತ್ರಿಕೆಗಳ ಪರವಾಗಿ ಹೇಳಬೇಕಾದರೆ ಸುಮಾರು ನಾನೂರು ಸಣ್ಣ ಪತ್ರಿಕೆಗಳನ್ನು ನಡೆಸುವವರು ನಮ್ಮ ರಾಜ್ಯದಲ್ಲಿ ಇರಬಹುದು. ಸಣ್ಣ ಪತ್ರಿಕೆಗಳ ಬಗ್ಗೆ ಸರ್ಕಾರದವರು ಗಮನಹರಿಸಿ, ಜವಾಬ್ದಾರಿಯಿಂದ ಕೆಲಸ ಮಾಡುತ್ತಿರುವಂತವರಿಗೆ ಸರ್ಕಾರಿ ಜಾಹೀರಾತನ್ನು ದೊರಕಿಸುವಂತೆ ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ.

ಕೊನೆಯದಾಗಿ ನಾನು ಹೇಳುವುದೇನೆಂದರೆ ಕನ್ನಡ ಆಡಳಿತ ಭಾಷೆ ವಿವಿಧ ಹಂತಗಳಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ತರುವಲ್ಲಿ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಗೋಕಾಕ್ ವರದಿಯ ಮೇಲೆ ಹೋರಾಟ ಮಾಡಿಕೊಂಡು ಬಂದಿಗತಕ್ಕಂಥ ಕನ್ನಡ ಇನ್ನೂ ಅನೇಕ ವಿಧವಲ್ಲಿ ಹೋರಾಟ ಮಾಡಿಕೊಂಡು ಬಂದಿದ್ದರೂ ಕನ್ನಡಕ್ಕೆ ಅಪಚಾರ ನಡೆಯುತ್ತಲೇ ಇದೆ. ದೊಡ್ಡ ದೊಡ್ಡ ಅಧಿಕಾರಿಗಳು ತಮ್ಮ ಮಕ್ಕಳನ್ನು ಕಾನ್ವೆಂಟ್‌ಗೆ ಕಳುಹಿಸಿಕೊಡತಕ್ಕಂಥ ಹವ್ಯಾಸವನ್ನಿಟ್ಟುಕೊಂಡಿದ್ದು ಕನ್ನಡದಲ್ಲಿ ವ್ಯವಹರಿಸಲು ಉದಾಸೀನಭಾವನೆ ತಳೆದಿರುತ್ತಾರೆ. ಅಂಥ ಅಧಿಕಾರಿಗಳನ್ನು ಗುರುತಿಸಿ ನಿರ್ದಾಕ್ಷಿಣ್ಯವಾಗಿ ಸೂಕ್ತ ಕ್ರಮತೆಗೆದುಕೊಳ್ಳಬೇಕು. ಸರ್ಕಾರದ ಪ್ರತಿಯೊಂದ ಹಂತದಲ್ಲೂ ಕನ್ನಡ ಜಾರಿಗೆ ಬರುವಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಮೂರು ಜನ ಸದಸ್ಯರು ಬಂದಿರುತ್ತಾರೆ. ಅವರು ಒಂದು ಕಾರ್ಯಕ್ರಮ ನಡೆಸುವುದೇನೆಂದರೆ ಪ್ರತಿವರ್ಷ ರಾಜ್ಯಪಾಲರು ಭಾಷಣ ಪ್ರಾರಂಭ ಮಾಡುವುದಕ್ಕೆ ಮೊದಲು ಕೇಸರಿ ರುಮಾಲು ಸುತ್ತಿಕೊಂಡು ಬಂದು ಮರಾಠಿ ಭಾಷೆಯಲ್ಲಿ ಏನೋ ಹೇಳುತ್ತಾರೆ. ಏನೋ ಘೋಷಣೆ ಕೂಗಿಕೊಂಡು ಸಭಾತ್ಯಾಗ ಪ್ರತಿಸಂದರ್ಭದಲ್ಲೂ ಮಾಡುತ್ತಾರೆ. ಈ ರೀತಿಯಾದ ಘೋಷಣೆಗಳನ್ನು ಕೂಗಿಕೊಂಡೆ ಓಟು ಪಡೆದುಕೊಂಡು ಬಂದಿರುತ್ತಾರೆ. ಇದರ ಬಗ್ಗೆ ಚಿಂತನೆ ಮಾಡಬೇಕು. ಮಹಾಜನ್ ಕಮೀಷನ್ ಕೊಟ್ಟಿರುವ ತೀರ್ಪನ್ನೇ ಅಂತಿಮ ತೀರ್ಪೆಂದು ಪರಿಗಣಿಸಬೇಕು. ಬೆಳಗಾವನ್ನು ಕರ್ನಾಟಕಕ್ಕೆ ಸೇರಿಸುವ ತೀರ್ಮಾನವನ್ನು ಆದಷ್ಟು ಬೇಗ ತೆಗೆದುಕೊಳ್ಳಬೇಕೆಂದು ಹೇಳಿ, ರಾಜ್ಯಪಾಲರ ಭಾಷಣಕ್ಕೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಎ. ಉಮರಬ್ಬ (ವಿಟ್ಲ).— ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ನಾನು ಮಾತನಾಡುವಾಗ ಮಹಾಭಾರತದ ಅರ್ಜುನನ ನೆನಪಾಗುತ್ತದೆ. ಹೆದರುವವರು ಯಾರು? ಯಾರು ಯಾರ ಮೇಲೆ ಯಾವ ಅಸ್ತ್ರವನ್ನು ಪ್ರಯೋಗ ಮಾಡಬಹುದು ಎನ್ನುವಂಥ ಒಂದು ಅವಕಾಶ, ಪರಿಸ್ಥಿತಿಯನ್ನು ಇವತ್ತು ನೋಡಬಹುದು. "ಕರ್ಮಣ್ಯೇವಾಧಿಕಾರಸ್ತೇ, ಮಾಫಲೇಷು ಕದಾಚನ" ಇಲ್ಲಿ ಮಾತನಾಡುವಾಗ ಒಂದು ಮೂಲ ಭೂತವಾದಂಥ ವಿಚಾರ ನನ್ನ ಮನಸ್ಸಿಗೆ ಹೊಳೆಯಿತು. ಅದೇನೆಂದರೆ ಮೊನ್ನೆ ದಿವಸ ಒಂದು ಚರ್ಚೆಯ ಸಂದರ್ಭದಲ್ಲಿ ನಮ್ಮ ನಾಯಕರಾದ ಮಾನ್ಯ ಬಂಗಾರಪ್ಪನವರು ಯಾವುದೋ ಒಂದು ಆರೋಪವನ್ನು ಮಾನ್ಯ ಮುಖ್ಯಮಂತ್ರಿಯವರ ಮೇಲೆ ಮಾಡಿದಾಗ ಅವರು ಸ್ವಲ್ಪ ಸಿಡುಕಿದರು. ಇದು ಸಹಿಸಲಿಕ್ಕೆ ಸಾಧ್ಯವಿಲ್ಲವೆಂದು ಮಾನ್ಯ ಮಂತ್ರಿಯವರು ಎದ್ದುನಿಂತರುವ ಆರೋಪಗಳನ್ನು ಎದುರಿಸುವಾಗ ಅದನ್ನು ಸಹಿಸಲಿಕ್ಕೆ ಸಾಧ್ಯವಿಲ್ಲ ಎನ್ನುವಂತಹ ಮನೋಭಾವ ಅವರಲ್ಲಿ ಹೇಗೆ ಬೆಳೆಯುತ್ತದೆಯೋ, ಅವರು ಆಶ್ವಾಸನೆಗಳನ್ನು ಕೊಡುತ್ತಾ ಬಂದಾಗ ಅದನ್ನು ಈಡೇರಿಸದೇ ಇದ್ದರೆ ಅದನ್ನು ಕೂಡ ಸಹಿಸಲಿಕ್ಕೆ ಜನತೆಗೆ ಸಾಧ್ಯವಿಲ್ಲವೆನ್ನುವುದನ್ನು ನಾನು ಇಲ್ಲಿ ಹೇಳಬೇಕಾಗಿದೆ. ಅವರು ತಮ್ಮ ಆಶ್ವಾಸನೆಗಳನ್ನು ಈಡೇರಿಸಲಿಲ್ಲ ಎನ್ನುವುದನ್ನು ದೊಡ್ಡ ದೊಡ್ಡ ಉದಾಹರಣೆಗಳ ಮೂಲಕ ಅಲ್ಲ ಚಿಕ್ಕದರ ಮೂಲಕವೇ ಸಾಬೀತು ಮಾಡುತ್ತೇನೆ. ಕವಿ ಶ್ರೀ ಗೋಪಾಲಕೃಷ್ಣ ಅಡಿಗರ ಒಂದು ಮಾತನ್ನು ಇಲ್ಲಿ ನಾನು ನೆನಪು ಮಾಡಿಕೊಳ್ಳಲು ಬಯಸುತ್ತೇನೆ.

"ಆಸೆಯೆಂಬ ತಳ ಒಡೆದ ದೋಣಿಯಲ್ಲಿ ದೂರ ತೀರಯಾನ
ಯಾವ ಲೀಲೆಗೆ ಯಾರೋ ಏನೋ ಗುರಿಯಿಡದೆ ಬಿಟ್ಟ ಬಾಣ"

ಇವತ್ತಿನ ದಿವಸ ಇವರು ಕಳೆ ಒಡೆದ ದೋಣಿಯಲ್ಲಿ ಪ್ರಯಾಣ ಮಾಡುವಂತಾದ್ದು. ಇವರ ಗುರಿ ಎತ್ತ ಎನ್ನುವುದನ್ನು ಸಹ ಅತ್ಯಂತ ಕಳಕಳಿಯಿಂದ ಯೋಚನೆ ಮಾಡುವಂತಹ ಪರಿಸ್ಥಿತಿ ಇದೆ. "ಯಾವುದನ್ನು ಹೇಳಿ ಇವರು ನಡೆಸಿಲ್ಲ," ಎಂದು ತಾವು ಇಲ್ಲಿ ಒಂದು ಪ್ರಶ್ನೆಯನ್ನು ಕೇಳಬಹುದು. ಅಗಾಧವಾದ ಪಾಂಡಿತ್ಯವುಳ್ಳ ಒಬ್ಬ ವಕೀಲನು ನಾನಲ್ಲ, ಒಬ್ಬ ಆರ್ಥಿಕ ತಜ್ಞನೂ ನಾನಲ್ಲ. ಒಬ್ಬ ಸಮಾಜಶಾಸ್ತ್ರದ ವಿದ್ಯಾರ್ಥಿಯಾಗಿ ಕೆಲವು ನೆನಪುಗಳು ನನ್ನ ಮನಸ್ಸಿನಲ್ಲಿ ಏನು ಉಳಿದಿದೆ, ಅದನ್ನು ಹೇಳುವುದಕ್ಕೆ ಇಲ್ಲಿ ಇಚ್ಛೆ ಪಡುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಜನತಾ ಸರ್ಕಾರ ಪ್ರಪ್ರಥಮವಾಗಿ ಆಡಳಿತಕ್ಕೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳಾದ ಹೆಗಡೆಯವರು ಒಂದು ಮಾತನ್ನು ಹೇಳಿದರು. "ನನ್ನ ಸರ್ಕಾರ ಕೇವಲ ಪ್ಲಾಸ್ಟಿಕ್ ಗುಂಡುಗಳನ್ನು ಮಾತ್ರ ಬಳಸುತ್ತದೆ," ಎಂದು ಅವರು ಹೇಳಿದ್ದರು. ಆದರೆ ಅನೇಕ ಕಡೆ ಚಳುವಳಿ ಆದಾಗ ಇದು ಪ್ಲಾಸ್ಟಿಕ್ ಗುಂಡುಗಳಿಂದು ಜನ ಎದೆಗೊಟ್ಟರು. ಆದರೆ, ಅವರುಗಳ ಪ್ರಾಣ ಹೊರಟೇ ಹೋಯಿತು. ಹಲವಾರು ಕಡೆಗಳಲ್ಲಿ ತೀವ್ರತರ ದುರಂತಗಳು ಆಗಿದ್ದರೆ ಅದಕ್ಕೆ ಕಾರಣ ಜನತೆಯನ್ನು ತಪ್ಪು ದಾರಿಗೆ ಎಳೆದದ್ದೇ ಆಗಿದೆ. ಎರಡನೆಯದಾಗಿ ಅಧಿಕಾರ ಲೋಲುಪ್ತತೆಯಲ್ಲಿ ಒಂದು ಮಾತನ್ನು ಹೇಳಿದರು ಏನೆಂದರೆ, ವಿಧಾನಸೌಧ ಎನ್ನುವುದು ಜನರ ಸೌಧ, ಅದಕ್ಕೆ ಬೇಲಿಯೇ ? ಆ ಬೇಲಿಯನ್ನು ಕಿತ್ತು ಹಾಕಬೇಕು ಎಂದರು. ಕೆಲವೇ ಸಮಯದಲ್ಲಿ ಅವರಿಗೂ ಒಳಕ್ಕೆ ಬರುವಂಥ ಸಾಧ್ಯತೆ ಇಲ್ಲದಾಗ ಮತ್ತೆ ಬೇಲಿಯನ್ನು ಹಾಕಿ, ಜನತೆಗೆ ವಿಧಾನಸೌಧದ ಕಾರ್ಯಕಲಾಪಗಳನ್ನು ನೋಡಬೇಕೆಂದರೆ ಗಂಟೆಗಟ್ಟಲೆ ಕಾಯಬೇಕಾದಂಥ ಪರಿಸ್ಥಿತಿ ಬಂದಾಗ, ಇವರಿಗೆ ಪ್ರಥಮ ಚುಂಬನದಲ್ಲೇ ದಂತಭಗ್ನವಾಯಿತು ಎನ್ನುವ ಮಾತನ್ನು ಹೇಳಬೇಕಾಗಿದೆ. ಕಾರಿನ ದೀಪ ಒಂದು ಅಲಂಕಾರಕ್ಕೆ ಇರುವಂಥಾದ್ದು. ಇದು ಆಡಂಬರವಾಗಿರುತ್ತದೆ ಬೇಡ ಎಂದು ಅದನ್ನು ಇವರು ಕಿತ್ತು ಹಾಕಿದರು. ನಿಜ, ಆನಂತರ ಸರಳತೆಯ ಪ್ರದರ್ಶನ ಆಯಿತು. ಆದರೆ, ಯಾರು ಸರಳತೆಯನ್ನು ಬೋಧಿಸಿದರೋ, ಅವರು ಮೊನ್ನೆ ಚುನಾವಣೆಯಲ್ಲಿ ಜಪಾನಿನ 'ಟೊಯೋಟೊ' ವ್ಯಾನನ್ನು ಉಪಯೋಗಿಸಿದರು. ಲಕ್ಷಾಂತರ ರೂಪಾಯಿಗಳಿಂದ ಸಂಸಜ್ಜಿತಗೊಳಿಸಿದ ಈ ವ್ಯಾನಿನಲ್ಲಿ ಚುನಾವಣೆ ಪ್ರಚಾರ ಮಾಡುವಾಗ ಅದು 'ಲಕ್ಷುರಿ' ಅಲ್ಲವೆಂದು ಹೇಳುವುದಾದರೆ ಅವರು ನುಡಿದಂತೆ ನಡೆಯುವ ಜನ ಅಲ್ಲವೆಂದು ನಾನು ಹೇಳಬೇಕಾಗುತ್ತದೆ. ಸಂಪುಟದ ರಾಜೀನಾಮೆ ವಿಚಾರ ಬಂದಾಗಲೂ ಸಹ ಮೊದಲು ಒಂದು ಮಾತು ಹೇಳಿ 'ರಾಜೀನಾಮೆ ಕೊಡುವುದಿಲ್ಲ' ಎಂದು ಹೇಳಿದರು. ಮತ್ತೆ ಮೂರನೇ ದಿವಸ 'ರಾಜೀನಾಮೆ ಕೊಡುತ್ತೇವೆ' ಎಂದು ಹೇಳಿದರು, ಯಾವುದೇ ಸಂದರ್ಭದಲ್ಲೂ ಸರ್ಕಾರದ ಉಸ್ತುವಾರಿಯನ್ನು ವಹಿಸಿಕೊಳ್ಳುವುದಿಲ್ಲ ಎಂದು ಹೇಳಿದವರು, ನಂತರ ಅದಕ್ಕೆ ಒಪ್ಪಿಕೊಂಡರು. ನನ್ನ ಮನಸ್ಸಿನಲ್ಲಿ ಮೂಡಿರತಕ್ಕಂಥ ಒಂದು ಪ್ರಶ್ನೆ ಎಂದರೆ ಇವರಿಗೆ ಇರುವ ಗೊಂದಲ ಏನು ? ಹೇಳಿದ್ದನ್ನು ಮಾಡಲಿಕ್ಕೆ ಸಾಧ್ಯವಿಲ್ಲದೇ ಇರುವಂಥ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯ ಸರ್ಕಾರದ ಮಾನ್ಯ ಸಭಾನಾಯಕರಾದ ಶ್ರೀಮಾನ್ ಹೆಗಡೆಯವರು ಇದ್ದಾರೆ ಎಂದು ನನಗನಿಸುತ್ತದೆ. ಮೊನ್ನೆ ಚುನಾವಣೆಯಲ್ಲಿ ಗೆದ್ದಾಗ ಜನತೆಗೆ ಒಂದು ಮಾತನ್ನು ಮಾನ್ಯ ಹೆಗಡೆಯವರು ಹೇಳಿದರು. ಅವರು ಗೆದ್ದು ಬಂದಂಥ ಕ್ಷೇತ್ರವಾದ ಬಸವನಗುಡಿಗೆ ವಾರಕ್ಕೊಮ್ಮೆ ಶನಿವಾರ ದಿವಸ ಪಾದಯಾತ್ರೆ ಮಾಡಿ ಜನರ ಅಹವಾಲುಗಳನ್ನು ಕೇಳುತ್ತೇನೆ ಎಂದು ಅವರು ಹೇಳಿದ್ದರಲ್ಲ, ಮಾನ್ಯ ಮುಖ್ಯಮಂತ್ರಿಗಳು ಗೆದ್ದಾದ ಬಳಿಕ ಅನೇಕ ಶನಿವಾರಗಳು ದಾಟಿದವು. ಶನಿವಾರ ದಿವಸ ಮುಖ್ಯಮಂತ್ರಿಗಳು ಬರುತ್ತಾರಲ್ಲ ಎಂದು ಬಸವನಗುಡಿ ಕ್ಷೇತ್ರದ ಜನ ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ತಮ್ಮ ಅಹವಾಲುಗಳನ್ನು ಹೇಳಬೇಕೆಂದು ಕಾಯುತ್ತಿದ್ದಾರೆ ಅವರೂ ಸಹ ......

ಒಬ್ಬರು ಮಾನ್ಯ ಸದಸ್ಯರು .— ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ಇದ್ದಾಗ ಮಾತ್ರ ಮತದಾರರ ಬಳಿಗೆ ಶನಿವಾರ ದಿವಸ ಬರುತ್ತೇನೆ ಎಂದು ಹೇಳಿದ್ದರೇ ಹೊರತು, ಬೇರೆ ದಿನಗಳಲ್ಲಿ ಅಲ್ಲ. ಮಾನ್ಯ ಸದಸ್ಯರು ಇದನ್ನು ಸ್ವಲ್ಪ ತಿದ್ದಿಕೊಳ್ಳಬೇಕು.

ಶ್ರೀ ಬಿ. ಎ. ಉಮರಬ್ಬ .— ನನ್ನ ಮಿತ್ರ ಶಾಸಕರು ಹೇಳಿದ ಉತ್ತರದಿಂದ ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿ ಇರುವುದೇ ಇಲ್ಲ ಎನ್ನುವ ಅರ್ಥ ಕೂಡ ಬರುತ್ತದೆ. ಬೆಂಗಳೂರಿನಲ್ಲಿ ಇರಲಿಲ್ಲ ಆದಕಾರಣ ಬರಲಾಗಲಿಲ್ಲ ಎನ್ನುವ ಉತ್ತರ ಕೊಡುವುದಾದರೆ, ಇನ್ನು ಐದು ವರ್ಷಗಳ ನಂತರ ಬೇಕಾದರೆ ಈ ಉತ್ತರ ಕೊಡಬಹುದು ಎಂದು ನಾನು ಹೇಳುತ್ತೇನೆ. ಅದಕ್ಕೆ ಸರಿಯಾದ ಉತ್ತರವನ್ನು ಜನ ಕೊಡುತ್ತಾರೆ. ಬೆಂಗಳೂರಿನಲ್ಲಿ ಇದ್ದಾಗಲೂ ಕೂಡ ಶನಿವಾರ ದಿವಸ ಅವರು ಪಾದಯಾತ್ರೆ

ಮಾಡಿದ್ದಾರೆಯೇ ? ಎನ್ನುವುದನ್ನು ಮಾನ್ಯ ಸದಸ್ಯರು ಸ್ಪಷ್ಟವಾಗಿ ತಿಳಿಸಬೇಕು. ನಾವು ಹೇಳುವುದೇನೆಂದರೆ, ಹೇಳಿದ್ದರಲ್ಲಿ ಸಣ್ಣದನ್ನೂ ಕೂಡಾ ಮಾಡಲಿಕ್ಕೆ ಸಾಧ್ಯವಿಲ್ಲದೇ ಇದ್ದಾಗ, ಬಹಳಷ್ಟು ದೊಡ್ಡ ಆಶ್ವಾಸನೆಯನ್ನು ಹೇಳಿದರೆ ಅದನ್ನು ಮಾಡಲಿಕ್ಕೆ ಸಾಧ್ಯವೇ ? ಈ ಸದನದಲ್ಲಿ ಕೇಂದ್ರ ಸರ್ಕಾರದ ಬಜೆಟ್ ಮೇಲೆ ಕೂಡ ಸಾಕಷ್ಟು ಚರ್ಚೆಯಾಯಿತು. ಮಾನ್ಯ ಮುಖ್ಯ ಮಂತ್ರಿಯವರು ಸಹ ಕೇಂದ್ರ ಬಜೆಟ್ ಮೂಲಕ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ. ಇದನ್ನು ನಮ್ಮ ಕರ್ನಾಟಕ ರಾಜ್ಯದ ಜನತೆಯ ಮುಂದೆ ಇಡಲಿಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದರು. ನಾನು ಮಾನ್ಯ ಮುಖ್ಯಮಂತ್ರಿಯವರನ್ನು ಒಂದು ಪ್ರಶ್ನೆ ಕೇಳುತ್ತೇನೆ ತಾವು ಎಷ್ಟು ವರ್ಷಗಳ ಕಾಲ ಇದೇ ಕೇಂದ್ರದಲ್ಲಿ ಒಬ್ಬ ಪಾರ್ಲಿಮೆಂಟ್ ಸದಸ್ಯರಾಗಿ, ರಾಜ್ಯಸಭೆ ಸದಸ್ಯರಾಗಿ ಇದ್ದಿರಿ ? ಕೇಂದ್ರದಲ್ಲಿ ಬಜೆಟ್ ಮಂಡನೆಯಾದಾಗ ತಾವು ಒಂದೇ ಒಂದು ದಿನವಾದರೂ ನಮ್ಮ ರಾಜ್ಯಕ್ಕೆ ಅನ್ಯಾಯವಾಗಿದೆ ಎಂದು ಒಂದು ಶಬ್ದವಾದರೂ ಹೇಳಿದ್ದು ದಾಖಲೆಯಲ್ಲಿ ಇದೆಯೇ ? ಆಗ ಇಲ್ಲದ ಪ್ರಜ್ಞೆ ಈಗ ದಿಢೀರ್ ಆಗಿ ಬರಲಿಕ್ಕೆ ಕಾರಣವೇನು ? ಲೋಕಸಭೆ, ರಾಜ್ಯಸಭೆಗಳಲ್ಲಿ ಸದಸ್ಯನಿಗಿರುವ ಅವಕಾಶಗಳನ್ನು ಉಪಯೋಗ ಮಾಡಿಕೊಳ್ಳದೆ, ಯಾವ ಚರ್ಚೆಯನ್ನೂ ಮಾಡದೆ, ಕರ್ನಾಟಕ ಜನತೆ ಕಣ್ಣೊರೆಯಂತಕ್ಕಂಥ ಪ್ರಯತ್ನ ಮಾಡದೆ ಇವತ್ತು ಮಾತ್ರ ಮಾಡುತ್ತಿದ್ದೀರಿ ಎಂದರೆ ಇದಕ್ಕೆ ಕಾರಣ ಇದತ್ತು, ಕರ್ನಾಟಕದಲ್ಲಿ ಸಿಕ್ಕಿರುವಂತಹ ರಾಜಕೀಯ ಅಧಿಕಾರ ಏನಿದೆ, ಅದನ್ನು ಗಳಿಸಿಕೊಳ್ಳತಕ್ಕಂಥ ಪ್ರಯತ್ನ ಮಾತ್ರ ತಾವು ಮಾಡುತ್ತಿದ್ದೀರಿ ಜನತೆಯ ಆಶೋತ್ತರಗಳ ಗೋರಿಯ ಮೇಲೆ ರಾಜ್ಯಸೌಧ ಕಟ್ಟುವ ಪ್ರಯತ್ನ ಮಾಡಿದ್ದೀರಿ ಎಂದು ಸ್ಪಷ್ಟ ಮಾತಿನಲ್ಲಿ ಹೇಳಬೇಕಾಗಿದೆ. ಕಳೆದಸಲ ವಿರೋಧ ಪಕ್ಷವಾದ ಕಾಂಗ್ರೆಸ್ ಅಧಿಕಾರಕ್ಕೆ ಬರುವಂತಹ ಪ್ರಯತ್ನ ಮಾಡಿದೆ ಎಂದು ಸಂದರ್ಭದಲ್ಲಿ ಯಾವ ಮೌಲ್ಯಾಧಾರಿತ ರಾಜಕೀಯವನ್ನು ನಮ್ಮ ಮುಂದೆ ಹೇಳುತ್ತಿದ್ದೀರೋ, ತಾವು ಬಹಳ ವ್ಯವಸ್ಥಿತವಾದ ರೀತಿಯಲ್ಲಿ ಪಕ್ಷಾಂತರದ ಪ್ರಯತ್ನಮಾಡಿ ಮಾನ್ಯ ಶಾಂತ ಮೂರ್ತಿಯವರು ಆಗಿರಬಹುದು, ಮಾನ್ಯ ಚೆನ್ನಪ್ಪನವರು ಆಗಿರಬಹುದು. ಯಾರೇ ಆಗಿರಬಹುದು ಉಗ್ರನರಸಿಂಹಪ್ಪ, ಹುಚ್ಚುಮಾಸ್ತಿಗೌಡ ಪ್ರಕರಣಗಳಲ್ಲಿ ತಮ್ಮ ವ್ಯವಸ್ಥಿತವಾದ ಯೋಜನೆ ಎಷ್ಟರ ಮಟ್ಟಿಗೆ ನಡದಿದೆಯೆಂದು ನಾನು ಮತ್ತೆ ಹೇಳಬೇಕೆ ? ಇದೆಲ್ಲಾ ಏನು ಮಾಡಿಸಿದ್ದೀರಿ, ಇದು ಮೌಲ್ಯಾಧಾರಿತ ರಾಜಕಾರಣವನ್ನು ಪ್ರತಿಪಾದಿಸುವ ನೀವು ಆ ಮೌಲ್ಯಗಳನ್ನು ಬಲಿಕೊಟ್ಟಿದ್ದೀರಿ ಎಂಬುದನ್ನು ನೆನಪು ಮಾಡಿಕೊಳ್ಳಬೇಕು ಎಂದು ನಾನು ಇದನ್ನು ತಮ್ಮ ಮನಸ್ಸಿಗೆ ತರುತ್ತಿದ್ದೇನೆ. ಕಳೆದವರ್ಷ ಅವಧಿಯಲ್ಲಿ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಸಾಮಾನ್ಯವಾಗಿ ಶಾಂತಿಯುತವಾಗಿತ್ತು ಎಂದು ಹೇಳಿದ್ದಿರಿ. ಇದು ನಿಜವೇ ಆಗಿದ್ದರೆ ಮೊನ್ನೆ ಇದೇ ಸದನದಲ್ಲಿ ಗೂಂಡಾಗಿರಿ ಹೆಚ್ಚಾಗಿದೆ, ಎಂದು ಮಸೂದೆಯನ್ನು ತರುವಂತಹ ಅವಶ್ಯಕತೆ ಏನಿತ್ತು

ಈ ಬಗ್ಗೆ ನಾನು ಹೆಚ್ಚಿನ ವಿವರಗಳಿಗೆ ಹೋಗುವುದಿಲ್ಲ. ಇನ್ನು ರಾಜ್ಯಪಾಲರ ಭಾಷಣದಲ್ಲಿ ''ಒಟ್ಟು ಹತ್ತು ಎಕರೆ ಮಿಕ್ಕಿ ಭೂಮಿಯ ಹಿಡುವಳಿ ಹೊಂದಿರುವ ಮಾಜಿ ಗೇಣಿದಾರರಿಂದ ಯಾವುದೇ ಮುಂದಿನ ಕಂತುಗಳನ್ನು ವಸೂಲು ಮಾಡದಿರಲು ನಿರ್ಧಾರ ಕೈಗೊಳ್ಳಲಾಗಿದೆ'' ಎಂದು ಹೇಳಿದ್ದಾರೆ. ಆದರೆ ನಮ್ಮ ಕಡೆಯಲ್ಲಿ ಪಿ.ಎಲ್.ಡಿ. ಬ್ಯಾಂಕ್‌ನಿಂದ ನೋಟೀಸ್‌ಗಳು ರೈತರಿಗೆ ಜಾರಿಯಾಗುತ್ತಿವೆ. ಬಾಕಿ ಹಣ ಕಟ್ಟದಿದ್ದರೆ ಮನೆಯ ಸಾಮಾನುಗಳನ್ನು ಜಫ್ತಿ ಮಾಡುತ್ತೇವೆಂದು ಅದರಲ್ಲಿ ಹೇಳಿದ್ದಾರೆ. ಇದು ಸರಿಯಾದ ಕ್ರಮವಲ್ಲ. ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ನಿರ್ಧಾರದ ನೋಟೀಸ್‌ಗಳು ರೈತರಿಗೆ ಹೋಗಿ ಮುಟ್ಟುವಂತಹ ಕ್ರಮವನ್ನು ಮೊದಲು ತಾವು ಕೈಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹಳ್ಳಿಗಳಿಗೆ ಕುಡಿಯುವ ನೀರಿನ ಸೌಕರ್ಯ ಒದಗಿಸಲು ಕೊಳವೆ ಬಾವಿಗಳನ್ನು ತೆಗೆಸಿದ ಮೇಲೆ ಅವು ಸರಿಯಾಗಿ ಕೆಲಸ ಮಾಡುತ್ತಿವೆಯೋ ಅಥವಾ ಇಲ್ಲವೇ ಎಂಬ ಬಗ್ಗೆ ಮತ್ತೊಮ್ಮೆ ಕಣ್ಣೆತ್ತಿ ಸಹ ನೋಡಿರುವುದಿಲ್ಲ. ಇವರು ಹತ್ತಾರು ಕಡೆಗಳಲ್ಲಿ ಕೊಳವೆ ಬಾವಿಗಳನ್ನು ತೆಗೆಸಿದ ಕಡೆಗಳಲ್ಲಿ ಮೂರು ನಾಲ್ಕು ಬಾವಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇಂತಹ ಒಂದು ಪರಿಸ್ಥಿತಿ ಇದ್ದರೂ ಸಹ ನಮಗೆ ನಮ್ಮ ಜಿಲ್ಲಾಧಿಕಾರಿಗಳು ತೆಗೆಸಿರುವಂತಹ ಕೊಳವೆ ಬಾವಿಗಳ ಸಂಖ್ಯೆಯನ್ನು ಕೊಡುತ್ತಾರೆಯೇ ಹೊರತು ನೀರು ಎಷ್ಟು ಪ್ರಮಾಣದಲ್ಲಿ ಒದಗಿಸುತ್ತಿದೆ ಎಂಬ ಬಗ್ಗೆ ಅಂಕಿಅಂಶಗಳನ್ನು ಕೊಡುತ್ತಿಲ್ಲ. ಕೊಳವೆ ಬಾವಿಗಳನ್ನು ತೆಗೆಸಿದ ಮೇಲೆ ಅವು ಕೆಟ್ಟಾಗ ರಿಪೇರಿ ಮಾಡುವಂತಹ ವ್ಯವಸ್ಥೆ ಆಗಬೇಕು. ಇದಕ್ಕಾಗಿ ಏನು ವ್ಯವಸ್ಥೆ ಮಾಡಿದ್ದೀರಿ ಮತ್ತು ಎಷ್ಟು ಹಣವನ್ನು ಇದಕ್ಕಾಗಿ ವಿನಿಯೋಗವಾಗುತ್ತಿದೆ ಎಂಬುದನ್ನು ತಾವು ತಿಳಿಸಬೇಕು.

ಇನ್ನು ವಿಧವೆಯರಿಗೆ ಭತ್ಯೆ ಕೊಡುವ ವ್ಯವಸ್ಥೆ ಸ್ವಾಗತಾರ್ಹವಾದರೂ ಸಹ ನಮ್ಮ ಈಗಿನ ಸಮಾಜದಲ್ಲಿ ಈ ವಿಧವಾ ವೇತನವನ್ನು ಶಾಶ್ವತವಾಗಿ ಮುಂದುವರಿಸಿಕೊಂಡು ಹೋಗುವುದು ಸರಿಯಲ್ಲ ಈ ಭತ್ಯೆ ಕೊಡುವುದನ್ನು ಶಾಶ್ವತಗೊಳಿಸುವುದಕ್ಕೆ ಬದಲು ವಿಧವಾ ವಿವಾಹ ಮಾಡಿಕೊಳ್ಳುವಂತಹ ಒಂದು ಕ್ರಾಂತಿಕಾರಕವಾದಂಥ ವಿಚಾರ ನಮ್ಮೆಲ್ಲರ ಮನಸ್ಸಿನಲ್ಲಿ ಮೂಡಿಬರಬೇಕು. ಇದಕ್ಕೆ ಸೂಕ್ತ ವ್ಯವಸ್ಥೆ ಮಾಡುವುದರ ಮೂಲಕ ಈ ವಿಧವಾ ವೇತನವನ್ನು ಮುಕ್ತಾಯಗೊಳಿಸಬೇಕು. ಈ ಬಗ್ಗೆ ಮೂಲಭೂತವಾಗಿ ಎಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಅನೇಕ ವರ್ಷಗಳ ಹಿಂದೆಯೇ ನಮ್ಮ ಹಿರಿಯರು ಸಹಗಮನ ಪದ್ಧತಿಯನ್ನು ತೊಡೆದುಹಾಕಿದ್ದಾರೆ. ಆದ್ದರಿಂದ ವಿಧವಾ ವಿವಾಹ ಆಗುವವರಿಗೆ ಹೆಚ್ಚಿನ ಉತ್ತೇಜನ ಕೊಡುವಂತಹ ಕಾರ್ಯಕ್ರಮಗಳನ್ನು ಇದರಲ್ಲಿ ಅಳವಡಿಸಿಕೊಳ್ಳಬೇಕೆಂದು ಹೇಳುತ್ತೇನೆ. ವಿದ್ಯುಚ್ಛಕ್ತಿಯ ಕೊರತೆ ಈ ಮನೆಗೂ ಬಂದಿರುವಂತೆ ಕಾಣಿಸುತ್ತಿದೆ. ಆದಕ್ಕಾಗಿ ನನ್ನ ಭಾಷಣ ಆ ಕಡೆಯವರಿಗೆ ಸರಿಯಾಗಿ ಕೇಳಿಸುತ್ತಿಲ್ಲ.

ಶ್ರೀ ಬಿ.ಎ. ಉಮರಬ್ಬ.—ಇಲ್ಲಿಯೇ ಈ ರೀತಿಯಾದರೆ ಇನ್ನು ಹೊರಗಡೆ ಯಾವ ಸ್ಥಿತಿ ಇದೆ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬಹುದು. ಈ ವಿದ್ಯುತ್ ಕಡಿತದಿಂದ ನಮ್ಮ ರಾಜ್ಯದ ಸಣ್ಣ ಸಣ್ಣ ಕೈಗಾರಿಕೆಗಳು ಕೋಟ್ಯಾಂತರ ರೂಪಾಯಿಗಳಷ್ಟು ನಷ್ಟವನ್ನು ಅನುಭವಿಸುತ್ತಿವೆ ಎಂದು ನಾನು ಕೇಳಿದ್ದೇನೆ. ಕೇಂದ್ರ ಸರ್ಕಾರದವರು ವಿದ್ಯುತ್ ಒದಗಿಸಿದರೆ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ ರಾಜ್ಯ ಸರ್ಕಾರದವರು ವಿದ್ಯುತ್‌ನ್ನು ಒದಗಿಸಲು ವ್ಯವಸ್ಥೆ ಮಾಡಬೇಕೇ ಹೊರತು ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭವಾಗಲಿಲ್ಲ ಎಂದು ಹೇಳುವುದು ಸರಿಯಲ್ಲ. ಈ ರೀತಿ ವಿದ್ಯುತ್ ಒದಗಿಸುವುದರ ಮೂಲಕ ಅದರ ಪ್ರಯೋಜನವನ್ನು ಪಡೆಯಬೇಕು. ಈಗಾಗಲೇ ಕೇಂದ್ರದ ನೆರವಿನಿಂದ ನಮ್ಮ ಕರ್ನಾಟಕ ರಾಜ್ಯದಲ್ಲಿ ಬೇರೆಬೇರೆ ಕಾರ್ಖಾನೆಗಳು ಪ್ರಾರಂಭವಾಗಿಲ್ಲವೇ ?

ಒಬ್ಬ ಮಾನ್ಯ ಸದಸ್ಯರು.—ಇನ್ನೊಂದು ಕುಂಟುನೆಪ. ಮದ್ರಾಸ್‌ನಲ್ಲಿರುವ ಕಲ್ಪಾಕಂ ಪರಮಾಣು ವಿದ್ಯುತ್ ಕೇಂದ್ರದಿಂದ ವಿದ್ಯುತ್ ಪಡೆಯುವುದರ ಮೂಲಕ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಕೇಂದ್ರನವರು ಏತಕ್ಕೆ ಪ್ರಾರಂಭ ಮಾಡಬಾರದು ?

ಶ್ರೀ ಕೆ. ಮಲ್ಲಪ್ಪ.—ನಮ್ಮ ರಾಜ್ಯದಲ್ಲಿ ಅನೇಕ ವರ್ಷಗಳಿಂದಲೂ ವಿದ್ಯುತ್‌ನ ಕೊರತೆ ಇದೆ. ಆದ್ದರಿಂದ ಈ ಕಾರಣಕ್ಕೋಸ್ಕರ ವಿಜಯನಗರ ಉಕ್ಕಿನ ಕಾರ್ಖಾನೆಯ ಕೆಲಸವನ್ನು ಮುಂದಕ್ಕೆ ಹಾಕುವುದು ಸರಿಯಲ್ಲ.

ಶ್ರೀ ಬಿ.ಎ. ಉಮರಬ್ಬ.—ವಿಜಯನಗರ ಉಕ್ಕಿನ ಕಾರ್ಖಾನೆ ಪ್ರಾರಂಭವಾಗುವುದು ವಿಳಂಬವಾಗಿದೆ ಎಂಬುದು ನಿಜ. ಆದರೆ ಅದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರದವರು ನಮ್ಮ ರಾಜ್ಯದಲ್ಲಿ ಬೇರೆ ಹಲವಾರು ಕಾರ್ಖಾನೆಗಳನ್ನು ಪ್ರಾರಂಭ ಮಾಡಿದ್ದಾರೆ. ಇದನ್ನು ನಾವೆಲ್ಲರೂ ಮುಕ್ತ ಹೃದಯದಿಂದ ಸ್ವಾಗತ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಝಗಾವ್ ಡಾಕ್ ಲಿ., ನ ವಿಭಾಗವನ್ನು ಪ್ರಾರಂಭ ಮಾಡಿಲ್ಲವೇ ? ಕುದುರೆಮುಖ ಯೋಜನೆಯನ್ನು ಪ್ರಾರಂಭ ಮಾಡಿಲ್ಲವೇ ? ಇಂತಹ ಅನೇಕ ಯೋಜನೆಗಳು ನಮ್ಮ ರಾಜ್ಯದಲ್ಲಿ ಕೇಂದ್ರದವರು ಪ್ರಾರಂಭ ಮಾಡಿದ್ದರೂ ಸಹ ನಮ್ಮ ರಾಜ್ಯದ ಬಗ್ಗೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದ್ದಾರೆಂಬುದು ತಮ್ಮ ಅಭಿಪ್ರಾಯವಾಗಿದ್ದರೆ, ಇಲ್ಲಿ ನೀವೂ ಸಹ ಕೆಲವು ಜಿಲ್ಲೆಗಳ ಬಗ್ಗೆ ಮಲತಾಯಿ ಧೋರಣೆಯನ್ನು ಅನುಸರಿಸುತ್ತಿದ್ದೀರಿ ಎಂದು ನಾವು ಹೇಳಬಹುದು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಿಂದ ೧೫ ಜನ ಶಾಸಕರ ಪೈಕಿ ೧೩ ಜನ ಶಾಸಕರು ಕಾಂಗ್ರೆಸ್ ಪಕ್ಷದಿಂದ ಆರಿಸಿ ಬಂದಿದ್ದಾರೆ. ಇದೇ ಕಾರಣದಿಂದ ಇವೊತ್ತು ನಮ್ಮ ಜಿಲ್ಲೆಯ ಜನರು ಅನೇಕ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ, ಇದಕ್ಕೆ ತಮ್ಮ ಮಲತಾಯಿ ಧೋರಣೆಯೇ ಕಾರಣವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ನಮ್ಮ ಮಂಗಳೂರು ನಗರ ಕಾರ್ಪೊರೇಷನ್ ಅವರು ಅನೇಕ ಯೋಜನೆಗಳನ್ನು ತಯಾರು ಮಾಡಿ ರಾಜ್ಯ ಸರ್ಕಾರದ ಒಪ್ಪಿಗೆಗಾಗಿ ಕಳುಹಿಸಿಕೊಟ್ಟಿದ್ದಾರೆ. ಆದರೆ ಈ ಯಾವ ಯೋಜನೆಗಳಿಗೂ ಸಹ ಒಂದು ಚಿಕ್ಕಾಸು ಕೊಡುವ ಪ್ರಯತ್ನವನ್ನು ರಾಜ್ಯ ಸರ್ಕಾರ ಮಾಡಿಲ್ಲ. ಇದು ಮಲತಾಯಿ ಧೋರಣೆ ಅಲ್ಲವೇ ? ರಾಜ್ಯ ಸರ್ಕಾರದವರು ಹಣ ಕೊಡದ ಕಾರಣ ನಾವು ಏನನ್ನೂ ಮಾಡುವುದಕ್ಕಾಗುತ್ತಿಲ್ಲವೆಂದು ಅಲ್ಲಿನ ಕಾರ್ಪೊರೇಷನ್ ಅವರು ಹೇಳುತ್ತಿದ್ದಾರೆ. ಇದಕ್ಕೆ ತಾವು ಏನು ಹೇಳುತ್ತೀರಿ ?

ಇನ್ನು ತಾಳಿಯ ಭಾಗ್ಯದ ಬಗ್ಗೆ ಇಲ್ಲಿ ಬಹಳಷ್ಟು ಚರ್ಚೆ ನಡೆಯಿತು. ಇದು ಬಹಳ ಸರಳ ಯೋಜನೆಯಾಗಿದೆ. ಇದರಿಂದ ಅನೇಕ ಜನರಿಗೆ ಉಪಯೋಗವಾಗುತ್ತದೆ. ಆದರೆ ಅಲ್ಪಸಂಖ್ಯಾತರ ವರ್ಗವನ್ನು ಇದರಿಂದ ನಾಜೂಕಾಗಿ ಹೊರಗಡೆ ಇಡಲಾಗಿದೆ. ಇದರ ಅರ್ಥವಾದರೂ ಏನು? ಮುಸ್ಲಿಂ ಜನಾಂಗದಲ್ಲಿ, ಕ್ರಿಶ್ಚಿಯನ್ ಜನಾಂಗದಲ್ಲಿ ಸಾಮೂಹಿಕ ವಿವಾಹ ಪದ್ಧತಿಯಾಗಲೀ ಮತ್ತು ತಾಳಿ ಕಟ್ಟುವ ಪದ್ಧತಿಯಾಗಲೀ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಿಮ್ಮ ಕಡೆ ಯಾವ ಪದ್ಧತಿ ಇದೆಯೋ ನನಗೆ ಗೊತ್ತಿಲ್ಲ. ಆದರೆ ನಮ್ಮ ಕಡೆ ಮಾತ್ರ ಮುಸ್ಲಿಂ ಜನಾಂಗದಲ್ಲಿ ಮತ್ತು ಕ್ರಿಶ್ಚಿಯನ್ ಜನಾಂಗದಲ್ಲಿ ಸಾಮೂಹಿಕ ವಿವಾಹ ಪದ್ಧತಿ ಇದೆ ಮತ್ತು ತಾಳಿ ಕಟ್ಟುವ ಪದ್ಧತಿ ಸಹ ಇದೆ.

ಶ್ರೀ ಬಿ.ಎ. ಉಮರಬ್ಬ.—ನಮ್ಮ ಭಾಗದ ಪದ್ಧತಿ ಗೊತ್ತಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳಿದರು. ನಮ್ಮ ಕಡೆ ಸಾಮೂಹಿಕ ವಿವಾಹ ಪದ್ಧತಿ ಅಲ್ಪಸಂಖ್ಯಾತರಲ್ಲಿ ಇಲ್ಲ. ಆದ್ದರಿಂದ ನಾನು ಈ ಬಗ್ಗೆ ತಮ್ಮಲ್ಲಿ ಪ್ರಾರ್ಥನೆ ಮಾಡುವುದಿಷ್ಟೆ, ನಿಮ್ಮ ಈ "ಚಿಂತನಾ ಚಿಲುಮೆ" ಏನಿದೆ.....

ಶ್ರೀ ಎಂ.ಪಿ. ಪ್ರಕಾಶ್.—ಪ್ರತಿಯೊಂದು ಅಸಕ್ತ ಕುಟುಂಬದಲ್ಲಿ ಮದುವೆ ನಡೆಯುವ ಕಾಲದಲ್ಲಿ ಕೆಲವು ರೀತಿಯ ನೆರವನ್ನು ಕೊಡಬೇಕೆಂಬುದು ಸರ್ಕಾರದ ಉದ್ದೇಶವಾಗಿದೆಯೇ ಹೊರತು, ತಾಳಿಯ ಭಾಗ್ಯ ಎಂದರೆ ತಾಳಿಗೆ ದುಡ್ಡು ಕೊಡುತ್ತೇವೆಂದು ಅರ್ಥವಲ್ಲ.

ಶ್ರೀ ಬಿ.ಎ. ಉಮರಬ್ಬ.—'ತಾಳಿಯ ಭಾಗ್ಯ' ಯೋಜನೆಯ ಮೇರೆಗೆ ಸಾಮೂಹಿಕ ವಿವಾಹಗಳಲ್ಲಿ ಮಾಂಗಲ್ಯ ಸೂತ್ರ, ಸೀರೆಗಳು, ಧೋತಿಗಳು ಮತ್ತು ಅಡಿಗೆಯ ಪಾತ್ರೆಗಳನ್ನು ನೀಡಲಾಗುವುದು ಎಂದು ಇಲ್ಲಿ ಹೇಳಿದ್ದಾರೆ. ಆದ್ದರಿಂದ ಮಾಂಗಲ್ಯ ಸೂತ್ರಗಳಿಗಾಗಿ ನೀವು ಎಷ್ಟು ಹಣ ವಿನಿಯೋಗ ಮಾಡುತ್ತೀರಿ ಎಂಬುದನ್ನು ತಿಳಿಸಬೇಕು ಮತ್ತು ಸಾಮೂಹಿಕ ವಿವಾಹ ಮತ್ತು ತಾಳಿ ಕಟ್ಟುವ ಪದ್ಧತಿ ಇಲ್ಲದಿರುವ ಜನಾಂಗದವರಿಗೂ ಸಹ ಈ ಒಂದು ಸೌಲಭ್ಯ ಮುಟ್ಟುವ ರೀತಿಯಲ್ಲಿ ತಾವು ಬೇರೆ ರೀತಿ ಆಲೋಚನೆ ಮಾಡಬೇಕೆಂದು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಈ ತಾಳಿಯ ಭಾಗ್ಯ ಯೋಜನೆ ಬಗ್ಗೆ ಪ್ರತ್ಯೇಕವಾಗಿ ಒಂದು ದಿವಸ ಇಲ್ಲಿ ಚರ್ಚೆ ಮಾಡುವುದು ಒಳ್ಳೆಯದು. ಏಕೆಂದರೆ, ಈ ಬೆಂಗಳೂರು ನಗರದಲ್ಲಿ ತಮ್ಮ ತಾಳಿಯ ಭಾಗ್ಯವನ್ನು ಉಳಿಸಬೇಕೆಂದು ಕೆಲವು ಹೆಂಗಸರು ಕೇಳುತ್ತಿದ್ದಾರೆ. ಇದೇ ವಿಚಾರದಲ್ಲಿ ಅನೇಕ ಮಹಿಳಾಮಣಿಗಳು ಬೆಂಗಳೂರು ನಗರದಲ್ಲಿ ಮೆರವಣಿಗೆ ಸಹ ನಡೆಸಿದ್ದಾರೆ. ಆದ್ದರಿಂದ ತಾವು ಇದರ ಕಡೆಗೂ ಗಮನ ಕೊಡುವುದು ಒಳ್ಳೆಯದು.

ಇನ್ನು ಇದರಲ್ಲಿ ಅಲ್ಪಸಂಖ್ಯಾತರ ಬಗ್ಗೆ ಕಾಳಜಿ ವಹಿಸಲಾಗಿದೆ ಎಂದು ಹೇಳಿದ್ದಾರೆ. ಈ ಅಲ್ಪಸಂಖ್ಯಾತರಿಗೆ ಸೇರಿದ ಆಸ್ತಿಗಳಿಗೆ ರಕ್ಷಣೆ ಕೊಡಲು ಮತ್ತು ಮಸೀದಿಗಳಿಗೆ ಕೆಲವೊಂದು ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ವಕ್ಫ್ ಬೋರ್ಡ್ ಇದೆ. ಕಳೆದ ವರ್ಷ ಈ ಬೋರ್ಡಿಗೆ ಎಷ್ಟು ಗ್ರಾಂಟ್ ಕೊಟ್ಟಿದ್ದೀರಿ ಮತ್ತು ಆ ಮೂಲಕ ಎಷ್ಟು ಮಸೀದಿಗಳಿಗೆ ಅನುಕೂಲವಾಗಿದೆ ಎಂದು ನಾನು ತಮ್ಮನ್ನು ಕೇಳುತ್ತೇನೆ.

೪-೦೦ ಪಿ.ಎಂ.

ನಿಮ್ಮ ಕಾರ್ಯಕ್ರಮವೇನೆಂದರೆ, ಬಂದ ನೀರು ಇದ್ದ ನೀರನ್ನೂ ಕೊಚ್ಚಿಕೊಂಡು ಹೋಯಿತು ಎನ್ನುವ ಹಾಗಿದೆ. ಯಾವ ವ್ಯವಸ್ಥೆ ಇರಬೇಕೋ ಅದಿಲ್ಲ. ಯಾವುದು ಬರಬೇಕಾಗಿತ್ತೋ ಅದು ಬಂದಿಲ್ಲ, ಎನ್ನುವ ಹಾಗಿದೆ ಇವತ್ತಿನ ಪರಿಸ್ಥಿತಿ. ಈ ಒಂದು ಸಂಕ್ರಮಣ ಕಾಲದಲ್ಲಿ ಕರ್ನಾಟಕ ರಾಜ್ಯ ಇನ್ನು ಎಷ್ಟು ವರ್ಷ ಹೀಗೆ ತಳ್ಳಬೇಕೋ ಎಂಬುದು ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲವು ವಿಚಾರವನ್ನು ಮಾನ್ಯ ಹೊಸ ಸದಸ್ಯರು ತಿಳಿದುಕೊಳ್ಳಬೇಕು. ಮಸೀದಿ, ಮುಂತಾದ ಸಂಸ್ಥೆಗಳಿಗೆ ಮೊದಲು ವಕ್ಫ್ ಬೋರ್ಡ್ ವತಿಯಿಂದ ೧೫ ಲಕ್ಷ ರೂಪಾಯಿ ಕೊಡುತ್ತಿದ್ದೆವು, ಹೋದ ವರ್ಷ ೨೫ ಲಕ್ಷ ಮತ್ತು ಈ ವರ್ಷ ೫೦ ಲಕ್ಷ ರೂ. ಹಣವನ್ನು ವಕ್ಫ್ ಬೋರ್ಡ್ ಮುಖಾಂತರ ಪ್ರತಿಯೊಂದು ಜಿಲ್ಲಾ ಮಸೀದಿಗಳಿಗೂ ಕೊಟ್ಟಿದ್ದೇವೆ. ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಕೊಟ್ಟಿದ್ದೇವೆ ಎಂಬ ಲಿಸ್ಟ್ ಬೇಕಾದರೆ ತರಿಸಿಕೊಡುತ್ತೇನೆ.

ಶ್ರೀ ಕೆ. ಉಮರಬ್ಬ.—ಮಾನ್ಯ ಸಚಿವರು ಹೇಳಿದ ಮಾತಿನ ಮೇಲೆ ಲಿಸ್ಟ್ ಬರುವವರೆಗೂ ಕಾಯುತ್ತೇನೆ. ಮಾನ್ಯ ಮುಖ್ಯಮಂತ್ರಿಗಳೂ, ಅರ್ಥ ಸಚಿವರೂ ಆದ ಶ್ರೀ ರಾಮಕೃಷ್ಣ ಹೆಗಡೆ ಯವರು ೧೯೬೮ರಲ್ಲಿನ ದಿನಗಳಲ್ಲಿ ಇಂಥ ತೊಂದರೆಗಳು ಬಂದಾಗ ಅದನ್ನು ನಿವಾರಿಸುವಂತಹ ದಾರಿ ಹುಡುಕಿದವರು ಅವರು. ಆಗ ಕರ್ನಾಟಕ ರಾಜ್ಯದಲ್ಲಿ ಪಾನ ನಿಷೇಧ ಇತ್ತು. ಪಾನ ನಿಷೇಧವನ್ನು ರದ್ದುಗೊಳಿಸಿ ರಾಜ್ಯದ ಬೊಕ್ಕಸವನ್ನು ತುಂಬುವಂತಹ ಹೊಸ ಆಲೋಚನೆ ಅವರಿಗೆ ಬಂದಿತ್ತು. ಮೊದಲೇ ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಮಂಗಳೂರು, ಇಂತಹ ನಗರದ ಅನೇಕ ರಸ್ತೆಗಳಲ್ಲಿ ಕೆಂಪು ದೀಪಗಳು ರಾರಾಜಿಸುವಂತಾದ್ದು ಕಾಣುತ್ತದೆ. ದೀಪಕ್ಕೂ ಕೊರತೆ ಇಲ್ಲ. ಬೇಕಾದರೆ, ನಿಮ್ಮ ಕಾರಿನ ದೀಪವನ್ನೂ ಅದಕ್ಕೇ ಅಂಟಿಸಿ. ಮೌಲ್ಯಾಧಾರಿತ ರಾಜಕೀಯವನ್ನು ಶ್ರೀ ಮಹಾತ್ಮ ಗಾಂಧಿಜಿ, ಶ್ರೀ ಜಯಪ್ರಕಾಶ್‌ನಾರಾಯಣ್, ಮೊದಲಾದವರು ಮಾಡಿದರು. ಹೇಳುವುದು ಸುಲಭ, ಆದರೆ, ಹಾಗೇ ಮಾಡುವುದು ಕಷ್ಟ. ನಾನು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಅದು ಪಾರ್ಲಿಮೆಂಟರಿಯೋ ಅಥವಾ ಅನ್ ಪಾರ್ಲಿಮೆಂಟರಿಯೋ ನನಗೆ ಗೊತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಇತ್ತೀಚಿನ ಸಂದರ್ಶನದಲ್ಲಿ ಇದು ಎಂದು ಮುಗ್ಧ ಸುಳ್ಳು ಎಂದು ಹೇಳಿದ್ದಾರೆ. ಪ್ರತಿಯೊಂದೂ ಮುಗ್ಧ ಸುಳ್ಳೇ ಆಗುವುದಾದರೆ, ಸುಳ್ಳಿನ ವಿಸ್ತೀರ್ಣವನ್ನು ಈ ಕರ್ನಾಟಕ ರಾಜ್ಯದ ಜನತೆಯು ಮನೆ ಮನೆಗೂ ಮುಟ್ಟಿಸುವುದರ ಮೂಲಕ ಘೋರ ಪರಿಣಾಮವಾಗುತ್ತದೆಂದು ತಮ್ಮ ಮುಖಾಂತರ ಸಭೆಯ ಗಮನಕ್ಕೆ ತರುತ್ತೇನೆ. ಸಮಯದ ಕೊರತೆ ಇದೆಯೆಂದು ನನಗೆ ಗೊತ್ತು. ಆದರೆ, ನನ್ನ ಜಿಲ್ಲೆಗೆ ಅವಶ್ಯಕವಾದ, ಮತ್ತು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ, ಅಲ್ಲಿನ ಜನಗಳ ಬಗ್ಗೆ ಚಿಂತನೆ ಮಾಡಬೇಕಾದ್ದು ನನ್ನ ಕರ್ತವ್ಯ. ನನ್ನ ಕ್ಷೇತ್ರದಲ್ಲಿ ಪ್ರತಿ ವರ್ಷ ಪ್ರವಾಹಕ್ಕೆ ತುತ್ತಾಗಿ ಅನೇಕ ಗುಡಿಸಲುಗಳು ನಾಶವಾಗುತ್ತಿವೆ. ದೊಡ್ಡವರ ಮನೆಗಳಲ್ಲ. ಬಡವರ ಅನೇಕ ಕುಟುಂಬದ ದನಕರು, ಇತ್ಯಾದಿಗಳು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗುವುದನ್ನು ನೋಡುತ್ತಿದ್ದೇವೆ. ಈ ಪ್ರವಾಹ ನಿಯಂತ್ರಣದ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಒಂದು ಚಕಾರ ಶಬ್ದವೂ ಇಲ್ಲ. ಕಾಂಗ್ರೆಸನ್ನು ಗೆಲ್ಲಿಸಿದಂತಹ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಪ್ರವಾಹದಲ್ಲಿ ಕೊಚ್ಚಿ ಕೊಂಡು ಹೋಗಬೇಕು ಎಂಬ ಭಾವನೆ ನಿಮಗೆ ಇದ್ದ ಹಾಗೆ ಕಾಣುತ್ತದೆ. ಕೇಂದ್ರಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ನೀವು ನಮ್ಮಿಂದ ಯಾವುದೇ ಸಹಕಾರ ಬಯಸುವುದಾದರೆ, ನಾವು ಸಹಕರಿಸಲು ಸಿದ್ಧರಿದ್ದೇವೆ. ಕೆಲವು ಮಸೂದೆಗಳಿಗೆ ರಾಷ್ಟ್ರಪತಿಗಳು ಅಂಗೀಕಾರ ಕೊಟ್ಟಿಲ್ಲವೆಂದು ಹೇಳುತ್ತೀರಿ. ಮತ್ತು ಕೇಂದ್ರದಿಂದ ರಾಜ್ಯಕ್ಕೆ ನ್ಯಾಯವಾಗಿ ಸಿಗಬೇಕಾದ ಪಾಲಿನ ಬಗ್ಗೆ ತೀವ್ರವಾದಂತಹ ಕಳಕಳಿ ನಮಗೂ ಇದೆ. ಇದು ಕೇಂದ್ರದ ಬಗ್ಗೆ ಅಪಾರವಾದ ಆಪಾದನೆಗಳನ್ನು ಹೊರಿಸುವುದರ ಮೂಲಕ ಕರ್ನಾಟಕ ರಾಜ್ಯದ ಜನತೆಯಿಂದ ನೀವು ಬಚಾವ್ ಆಗುತ್ತೇವೆಂದು ಪ್ರಯತ್ನ ಮಾಡಿದರೆ, ತಮ್ಮ ಪ್ರಯತ್ನ ಫಲಕಾರಿಯಾಗುವುದಿಲ್ಲ. ಈ ಪ್ರಯತ್ನದ ಮೂಲಕ ಬರುವಂತಹ ಅನೇಕ ಕಷ್ಟಕಾರ್ಪಣ್ಯ ಗಳಿಗೆ ನಮ್ಮ ರಾಜ್ಯದ ಜನತೆ ಬಲಿಯಾಗಬೇಕಾಗುತ್ತದೆ. ಇದನ್ನು ತಪ್ಪಿಸುವಂತಹ ಪ್ರಾಮಾಣಿಕವಾದ ಪ್ರಯತ್ನಗಳು ತಮ್ಮಲ್ಲಿ ಆಗಲಿ ಎಂದು ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ದಿಶೆಯಲ್ಲಿ ರಾಜ್ಯಪಾಲರಿಂದ ಯಾವ ಒಂದು ಭಾಷಣವನ್ನು ತಾವು ಮಾಡಿಸಿದ್ದೀರೋ, ಆ ಭಾಷಣದಲ್ಲಿ ಕೆಲವರು ವಿಚಾರಗಳನ್ನು ನಾವು ಮನಸಾರೆ ಒಪ್ಪುವಂತಹ ಭಾಷಣ ಅಲ್ಲದೇ ಇರುವುದರಿಂದ, ಅದನ್ನು ನಾನು ಒಬ್ಬ ಸದಸ್ಯನಾಗಿ ವಿರೋಧ ಮಾಡಿ, ನನಗೆ ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮಕೃಷ್ಣ (ಕಾಮಲಾಪುರ).—ಸನ್ಮಾನ್ಯ ಅಧ್ಯಕ್ಷರೆ, ದಿನಾಂಕ ೧೮ನೇ ಮಾರ್ಚ್ ೧೯೮೫ರಿಂದು ನಮ್ಮ ರಾಜ್ಯದ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ಸುಮಾರು ೩ ದಿನಗಳಿಂದ ಚರ್ಚೆ ನಡೆಯುತ್ತಿದೆ. ಇದರಲ್ಲಿ ಕೆಲವು ಅಂಶಗಳನ್ನು ಮಾತ್ರ ನಾವು ಸೂಕ್ಷ್ಮವಾಗಿ ವಿಚಾರ ಮಾಡಿ ನೋಡಿದರೆ, ಈ ಎಲ್ಲ ಆಶ್ವಾಸನೆಗಳನ್ನು ಜನರಿಗೆ ಮುಟ್ಟಿಸಲಿಕ್ಕೆ ಸಾಧ್ಯವಿಲ್ಲ ಎನ್ನತಕ್ಕಂತಾದ್ದು ನನ್ನ ಭಾವನೆ.

(ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಇದರಲ್ಲಿ ೧೭ನೇ ಬರವಸೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಪರ್ಸೆಂಟ್‌ನಿಂದ ೨೫ ಪರ್ಸೆಂಟ್‌ಗೆ ಏರಿಸಿರುವ ಬಗ್ಗೆ ವಿಚಾರ ಮಾಡೋಣ. ೧೮ ಪರ್ಸೆಂಟ್ ಮೊದಲಿದ್ದದ್ದು. ಅದು

ಎಷ್ಟರ ಮಟ್ಟಿಗೆ ಸರಿಯಾಗಿದೆ. ಎಷ್ಟು ಸ್ಥಾನಗಳಲ್ಲಿ ೧೮ ಪರ್ಸೆಂಟ್ ತುಂಬಿದೆ. ಕ್ಲಾಸ್-೧ರಲ್ಲಿ ೧೮ ಪರ್ಸೆಂಟ್ ಇದೆಯೋ ? ಕ್ಲಾಸ್ (೨)ನಲ್ಲಿ ೧೮ ಪರ್ಸೆಂಟ್ ಇದೆಯೋ ಉಳಿದ ಎಸ್. ಡಿ. ಸಿ. ಮತ್ತು ಎಫ್.ಡಿ.ಸಿ.ನಲ್ಲಿ ೧೮ ಪರ್ಸೆಂಟ್ ಇದೆಯೋ ಇದನ್ನು ವಿಚಾರ ಮಾಡಬೇಕು. ಜನರ ಮನಸ್ಸಿಗೆ ಬರಲು, ೧೮ ಪರ್ಸೆಂಟ್ ಇದ್ದದ್ದನ್ನು ೨೫ ಪರ್ಸೆಂಟ್‌ಗೆ ಏರಿಸಿದ್ದೇವೆಂದು ಹೇಳಿಕೊಂಡು ದೊಡ್ಡ ಪ್ರಚಾರ ಪಡೆಯಬೇಕೆಂಬ ಉದ್ದೇಶ ಇದೆಯೆಂದು ನನಗನ್ನಿಸುತ್ತದೆ. ನಿಜವಾಗಿ ಹೇಳುವುದಾದರೆ, ಇವತ್ತು ಎಲ್ಲ ಭಾಗಗಳಲ್ಲಿಯೂ, ಎಲ್ಲ ಕ್ಷೇತ್ರಗಳಲ್ಲಿಯೂ ಸಹ ೧೮ ಪರ್ಸೆಂಟ್ ದಲಿತರಿಗೆ ಸಿಕ್ಕಿಲ್ಲ. ಎಲ್ಲ ಭಾಗಗಳಲ್ಲಿಯೂ ೧೮ ಪರ್ಸೆಂಟ್‌ಗಿಂತ ಕಡಿಮೆ ಇದೆ ಅದನ್ನು ತುಂಬಿಸಿ. ೨೫ ಪರ್ಸೆಂಟ್ ಕೊಡುವುದು ಬೇಡ, ೧೮ ಪರ್ಸೆಂಟ್‌ನ್ನೇ ಎಲ್ಲ ಕಡೆಗಳಲ್ಲಿಯೂ ತುಂಬಿದರೆ, ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದವರಿಗೆ ಹೆಚ್ಚಿನ ಉಪಕಾರ ಮಾಡಿದಂತಾಗುತ್ತದೆ. ಮತ್ತು ಈಗಾಗಲೇ ಸರ್ವೀಸ್‌ನಲ್ಲಿದ್ದವರ ಸರ್ವೀಸ್ ವಯೋಮಿತಿಯನ್ನು ೫೫ ವರ್ಷದಿಂದ ೫೮ ವರ್ಷದವರೆಗೆ ಏರಿಸಿದ್ದಾರೆ. ೩ ವರ್ಷಕ್ಕೆ ಹೆಚ್ಚಿಸಬೇಕು ಎಂಬ ಉದ್ದೇಶ ಇಟ್ಟುಕೊಂಡು ಸರ್ಕಾರ ೨ ವರ್ಷ ಹೆಚ್ಚು ಮಾಡಿತು. ೨ ವರ್ಷ ಹೆಚ್ಚು ಮಾಡುವುದರ ಮೂಲಕ ನಮ್ಮ ರಾಜ್ಯದಲ್ಲಿ ಎಷ್ಟು ಅನ್ ಎಂಪ್ಲಾಯ್‌ಮೆಂಟ್ ಕ್ರಿಯೇಟ್ ಆಗುತ್ತದೆಂದು ನಮ್ಮ ಸರ್ಕಾರ ವಿಚಾರ ಮಾಡಲಿಲ್ಲ. ಅದನ್ನು ತಿಳಿದುಕೊಳ್ಳಲಿಲ್ಲ. ಸಾವಿರಾರು ಯುವಕರು ಇದರ ತುತ್ತಿಗೆ ಒಳಗಾಗಿ ಬಡಿದಾಡುತ್ತಿದ್ದಾರೆ. ೫೫ ವರ್ಷದಿಂದ ೫೮ ವರ್ಷ ಮಾಡದಿದ್ದರೆ, ಎಷ್ಟೋ ಅನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲಂ ಸಾಲ್ವ್ ಆಗುತ್ತಿತ್ತು. ೫೫ ವರ್ಷಕ್ಕೇ ಕೆಲಸ ಮಾಡಲಾಗಲಾರದಂತಹ ಜನರಿಂದ ೫೮ ವರ್ಷ ಆಗದವರಿಂದ ಕೆಲಸ ತೆಗೆದುಕೊಳ್ಳಲು ಸಾಧ್ಯವೇ ? ಆದ್ದರಿಂದ ಈ ಕಾಯಿದೆಯನ್ನು ೫೫ ವರ್ಷಕ್ಕೇ ಸೀಮಿತಗೊಳಿಸಿ, ೫೫ ವರ್ಷಕ್ಕೆ ರಿಟೈರ್ಡ್ ಆಗುವವರ ಮನೆಯವರಿಗೆ ಒಬ್ಬೊಬ್ಬರಿಗೆ ನೌಕರಿ ಕೊಟ್ಟಿದ್ದರೆ, ರಿಟೈರ್‌ಮೆಂಟ್ ಆಗುವವರಿಗೆ ಹೆಚ್ಚಿನ ಅನುಕೂಲವಾಗುತ್ತದೆ.

ಪ್ರತಿ ಮನೆಯವರಿಗೂ ನೀವು ನೌಕರಿಯನ್ನು ಕೊಡುವ ವ್ಯವಸ್ಥೆ ಮಾಡುತ್ತೇವೆಂದು ನೀವು ಹೇಳಿದ್ದೀರಿ ಸರ್ಕಾರಿ ನೌಕರರಿಗೆ ೫೫ ವರ್ಷದ ರಿಟೈರ್‌ಮೆಂಟ್ ಮಿತಿ ಏನು ಇತ್ತು ಅದನ್ನು ನೀವು ೫೮ ವರ್ಷಗಳಿಗೆ ಏರಿಸಿದ್ದೀರಿ, ಇದರಿಂದ ಉದ್ಯೋಗವಕಾಶಗಳು ಸಿಗದೆ ಸಾವಿರಾರು ಜನ ಅನ್‌ಎಂಪ್ಲಾಯ್ಡ್ ಜನರಿಗೆ ಇವತ್ತು ಬಹಳ ಕಷ್ಟವಾಗಿದೆ. ಯಾವ ಉದ್ದೇಶ ಇಟ್ಟುಕೊಂಡು ಈ ವ್ಯವಸ್ಥೆಯನ್ನು ಮಾಡಿದ್ದೀರೋ ಎಂಬುದು ಗೊತ್ತಾಗಲಿಲ್ಲ.

ಇನ್ನು ದಲಿತರ ಬಗ್ಗೆ ಬಹಳಷ್ಟು ಕಾಳಜಿ ಇದೆ, ಅವರುಗಳಿಗೆ ಎಲ್ಲಾ ಸವಲತ್ತುಗಳನ್ನು ಒದಗಿಸಿ ಕೊಡುತ್ತೇವೆಂದು ವಾಗ್ದಾನ ಮಾಡಿದ್ದೀರಿ. ನನಗನಿಸುತ್ತದೆ ಇಷ್ಟು ಕಾಳಜಿಯನ್ನು ದಲಿತರ ಬಗ್ಗೆ ಇವರು ತೋರಿಸಬೇಕಾದರೆ ಮತ್ತು ವಾಗ್ದಾನವನ್ನು ಮಾಡುವುದಕ್ಕೆ ಕಾರಣವೇನೆಂದರೆ ಈ ಜನ ನಮ್ಮ ಜನತಾ ಪಕ್ಷಕ್ಕೆ ಓಟು ಕೊಡಲಿ ಅದರಿಂದ ನಾವು ಅಧಿಕಾರಕ್ಕೆ ಬರೋಣ ಎನ್ನುವ ಉದ್ದೇಶವೇ ಇವರದು ಇದರಲ್ಲಿ ನಾನು ಒಂದು ಮಾತನ್ನು ಹೇಳಬೇಕಾಗುತ್ತದೆ, ಅದೇನೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ದಲಿತರ ಹಾಸ್ಟೆಲ್‌ಗಳು ಇವೆ. ಅವುಗಳಿಗೆ ಸರಿಯಾದ ಸವಲತ್ತುಗಳನ್ನು ಈ ಸರ್ಕಾರದವರು ಕೊಡುತ್ತಿಲ್ಲ, ಪ್ರತಿ ಜಿಲ್ಲೆಯಲ್ಲೂ ಕಾಲೇಜುಗಳು ಇವೆ, ಈ ಕಾಲೇಜುಗಳಲ್ಲಿ ಓದತಕ್ಕಂತ ಅನೇಕ ದಲಿತರ ಮಕ್ಕಳು ಹಾಸ್ಟೆಲ್‌ನಲ್ಲಿ ಇಳಿದುಕೊಳ್ಳಬೇಕಾಗುತ್ತದೆ. ಆದರೆ ಈ ದಲಿತ ಮಕ್ಕಳಿಗೆ ಹಾಸ್ಟೆಲುಗಳಲ್ಲಿ ಯಾವ ಸೌಲಭ್ಯವು ಇಲ್ಲ. ಕೆಲವು ಜಿಲ್ಲೆಗಳಲ್ಲಿ ಪ್ರೈವೇಟ್ ಇನ್ಸ್ಟಿಟ್ಯೂಟ್‌ಗಳು ಹಾಸ್ಟೆಲುಗಳನ್ನು ನಡೆಸುತ್ತಿವೆ, ಆದರೆ ಇವುಗಳಲ್ಲಿ ಫೀಸ್ ಬಹಳವಾಗಿರುತ್ತದೆ. ಇಷ್ಟು ಹಣವನ್ನು ದಲಿತ ಮಕ್ಕಳು ಕಟ್ಟುವುದಕ್ಕಾಗುವುದಿಲ್ಲ. ಸರ್ಕಾರದವರು ನಡೆಸುವ ಹಾಸ್ಟೆಲುಗಳಲ್ಲೂ ಸುಮಾರು ೧೫೦ ರೂಪಾಯಿಗಳನ್ನು ಹುಡುಗರು ಕಟ್ಟಬೇಕಾಗಿರುತ್ತದೆ. ಇದನ್ನು ಸರ್ಕಾರದವರು ಕಡಿಮೆ ಮಾಡಬೇಕು. ಇಷ್ಟೊಂದು ಹಣವನ್ನು ಹುಡುಗರಿಂದ ಪಡೆದರೂ ಸಹ ಸೌಲಭ್ಯಗಳಂತೂ ಬಹಳ ಕಡಿಮೆಯಾಗಿರುತ್ತದೆ. ಪ್ರೈವೇಟ್ ಮ್ಯಾನೇಜ್‌ಮೆಂಟಿನವರು ನಡೆಸತಕ್ಕಂತ ಹಾಸ್ಟೆಲ್‌ಗಳು ಚನ್ನಾಗಿ ಕೆಲಸ ಮಾಡುತ್ತವೆ. ಆದರೆ ಅವುಗಳಿಗೆ ಹೆಚ್ಚು ಹಣ ಕಟ್ಟಬೇಕಾಗಿ ಬರುತ್ತದೆ. ಅದೂ ಅಲ್ಲದೆ ಸರ್ಕಾರಿ ಅಧಿಕಾರಿಗಳೂ ಈ ಪ್ರೈವೇಟ್ ಇನ್ಸ್ಟಿಟ್ಯೂಷನ್‌ಗಳು ನಡೆಸ ತಕ್ಕಂತ ಹಾಸ್ಟೆಲ್‌ಗಳ ಮೇಲೆ ಪದೇ ಪದೇ ಇನ್ಸ್‌ಪೆಕ್ಷನ್ ಮಾಡಿ ಈ ಹಾಸ್ಟೆಲ್‌ನಲ್ಲಿ ಸರಿಯಾದ ವ್ಯವಸ್ಥೆ ಇಲ್ಲವೆಂದು ಸುಮ್ಮನೆ ತೊಂದರೆ ಕೊಡುತ್ತಾರೆ. ಈ ರೀತಿ ಸರ್ಕಾರಿ ಅಧಿಕಾರಿಗಳು ತೊಂದರೆ ಕೊಡುವುದರಿಂದ ಅನೇಕ ಹಾಸ್ಟೆಲ್‌ಗಳು ಬಂದ್ ಆಗಿ ಹೋಗಿವೆ. ಇದರಿಂದ ಅನೇಕ ಶಾಲಾ ಕಾಲೇಜು ಮಕ್ಕಳಿಗೆ ಬಹಳ ತೊಂದರೆಯಾಗಿದೆ ಇನ್ನು ಇವರು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಹಳ್ಳಿಗಳಲ್ಲಿ ಪ್ರೈಮರಿ ಶಾಲೆಗಳೆ ಕೆಲವುಇಲ್ಲ. ಇರುವ

ಸ್ಕೂಲುಗಳಲ್ಲಿ ಹುಡುಗರು ಕುಳಿತುಕೊಳ್ಳುವುದಕ್ಕೆ ಬೆಂಚ್‌ಗಳೇ ಇರುವುದಿಲ್ಲ. ಅನೇಕ ಸ್ಕೂಲುಗಳಲ್ಲಿ ಹುಡುಗರನ್ನು ನೆಲದ ಮೇಲೆಯೇ ಕೂಡಿಸಿ ಪಾಠ ಮಾಡಿರುವಂತ ನಿದರ್ಶನಗಳು ಬೇಕಾದಷ್ಟು ಇವೆ. ಕೆಲವು ಸ್ಕೂಲುಗಳಲ್ಲಿಯಂತೂ ಮೇಲ್ಛಾವಣಿಯೇ ಇಲ್ಲವಾಗಿದೆ. ಮಳೆ ಬಂದಾಗ ಶಾಲೆಗಳಲ್ಲಿ ಪಾಠ ಮಾಡುವುದನ್ನು ನಿಲ್ಲಿಸಬೇಕಾಗುತ್ತದೆ ಮತ್ತು ಬೇಸಿಗೆ ಕಾಲದಲ್ಲಿ ಬಿಸಿಲಿನ ತಾಪಕ್ಕೆ ಹುಡುಗರು ಒಳಗೆ ಕುಳಿತುಕೊಳ್ಳುವುದಕ್ಕಾಗುವುದಿಲ್ಲ. ಇದರಿಂದ ಮಕ್ಕಳ ಪಾಡಂತೂ ಹೇಳುವುದಕ್ಕಾಗುವುದಿಲ್ಲ. ಸರ್ಕಾರದವರು ಇತ್ತ ಗಮನ ಹರಿಸಿ ಮೊದಲು ಸ್ಕೂಲುಗಳನ್ನು ಕಟ್ಟಬೇಕು. ಸ್ಕೂಲುಗಳನ್ನು ಕಟ್ಟಿದರೆ ಮಾತ್ರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ. ಕೆಲವು ಹಳ್ಳಿಗಳಲ್ಲಿ ಸ್ಕೂಲುಗಳ ಕಟ್ಟಡಗಳು ಕುಸಿದು ಹೋಗಿವೆ. ಸರ್ಕಾರದವರು ನಿಜವಾಗಿ ಜನರಿಗೆ ಸೇವೆ ಸಲ್ಲಿಸಬೇಕು ಎಂದಿದ್ದರೆ, ಮೊದಲು ಶಾಲೆಗಳ ಕಡೆ ಗಮನವನ್ನು ಕೊಟ್ಟು ಸ್ಕೂಲುಗಳ ಕಟ್ಟಡಗಳನ್ನು ಕಟ್ಟಿಸಬೇಕು. ಅನಂತರ ಶಾಲೆಗಳು ಒಳ್ಳೆಯ ರೀತಿಯಲ್ಲಿ ನಡೆಯುವುದಕ್ಕೆ ಸಾಧ್ಯವಾಗಿರುತ್ತದೆ. ಇಲ್ಲದೆ ಹೋದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ವಿದ್ಯಾಭ್ಯಾಸವು ಮುಂದುವರಿಯುವುದಿಲ್ಲ.

ಇನ್ನು ಸರ್ಕಾರದವರು ಕರ್ನಾಟಕ ಜನತೆಗೆ ೨ ರೂಪಾಯಿಗೆ ೧ ಕೆ.ಜಿ. ಅಕ್ಕಿಯನ್ನು ಸರಬರಾಜು ಮಾಡುತ್ತೇವೆಂದು ಚುನಾವಣೆಯ ಸಂದರ್ಭದಲ್ಲಿ ಘೋಷಣೆ ಕೊಟ್ಟಿದ್ದಾರೆ. ಇದು ಏನೋ ಬಹಳ ಒಳ್ಳೆಯ ಯೋಜನೆ ಎಂದು ಭಾವಿಸೋಣ ಆದರೆ ನಮ್ಮ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳವರೂ ಬರೀ ಅಕ್ಕಿಯನ್ನೇ ಉಪಯೋಗಿಸುತ್ತಾರೆಂದು ಇವರು ಭಾವಿಸಿದಂತೆ ಕಾಣುತ್ತದೆ. ನಮ್ಮ ಗುಲ್ಬರ್ಗ ಜಿಲ್ಲೆಯಲ್ಲಿ ನಮ್ಮ ಜನರು ಜೋಳವನ್ನು ತಿನ್ನುತ್ತಾರೆ, ಅಕ್ಕಿಯನ್ನು ತಿನ್ನುವುದಿಲ್ಲ. ಈ ಜೋಳವನ್ನು ಸಬ್‌ಸಿಡಿ ರೇಟ್‌ನಲ್ಲಿ ಕೊಡುವ ಬಗ್ಗೆ ಇದರಲ್ಲಿ ತಿಳಿಸಿರಲಿಲ್ಲ. ಅಂದರೆ ಜೋಳವನ್ನು ತಿನ್ನುವವರೆಲ್ಲಾ ಅಕ್ಕಿಯನ್ನು ತಿನ್ನಲಿ ಎಂದು ಇವರ ಉದ್ದೇಶವೇ ? ಸರ್ಕಾರದವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಯಾವ ರೀತಿ ಅಕ್ಕಿಯನ್ನು ಸಬ್‌ಸೀಡಿ ರೇಟ್‌ನಲ್ಲಿ ಈ ಕಡೆಯ ಜನರಿಗೆ ಅಕ್ಕಿಯನ್ನು ಸರಬರಾಜು ಮಾಡುತ್ತೀರೋ ಅದೇ ರೀತಿಯಲ್ಲಿ ನಮ್ಮ ಗುಲ್ಬರ್ಗ ಜಿಲ್ಲೆಯ ಜನರಿಗೂ ಸಬ್‌ಸೀಡಿ ರೇಟ್‌ನಲ್ಲಿ ಜೋಳವನ್ನು ಕೊಡುವಂತ ವ್ಯವಸ್ಥೆ ಮಾಡಬೇಕು. ನಮ್ಮ ಜಿಲ್ಲೆಯಲ್ಲಿ ಅಕ್ಕಿಗೆ ಬದಲಾಗಿ ಜೋಳವನ್ನು ಕೊಡಬೇಕು.

ಇನ್ನು ತಾಳಿ ಭಾಗ್ಯದ ಬಗ್ಗೆ ಹೇಳಬೇಕಾದರೆ, ಗರ್ಭಿಣಿಯರಿಗೆ ಹೆರಿಗೆ ಭತ್ಯ, ವಿಧವೆಯರಿಗೆ ಮಾಸಾಶನ ಕೊಡುವ ಹಾಗೆ, ಮದುವೆ ಆಗುವ ಹೆಣ್ಣು ಮಕ್ಕಳಿಗೆ ತಾಳಿಯನ್ನು ಕೊಡುವ ಯೋಜನೆಯನ್ನು ಹಾಕಿಕೊಂಡಿದ್ದಾರೆ. ಇವರು ಮದುವೆ ಆಗುವ ತಾಳಿ ಕೊಡುತ್ತಾರೋ ಅಥವಾ ಮೊದಲೇ ಕೊಡುತ್ತಾರೋ ಅಥವಾ ಮಕ್ಕಳು ಆದಮೇಲೆ ಕೊಡುತ್ತಾರೋ ಎಂಬುದು ಗೊತ್ತಾಗುವುದಿಲ್ಲ. ಏಕೆಂದರೆ ಮದುವೆ ಆಗುವ ಸಂದರ್ಭದಲ್ಲಿ ಇವರು ತಾಳಿ ಕೊಡುತ್ತಾರೆ ಎಂದಾದರೆ ತಾಳಿ ಬರುತ್ತದೆ. ತಾಳಿ ಬರುತ್ತದೆ ಎಂದು ಎದುರು ನೋಡುವುದರಲ್ಲೇ ಮುಹೂರ್ತ ಮೀರಿ ಹೋಗುತ್ತದೆ. ಅನೇಕ ಗರ್ಭಿಣಿ ಸ್ತ್ರೀಯರಿಗೆ ಮಕ್ಕಳನ್ನು ಹಡೆದ ಮೇಲೂ ಎಷ್ಟೋ ತಿಂಗಳಾದರೂ ಅವರಿಗೆ ಹೆರಿಗೆ ಭತ್ಯ ಸಿಕ್ಕಿಲ್ಲ ಅಂದಮೇಲೆ ಮದುವೆ ಆಗುವವರಿಗೆ ಸರಿಯಾದ ಸಮಯದಲ್ಲಿ ಇವರು ಹೇಗೆ ತಾಳಿಯನ್ನು ಒದಗಿಸುತ್ತಾರೋ ಎಂಬುದು ನನಗೆ ಅರ್ಥವಾಗಿಲ್ಲ. ಮದುವೆ ಸಮಯದಲ್ಲಿ ಸರಿಯಾದ ಸಮಯಕ್ಕೆ ತಾಳಿಯನ್ನು ಕೊಡದೇ ಹೋದರೆ ಏನು ಪ್ರಯೋಜನ ? ಇವರುಗಳು ಚುನಾವಣೆ ಸಂದರ್ಭದಲ್ಲಿ ಏನು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ ಅವುಗಳನ್ನು ಇವರು ಈಡೇರಿಸತಕ್ಕ ಆಶ್ವಾಸನೆಗಳಾಗಿಲ್ಲ. ಜನರಿಗೆ ಒಳ್ಳೆಯ ಭಾವನೆ ನಮ್ಮ ಮೇಲೆ ಬರಲಿ ಎಂಬ ಉದ್ದೇಶದಿಂದ ಈ ರೀತಿಯಾದ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಇದರ ಜವಾಬ್ದಾರಿಯೆಲ್ಲಾ ನಿಮ್ಮ ತಲೆಯ ಮೇಲೆ ಇರುತ್ತದೆ, ಮಾನ್ಯ ಅಧ್ಯಕ್ಷರೇ ಇಷ್ಟು ಮಾತನಾಡಲು ಅವಕಾಶ ಕೊಟ್ಟು ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಲಕ್ಷ್ಮೀ ನರಸಿಂಹಯ್ಯ (ತುಮಕೂರು).—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ರಾಜ್ಯಪಾಲರು ಈ ಸದನದಲ್ಲಿ ಮಾಡಿದ ಭಾಷಣಕ್ಕೆ ವಂದನೆಯನ್ನು ಸಲ್ಲಿಸುತ್ತಾ, ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ದೇಶದಲ್ಲಿ ೧೯೮೩ ರಲ್ಲಿ ಮೊಟ್ಟಮೊದಲನೇಯದಾಗಿ ಆದ ರಾಜಕೀಯ ಬದಲಾವಣೆ ಬಗ್ಗೆ ಮತ್ತು ಅದರ ಆಧಾರದ ಮೇಲೆ ಪುನಃ ೧೯೮೫ರಲ್ಲಿ ಮತ್ತೆ ಚುನಾಯಿತರಾದ ಬಗ್ಗೆ ಹೆಚ್ಚಾಗಿ ವಿಶ್ಲೇಷಣೆಯಾಗಿದೆ. ಹಿಂದಿನ ಎರಡು ವರ್ಷಗಳಲ್ಲಿ ಈ ಸರಕಾರಕ್ಕೆ ಪೂರ್ಣವಾಗಿ ಕೆಲಸ ಮಾಡುವುದಕ್ಕೆ ಬಿಡಬಾರದು, ಹೆಚ್ಚಾಗಿ ಈ ಪಕ್ಷಕ್ಕೆ ಜನಹಿತ ಕೆಲಸಗಳನ್ನು ಮಾಡಲು ಬಿಟ್ಟರೆ ಮತ್ತೆ ಜನಗಳ ಒಂದು ಹೆಚ್ಚಿನ ಬೆಂಬಲ ಇದಕ್ಕೆ ಬರುತ್ತದೆ ಎಂದು ವಿರೋಧಿಸುತ್ತಾ ಆ ದಿಶೆಯಲ್ಲಿ ಪ್ರಯತ್ನ ಮಾಡುತ್ತಾ ಇದ್ದರು. ಅಲ್ಲದೇ ಇವೊತ್ತು ಪುನಃ ಆರಿಸಿ ಬರುವುದಕ್ಕೆ ಕಾರಣ, ಜನತಾ ಪಕ್ಷದವರು ಎರಡು

ರೂಪಾಯಿಗಳಿಗೆ ಒಂದು ಕೆ.ಜಿ. ಅಕ್ಕಿಯನ್ನು ಕಡಿಮೆ ಬೆಲೆಯಲ್ಲಿ ಮತ್ತು ಸೀರೆ ಪಂಚೆಗಳನ್ನೂ ಮತ್ತು ತಾಳಿಭಾಗ್ಯ, ಇವೇ ಮೊದಲಾದವುಗಳನ್ನು ಕೊಡುತ್ತೇವೆಂದು ಹೇಳಿ ಆರಿಸಿ ಬಂದಿದ್ದಾರೆ ಎಂದು ಹೇಳುತ್ತಿದ್ದಾರೆ. ನಾನು ಇದನ್ನು ಖಂಡಿಸುತ್ತೇನೆ. ಕರ್ನಾಟಕದ ಜನತೆ, ಒಳ್ಳೆಯ ರೀತಿಯಲ್ಲಿ ದಕ್ಷರೀತಿಯಲ್ಲಿ ಆಡಳಿತ ನಡೆಸಿದ ಶುದ್ಧವಾದ ಸರಕಾರಕ್ಕೆ ಮತ್ತೆ ಬೆಂಬಲ ನೀಡಿ ಆರಿಸಿ ತಂದಿದೆ ಎಂದು ಹೇಳುತ್ತೇನೆಯೇ ಹೊರತು, ಆಶ್ವಾಸನೆಗಳನ್ನು ನೀಡುವುದರ ಮೂಲಕ ಅಲ್ಲವೆಂದೂ ಹೇಳಬಯಸುತ್ತೇನೆ. ನಿಜವಾಗಿಯೂ ಹೇಳುವುದಾದರೆ, ಈ ಸರಕಾರ ಬೇರೆ ಏನೂ ಮಾಡಿಲ್ಲವಾದರೂ ಎರಡು ವರ್ಷಗಳ ಕಾಲ ಜನ ನೆಮ್ಮದಿಯಿಂದ ಇದ್ದರು, ಕೋರ್ಟು, ಪೋಲೀಸ್ ಸ್ಟೇಶನ್‌ಗಳಿಗೆ ಅಲೆಯುವುದು ಕಡಿಮೆಯಾಗಿದೆ ಎಂದೂ, ಜನರು ಈ ವಿಷಯದಲ್ಲಿ ವಿಶೇಷತ ಸಮಾಧಾನ ಪಟ್ಟುಕೊಂಡಿದ್ದು, ಪುನಃ ಇದೇ ಸರಕಾರ ಬೇಕೆಂದು ತಂದಿದ್ದಾರೆ.

ಅದಲ್ಲದೆ ೨ ರೂಪಾಯಿಗಳಿಗೆ ಅಕ್ಕಿ ಕೊಡತಕ್ಕಂತಹ ಸರಕಾರದ ಯೋಜನೆ ಬಗ್ಗೆ ಕೆಲವು ಜನರು ಬಹಳ ಲಘುವಾಗಿ ಮಾತನಾಡುವುದನ್ನು ನಾನು ಕೇಳಿದ್ದೇನೆ. ಇವರೇ ಬಡತನವನ್ನು ದೇಶದಲ್ಲಿ ನಿರ್ಮೂಲನೆ ಮಾಡುತ್ತೇವೆಂದು ಹೇಳುತ್ತಾ, ಗರೀಬೀ ಹಟಾವೊ ಎಂಬ ಘೋಷಣೆಯ ಮೇಲೆ ಆರಿಸಿ ಬಂದಂತಹವರು, ಬಡತನ ರೇಖೆಯ ಕೆಳಗೆ ಪರ್ಸಂಟೇಜ್ ಎನಿತ್ತು, ಅದು ೧೬.-೧೭ ಇದ್ದುದು ೫೨ಕ್ಕೆ ಬರಬೇಕಾದರೆ ಈ ಒಂದು ಬಡತನ ನಿರ್ಮೂಲನೆ ಮಾಡುವುದರ ಬಗ್ಗೆ ಏನಾದರೂ ಪ್ರಾಮಾಣಿಕವಾದ ಪ್ರಯತ್ನ ಆಗಿದೆಯೇ ಎಂದು ನೀವು ಯೋಚನೆ ಮಾಡಬೇಕು. ಅದು ಆಗಿದ್ದರೆ, ಬಡತನ ರೇಖೆಯ ಕೆಳಗಿರತಕ್ಕಂತಹ ಜನಸಂಖ್ಯೆ ಏಕಾಗಿ ಕಡಿಮೆಯಾಯಿತು ಎಂದು ನೀವು ಯೋಚನೆ ಮಾಡಬೇಕು. ಇನ್ನು ಮೌಲ್ಯಾಧಾರಿತ ರಾಜಕಾರಣದ ಬಗ್ಗೆ ಹೇಳುವುದಾದರೆ, ಈ ವಿಷಯ ನಿಜವಾಗಿಯೂ ಹೇಳುವುದಾದರೆ ಬೇರೆ ಪಕ್ಷದವರಿಗೆ ಅರ್ಥವಾಗುವುದು ಬಹಳ ಕಷ್ಟ.

ಶ್ರೀ ಆರ್. ಎನ್. ನಾಯ್ಕ.—ಹಾಗೆಂದರೆ ಪಕ್ಷಾಂತರ ಮಾಡಿಸುವುದೇ ?

ಅಧ್ಯಕ್ಷರು.—ನಿಮಗೆ ರೂಲ್ಸ್ ಗೊತ್ತಿದೆಯೇ ? ಸದನದಲ್ಲಿ ಒಬ್ಬರು ಮಾತನಾಡುವಾಗ ಮಧ್ಯೆ ಇತರರು ಅಡ್ಡಿಪಡಿಸುವಂತಿಲ್ಲ.

ಶ್ರೀ ಲಕ್ಷ್ಮೀನರಸಿಂಹಯ್ಯ.—ನಾವು ಈ ಮೌಲ್ಯಾಧಾರಿತ ರಾಜಕಾರಣ ಮಾಡಿರುವುದನ್ನು ಜನರು ಅರ್ಥಮಾಡಿಕೊಂಡು ಮತ್ತೆ ನಮಗೆ ಅವಕಾಶ ಕೊಟ್ಟಿದ್ದಾರೆ. ಅದು ನಿಮಗೆ ಅರ್ಥವಾಗದಿದ್ದಲ್ಲಿ ನಾವು ಏನೂ ಮಾಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಲಕ್ಷ್ಮೀನರಸಿಂಹಯ್ಯನವರೇ, ನೇರವಾಗಿ ವಿಷಯವನ್ನು ಹೇಳಿರಿ.

ಶ್ರೀ ಲಕ್ಷ್ಮೀನರಸಿಂಹಯ್ಯ.—ಬಡತನ ಹತ್ತಿಕ್ಕಿಸುವುದರ ಬಗ್ಗೆ ಏನೂ ಪ್ರಯತ್ನ ಆಗಿಲ್ಲ ಎನ್ನುವುದು, ಬಡತನ ರೇಖೆಯಿಂದ ಕೆಳಗಡೆ ಇರುವಂತಹ ಜನರ ಸಂಖ್ಯೆ ಜಾಸ್ತಿಯಾದ ಮೇಲೆ ಅರ್ಥವಾಗಿದೆ. ನಾವು ತೆಗೆದುಕೊಂಡಿರತಕ್ಕಂತಹ ಕಾರ್ಯಕ್ರಮಗಳಲ್ಲಿ ಸಣ್ಣ ಕೈಗಾರಿಕೆಗಳನ್ನು ಹೆಚ್ಚಾಗಿ ಸ್ಥಾಪನೆ ಮಾಡಿ ಉದ್ಯೋಗಾವಕಾಶಗಳನ್ನು ಹೆಚ್ಚು ಮಾಡತಕ್ಕಂತಾದ್ದು. ಇವೇ ಮೊದಲಾಗಿ ಅನುಸರಿಸಿದ ಯೋಜನೆಗಳಿಂದಾಗಿ ಉದ್ಯೋಗಾವಕಾಶಗಳು ಹೆಚ್ಚಾಗಿದ್ದು, ಇವುಗಳು ಜನರಿಗೆ ಗೊತ್ತಿದೆ. ಇನ್ನು ಅರ್ಹತೆ ಬಗ್ಗೆ ಹೇಳುವುದಾದರೆ, ಜನತಾ ಸರಕಾರದ ಅರ್ಹತೆ ಏನು ಎನ್ನುವುದನ್ನು ಜನರು ಬಹಳ ಚೆನ್ನಾಗಿ ಅರಿತುಕೊಂಡಿದ್ದಾರೆ. ೧೯೮೩-೮೪ ರಲ್ಲಿ ಬರಗಾಲದ ಪರಿಸ್ಥಿತಿಯನ್ನು ನಿರ್ಮೂಲನೆ ಮಾಡುವುದಕ್ಕೋಸ್ಕರ ಕೇಂದ್ರದಿಂದ ೭೮ ಕೋಟಿ ರೂಪಾಯಿಗಳನ್ನು ಕೇಳಿದರೆ, ೧೬ ಕೋಟಿ ರೂಪಾಯಿಗಳನ್ನು ಒದಗಿಸಲಾಯಿತು. ಇಂತಹ ಒಂದು ತಾತ್ಕಾಲಿಕವಾಗಿ ಬರತಕ್ಕಂತಹ ಬರಗಾಲ ಪರಿಹಾರಕ್ಕೋಸ್ಕರ ನಮ್ಮ ರಾಜ್ಯದ ಆಯವ್ಯಯದಲ್ಲಿ ಹಣ ಇರುವುದಿಲ್ಲ. ಕೇಂದ್ರ ಸರಕಾರದಿಂದ ನಿರೀಕ್ಷೆ ಮಾಡಬೇಕಾಗುತ್ತದೆ. ೧೯೮೪-೮೫ ರಲ್ಲಿಯೂ ಕೂಡಾ ೧೨೫ ಕೋಟಿಗಳನ್ನು ಕೇಳಿದರೆ, ೩೫ ಕೋಟಿಗಳು ಮಾತ್ರ ಬಂದಿವೆ. ಅದಕ್ಕೋಸ್ಕರ ನಮ್ಮ ಸ್ವಂತ ಹಣ ಖರ್ಚು ಮಾಡಿರತಕ್ಕಂತಹ ಪರಿಸ್ಥಿತಿ ಬಂತು ನಮ್ಮ ಕಷ್ಟಕ್ಕೋಸ್ಕರ ಪರಿಹಾರಕ್ಕೋಸ್ಕರ ಇಲ್ಲಿ ಹಣ ಖರ್ಚಾಯಿತು.

ಇನ್ನು ದುಂದು ವೆಚ್ಚದ ವಿಚಾರವಾಗಿ ಹೇಳುವುದಾದರೆ, ಜನತಾ ಸರಕಾರ ಆಡಳಿತ ಬಂದ ಮೇಲೆ ಅಂತಹ ವೆಚ್ಚಗಳು ಕಡಿಮೆಯಾಗಿವೆ. ಹಣವನ್ನು ಜನಹಿತ ಕಾರ್ಯ ಮಾಡಲು ಹೆಚ್ಚಾಗಿ ವಿನಿಯೋಗವಾಗುತ್ತಿದೆ. ಹಣದ ದುರುಪಯೋಗ ನಿಂತಿದೆಯೆಂದು ಹೇಳ ಬಹುದು ಇದಕ್ಕೆ ಒಂದು ಉದಾ

ಹರಣೆಯನ್ನು ಕೊಡಬಯಸುತ್ತೇನೆ. ನಾನು ಇತ್ತೀಚೆಗೆ ಕೊರಟಗೆರೆಯ ಸಮಾರಂಭ ಒಂದರಲ್ಲಿ ಭಾಗ ವಹಿಸಿದ್ದಾಗ ಅಲ್ಲಿಯ ಜನರು ಹೇಳುತ್ತಾ ಇದ್ದರು, ಊರಿಗೆ ಒಂದು ಸಣ್ಣ ಕೆರೆಗೋಸ್ಕರ ಗುಂಡೂ ರಾಯರ ಸರಕಾರವಿದ್ದಾಗ ಲೆಕ್ಕವಿಲ್ಲದಷ್ಟು ತಿರುಗಿದ್ದೇವೆ, ಆದರೂ ಆಗಿಲ್ಲ ಜನತಾ ಸರಕಾರ ಬಂದ ಮೇಲೆ ಒಂದೇ ವರ್ಷದಲ್ಲಿ ನಮ್ಮ ಕೆರೆಗೆ ೧ ಲಕ್ಷ, ೭ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಶ್ರೀ ರಾಮಕೃಷ್ಣ ಹೆಗಡೆಯವರು ಅನಾವಶ್ಯಕವಾಗಿ ದುಂದುವೆಚ್ಚವಾಗುವ, ಪೋಲಾಗುವ ಹಣ ದಿಂದ ಮಾಡಿರುತ್ತಾರೆ. ಹೀಗೆಯೇ ಎಲ್ಲಾ ಸರಕಾರಗಳು ಉಳಿಸಿದರೆ, ಆ ಹಣದಿಂದ ಹಲವಾರು ಕೆರೆ ಗಳನ್ನು ಮಾಡ ಬಹುದಾಗಿತ್ತು ಎಂದು ಒಳ್ಳೆಯ ಮತ್ತು ಕೃತಜ್ಞತೆಯ ಮಾತುಗಳನ್ನು ಜನತಾ ಸರ ಕಾರದ ಬಗ್ಗೆ ಅಲ್ಲಿಯವರು ಆಡಿದರು. ರೈತರ ಬಗ್ಗೆ ಕಳಕಳಿಯನ್ನು ವ್ಯಕ್ತ ಪಡಿಸಿ, ಅವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಹೇಳಿ ಅವರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿ ರೈತರು ಅರ್ಜಿ ಹಾಕಿದಾಗ ಇವರು ನಡೆದುಕೊಂಡ ರೀತಿಗಳೇ ಮೊದಲಾಗಿ ಉದಾಹರಣೆಗಳು ಜನರಿಗೆ ಗೊತ್ತಿದೆ.

೪-೩೦ ಪಿ. ಎಂ.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಕಡು ಬಡವರು ತೆಗೆದುಕೊಂಡಿದ್ದಂತಹ ಸಾಲಕ್ಕೆ ಬಡ್ಡಿ ಯನ್ನು ಮನ್ನಾ ಮಾಡಿದ್ದೇವೆ. ಇದರಿಂದ ಲಕ್ಷಾಂತರ ಜನ ಬಡ ರೈತರಿಗೆ ಅನುಕೂಲವಾಗಿದೆ. ಅದೇ ರೀತಿಯಾಗಿ ಕೊಳವೆ ಬಾವಿಗಳನ್ನು ತೆಗೆಯುವುದಕ್ಕೆ ನಮ್ಮ ಸರ್ಕಾರ ಸಾಲ ನೀಡಿದೆ ಓಪನ್ ವೆಲ್ ತೆರೆದು ಅಲ್ಲಿ ಕಲ್ಲು ಬಂಡೆ ಅಥವಾ ನೀರೇ ಸಿಗದಿದ್ದ ಬಾವಿಗಳನ್ನು ಸರ್ಕಾರ ಗುರುತಿಸಿ ಅಂತಹ ಬಾವಿ ಗಳಿಗೆ ಕೊಟ್ಟಂತಹ ಸಾಲವನ್ನು ಮನ್ನಾ ಮಾಡಿದೆ. ನಮ್ಮ ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಎಷ್ಟೋ ಜನ ಬಡ ರೈತರಿಗೆ ಅನುಕೂಲವಾಗಿದೆ. ಇನ್ನು ಜನತಾ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿರುವುದರಿಂದ ಅನೇಕ ಜನ ನಿರುದ್ಯೋಗಿಗಳಿಗೆ ಅನುಕೂಲವಾಗಿದೆ. ಮತ್ತು ಪದವೀಧರರಿಗೆ ಬೇಕಾದಷ್ಟು ಸಾಲಸೌಲಭ್ಯಗಳನ್ನು ಒದಗಿಸಿಕೊಟ್ಟು ಸ್ವಂತ ಉದ್ಯೋಗವನ್ನು ಮಾಡುವುದಕ್ಕೆ ಅವಕಾಶವನ್ನು ನಮ್ಮ ಸರ್ಕಾರ ಮಾಡಿಕೊಟ್ಟಿದೆ. ಆದರೆ ಈ ಎಲ್ಲಾ ಕೆಲಸಕಾರ್ಯಗಳನ್ನು ಚುನಾವಣೆಯ ಸಮಯದಲ್ಲಿ ಮಾಡಿ ಬಡವರ ಮತವನ್ನು ಪಡೆಯುವು ದಕ್ಕೆ ಮಾಡಲಿಲ್ಲ ಚುನಾವಣೆಗಿಂತ ಮುಂಚೆಯೇ ಈ ಎಲ್ಲಾ ಕೆಲಸಕಾರ್ಯಗಳನ್ನು ನಮ್ಮ ಸರ್ಕಾರಸಾಧನೆ ಮಾಡಿದೆ. ಇನ್ನು ಮಾನವೀಯ ದೃಷ್ಟಿಯನ್ನು ನಮ್ಮ ಸರ್ಕಾರ ಇಟ್ಟುಕೊಂಡು ಗರ್ಭಿಣಿಯಾದಂತಹ ಹೆಣ್ಣು ಮಗಳು ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಆಗುವುದಿಲ್ಲವೆಂದು ತಿಳಿದು ಆ ಹೆಣ್ಣು ಮಗಳಿಗೆ ಆರು ತಿಂಗಳುಗಳ ಕಾಲ ತಿಂಗಳೊಂದಕ್ಕೆ ೫೦ ರೂಪಾಯಿಗಳಂತೆ ೩೦೦ ರೂಪಾಯಿಗಳ ಮಾಸಾಶನವನ್ನು ನಮ್ಮ ಸರ್ಕಾರ ಕೊಟ್ಟಿದೆ. ಆದರೆ ಇಂತಹ ಒಂದು ಕೆಲಸವನ್ನು ಇದುವರೆವಿಗೂ ಯಾವ ಸರ್ಕಾರ ಮಾಡಿಲ್ಲ. ನಾನು ಬೇಕಾದಷ್ಟು ಡೆಕ ನೋಡಿದ್ದೇನೆ ಹೆಣ್ಣು ಮಕ್ಕಳು ಗರ್ಭಿಣಿಯಾಗಿ ಸುಮಾರು ಎಂಟು ತಿಂಗಳಾಗಿರುತ್ತದೆ. ಆಕೆ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಆಕೆ ಊಟ ಮತ್ತು ಬಟ್ಟೆಗೆ ಏನು ಮಾಡಬೇಕು ? ಇದನ್ನು ಸರ್ಕಾರ ಪರಿಶೀಲಿಸಿ ಆ ನಿರ್ಧಾರ ಕೈಗೊಂಡಿದ್ದು ತಪ್ಪೇ ?

ಅಧ್ಯಕ್ಷರು.—ಮಾನ್ಯ ಸದಸ್ಯರು ಬೇಗ ಮುಗಿಸಿದರೆ ಒಳ್ಳೆಯದು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಇನ್ನು ವಿಧವೆಯರಿಗೆ ಮಾಸಾಶನ ಕೊಡುವುದು ಕೂಡ ನಮ್ಮ ಸರ್ಕಾರ ಜಾರಿಗೆ ತಂದಿದ್ದು ವಿಧವೆಯಾದ ಹೆಣ್ಣು ಮಗಳು ಜೀವನ ಮಾಡುವುದು ಬಹಳ ಕಷ್ಟವಾಗು ತ್ತದೆ ಆ ಹೆಣ್ಣು ಮಗಳನ್ನು ಗಂಡನು ಸತ್ತ ಮೇಲೆ ಅವರ ಮನೆಯವರು ಸೇರಿಸುವುದಿಲ್ಲ. ಈ ಕಡೆ ತಾಯಿಯ ಮನೆಯವರು ಸೇರಿಸುವುದಿಲ್ಲ. ಅಂತಹ ಪರಿಸ್ಥಿತಿ ಯಲ್ಲಿ ಆಕೆ ಯಾವ ರೀತಿಯಲ್ಲಿ ಜೀವನ ಮಾಡಬೇಕು ಇದನ್ನು ಸರ್ಕಾರ ಪರಿಶೀಲನೆ ಮಾಡಿ ವಿಧವಾ ಮಾಸಾಶನವನ್ನು ಜಾರಿಗೆ ತಂದಿದೆ. ಇನ್ನು ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವುದಕ್ಕಾಗಿ ಲೋಕಾಯುಕ್ತವನ್ನು ಜಾರಿಗೆ ತಂದಿದ್ದೇವೆ. ಭ್ರಷ್ಟಾಚಾರ ಮಾನ್ಯ ಮುಖ್ಯಮಂತ್ರಿಗಳಿಂದ ಹಿಡಿದು ಮಂತ್ರಿಗಳು, ಶಾಸಕರು ಯಾವ ಹಂತದಲ್ಲಿಯೇ ಆಗಲಿ ಭ್ರಷ್ಟಾಚಾರ ಮಾಡಿದಾಗ ಅವರ ಮೇಲೆ ನೇರವಾಗಿ ಲೋಕಾಯುಕ್ತಕ್ಕೆ ದೂರು ನೀಡಬಹುದು ಇಂತಹ ಒಂದು ಅನುಕೂಲವನ್ನು ನಮ್ಮ ಜನತಾ ಸರ್ಕಾರ ಮಾಡಿಕೊಟ್ಟಿದೆ. ಇಂತಹ ಒಳ್ಳೆಯ ಕೆಲಸ ಕಾರ್ಯಗಳನ್ನು ಮಾಡಿದಂತಹ ಜನತಾ ಸರ್ಕಾರ ಮೂಲ ಗುರಿಯೇ ಮೌಲ್ಯಾಧಾರಿತ ರಾಜಕಾರಣವೆಂದು ಕರೆಯುವುದು. ಇಷ್ಟು ಹೇಳಿ ಇದುವರೆವಿಗೂ

ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟಂತಹ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಎ. ಚನ್ನಪ್ಪ (ಮಡಿಕೇರಿ).—ಸನ್ಮಾನ್ಯ ಅಧ್ಯಕ್ಷರೇ ರಾಜಕೀಯವಾದಂತಹ ಭಾಷಣವನ್ನು ಜನತಾ ಸರ್ಕಾರದವರು ರಾಜ್ಯಪಾಲರ ಭಾಷಣದಲ್ಲಿ ರಾಜ್ಯಪಾಲರಿಂದ ಮಾಡಿಸಿದ್ದಾರೆ. ಆದ್ದರಿಂದ ನಾನು ಈ ರಾಜ್ಯಪಾಲರ ಭಾಷಣದ ವಂದನಾನಿರ್ಣಯವನ್ನು ವಿರೋಧಿಸಿ ಮಾತನಾಡಲು ನಿಂತಿದ್ದೇನೆ. ಜನತಾ ಸರ್ಕಾರದವರು ಜನತೆಯ ಮೆಚ್ಚುಗೆಯನ್ನು ಪಡೆದು ಪುನಃ ಅಧಿಕಾರಕ್ಕೆ ಬಂದಿದ್ದೇವೆಂದು ಇದುವರೆವಿಗೂ ಮಾತನಾಡಿದಂತಹ ಮಾನ್ಯ ಸದಸ್ಯರೆಲ್ಲರೂ ಹೇಳಿದ್ದಾರೆ, ಮೊನ್ನೆ ತಾನೆ ನಡೆದ ಚುನಾವಣೆಯಲ್ಲಿ ಜನತಾ ಪಕ್ಷದವರು ಸುಮಾರು ೧೩೯ ಜನ ಆಯ್ಕೆಯಾಗಿದ್ದಾರೆ. ಇದರಲ್ಲಿ ಸುಮಾರು ೬೦ ಜನ ಹಳಬರು. ಇನ್ನು ೭೯ ಜನ ಹೊಸಬರು. ಈ ೬೦ ಜನ ಹಳಬರಲ್ಲಿ ಸುಮಾರು ೨೯ ಜನ ಮಂತ್ರಿಗಳಾಗಿದ್ದಾರೆ. ಇನ್ನು ಹೊಸಬರಲ್ಲಿ ಒಬ್ಬರು ಮಾತ್ರ ಮಂತ್ರಿಯಾಗಿದ್ದಾರೆ. ಇದರಿಂದಲೇ ಗೊತ್ತಾಗುತ್ತದೆ ನೀವು ರಾಜ್ಯದ ಜನತೆಗೆ ಎಷ್ಟರ ಮಟ್ಟಿಗೆ ದಕ್ಷ ಮತ್ತು ಪ್ರಾಮಾಣಿಕ ಹಾಗೂ ಶುದ್ಧ ಆಡಳಿತವನ್ನು ಕೊಡುತ್ತೀರಿ ಎಂಬುದು. ಜನತಾ ಸರ್ಕಾರದವರು ಒಂದೇ ಒಂದು ತಿಂಗಳಲ್ಲಿ ಒಬ್ಬ ಅಧಿಕಾರಿಯನ್ನು ಸುಮಾರು ೩ ಸಾರಿ ವರ್ಗಾವಣೆಯನ್ನು ಮಾಡಿದ್ದಾರೆ. ಇದನ್ನು ನೋಡಿದರೆ ತಾವೇ ತಿಳಿದುಕೊಳ್ಳಬಹುದು ಇವರ ಶುದ್ಧ ಮತ್ತು ಪ್ರಾಮಾಣಿಕ ಹಾಗೂ ದಕ್ಷ ಆಡಳಿತವನ್ನು. ಇನ್ನು ಕೊಡಗಿನಲ್ಲಿ ಸೇಂದಿ ಮಾರಾಟ ಮಾಡುವವರನ್ನು ಬಿಲ್ಲವರೆಂದು ಕರೆಯುತ್ತಾರೆ. ಆ ಬಗ್ಗೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇದರಿಂದ ಅಲ್ಲಿ ಸುಮಾರು ಜನರಿಗೆ ಉದ್ಯೋಗವಿಲ್ಲದೆ ಕಷ್ಟದ ಪರಿಸ್ಥಿತಿಯಲ್ಲಿ ಇದ್ದಾರೆ. ಇದರ ಬಗ್ಗೆ ಸರ್ಕಾರದವರು ಪುನರ್ ಪರಿಶೀಲನೆ ಮಾಡಬೇಕು. ಇನ್ನು ಕೊಡಗಿನಲ್ಲಿ ಲಕ್ಷಾಂತರ ಎಕರೆಗಳು ಜಮ್ಮಾಮಾಲೈ ಜಮೀನು ಇದೆ. ಈ ಬಗ್ಗೆ ಅಲ್ಲಿಯ ಜನ ಸುಪ್ರಿಂ ಕೋರ್ಟಿನ ತನಕ ಹೋಗಿ ಬೇಕಾದಷ್ಟು ಚರ್ಚೆಗಳು ಆಗಿವೆ. ೧೯೮೦–೮೧ನೇ ಸಾಲಿನಲ್ಲಿ ೨೦ ಪರ್ಸೆಂಟ್ ಹಣವನ್ನು ನಗದಾಗಿ ಕೊಟ್ಟು ಮಾರಾಟ ಮಾಡಬಹುದೆಂದು ಸರ್ಕಾರ ಮಾಡಿತ್ತು. ಆದರೆ ಈಗ ಆ ರೀತಿ ಮಾಡಬಾರದು ಅದು ಸರ್ಕಾರದ ಜಾಗವೆಂದು ಹೇಳಿದ್ದಾರೆ. ಆ ರೀತಿ ಮಾಡದೆ ಆ ಜಮೀನಿಗೆ ಮಾರಾಟ ಮಾಡುವಂತಹ ಅಧಿಕಾರವನ್ನು ಕೊಟ್ಟರೆ ಅದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ವರಮಾನ ಬರುತ್ತದೆ ಮತ್ತು ಸ್ಟ್ಯಾಂಪ್ ಡ್ಯೂಟಿಯಲ್ಲಿ ಸಹ ಬೇಕಾದಷ್ಟು ಹಣ ಸರ್ಕಾರಕ್ಕೆ ಬರುತ್ತದೆ ಈ ವಿಷಯವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ನಮ್ಮಲ್ಲಿರತಕ್ಕಂಥ ಶೇಕಡಾ ೬೦ರಷ್ಟು ಅವಿದ್ಯಾವಂತರು ಮತ್ತು ಡ್ರಾಪ್‌ಔಟ್ಸ್ ಏನಿದ್ದಾರೆ ಅವರೆಲ್ಲರನ್ನೂ ವಿದ್ಯಾವಂತರನ್ನಾಗಿ ಮಾಡತಕ್ಕಂಥ ಒಂದು ಪ್ರಯತ್ನ ಅಗತ್ಯ, ಇದನ್ನು ನೀವು ಮುಖ್ಯವಾಗಿ ಮಾಡಬೇಕು. ಇನ್ನು ಕ್ಯಾಪಿಟೇಷನ್ ಫೀಸ್ ಏನಿದೆ ಇದನ್ನು ತೆಗೆಯುತ್ತೇವೆಂದು ನೀವು ಹೇಳುತ್ತೀರಿ, ಆದರೆ ಎಲ್ಲಾ ಕಡೆ ಕ್ಯಾಪಿಟೇಷನ್ ಫೀಸ್ ವಸೂಲು ಮಾಡುತ್ತಿದ್ದಾರೆ. ಇವತ್ತು ನರ್ಸರಿ ಶಾಲೆಗಳಿಗೂ ಸಹ ದುಡ್ಡು ಕೊಟ್ಟು ಮಕ್ಕಳನ್ನು ಸೇರಿಸತಕ್ಕಂಥ ಪ್ರಸಂಗ ಬಂದಿದೆ. ಇದರಿಂದಾಗಿ ಇವತ್ತು ಒಂದೊಂದು ಬೀದಿಯಲ್ಲಿ ಹತ್ತು ನರ್ಸರಿ ಶಾಲೆಗಳು ಹುಟ್ಟಿಕೊಂಡಿವೆ. ಇವರು ವ್ಯಾಪಾರ ಮಾಡುವುದಕ್ಕೆ ಶುರು ಮಾಡಿದ್ದಾರೆ. ಫ್ಯಾಕ್ಟರಿಗಳಲ್ಲಿ ಯಾವ ರೀತಿ ಶಿಫ್ಟ್ ಸಿಸ್ಟಮ್ ಇದೆ, ಅದೇ ರೀತಿ ಈ ಶಾಲೆಗಳೂ ಶಿಫ್ಟ್ ಸಿಸ್ಟಮ್‌ನಲ್ಲಿ ನಡೆಯುತ್ತಿವೆ. ಒಂದೇ ಒಂದು ಜಾಗದಲ್ಲಿ ಬೆಳಗ್ಗೆ ೮ ಗಂಟೆಯಿಂದ ೧೧ ಗಂಟೆಯವರೆಗೆ ಒಂದು ಶಿಫ್ಟ್, ೧೧ ಗಂಟೆಯಿಂದ ೩ ಗಂಟೆಯವರೆಗೆ ಒಂದು ಶಿಫ್ಟ್ ಮತ್ತು ೩ ಗಂಟೆಯಿಂದ ಇನ್ನೊಂದು ಶಿಫ್ಟ್ ಈ ರೀತಿ ಒಂದು ದಿನಕ್ಕೆ ಮೂರು ಶಿಫ್ಟ್‌ನಲ್ಲಿ ಶಾಲೆಗಳು ನಡೆಯುತ್ತಿವೆ. ಇದಕ್ಕೆ ಸರಿಯಾದ ವ್ಯವಸ್ಥೆ ಸರ್ಕಾರ ಮಾಡಬೇಕು. ಇಲ್ಲದಿದ್ದರೆ ಮಕ್ಕಳಿಗೆ ಒಳ್ಳೆಯ ವಿದ್ಯೆ ಸಿಗಲಿಕ್ಕೆ ಸಾಧ್ಯ ಇಲ್ಲ. ಇದಕ್ಕೆ ಹೆಚ್ಚು ಗಮನಕೊಟ್ಟರೆ, ನಮ್ಮ ದೇಶ, ನಮ್ಮ ಕರ್ನಾಟಕ ರಾಜ್ಯ ಒಳ್ಳೆಯ ಸ್ಥಿತಿಗೆ ಬರಲಿಕ್ಕೆ ಸಾಧ್ಯ ಇದೆ ಎಂದು ಹೇಳಬಯಸುತ್ತೇನೆ.

ಆ ಮೇಲೆ ಮಲೆನಾಡಿಗೆ ಒಂದು ಪ್ರತ್ಯೇಕವಾದಂಥ ಕಾನೂನನ್ನು ಸರ್ಕಾರ ಮಾಡಬೇಕೆಂದು ಹೇಳುತ್ತಿದ್ದೇನೆ. ಮಲೆನಾಡಿನಲ್ಲಿ ಆರು ತಿಂಗಳ ಕಾಲ ಮಳೆ ಬೀಳುತ್ತದೆ. ಈ ಅವಧಿಯಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕೆ ಸಾಧ್ಯ ಇಲ್ಲ. ಯಾವುದೇ ಕಾಮಗಾರಿಗಳನ್ನು ಮಾಡುವುದಕ್ಕೆ ಸಾಧ್ಯತೆ ಇಲ್ಲ. ಈ ಪ್ರದೇಶದಲ್ಲಿ ಕೈಗೊಂಡಂಥ ಕಾಮಗಾರಿಗಳನ್ನು ಉಳಿದ ಆರು ತಿಂಗಳಲ್ಲಿ ಮಾಡಿ ಮುಗಿಸಲಿಕ್ಕೆ ಅವಕಾಶ ಮಾಡಬೇಕು. ಇಡೀ ಕರ್ನಾಟಕಕ್ಕೆ ಒಂದೇ ಒಂದು ಕಾನೂನು ಮಾಡಿದರೆ, ಆರು ತಿಂಗಳ ಕಾಲದಲ್ಲಿ ಅಂದರೆ ಮಳೆ ಬೀಳತಕ್ಕ ಕಾಲದಲ್ಲಿ ಯಾವುದೇ ಕೆಲಸಗಳೂ ನಮ್ಮ ಮಲೆನಾಡಿನಲ್ಲಿ ಆಗದೇ,

ಎಷ್ಟೋ ವರ್ಷಗಳ ಕಾಲ ಹಾಗೇ ಇದ್ದು ಇನ್ನೂ ಹೆಚ್ಚಿನ ಹಣವನ್ನು ವ್ಯಯ ಮಾಡಬೇಕಾದ ಪರಿಸ್ಥಿತಿ ಬರುತ್ತದೆ. ಮಾಡಿದ್ದ ಅಲ್ಪಸ್ವಲ್ಪ ಕಾಮಗಾರಿಗಳೂ ಮಳೆಗಾಲದಲ್ಲಿ ಕೊಚ್ಚಿ ಹೋಗಿ ಪುನಃ ಅದೇ ಕೆಲಸಗಳನ್ನು ಮಾಡಬೇಕಾಗುತ್ತದೆ. ಈ ರೀತಿಯಾಗಿ ಈ ಭಾಗದ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಇದನ್ನು ಪರಿಹಾರ ಮಾಡಲಿಕ್ಕೆ ಮಲೆನಾಡಿಗೆ ಒಂದು ಹೊಸ ಕಾನೂನು ಮಾಡಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ. ಮಲೆನಾಡಿನಲ್ಲಿ ಬೇಕಾದಷ್ಟು ಅರಣ್ಯ ಸಂಪತ್ತು ಇದೆ. ಈ ಅರಣ್ಯ ಸಂಪತ್ತನ್ನು ಸರ್ಕಾರದವರು ಕಡಿದು ಹಾಕಿ ಅಲ್ಲಿ ರಬ್ಬರ್ ಪ್ಲಾಂಟೇಷನ್, ಕಾಫಿ ಪ್ಲಾಂಟೇಷನ್, ಟೀ ಪ್ಲಾಂಟೇಷನ್‌ಗಳನ್ನು ಮಾಡುತ್ತಿದ್ದಾರೆ. ಈ ರೀತಿ ಮಾಡಿದರೆ ಮಳೆ ಬರದೆ ಕೊಡಗಿನಲ್ಲೂ ಸಹ ಕುಡಿಯಲು ನೀರು ಸಿಗದೇ ಇರುವ ಪ್ರಸಂಗ ಬರುತ್ತದೆ. ಇಂತಹದನ್ನು ದಯಮಾಡಿ ತಡೆ ಹಿಡಿಯಬೇಕು. ಎಲ್ಲಿ ಅರಣ್ಯ ಬೆಳೆಸಬೇಕೋ ಅಲ್ಲಿ ಅರಣ್ಯ ಬೆಳೆಸಬೇಕು, ಎಲ್ಲಿ ಕಾಫಿ ಪ್ಲಾಂಟೇಷನ್ ಮಾಡಬೇಕೋ ಅಲ್ಲಿ ಅದನ್ನು ಮಾಡಬೇಕು. ಕಾಫಿ ಪ್ಲಾಂಟೇಷನ್, ಟೀ ಪ್ಲಾಂಟೇಷನ್ ಜನರು ಮಾಡುತ್ತಾರೆ, ಅದನ್ನು ಸರ್ಕಾರ ಮಾಡುವುದಿಲ್ಲ, ಅದನ್ನು ಜನತೆಗೆ ಬಿಟ್ಟು ಕೊಡಬೇಕು ಇದು ಸರ್ಕಾರ ಮಾಡಬೇಕಾದ ಕೆಲಸ ಅಲ್ಲ. ಈಗ ಮಲೆನಾಡಿನಲ್ಲಿರತಕ್ಕ ಲಕ್ಷಗಟ್ಟಲೆ ಎಕರೆ ಎವರ್ ಗ್ರೀನ್ ಫಾರೆಸ್ಟ್‌ನ್ನು ಕಡಿದು ಪ್ಲಾಂಟೇಷನ್‌ಗಳನ್ನು ಮಾಡಿ, ಮಳೆ ಬಾರದ ಹಾಗೆ ಮಾಡುವ ಕೆಲಸವನ್ನು ಸರ್ಕಾರವೇ ಮಾಡಿದೆಯೇ ಹೊರತು ಜನತೆ ಮಾಡಿಲ್ಲ ಎಂದು ನಾನು ಹೇಳಬಯಸುತ್ತೇನೆ.

ಆಮೇಲೆ ಇಂಡಸ್ಟ್ರಿಯಲ್ ಪಾಲಿಸಿ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಬೆಳಗ್ಗೆ ತಾನೆ ಮಾನ್ಯ ಮಂತ್ರಿಗಳಾದ ಲಕ್ಷ್ಮೀಸಾಗರ್‌ರವರು ಮಾತನಾಡುತ್ತಾ, ಬೆಂಗಳೂರು ನಗರದ ಬೆಳವಣಿಗೆಯನ್ನು ತಡೆಗಟ್ಟಬೇಕು, ಅದಕ್ಕೆ ಎಲ್ಲರೂ ಸಹಕರಿಸಬೇಕು ಎಂದು ಹೇಳಿದರು. ಆದರೆ ನೀವು ಎಲ್ಲಿಯವರೆಗೆ ನಗರ ಪ್ರದೇಶಗಳಲ್ಲಿ ಮನೆಗಳನ್ನು ಹಾಗೂ ಇಂಡಸ್ಟ್ರಿಗಳನ್ನು ಹೆಚ್ಚಾಗಿ ಮಾಡುವುದಕ್ಕೆ ಅವಕಾಶ ಕೊಡುತ್ತೀರೋ ಅಲ್ಲಿಯವರೆಗೆ ಇದು ನಿಲ್ಲುವುದಿಲ್ಲ. ಆದ ಕಾರಣ ಪಟ್ಟಣ ಪ್ರದೇಶಗಳಲ್ಲಿ ಇಂಡಸ್ಟ್ರಿಗಳನ್ನು ಮಾಡುವುದನ್ನು ನಿಲ್ಲಿಸಿ ಅದೇ ಇಂಡಸ್ಟ್ರಿಗಳನ್ನು ಗ್ರಾಮಗಳಲ್ಲಿ ತಾಲ್ಲೂಕು ಮಟ್ಟದಲ್ಲಿ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಮಾಡಿ. ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಇಂತಹ ಕಾರ್ಖಾನೆಗಳು ಬಂದಾಗ ಅಲ್ಲಿ ಆಸ್ಪತ್ರೆ ಬರುತ್ತದೆ, ಶಾಲೆಗಳು ಬರುತ್ತದೆ, ಬಡಜನರಿಗೆ ಉದ್ಯೋಗ ಸಿಗುತ್ತದೆ, ಗ್ರಾಮಾಂತರ ಪ್ರದೇಶಗಳಿಂದ ಪಟ್ಟಣ ಪ್ರದೇಶಗಳಿಗೆ ವಲಸೆ ಹೋಗುವುದು ತಪ್ಪುತ್ತದೆ. ಅವರಿಗೆ ಅಲ್ಲಿಯೇ ಕೆಲಸ ಸಿಗುವುದರಿಂದ ಜನಗಳು ವಲಸೆ ಬರುವುದಕ್ಕೆ ಆಗುವುದಿಲ್ಲ. ಇಂತಹ ಕೆಲಸವನ್ನು ತಾವು ಮಾಡಬೇಕು. ಹಾಗಾದರೆ ಮಾತ್ರ ಪಟ್ಟಣಗಳ ವಿಸ್ತರಣೆ ಹಾಗೂ ಅವುಗಳ ಜನಸಂಖ್ಯೆ ಬೆಳೆಯುವುದು ಕಡಿಮೆಯಾಗುತ್ತದೆ. ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಮಾಡಿದರೆ ಆ ತಾಲ್ಲೂಕೂ ಅಭಿವೃದ್ಧಿಯಾಗುತ್ತದೆ ಮತ್ತು ಅಲ್ಲಿನ ಜನತೆಗೂ ಕೆಲಸ ಸಿಗುತ್ತದೆ. ಅಲ್ಲಿ ಆಸ್ಪತ್ರೆ, ಶಾಲೆ ಆಗುತ್ತದೆ ರಸ್ತೆ ಆಗುತ್ತದೆ. ಇಂತಹ ಕೆಲಸವನ್ನು ತಾವು ಮಾಡದೇ ಇದ್ದರೆ ಹಳ್ಳಿಗಳ ಉದ್ಧಾರ ಆಗುವ ಸಾಧ್ಯತೆ ಇಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಸಣ್ಣ ಸಣ್ಣ ಇಂಡಸ್ಟ್ರಿಗಳು, ರಸ್ತೆಗಳು, ಮೋರಿಗಳು, ಸಣ್ಣ ಸಣ್ಣ ಸೇತುವೆಗಳು ಇವುಗಳನ್ನು ಮಾಡಿ ಅಭಿವೃದ್ಧಿ ಮಾಡಬೇಕು. ಅವರಿಗೆ ಬೇಕಾದಂಥ ಸೌಕರ್ಯಗಳನ್ನು ಒದಗಿಸಿಕೊಡಬೇಕು. ಇದರಿಂದ ವಲಸೆ ಬರುವುದು ತಪ್ಪುತ್ತದೆ. ಇನ್ನು ರೆವಿನ್ಯೂ ಇಲಾಖೆಯ ಬಗ್ಗೆ ಹೇಳುವುದಾದರೆ, ಹಳ್ಳಿಯಲ್ಲಿ ಸಾವಿರ ಗಟ್ಟಲೆ ಜನ ಸುಮಾರು ೧೦-೧೫-೨೦ ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಆದರೆ ಅವರಿಗೆ ಪಟ್ಟಾಗಳನ್ನು ಕೊಡದೆ ಬಹಳ ತೊಂದರೆಯಾಗುತ್ತಿದೆ. ಸೈಟ್‌ಗಳನ್ನು ಸ್ಯಾಂಕ್ಷನ್ ಮಾಡುತ್ತಾರೆ, ಆದರೆ ಪಟ್ಟಾಗಳನ್ನು ಕೊಡುವುದಿಲ್ಲ. ಇದರಿಂದ ಅವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಸಾಲ ಸಿಗುವುದಿಲ್ಲ, ಮನೆ ಕಟ್ಟಿಕೊಳ್ಳಲು ಹೆಂಚು ಕೊಡುವುದಿಲ್ಲ. ಬಿ.ಡಿ.ಓ. ಗಳನ್ನು ಕೇಳಿದರೆ ಅವರು ಪಟ್ಟಾ ಕೊಡಿ ಎಂದು ಹೇಳುತ್ತಾರೆ. ಇದರಿಂದ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಆದ ಕಾರಣ ಹಳ್ಳಿಯ ಬಡ ಜನತೆಗೆ ಕೂಡಲೇ ಸರಿಯಾದ ಪಟ್ಟಾಗಳನ್ನು ಕೊಟ್ಟು ಅವರ ತೊಂದರೆಯನ್ನು ನಿವಾರಣೆ ಮಾಡಬೇಕು. ಇಲ್ಲದಿದ್ದ ಪಕ್ಷದಲ್ಲಿ ಇದರಿಂದ ಬಡವರಿಗೆ ಬಹಳ ತೊಂದರೆಯಾಗುತ್ತದೆ. ಅಧಿಕಾರಿಗಳೂ ಸಹಿತ ಅವರಿಗೆ ಕಿರುಕುಳ ಕೊಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಆಸ್ಪತ್ರೆಗಳಲ್ಲಿ ಡಾಕ್ಟರ್‌ಗಳು ಇಲ್ಲ, ಔಷಧಿಗಳು ಇಲ್ಲ, ಇದನ್ನು ಸರಿಪಡಿಸಬೇಕು. ಈಗ ಬೇಕಾದಷ್ಟು ಡಾಕ್ಟರ್ಸ್ ಇದ್ದರೂ ಕೂಡಾ ಅವರು ಗ್ರಾಮಾಂತರ ಪ್ರದೇಶಗಳಿಗೆ ಹೋಗುವುದಿಲ್ಲ. ಡಾಕ್ಟರುಗಳು ಹಳ್ಳಿಗಳಿಗೆ ಹೋಗುವ ಹಾಗೆ ಕಡ್ಡಾಯ ಮಾಡಿದರೆ, ಹಳ್ಳಿಯ ಜನಗಳಿಗೆ ಆರೋಗ್ಯದ ಬಗ್ಗೆ ಒಂದು ಜ್ಞಾನ ಬರುತ್ತದೆ. ಇದರ ಬಗ್ಗೆ ಕಟ್ಟು

ನಿಟ್ಟಾಗಿ ಒಂದು ನಿಯಮವನ್ನು ಮಾಡಬೇಕು. ಎಲ್ಲಾ ಡಾಕ್ಟರುಗಳು ಮಫ್ಯಸಿಲ್ ಏರಿಯಾದಲ್ಲಿ ಕನಿಷ್ಠ ಪಕ್ಷ ಐದಾರು ವರ್ಷಗಳ ಕಾಲ ಕೆಲಸ ಮಾಡಬೇಕು ಎಂದು ನಿಯಮ ಮಾಡಬೇಕು. ಈ ರೀತಿ ಮಫ್ಯಸಿಲ್ ಏರಿಯಾಗಳಲ್ಲಿ ಕೆಲಸ ಮಾಡತಕ್ಕವರಿಗೆ ವಸತಿ ವ್ಯವಸ್ಥೆಯನ್ನು ಸರ್ಕಾರದವರು ಒದಗಿಸಿ ಕೊಡಬೇಕು. ಇದರಿಂದ ಗ್ರಾಮೀಣ ಜನತೆಗೆ ಅನುಕೂಲವಾಗುತ್ತದೆ, ಗ್ರಾಮಗಳ ಅಭಿವೃದ್ಧಿಯಾಗುತ್ತದೆ ಹಾಗೂ ಕರ್ನಾಟಕ ರಾಜ್ಯದ ಅಭಿವೃದ್ಧಿಯೂ ಸಹ ಆಗುತ್ತದೆ. ಆದುದರಿಂದ ಸರ್ಕಾರದವರು ಸರಿಯಾದ ಕ್ರಮಗಳನ್ನು ತೆಗೆದುಕೊಳ್ಳದ ಹೊರತು ಅವರು ಹೇಳಿರತಕ್ಕ ಯೋಜನೆಗಳು ಯಾವುದೂ ಫಲಕಾರಿಯಾಗುವುದಿಲ್ಲ, ಫಲಕಾರಿಯಾಗುವುದಕ್ಕೆ ಸಾಧ್ಯತೆಯೂ ಇಲ್ಲ ಎಂದು ಹೇಳಿ, ಈ ರಾಜ್ಯಪಾಲರ ಭಾಷಣ ಏನಿದೆ ಅದನ್ನು ವಿರೋಧಿಸಿ ಎರಡು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI MOHAMMAD MOIENUDDIN (Chamarajpet).—Mr. Speaker Sir I thank you for the opportunity given to me. The Governor's address has indicated in detail the steps taken by the Government to alleviate the poverty of the poor people. I take this opportunity to give my suggestions for the consideration of the popular government.

In Para 5 of the Governor's address much has been said about the drought, the failure of rain-fall and so on. Regarding this phenemenon we should realise as to whether it would be prudent for us to continue to commit the majority of people to the only means of occupation, Agriculture. It is now evident that these continuous drought conditions for these years with massive investment in agriculture has turned out to be a waste. Now, it is time for us to make a beginning in weaning people away from agriculture to an alternative means of living. I know it is easily said than done. I suggest to the Directorate of Agriculture to seriously address itself to find out acceptable alternatives. The Government's thinking no doubt is about dry-land farming, which again depends on rainfall. Un-organised and indiscriminate digging of borewells is also there. It again depends on rich harvest of rainfall. Natural calamities like drought and floods are similar. While the Government of India pays a lot of attention to flood control in the north, taking preventive measures for drought should also be done. I urge the Government to take up the matter with the Central Government and see that no step-motherly treatment is meted out to the State and the same amount of funds provided for floods should be provided to the drought prone areas also.

Coming to the next point about drinking water, one of the most laudable achievements of our Government is providing drinking water in the rural areas. Here again the instances of failed bore-wells is more than 10%. There is urgent need to build up a bore-well grid, so that bore-wells are dug depending upon the geographical and geological conditions to minimise the financial drain on the State as

also for the judicious utilisation of water. This is now concerning the rural water supply. What about urban areas? Urban water supply in the urban sector is an essential factor as that of rural areas The position of drinking water in urban areas is acute as that of rural areas. However, nothing much is being done in urban areas. In my constituency of Chamarajpet, which is supposed to be under the Cauvery water supply scheme, the water scarcity is too much. There are about 3,600 public taps for a city like Bangalore which works out to 1 public tap for 1,000 persons, apart from irregular supply of water in the public taps. The general public are feeling very difficult to get water. So, I request the Government to take up putting public taps in a phased manner to be used by the general public in cities, much more so in Bangalore.

The other point is, the Bangalore Water Supply Board should keep a check on the misuse of drinking water by the Commercial and Industrial Establishments situated in and around Bangalore. It is understood that millions of gallons of water is being wasted by these people and lot of misuse is also being done. The BWSSB has not taken steps to check this. Therefore, I appeal to the Government to direct the BWSSB to take up this matter seriously and see that the wastage of water and misuse by the Industrial Establishments is stopped forthwith.

Then, coming to the para 11 of the Governor's Address we find that the Government is thinking of providing fuel and fodder to the rural families through fair price shops. Further it is said there is programme of installing smokeless chulas in Rural homes at a concessional rate. Here I would like to suggest to the Government to take steps to utilise solar enegy through modern techniques. By commissioning this the Government would save lot of money and also the consumption of electricity would be reduce to a considerable extent.

Coming to para 16 of the Governor's Address which refers to school dropouts and Akksharasene programme I would suggest to the Government to create a Teachers Squad which would in turn visit the small scale units like Tyre Units, Agarabathi factories where we find small children in the age group of 5 to 11 are working in these-units. This Teachers Squad could go there and enlighten them about the education and its usefulness. I would even suggest to the Government if necessary to bringforward a legislation so that little bit education be given to the children who are working in small units.

Then, at page 20 of the Governor's Address we find maximum opportunities for the participation of peoples' representatives at various levels in Government administration. It is also said about the Panchayat Raj Bill passed by both Houses. I compliment our Rural Development Minister Sri Nazir Sab who has taken lot of pains in bringing forward such an important legislation which is yet to get the consent of the President. I am also grateful to our Chief Minister for having taken up this with the Prime Minister. I would also suggest that we can pass a resolution urging the Centre to expedite the bill awaiting the assent of the President.

Then, Sir, in the Governor's Address 2-3 issues did not figure ie., one about Pollution Control Nothing has been mentioned about it. I would say there is no sincere efforts on the part of the Government to control pollution problem especially in cities and residential areas. I would therefore appeal to the Government to take effective steps to control pollution problem in Bangalore city in particular. Then, likewise the Address is silent about slums. There is no programme to eradicate or to improve the existing slums. Lot of unhygenic condition prevailing in most of slums thereby causing health problem not only to the people living in slums but also to the people residing in and around the area. We find lot of facilities extended to rural poor like free sites, drinking water, sanitation etc., but at the same time the Government should think and draw programmes to the urban poor also who are living in most of the slums in cities. I therefore appeal to the Government to treat the urban poor with that of rural poor and extend all benefits equally.

The other point which I would like to touch upon is that the last para of the Governor's Address refers to cordial relations between Government and its employees. There is continuous increase in extending dearness allowance to Government servants during the last the two years This has adverse effect on the economy and the prices of all the commodities have gone up. The Government instead of granting dearness allowance, should have taken action to contain price the line. Even the Government of India not contemplated any steps to contain price line instead it has sanctioned several instalments of Dearness Allowance to its employees. The Central Government has not consulted the State Government whenever it has increased Dearness Allowance to its employees. I hope the Government of India and State Government would take effective steps to contain price line instead of increasing Dearness allowance atleast in future. With this I thank the Chair and also thank the Governor for the beautiful address presented to the House.

ಶ್ರೀ ಡಿ. ಟಿ. ಜಯಕುಮಾರ್ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷರೇ, ೧೮-೩-೮೫ರಂದು ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಮೇಲೆ ನನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತಾ, ಈ ಸಂದರ್ಭದಲ್ಲಿ ಒಂದೆರಡು ಮಾತುಗಳನ್ನು ಆಡಲಿಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ, ಜನತಾ ಸರ್ಕಾರ ಕಳೆದ ಎರಡು ವರ್ಷಗಳಲ್ಲಿ ಯಾವ ಸಾಧನೆ ಮಾಡಿದೆ, ಮುಂದಿನ ೫ ವರ್ಷಗಳಲ್ಲಿ ಯಾವ ಭರವಸೆಗಳನ್ನು ನೀಡಿದೆ ಎನ್ನುವ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ನಾನಾದರೂ ಹೇಳುವುದು ಇಷ್ಟೆ. ಗಂಟೆಗಟ್ಟಲೆ ಭಾಷಣ ಮಾಡುವುದು, ವಿಚಾರಗಳನ್ನು ಚಿಂತನೆ ಮಾಡುವುದು ಈ ಸದನದಲ್ಲಿ ನಡೆಯತಕ್ಕ ಕಾರ್ಯಕಲಾಪಗಳನ್ನು ಇವತ್ತು ಮಹಾಜನತೆ ನೋಡುತ್ತಿದ್ದಾರೆ. ರಾಜ್ಯದ ಮುಖಾಂತರ ಈ ಸದನದಲ್ಲಿ ಏನಾಗುತ್ತದೆ ಎನ್ನುವ ವಿಚಾರವನ್ನು ಮನಗಾಣಬೇಕಾದರೆ, ವಿರೋಧ ಪಕ್ಷದವರೂ, ಆಡಳಿತ ಪಕ್ಷದವರೂ ಎಲ್ಲರ ಉದ್ದೇಶ ಒಂದೇ ಎಂದು ತಿಳಿದು ಜನತೆಗೆ ಕಲ್ಯಾಣವಾಗಬೇಕು, ಎಲ್ಲ ರೀತಿಯ ಪ್ರಗತಿ ಹೊಂದಬೇಕು ಎನ್ನುವ ರೀತಿಯಲ್ಲಿ ಕೆಲಸ ಮಾಡಬೇಕಾಗಿದೆ. ಬರೀ ಟೀಕೆ ಟಿಪ್ಪಣಿಗೋಸ್ಕರ ಈ ಸದನ ಸೀಮಿತವಾಗಿಲ್ಲ. ಕರ್ನಾಟಕ ಮಹಾಜನತೆ ಸದನದ ಕಾರ್ಯ ಕಲಾಪಗಳನ್ನು ನೋಡುತ್ತಿದ್ದಾರೆ ಮಹಾಜನತೆ ಆಶೀರ್ವಾದ ಮಾಡಿ ನಮ್ಮನ್ನು ಈ ಸದನಕ್ಕೆ ಕಳುಹಿಸಿದ್ದಾರೆ.ಒಳ್ಳೆಯ ಕೆಲಸಗಳನ್ನು ನಿರ್ವಹಿಸಬೇಕಾಗಿದೆ. ಟೀಕೆ ಟಿಪ್ಪಣಿಗಳನ್ನು ಮಾಡದೇ ಶಾಶ್ವತ ವಿಚಾರಗಳ ಕಡೆ ಗಮನ ಕೊಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ. ಸ್ವಚ್ಛ ಆಡಳಿತದ, ಮೌಲ್ಯಾಧಾರಿತ ರಾಜಕಾರಣಗಳ ಬಗ್ಗೆ ವಿರೋಧ ಪಕ್ಷದವರು ಸಾಕಷ್ಟು ಹೇಳಿದ್ದಾರೆ. ಅವನ್ನು ನಾನೂ ಕೂಡ ಸ್ವಾಗತಿಸುತ್ತೇನೆ. ಆದರೆ ಇದಕ್ಕೆಲ್ಲಾ ಮೂಲ ಕಾರಣರು ಯಾರು. ಎಲ್ಲವೂ ಲಂಚಮಯ. ಲಂಚ ಎಲ್ಲಿಯವರೆಗೆ ಬೆಳೆದು ಬಂದಿದೆ ಎಂದರೆ ಯಾರು ಲಂಚ ತೆಗೆದುಕೊಳ್ಳದೆ ಇರುತ್ತಾರೋ ಅವರು ಪಾಪಿಗಳು ಎನ್ನುವ ಪರಿಸ್ಥಿತಿ ಬಂದಿದೆ. ಇದಕ್ಕೆ ಕಾರಣಕರ್ತರು ಯಾರು ? ಲಂಚವನ್ನು ಹುಟ್ಟುಹಾಕಿ, ಪೋಷಿಸಿ, ಬೆಳೆಸಿಕೊಂಡು ಬಂದವರೇ ಲಂಚದ ಬಗ್ಗೆ ಮಾತನಾಡುತ್ತಿದ್ದಾರೆ. ಮಾತನಾಡುವ ಹಕ್ಕು ವಿರೋಧ ಪಕ್ಷದವರಿಗೂ ಇದೆ. ಆದರೆ ನೈತಿಕ ಹಕ್ಕು ಮಾತ್ರ ಇಲ್ಲವೇ ಇಲ್ಲವೆಂದು ಹೇಳುತ್ತೇನೆ.

೫. ಪಿ. ಎಂ.

ಸ್ವಾಮಿ, ಈಹೊತ್ತು ಯಾವುದೇ ಬಿ. ಡಿ. ಒ. ಆಫೀಸೇ ತೆಗೆದುಕೊಳ್ಳಿ, ಯಾವುದೇ ತಾಲ್ಲೂಕು ಆಫೀಸೇ ತೆಗೆದುಕೊಳ್ಳಿ, ಇಲ್ಲವೇ ಯಾವುದೇ ವಿಲೇಜ್ ಅಕೌಂಟೆಂಟ್ ಹತ್ತಿರ ಹೋಗಿರಿ, ಒಂದು ವಿಧವೆಯ ಪೆನ್‌ಷನ್‌ಗಾಗಲಿ, ಒಂದು ಕಾಳಿಯ ಭಾಗ್ಯಕ್ಕೇ ಆಗಲಿ ಒಂದು ವೃದ್ಧಾಪ್ಯ ವೇತನಕ್ಕಾಗಲಿ ಅಲ್ಲಿ ಅಧಿಕಾರಿಗಳಿಗೆ ಲಂಚ ಕೊಟ್ಟರೇನೇ ಇದರ ಬಗ್ಗೆ ಅವರು ರೆಕಮೆಂಡೇಷನ್ ಮಾಡುವುದು. ಇದು ಎಷ್ಟರ ಮಟ್ಟಿಗೆ ಹಿಂದಿನಿಂದಲೂ ಬೆಳೆದು ಬಂದಿದೆ ಎನ್ನುವುದು ನಮಗೆ ಈಹೊತ್ತು ಗೊತ್ತಾಗುತ್ತಾ ಇದೆ. ಈ ಲಂಚವನ್ನು ತಪ್ಪಿಸಲು ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಲ್ಲ, ಅಲ್ಲಾವುದ್ದೀನ್ ಅದ್ಭುತ ದೀಪವನ್ನು ತಂದು ಇಟ್ಟರೂ ಇದನ್ನು ಹೋಗಲಾಡಿಸಲು ಬಹಳ ಕಷ್ಟ. ಲಂಚವನ್ನು ಹೋಗಲಾಡಿಸಬೇಕಾದರೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಇಲ್ಲದೆ. ಹೋದರೆ ಲಂಚ ಹೊಡೆಯುವವರು ಹೊಡೆಯುತ್ತಲೇ ಹೋಗುತ್ತಾರೆ. ಇದಕ್ಕೆ ಪರಿಹಾರವೇನು ? ಇದಕ್ಕೆ ತಮ್ಮ ಪ್ರಾಣವನ್ನು ಕೂಡ ಕೊಡುವುದರಲ್ಲಿ ಅವರು ತಲ್ಲೀನರಾಗಿರುವುದರಿಂದ ಇದರ ಬಗ್ಗೆ ಏನು ಮಾಡಬೇಕು ಇದನ್ನು ತಪ್ಪಿಸುವುದಕ್ಕೆ ನಾವು ಯಾವ್ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆನ್ನುವುದರ ಬಗ್ಗೆ ವಿರೋಧ ಪಕ್ಷದವರು ಒಂದು ಚಕಾರವನ್ನೂ ಎತ್ತಿಲ್ಲ. ಬರೀ ಟೀಕೆ ಮಾಡುತ್ತಾರೇ ವಿನಾ ತಕ್ಕ ಸಲಹೆಗಳನ್ನು ಕೊಡುವುದಕ್ಕೆ ಹೋಗುವುದಿಲ್ಲ. ನಾನು ಹೀಗೆ ಹೇಳುವಾಗ ಎಲ್ಲ ಅಧಿಕಾರಿಗಳೂ ಲಂಚ ಹೊಡೆಯುತ್ತಾರೆ ಎಂದು ಹೇಳುವುದಿಲ್ಲ. ಇದರಲ್ಲಿ ಒಳ್ಳೆಯ ಅಧಿಕಾರಿಗಳೂ ಇದ್ದಾರೆ, ಕೆಟ್ಟ ಅಧಿಕಾರಿಗಳೂ ಇದ್ದಾರೆ. ಇದಕ್ಕೆ ನನ್ನ ಒಂದು ಸಲಹೆ ಏನೆಂದರೆ ಜಿಲ್ಲಾ ಮಟ್ಟದಲ್ಲಿ ಪ್ರಾಮಾಣಿಕರಾದ ಅಧಿಕಾರಿಗಳು ಏನು ಇರುತ್ತಾರೋ ಅವರು ಸಮಾಜ ಮತ್ತು ಸರ್ಕಾರದ ಸಹಕಾರದೊಂದಿಗೆ ಆ ಪ್ರಾಮಾಣಿಕ ಅಧಿಕಾರಿಗಳನ್ನು ಕರೆಸಿ ಸಾರ್ವಜನಿಕರೆದುರಿಗೆ ಅವರನ್ನು ಗೌರವಿಸುವುದಾದರೆ ಆವಾಗ ಸರ್ಕಾರದಲ್ಲಿ ಒಂದು ದಕ್ಷತೆಯೂ ಹೆಚ್ಚುತ್ತದೆ ಮತ್ತು ಈ ಲಂಚಕ್ಕೆ ಒಂದು ಕಡಿವಾಣವೂ ಸಹ ತಡೆಯುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಕಾರ್ಮಿಕರ ಬಗ್ಗೆ, ಬಡವರ ಬಗ್ಗೆ ಹೇಳುವುದಾದರೆ ಅವರ ಬಗ್ಗೆ ಮೊಸಳೆ ಕಣ್ಣೀರು ಸುರಿಸಿದಂತೆ ವಿರೋಧಪಕ್ಷದವರು ಮಾತನಾಡಿದ್ದಾರೆ. ಈ ಸರ್ಕಾರ ಆ ಬಡವರಿಗೆ ಎರಡು ರೂಪಾಯಿಗೆ ಒಂದು ಕೆ ಜಿ ಅಕ್ಕಿ ಏನು ಕೊಡುತ್ತೇವೆ ಎಂದು ಏನು ಹೇಳಿದ್ದಾರೋ ಅದರ ಬಗ್ಗೆ ವಿರೋಧ ಪಕ್ಷದವರು ಸ್ವಾಗತಿಸಬೇಕಾಗಿತ್ತು. ಹಾಗೆ ಮಾಡದೆ, ಇದು ಇನ್ನು ಜಾರಿಗೆ ಬರುವುದಕ್ಕೆ ಮುಂಚೆ ಇದರ ಬಗ್ಗೆ ಅವರು ಅನುಮಾನ ಪಡುವುದಾದರೆ ಇದಕ್ಕೆ ನಾವೇನು ಹೇಳಬೇಕೋ ಗೊತ್ತಾಗುವುದಿಲ್ಲ. ಸ್ವಲ್ಪ ಕಾದು ನೋಡಿ. ಒಂದು ವರ್ಷ ಕಾದು ನೋಡಿ. ಇದು ಎಷ್ಟರ ಮಟ್ಟಿಗೆ ನಿಜವೋ ಅಲ್ಲವೋ ಅನ್ನುವುದನ್ನು. ೩೫ ವರ್ಷದಿಂದಲೂ ಯಾವ ಜನ ಈ ಸರ್ಕಾರವನ್ನು ಆಳಿದರೋ ಅದಕ್ಕಿಂತ ಅತ್ಯುತ್ತಮವಾದ ಆಡಳಿತವನ್ನು ಈ ಸರ್ಕಾರ ಕೊಡುತ್ತದೆ ಎಂದು ಅಷ್ಟು ಮಾತ್ರ ಹೇಳಬಲ್ಲೆ. ಈ ಸರ್ಕಾರಕ್ಕೆ ಆಳುವುದಕ್ಕೆ ಎರಡು ವರ್ಷ ಸಿಕ್ಕಿತು, ಅದನ್ನು ಈ ಮಹಾಜನತೆ ನೋಡಿಕೊಂಡು ಮತ್ತೆ ೫ ವರ್ಷ ಆಡಳಿತ ಆಳಲು ಅವಕಾಶ ಕೊಟ್ಟಿದ್ದಾರೆ. ನಾವೇನಾದರೂ ಕೆಟ್ಟದ್ದು ಮಾಡಿದರೆ ಆ ಮಹಾಜನತೆಯೇ ನಮ್ಮನ್ನು ಬೊಟ್ಟು ಮಾಡಿ ತೋರಿಸುತ್ತಾರೆ. ಈವೊತ್ತಿನ ದಿವಸ ದೇಶದಲ್ಲಿ ಏನು ನಡೆಯುತ್ತದೆ ಎಂದು ಮಹಾಜನತೆ ಚೆನ್ನಾಗಿ ತಿಳಿದುಕೊಂಡಿದ್ದಾರೆ ಇವೊತ್ತಿನ ದಿವಸ ಮಹಾಜನತೆ ಅಷ್ಟೇನೂ ದಡ್ಡರಲ್ಲ ಅದೃಷ್ಟವಶಾತ್ ಚೆನ್ನಾಗಿ ತಿಳಿದವರಾಗಿದ್ದಾರೆ. ಅದನ್ನು ತಿಳಿದು ಕೊಳ್ಳದೆ ವಿರೋಧಪಕ್ಷದವರು ಸುಮ್ಮನೆ ಟೀಕೆ ಮಾಡುತ್ತಾ ಹೋದರೆ ಏನು ಹೇಳುವುದಕ್ಕಾಗುತ್ತದೆ ? ಹೋದಸಲ ನೀವು ೮೨ ಜನ ಆರಿಸಿ ಬಂದಿದ್ದಿರಿ, ಈ ಸಲ ೬೫ ಜನ ಆರಿಸಿ ಬಂದಿದ್ದಿರಿ, ಅಲ್ಲಿಗೆ ೮೨ ಇದ್ದದ್ದು ೬೫ ಆಯಿತು, ಮುಂದೆ ೨೦—೨೫ ಜನ ಬರಬಹುದು. ನಾನು ಮೊದಲೇ ಹೇಳಿದ ಹಾಗೆ ೧.೯೦ ಪರ್ಸೆಂಟು ಅಷ್ಟು ಬಂದಿದ್ದೀರಿ. ಅದೃಷ್ಟವಶಾತ್ ಅಷ್ಟಾದರೂ ಬಂದಿದ್ದೀರಿ. ಮಹಾಜನತೆಗೆ ಗೊತ್ತಿದೆ ೩೫ ವರ್ಷದಿಂದಲೂ ನೀವು ಯಾವ ರೀತಿ ಆಳಿದಿರಿ ಎಂದು. ಅದಕ್ಕೆ ಆ ಮಹಾಜನತೆಗೆ ಈವೊತ್ತು ನಮಗೆ ಆಳಲಿಕ್ಕೆ ೫ ವರ್ಷ ಅವಕಾಶ ಕೊಟ್ಟಿದ್ದಾರೆ. ಅದುವರೆಗೆ ತಾವು ಸ್ವಲ್ಪ ಕಾದು ನೋಡಿ. ಈ ಸರ್ಕಾರ ತನಗೆ ಕೊಟ್ಟ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದೆಯೋ ಇಲ್ಲವೇ ಎನ್ನುವುದನ್ನು ಆ ಮಹಾಜನತೆಯೇ ತೀರ್ಮಾನ ಮಾಡುತ್ತದೆ. ನಮ್ಮದು ಎಷ್ಟು ಸುಳ್ಳು ನಿಮ್ಮದು ಎಷ್ಟು ಸುಳ್ಳು ಅನ್ನುವ ವಿಷಯ ಆ ಮಹಾಜನತೆಯಿಂದಲೇ ಎಲ್ಲರಿಗೂ ತಿಳಿಯುತ್ತದೆ. ಸ್ವಲ್ಪ ಕಾದು ನೋಡಿ.

ಇನ್ನು ರೈತರ ಬಗ್ಗೆ ಹೇಳಬೇಕಾದರೆ ನೀವು ೩೫ ವರ್ಷದಿಂದ ಆಡಳಿತ ನಡೆಸುತ್ತಿದ್ದಾಗ ಏನೇನು ಮಾಡಿದಿರಿ ಅನ್ನುವುದು ಎಲ್ಲರಿಗೂ ಗೊತ್ತಿದೆ. ಆ ಜನರನ್ನು ಗುಂಡು ಹಾಕಿ ಕೊಂದಿದ್ದೀರಿ. ಅಂಥಾವರು ರೈತರ ಬಗ್ಗೆ ಅನುಕಂಪವಾದ ಮಾತನಾಡುತ್ತಿದ್ದೀರಿ. ಆದರೆ ಅವರಿಗೆ ಯಾವ ವಿಧವಾದ ಸಹಾಯವನ್ನೂ ಮಾಡಿ ತೋರಿಲ್ಲ. ಈವಾಗ ತಾವು ಸ್ವಲ್ಪ ಕಾದು ನೋಡಿ ಗೊತ್ತಾಗುತ್ತದೆ. ತಮಗೆ ಸ್ಪಷ್ಟವಾಗಿ ಒಂದು ಹೇಳಬೇಕಾದರೆ ಈವೊತ್ತಿನ ದಿವಸ ಒಬ್ಬ ಸರ್ಕಾರದ ಜವಾನನಿಗೆ ಒಂದು ಭದ್ರತೆ ಇದೆ, ಮಳೆ ಬರಲಿ ಬಾರದೇ ಇರಲಿ ಅವನಿಗೆ ಒಂದು ತಿಂಗಳಿಗೆ ಒಂದು ಸಾವಿರ ರೂಪಾಯಿ ಸಂಬಳ ಬರುತ್ತದೆ. ಅವನು ಆದ್ದರಿಂದ ತನ್ನ ಜೀವನ ತಾನು ಮಾಡಿಕೊಂಡು ಹೋಗುತ್ತಾನೆ. ಈವೊತ್ತು ಅದೇ ಒಬ್ಬ ರೈತನಿಗೆ ೧೦ ಎಕರೆ ಖುಷ್ಕಿಯೇ ಇರಲಿ ಅಥವಾ ೫ ಎಕರೆ ತರಿ ಜಮೀನೇ ಇರಲಿ ಅವನಿಗೆ ಮಳೆ ಬಾರದೇ ಹೋದರೆ ಅವನು ತನ್ನ ಜೀವನ ನಡೆಸುವುದು ಹೇಗೆ ? ಇದನ್ನೇನಾದರೂ ತಾವು ಯೋಚನೆ ಮಾಡಿದ್ದೀರಾ ? ಹಿಂದಿನ ಸರ್ಕಾರ ರೈತರ ಬಗ್ಗೆ ಕಾಳಜಿ ವಹಿಸಿತ್ತು ಎಂದು ಹೇಳುತ್ತೀರಲ್ಲಾ ೩೫ ವರ್ಷದಿಂದಲೂ ರೈತರಿಗೆ ಏನು ಸವಲತ್ತುಗಳನ್ನು ಕೊಟ್ಟಿದ್ದೀರಿ ? ಈವಾಗ ಜನತಾ ಸರ್ಕಾರ ಬಂದ ಮೇಲೆ ಅವರ ಬಗ್ಗೆ ಕಾಳಜಿ ವಹಿಸಿ ಸಾಕಷ್ಟು ಕೆಲಸ ಮಾಡುತ್ತಿದೆ. ಇದರ ಬಗ್ಗೆ ವಿರೋಧಪಕ್ಷದವರು ಏನಾದರೂ ಸಲಹೆ ಇದ್ದರೆ ಕೊಡಲಿ ಮತ್ತು ಇವರ ಬಗ್ಗೆ ಹಾಕಿಕೊಂಡಿರತಕ್ಕಂಥಾ ಕಾರ್ಯಕ್ರಮಗಳಿಗೆ ತಮ್ಮ ಸಹಕಾರ ನೀಡಲಿ ಎಂದು ಹೇಳುತ್ತೇನೆ.

ಇನ್ನು ವಿರೋಧಪಕ್ಷದವರು ಬೆಲೆ ಏರಿಕೆಯ ವಿಚಾರದಲ್ಲಿ ಹೇಳಿದ್ದಾರೆ. ಈಗ ತಮಗೆಲ್ಲರಿಗೂ ಗೊತ್ತಿರುವ ಹಾಗೆ ಪೆಟ್ರೋಲ್ ಬೆಲೆ ಹೆಚ್ಚಿದೆ. ಇದನ್ನು ಹೆಚ್ಚಿಸಿದವರ್ಯಾರು ? ಇದನ್ನು ಹೆಚ್ಚಿಸಿದವರು ಕರ್ನಾಟಕ ಸರ್ಕಾರದವರು ಅಂತಲ್ಲ ಕೇಂದ್ರ ಸರ್ಕಾರದವರು ನಿಜ, ಇದು ಕೇಂದ್ರ ಸರ್ಕಾರದ ಒಂದು ನೀತಿ. ಆದರೆ ಇದರ ಬಗ್ಗೆ ನಾನು ಹೇಳುವುದೇನೆಂದರೆ, ಈ ಪೆಟ್ರೋಲ್ ಬೆಲೆ ಹೆಚ್ಚಿದ್ದರಿಂದಾಗಿ ಪ್ರತಿಯೊಂದು ಸಾಮಾನಿನ ಸಾಗಾಣಿಕೆ ಮೇಲೆ ಇನ್ನು ಇತರ ಎಲ್ಲಾ ವಸ್ತುಗಳ ಮೇಲೂ ಸಾಮಾನ್ಯವಾಗಿ ಇದರ ಪ್ರಭಾವ ಬೀಳುತ್ತದೆ. ಈ ರೀತಿಯಾಗಿ ಬೆಲೆಗಳು ಹೆಚ್ಚುತ್ತಾ ಹೋದರೆ ಜನತಾ ಸರ್ಕಾರ ಏನು ಮಾಡುತ್ತದೆ ? ಇದು ದುರ್ದೈವದ ಸಂಗತಿ. ಎಲ್ಲಾ ಬೆಲೆಗಳೂ ಏರುವುದಕ್ಕೆ ಜನತಾ ಸರ್ಕಾರವೇ

ಕಾರಣ ಎಂದು ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಹೇಳಿದ್ದೀರಿ. ಸೀಮೆಎಣ್ಣೆ ಬೆಲೆ ಹೆಚ್ಚಿಸಿದವರಾರು ? ಕೇಂದ್ರ ಸರ್ಕಾರದವರಲ್ಲವೇ ? ನಿಮ್ಮ ಕಾಂಗ್ರೆಸ್ ಸರ್ಕಾರ ಕೇಂದ್ರದಲ್ಲಿಲ್ಲವೇ ? ಇದಕ್ಕೆಲ್ಲಾ ಬೆಲೆಯನ್ನು ನಿಗದಿ ಪಡಿಸುವವರ್ಯಾರು ? ಇದನ್ನು ಜನತಾ ಸರ್ಕಾರವೇ ಹೆಚ್ಚಿಸಿದ್ದೋ ? ಇವೆಲ್ಲವೂ ಆ ಮಹಾ ಜನತೆಗೆ ಗೊತ್ತು. ಅವರಿಗೆ ಅಷ್ಟು ತಿಳುವಳಿಕೆ ಇಲ್ಲ ಎಂದು ತಿಳಿದುಕೊಳ್ಳಬೇಡಿ. ಅವರು ಪೇಪರ್ ಓದುತ್ತಾರೆ. ಆದರೆ ರಾಜಕೀಯದಲ್ಲಿ ಇರತಕ್ಕಂಥಾ ವಿರೋಧಪಕ್ಷದವರು ಚೆನ್ನಾಗಿ ತಿಳಿದವರು, ಪ್ರಾಜ್ಞರು ಆಗಿ ತಿಳಿಯದೇ ಇರುವ ಹಾಗೆ ಈ ವಿಚಿತ್ರದ ಭಾವನೆಯನ್ನು ಹೊಂದಿ ಸುಮ್ಮನೆ ಕೂತುಕೊಂಡಿರುವುದಾದರೆ ಇನ್ನು ಸಾಮಾನ್ಯ ಜನರ ಗತಿ ಏನು ! ಎಂದು ವಿರೋಧ ಪಕ್ಷದವರಿಗೆ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ನಮ್ಮ ಸರ್ಕಾರ ಎರಡು ರೂಪಾಯಿಗೆ ಒಂದು ಕೆ. ಜಿ. ಅಕ್ಕಿಯನ್ನು ಕೊಡುತ್ತೇವೆಂದು ಏನು ಹೇಳಿದ್ದಾರೋ ಅದು ಬಹಳ ಶ್ಲಾಘನೀಯವಾದ ವಿಚಾರ. ಆದರೆ ಪಟ್ಟಣದಲ್ಲಿರುವ ಜನರ ಅಕ್ಕಿಯನ್ನು ತಿನ್ನುತ್ತಾರೆ. ಹಳ್ಳಿಯಲ್ಲಿರುವ ಜನರು ರಾಗೀ ಜೋಳವನ್ನು ತಿನ್ನುತ್ತಾರೆ. ಆದುದರಿಂದ ಹಳ್ಳಿಗಾಡಿನಲ್ಲಿರುವ ಜನರಿಗೂ ಕೂಲಿಗಾರರಿಗೂ ಅನುಕೂಲವಾಗುವಂತೆ ಗಮನ ಹರಿಸಿ ರಾಗಿ ಮತ್ತು ಜೋಳಕ್ಕೂ ಕೂಡ ಕಡಿಮೆ ಬೆಲೆಯಲ್ಲಿ ಅವರಿಗೆ ಒದಗಿಸಿಕೊಡುವ ಹಾಗೆ ಒಂದು ನಿರ್ಣಯ ತೆಗೆದುಕೊಳ್ಳಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇವೊತ್ತಿನ ದಿವಸ ಹಳ್ಳಿಯಲ್ಲಿ ಇರತಕ್ಕಂಥಾ ಕೂಲಿಗಾರರು ಕೆಲಸ ಇಲ್ಲದೆ ಒಂದೊಂದು ದಿವಸ ಉಪವಾಸ ಇರುತ್ತಾರೆ. ಆದುದರಿಂದ ಅವರ ಬಗ್ಗೆ ಗಮನ ಹರಿಸಬೇಕೆಂದು ನಾನು ಮತ್ತೊಮ್ಮೆ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೊಂದು ಬಹುಮುಖ್ಯವಾದ ವಿಷಯ ಏನೆಂದರೆ ಈಗ ಆಸ್ಪತ್ರೆಗಳು ಏನು ಇವೆ ಅದು ಕ್ಲಿನಿಕ್ ರೀತಿಯಲ್ಲಿ ಇವೆ. ಮುಕ್ಕಾಲು ಭಾಗ ಆಸ್ಪತ್ರೆಗಳು ಹಾಗಿವೆ. ಒಳ್ಳೆಯ ಆಸ್ಪತ್ರೆಗಳೂ ಇವೆ. ನಿಜವಾಗಿ ಹೇಳಬೇಕಾದರೆ ಅದು ಜನರ ಆಸ್ಪತ್ರೆ ಅಲ್ಲ, ಧನದ ಆಸ್ಪತ್ರೆ ಅಂತ ಹೇಳಬಹುದು. ಅಲ್ಲಿ ಆಸ್ಪತ್ರೆಗಳಿಗೆ ಮೆಡಿಸಿನ್ಸ್ ಏನು ಕೊಂಡುಕೊಳ್ಳಬೇಕೋ ಹಾಗೆ ಕೊಂಡು ಕೊಳ್ಳುವಾಗ ಮೆಡಿಕಲ್ ಸ್ಟೋರ್ಸ್‌ನವರಿಗೂ ಇವರಿಗೂ ಒಂದು ತರಹ ಅಂಡರ್‌ಸ್ಟ್ಯಾಂಡಿಂಗ್ ಇದೆ ಅದರಲ್ಲೂ ಬಹಳ ಲಂಚ ಬೆಳೆದಿದೆ ಅವರ ಹತ್ತಿರ ಕೊಂಡುಕೊಳ್ಳುತ್ತಾರೆ. ಸರ್ಕಾರೀ ಆಸ್ಪತ್ರೆಗಳಲ್ಲಿ ಸಿಕ್ಕುವ ಔಷಧಿಗಳೆಲ್ಲವೂ ಕೂಡ ಈ ಮೆಡಿಕಲ್ ಸ್ಟೋರ್ಸ್‌ಗಳಲ್ಲಿ ಕಂಡುಬರುತ್ತವೆ. ಈ ಬಗ್ಗೆ ಡಾಕ್ಟರ್ ಅವರಿಂದಾಗಲಿ ಯಾರಿಂದ ಏನೇ ಒತ್ತಡ ಬಂದರೂ ಕೂಡ ಮಣಿಯದೆ ಆ ಬಗ್ಗೆ ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ ಹಿಂದುಳಿದ ವರ್ಗದವರ ವಿಚಾರ. ಈ ಹಿಂದುಳಿದವರ ಬಗ್ಗೆ ಶ್ರೀಮಾನ್ ದೇವರಾಜ್ ಅರಸುರವರು ಇದ್ದಾಗ ಹಾವನೂರು ಕಮಿಟಿ ಅಂತ ಮಾಡಿ ಅದನ್ನು ಜಾರಿಗೆ ತರುವ ಹಾಗೆ ಮಾಡಿದರು. ಈಗ ಈ ಹಿಂದುಳಿದವರ ಬಗ್ಗೆ ಮಾತನಾಡುತ್ತಿದ್ದೀರಲ್ಲಾ, ನಾನು ಈ ಮಾತನ್ನು ವಿರೋಧಪಕ್ಷದ ಸದಸ್ಯರಿಗೆ ಹೇಳಲು ಬಯಸುತ್ತೇನೆ, ಅವರು ಈಗ ಬಿ. ಪಿ. ಮಂಡಲ್ ವರದಿ ಏನು ಇದೆ ಇದರ ಬಗ್ಗೆ ಕೇಂದ್ರ ಸರ್ಕಾರಕ್ಕೆ ಒತ್ತಡ ತರಬೇಕು. ಈ ಮಂಡಲ್ ಆಯೋಗವನ್ನು ಮಾಡಿದವರ್ಯಾರು, ಕೇಂದ್ರ ಸರ್ಕಾರದವರು. ಇದರ ಬಗ್ಗೆ ಒತ್ತಡ ತರದೇ ಸುಮ್ಮನೆ ಕಣ್ಮುಚ್ಚಿಕೊಂಡು ಕುಳಿತಿದ್ದಾರಲ್ಲಾ ಇದು ಸರಿಯೇ ? ಯಾವ ಜನ ಹಿಂದುಳಿದವರ ಬಗ್ಗೆ ಮಾತನಾಡುತ್ತಾರೋ ಅವರು ಈ ಹಿಂದುಳಿದವರ ಮೆಚ್ಚುಗೆಯನ್ನು ಪಡೆಯ ಬೇಕಾದರೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಅದನ್ನು ಜಾರಿಗೊಳಿಸುವ ಹಾಗೆ ಮಾಡಬೇಕು. ಈಗ ಹಾಗೆ ಮಾಡುವುದಕ್ಕೆ ನಿಮಗೆ ಅವಕಾಶ ಇದೆ. ಬಿ. ಪಿ. ಮಂಡಲ್ ವರದಿಯನ್ನು ಕಾರ್ಯರೂಪಕ್ಕೆ ಬರುವ ಹಾಗೆ ತಾವು ಒತ್ತಡ ತರಬೇಕೆಂದು ನಾನು ಮತ್ತೊಮ್ಮೆ ವಿರೋಧಪಕ್ಷದ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅದನ್ನು ಜಾರಿಗೆ ತರುವಾಗ ನಿಮ್ಮ ಸಹಕಾರವನ್ನೂ ಸಹ ನಾವು ಪಡೆದು ಕೊಳ್ಳುತ್ತೇವೆ. ಕೊನೆಯದಾಗಿ ಒಂದೇ ಒಂದು ವಿಚಾರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಕನ್ನಡದ ಬಗ್ಗೆ ಹೇಳುವುದೇನೆಂದರೆ ಜನಸಾಮಾನ್ಯರಿಗೆ ತಿಳಿಯುವಂಥ ಈ ಕನ್ನಡ ಚಲನ ಚಿತ್ರ ಏನು ಇದೆಯೋ ಇದನ್ನು ಪ್ರತಿ ಸಿನಿಮಾ ಥಿಯೇಟರ್‌ನವರೂ ಕೂಡ ಒಂದು ವರ್ಷಕ್ಕೆ ೧೬ ವಾರಗಳ ಕಾಲ ಪ್ರದರ್ಶಿಸಬೇಕೆಂದು ಹಿಂದಿನ ಸರ್ಕಾರ ಇದರ ಬಗ್ಗೆ ಒಂದು ಕಾನೂನು ಮಾಡಿತ್ತು. ಆದರೆ ಅದು ಕಾರ್ಯರೂಪಕ್ಕೆ ಬರಲಿಲ್ಲ. ಅದಕ್ಕೋಸ್ಕರವಾಗಿ ಈಗಲಾದರೂ ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನಹರಿಸಿ ಅವರು ಮಾಡಿರುವಂಥಾ ಕಾನೂನನ್ನು ಖಡ್ಡಾಯವಾಗಿ ಜಾರಿಗೊಳಿಸುವುದಕ್ಕೆ ಸಾಕಷ್ಟು ಗಮನ ಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ನಂಜನಗೂಡಿನ ಬಗ್ಗೆ ಒಂದು ವಿಷಯ ಹೇಳಬೇಕೆಂದಿದ್ದೇನೆ. ಅದನ್ನು ಇನ್ನೊಂದು ಸಾರಿ ಮಾತನಾಡುತ್ತೇನೆ. ಆದಕ್ಕೆ ಈಗ ಮಾತನಾಡುವುದಕ್ಕೆ ಕಾಲಾವಕಾಶ ತೆಗೆದುಕೊಳ್ಳುವುದಿಲ್ಲ. ಈಗ ಎಂಟನೇ ವಿಧಾನಸಭೆ ಏನು ನಡೆಯುತ್ತಿದೆ ಇದರಲ್ಲಿ ಮಾನವೀಯತೆಯ ಲಕ್ಷಣಗಳು ಕಂಡು ಬಂದಿವೆ ಹಾಗೂ ಹೊಸ ದಾಖಲೆಗಳನ್ನು ನಿರ್ಮಿಸುವ ಹಂತದಲ್ಲಿ ಕಾಣುತ್ತಿದ್ದೇವೆ. ರಾಜ್ಯದಲ್ಲಿ ೩೫ ವರ್ಷ ವರ್ಷಗಳಿಂದಲೂ ಕೂಡ ರಾಜ್ಯದಲ್ಲಿ ಜನಗಳ ಮೇಲೆ ಪಾಶವೀ ಕೃತ್ಯಗಳು ಏನು ನಡೆಯಿತು ಅದು ಹೋಗಿ ಇನ್ನು ಮುಂದೆ ರಾಜಕಾರಣಿಗಳು ಸ್ವಚ್ಛ ಹಾಗೂ ದಕ್ಷ ಆಡಳಿತವನ್ನು ಕೊಡುವ ಹಾಗೆ ಮೌಲ್ಯಾಧಾರಿತ ರಾಜಕೀಯವನ್ನು ಕೊಡುವ ಹಾಗೆ ಒಂದು ಸರಿಯಾದ ಮಾರ್ಗದಲ್ಲಿ, ಸರಿಯಾದ, ದಾರಿಯಲ್ಲಿ ಹೋಗುವಂತೆ ಪ್ರಯತ್ನ ಮಾಡುತ್ತಿದ್ದೇವೆ. ಶ್ರೀ ಮಾನ್ ಕೆ. ಎಚ್. ಪಾಟೀಲರು ನವಯುಗ ಎಂದು ಹೇಳಿದರ, ಆದರೆ ಯಾರೂ ಕೂಡ ಈ ದೇಶವನ್ನು ರಾಮರಾಜ್ಯ ಮಾಡುವುದಕ್ಕಾಗುವುದಿಲ್ಲ. ಹರಿಹರ ಬ್ರಹ್ಮ ಬಂದರೂ ಮಾಡುವುದಕ್ಕಾಗುವುದಿಲ್ಲ. we have reaped beyond Control. ತಮಗೆ ಹೇಳಬೇಕಾದರೆ ಹಿಂದಿನದಕ್ಕಿಂತಲೂ ಉತ್ತಮವಾದ ಆಡಳಿತ ಈ ಸರ್ಕಾರ ಕೊಡುತ್ತದೆ ಎಂದು ಹೇಳುವುದರಲ್ಲಿ ಸಂಶಯವಿಲ್ಲ. ಇದಕ್ಕೆ ತಾವೆಲ್ಲರೂ ಸಹಕಾರ ನೀಡಬೇಕೆಂದು ಹೇಳುತ್ತೇನೆ. ಕರ್ನಾಟಕದ ಮಹಾಜನತೆಗೆ ಕಲ್ಯಾಣ ಮಾಡುವುದಕ್ಕೆ ಈ ಸಭೆಯ ಎಲ್ಲ ಸದಸ್ಯರೂ ಸಹಕರಿಸಬೇಕೆಂದು ಹೇಳಿ, ಈ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಂಥ ಅಧ್ಯಕ್ಷ ಮಹೋದಯರಿಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ (ಉಲ್ಲಾಳ್).—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಬಗ್ಗೆ ಬಂದಂಥ ನಿರ್ಣಯವನ್ನು ನಾನು ವಿರೋಧಿಸಿ ಕೆಲವು ವಿಚಾರಗಳನ್ನು ಹೇಳಲಿಕ್ಕೆ ಅಪೇಕ್ಷಿಪಡುತ್ತೇನೆ. ನಾನು ರಾಜ್ಯಪಾಲರ ಭಾಷಣವನ್ನು ನೋಡಿದಾಗ ಪ್ರಾರಂಭದಲ್ಲೇ ನಾವು ಅನ್ನವನ್ನು ಬಾಯಿಗೆ ಹಾಕಿದಾಗ ಕಲ್ಲುಗಳು ಸಿಕ್ಕಿದ ಹಾಗೆ ಇದರಲ್ಲ ಏನು ಕೋಟ್ಟಿದ್ದಾರೆ ಅನ್ನುವುದನ್ನು ತಮ್ಮ ಗಮನಕ್ಕೆ ತರ ಬಯಸುತ್ತೇನೆ. ಏನಿದೆ ಎಂದರೆ ದೇಶದಲ್ಲಿ ಕೆಲವು ತಿಂಗಳ ಹಿಂದೆ ದುರಂತ ಘಟನೆಯೊಂದು ನಡೆಯಿತು. ಕಳೆದ ಡಿಸೆಂಬರ್ ತಿಂಗಳಲ್ಲಿ ಲೋಕಸಭೆಗೆ ಚುನಾವಣೆಗಳು ನಡೆದುವು. ತನ್ನ ಉನ್ನತ ನೈತಿಕ ಮಟ್ಟವನ್ನು ಕಾಪಾಡಿಕೊಳ್ಳುವ ಸಲುವಾಗಿ ರಾಜ್ಯದ ಸಚಿವ ಸಂಪುದ ರಾಜೀನಾಮೆ ನೀಡಿತು. ಇದಾದ ನಂತರ ಕರ್ನಾಟಕದ ಜನತೆ ಬೃಹತ್ ಬೆಂಬಲ ನೀಡಿ ಜನತಾ ಪಕ್ಷವನ್ನು ಆಯ್ಕೆ ಮಾಡಿದೆ. ಇದರಲ್ಲಿ ದುರಂತ ಯಾವುದು ಎಂದು ನಾನು ಕೇಳಲು ಅಪೇಕ್ಷೆ ಪಡುತ್ತೇನೆ. ಕಳೆದ ಲೋಕಸಭಾ ಚುನಾವಣೆ ನಡೆದುದ್ದು ದುರಂತವೋ: ಅಥವಾ ಶ್ರೀ ರಾಮಕೃಷ್ಣ ಹೆಗಡೆಯವರ ರಾಜೀನಾಮೆ ಕೊಟ್ಟದ್ದು ದುರಂತವೋ: ಅಥವಾ ಈ ವಿಧಾನಸಭೆಯ ಚುನಾವಣೆಯಲ್ಲಿ ಅವರು ಮತ್ತೆ ಗೆದ್ದು ಬಂದದ್ದು ದುರಂತವೋ! ! ಬಹುಶಃ ಇದರಲ್ಲಿ ಭಾಷಾಂತರವೇನಾದರೂ ತಪ್ಪು ಇರಬಹುದು.

ಏನೇ ಆಗಲಿ ಈ ಭಾಷಣವನ್ನು ನೋಡುವಾಗ, ಕೂಲಿಗಾರರ, ಮಜ್ದೂರರ ಮತ್ತು ಮೀನುಗಾರರ ಹಿತದೃಷ್ಟಿ ಎಲ್ಲೂ ಕಾಣುತ್ತಾ ಇಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನನ್ನ ಕ್ಷೇತ್ರ ಬಹಳವಾಗಿ ಕೂಲಿಗಾರರು ಇರತಕ್ಕಂಥ ಕ್ಷೇತ್ರ, ಸುಮಾರು ಎರಡೂವರೆ ಲಕ್ಷ ಜನ ಇರತಕ್ಕಂಥ ಆ ಕ್ಷೇತ್ರದಲ್ಲಿ ಬೀಡಿ ಕಟ್ಟುತಕ್ಕವರು ಸಾವಿರಗಟ್ಟಲೆ ಜನ ಇದ್ದಾರೆ. ಅವರಿಗೆ ಕೊಡತಕ್ಕ ಕೂಲಿ ಕಡಿಮೆ ಇದೆ. ಪಕ್ಕದ ಕೇರಳ ರಾಜ್ಯದಲ್ಲಿ ರೂ. ೧೫–೬೦ ಪೈಸೆ ಕೊಡುತ್ತಾ ಇದ್ದಾರೆ. ಬೀಡಿ ಮಾಲೀಕರು ಮೂರು ತಿಂಗಳಿಗೊಮ್ಮೆ ದರವನ್ನು ಏರಿಸುತ್ತಾ ಇದ್ದಾರೆ. ಆದರೆ ನಮಗೆ ಏಕೆ ಸ್ವಲ್ಪ ಹೆಚ್ಚು ಕೂಲಿ ಸಿಗಬಾರದು ಎಂದು ಬೀಡಿ ಮಜ್ದೂರರು ಗೋಳಾಡತಕ್ಕ ಸಂದರ್ಭ ಇದೆ, ಆದುದರಿಂದ ಬಡವರ, ಕೂಲಿಗಾರರ ಅಭ್ಯುದಯವನ್ನು ಬಯಸತಕ್ಕ ಸರ್ಕಾರ ಈ ಕಡೆಗೆ ಹೆಚ್ಚಿನ ಯೋಚನೆ ಮಾಡಬೇಕು. ಆಮೇಲೆ ಹೆಂಚಿನ ಕಾರ್ಖಾನೆಗೆ ಹೋಗತಕ್ಕ ಮಜ್ದೂರರಿಗೆ ಕೊಡಬೇಕಾದಂಥ ಕೂಲಿಯ ಬಗ್ಗೆ ಅನೇಕ ವರ್ಷಗಳಿಂದ ಹೆಚ್ಚು ಮಾಡಬೇಕು ಎಂದು ಹೇಳತಕ್ಕಂಥ ವಿಚಾರದಲ್ಲಿ ಎಷ್ಟೆಷ್ಟು ಒಪ್ಪಂದಗಳಾದರೂ, ಮಾತುಕತೆಗಳಾದರೂ ಇನ್ನೂ ನಿಗದಿಯಾಗಿಲ್ಲ, ಎಲ್ಲೆಲ್ಲೂ ಮುಷ್ಕರ ಮಾಡುತ್ತಿದ್ದಾರೆ. ಆದುದರಿಂದ ಈ ಬಗ್ಗೆ ಸರ್ಕಾರ ಗಮನಕೂಡಬೇಕು. ಇನ್ನು ಕಡಲತಡಿಯಲ್ಲಿರತಕ್ಕ ಉಲ್ಲಾಳದಲ್ಲಿ ಮೀನುಗಾರರು ಜಾಸ್ತಿ ಇದ್ದಾರೆ. ನೆಲಸಂಪತ್ತು ಹೇಗೋ ಹಾಗೆಯೇ ಜಲಸಂಪತ್ತೂ ಸಿಗುತ್ತಾ ಇದೆ. ಇದರಿಂದ ಬೇಕಾದಷ್ಟು ಲಾಭವಾಗುತ್ತಿದೆ. ಇಡೀ ಕರ್ನಾಟಕಕ್ಕೆ ಪೌಷ್ಟಿಕ ಆಹಾರವನ್ನು ಹಂಚತಕ್ಕ ಒಂದು ಕಾರ್ಯಕ್ರಮ ನಮ್ಮ ಉಲ್ಲಾಳದಲ್ಲಿ ಮತ್ತು ಬೈಂದೂರು, ೧೮೦ ಮೈಲಿ ಇರತಕ್ಕ ಕರಾವಳಿ ಮೀನು

ಗಾರರು ಮಾಡುತ್ತಿದ್ದಾರೆ, ಪೌಷ್ಠಿಕ ಆಹಾರವನ್ನು ಕೊಡುತ್ತಿದ್ದಾರೆ. ಅಂತಹ ಮೀನುಗಾರರಿಗೆ ಮೀನು ಸಿಕ್ಕದೇಹೋದರೆ, ಕ್ಷಾಮ ಬಂದರೆ ಸಮುದ್ರದ ಕೊರೆತ ಬಂದರೆ ಅವರನ್ನು ಕೇಳತಕ್ಕಂಥವರಿಲ್ಲದೆ ದಿಕ್ಕಿಲ್ಲದೆ ಇರತಕ್ಕ ಬಡ ಮೀನುಗಾರರ ಬಗ್ಗೆ ಒಂದು ಚಕಾರ ಶಬ್ದ ಕೂಡ ಈ ಭಾಷಣದಲ್ಲಿ ಕಾಣುತ್ತಾ ಇಲ್ಲ. ಜಲ ಸಂಪತ್ತನ್ನು ಒದಗಿಸತಕ್ಕ ಬಡ ಮೀನುಗಾರರ ಬಗ್ಗೆ ಕಳಕಳಿ ಇಲ್ಲದೇ ಇರುವುದು ಬೇಸರ ತಂದಿದೆ. ಅದೇ ರೀತಿಯಲ್ಲಿ ಲಂಬಾಣಿಗಳು, ಮೆಟ್ಟು ಹೊಲಿಯತಕ್ಕವರು, ಹರಿಜನ–ಗಿರಿಜನರು, ಪರಿಶಿಷ್ಟ ವರ್ಗದವರು ಏನಿದ್ದಾರೆ ಅವರ ಅಭ್ಯುದಯಕ್ಕೆ, ಕಲ್ಯಾಣಕ್ಕೆ ಮತ್ತು ಅವರ ಏಳಿಗೆಗೆ ಬೇಕಾದಂಥ ಕಾರ್ಯಕ್ರಮಗಳು ಈ ಭಾಷಣದಲ್ಲಿ ನಮಗೆ ಕಾಣುತ್ತಿಲ್ಲ. ಉಲ್ಲಾಳದಲ್ಲಿ ಅಲ್ಪಸಂಖ್ಯಾತರೂ ಕೂಡ ಬಡವರಿದ್ದಾರೆ, ಅವರ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲ, ಬೀಡಿ ಕಟ್ಟತಕ್ಕ ಕೆಲಸವಿಲ್ಲದೆ ನಿರುದ್ಯೋಗದಲ್ಲಿದ್ದಾರೆ. ಇಂತಹವರಿಗೆ ಉದ್ಯೋಗ ಕೊಡತಕ್ಕ ಬಗ್ಗೆ ಈ ಭಾಷಣದಲ್ಲಿ ಎಲ್ಲೂ ಉಲ್ಲೇಖವಿಲ್ಲ. ಉಲ್ಲಾಳ್ ಅಂದರೆ ಅಲ್ಲಿ ಪ್ರಸಿದ್ಧವಾದ ದರ್ಗ ಇದೆ. ೪ ಕಡೆಗಳಲ್ಲಿ ಪ್ರಸಿದ್ಧವಾದ ದರ್ಗಗಳಿವೆ. ಅಜ್ಮೀರ, ನಾಗಪಟ್ಟಣ, ಗುಲ್ಬರ್ಗ ಮತ್ತು ಉಲ್ಲಾಳ. ಉಲ್ಲಾಳದಲ್ಲಿ ಪ್ರಸಿದ್ಧವಾದ ದರ್ಗಾ ಇದ್ದು ೫ ವರ್ಷಕ್ಕೊಮ್ಮೆ ಉರುಸ್ ನಡೆಯುತ್ತಾ ಇದೆ. ಸುಮಾರು ೨೦ ಲಕ್ಷ ಜನರು ಬರುತ್ತಾರೆ. ಏಪ್ರಿಲ್ ೧೨–೧೩–೧೪ ರಂದು ಉರುಸ್ ನಡೆಯುತ್ತದೆ. ಇಷ್ಟು ಪ್ರವಾಸಿಗರು ಬರತಕ್ಕಂಥ, ಪಡು ಕಡಲಿನ ರಮಣೀಯ ಪ್ರಕೃತಿ ಸೌಂದರ್ಯವಿರತಕ್ಕಂಥ ಪ್ರದೇಶದಲ್ಲಿ ಪ್ರವಾಸೋದ್ಯಮ ಕೇಂದ್ರವನ್ನು ಮಾಡತಕ್ಕ ಅಭಿಪ್ರಾಯ ನಮ್ಮ ಸರ್ಕಾರಕ್ಕೆ ಬರಲಿಲ್ಲ. ಇದರ ಬಗ್ಗೆ ಬಡ್ಜೆಟ್‌ನಲ್ಲಿ ಅಥವಾ ರಾಜ್ಯಪಾಲರ ಭಾಷಣದಲ್ಲೂ ಕೂಡ ಚಕಾರ ಶಬ್ದ ನಮಗೆ ಕಾಣುತ್ತಾ ಇಲ್ಲ. ಇದು ನಮ್ಮ ರಾಜ್ಯಕ್ಕೆ ಬಹಳ ಪ್ರಾಮುಖ್ಯವಾದಂಥ ವಿಚಾರ. ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, ನಮ್ಮ ರಾಜ್ಯದಲ್ಲಿ ಸಾವಿರಗಟ್ಟಲೆ ಜನರು ಭೂಮಿಯನ್ನು ಸಕ್ರಮಮಾಡಿ ಎಂದು ಕೇಳುತ್ತಿದ್ದಾರೆ. ಬಹಳಷ್ಟು ಜನರಿಗೆ ಸಕ್ರಮಮಾಡಿಲ್ಲ ಮತ್ತು ಪಟ್ಟ ಕೊಟ್ಟಿಲ್ಲ. ಪಟ್ಟ ಕೊಡದೇ ಇರುವುದರಿಂದ ಅವರಿಗೆ ಬಹಳ ತೊಂದರಯಾಗಿ ಕಷ್ಟದಲ್ಲಿದ್ದಾರೆ ಆದುದರಿಂದ ಆದಷ್ಟು ಬೇಗ ಅವರಿಗೆ ಪಟ್ಟಾ ಕೊಟ್ಟು ಖಾಯಂ ಮಾಡಬೇಕು. ಈ ವಿಚಾರ ರಾಜ್ಯಪಾಲರ ಭಾಷಣದಲ್ಲಿ ಕಾಣುತ್ತಾ ಇಲ್ಲ. ಆಮೇಲೆ ಅಲ್ಪಸಂಖ್ಯಾತರ ಒಂದು ನಿಗಮ ಮಾಡಿದ್ದಾರೆ. ಇದು ಹೇಗಿದೆಯೆಂದರೆ, ನಮಗೆ ಚಿಕ್ಕಂದಿನಲ್ಲಿ ಜಾದೂಗಾರರು ಕಣ್ಣಿಗೆ ಚಿತ್ರ ತೋರಿಸುತ್ತಿದ್ದರು, ಕಲ್ಕತ್ತ ದೇಖೋ, ಬಾಂಬೆ ದೇಖೋ, ಲಂಡನ್ ದೇಖೋ ಎಂದು ಚಿತ್ರಗಳನ್ನು ತೋರಿಸುತ್ತಿದ್ದರು. ಆ ರೀತಿ ಆಗಿದೆ. ಅಲ್ಪಸಂಖ್ಯಾತರ ನಿಗಮ ಏನು ಕೆಲಸ ಮಾಡುತ್ತಿದೆ? ಆದರಿಂದ ಏನು ಕೆಲಸವಾಗಿದೆ? ಅಲ್ಪಸಂಖ್ಯಾತರ ನಿಗಮದಲ್ಲಿ ಕೋಟಿಗಟ್ಟಲೆ ಹಣ ಇಡುತ್ತೇವೆಂದು ಹೇಳಿದ್ದಾರೆ, ಇಟ್ಟಿದ್ದಾರೋ ಇಲ್ಲವೋ ನಮಗೆ ಗೊತ್ತಿಲ್ಲ. ಗೋಡ್‌ವಾಲಾ ವರದಿ ನಮಗೆ ಬಂದಿಲ್ಲ. ಅಲ್ಪಸಂಖ್ಯಾತರ ಬಗ್ಗೆ ಕಳಕಳಿ ಇದೆಯೆಂದು ಹೇಳುತ್ತಾರೆ. ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗ ಮುಸಲ್ಮಾನರಿದ್ದಾರೆ, ಕ್ರಿಶ್ಚಿಯನ್ನರಿದ್ದಾರೆ, ಇವರ ಬಗ್ಗೆ ಕಳಕಳಿ ಇದ್ದರೆ ಗೋಡ್‌ವಾಲಾ ವರದಿಯನ್ನು ನಮಗೆಲ್ಲಾ ತಿಳಿಸಬೇಕು. ಅದು ನಿಗೂಢವಾಗಿ ಇರಬಾರದು. ಆಮೇಲೆ ಕನ್ನಡ ಪ್ರಥಮ ಭಾಷೆಯಾಗಬೇಕು. ಪ್ರಾಮುಖ್ಯವಾದ ಭಾಷೆಯಾಗಬೇಕು ಎಂಬ ಉದ್ದೇಶದಿಂದ ಕಾವಲು ಸಮಿತಿ ಮಾಡಿದರೂ ಕೂಡ ಅದಕ್ಕೆ ಎಲ್ಲರ ಸಹಕಾರ ಸಿಗುತ್ತಿಲ್ಲ. ಇದಕ್ಕೆ ಕೆಲವು ಅಧಿಕಾರಿಗಳು ಸಹಕಾರ ಮಾಡುತ್ತಾ ಇಲ್ಲ. ರಾಜ್ಯದಲ್ಲಿರತಕ್ಕ ಉರ್ದು ಶಾಲೆಗಳಲ್ಲಿ ೪,೦೦೦ ಕನ್ನಡ ಅಧ್ಯಾಪಕರಿಲ್ಲದೇ ಇರುವುದರಿಂದ ಕನ್ನಡ ಕಲಿಯಲಿಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನು ಸರಿಯಾಗಿ ತಿಳಿದುಕೊಳ್ಳದೆ ಕೆಲವರು ಮುಸಲ್ಮಾನರಿಗೆ ಕನ್ನಡ ಕಲಿಯಲಿಕ್ಕೆ ಅಭಿಮಾನವಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ೪೦೦೦ ಅಧ್ಯಾಪಕರನ್ನು ನೇಮಿಸದೇ ಇದ್ದರೆ ಉರ್ದು ಶಾಲೆಗಳಲ್ಲಿ ಕನ್ನಡವನ್ನು ಕಲಿಯಲು ಸಾಧ್ಯವಾಗುವುದಿಲ್ಲ. ಈ ಸಂದರ್ಭದಲ್ಲಿ ಶ್ರೀ ಕೆ.ವಿ. ಪುಟ್ಟಪ್ಪನವರು ಹೇಳಿರುವುದು ಜ್ಞಾಪಕಕ್ಕೆ ಬರುತ್ತಿದೆ. ಅದು ಹೀಗಿದೆ :

“ಉತ್ತರದ ಕಾಶಿಯಲ್ಲಿ ಕತ್ತೆವಿದ್ಯೆ ತರೆಲು ದಕ್ಷಿಣದ

ದೇಶಕರು ಕುದುರೆಯಹುದೆ?

ತಾಯಿತ್ತ ಮೊಲೆಹಾಲೆ ನಿಮ್ಮ ಮೈಗಾಗದಿರೆ

ಹೊತ್ತ ಹೊರೆ ಫಲಕಾರಿ ನೆತ್ತರಹುದೆ?

ಇಲ್ಲಿ ರಾಷ್ಟ್ರಭಾಷೆಯಾಗಲಿ, ಸಂಸ್ಕೃತವಾಗಲಿ, ಇಂಗ್ಲೀಷಾಗಲಿ, ಮಾತೃಭಾಷೆಯಾಗಲಿ, ಕರ್ನಾಟಕದಲ್ಲಿ ಕನ್ನಡ ಪ್ರಥಮಭಾಷೆಯಾಗಬೇಕು. ಇಷ್ಟನ್ನು ಹೇಳಿ, ರಾಜ್ಯಪಾಲರ ಭಾಷಣದ ಬಗ್ಗೆ ನಾಲ್ಕು ಸಾಲಿನ ಪದ್ಯವನ್ನು ರಚಿಸಿದ್ದೇನೆ. ಅದು ಈ ರೀತಿ ಇದೆ :

"ರಾಜ್ಯಪಾಲರ ಭಾಷಣ ಸಕ್ಕರೆ ಪಾಕ ಸವರಿದ ಕಹಿ ಗುಳಿಗೆ
ಇದರಿಂದ ಆಗಲಹುದೇ ಬಡಜನರ ಏಳಿಗೆ
ಬಡವರ ಉದ್ಧಾರದ ಬಗ್ಗೆ ಇದೆಯೇನು ಚಿಂತೆ
ಇದು ಬರೀ ಭರವಸೆಗಳ ಕಂತೆ"

ಇಷ್ಟು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ......

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಒಂದೂವರೆ ಮಂತ್ರಿಗಳು ಕೂಡ ಇಲ್ಲ.

ಅಧ್ಯಕ್ಷರು.—ತಾವು ಸಹಕಾರ ಕೊಡಿ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈಗ ಸಭೆಯಲ್ಲಿ ಒಂದೂವರೆ ಮಂತ್ರಿಗಳು ಕೂಡ ಇಲ್ಲ ಆಂದರೆ ಚರ್ಚೆ ಹೇಗೆ ನಡೆಯಬೇಕು ?

ಅಧ್ಯಕ್ಷರು.—ತಮಗೆ ಮಂತ್ರಿಯಾಗಿ ಅನುಭವ ಇದೆ, ಇಲ್ಲಿಯವರೆಗೆ ಸಹಕಾರ ಕೊಟ್ಟಿರಿ, ಇವತ್ತು ಇದನ್ನು ಮುಗಿಸಬೇಕಾಗಿದೆ.

ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೆ, ಈಗ ಸಮಯ ೬ ಗಂಟೆ. ನಾನು ಮೊದಲೇ ಮಾತನಾಡಬೇಕಿತ್ತು. ಮಾನ್ಯ ಸದಸ್ಯರು ಈ ಹೊತ್ತು ರಾಜ್ಯಪಾಲರ ಭಾಷಣದ ಬಗ್ಗೆ ಹಲವಾರು ವಿಷಯಗಳನ್ನು ನಮ್ಮ ಮುಂದಿಟ್ಟಿದ್ದಾರೆ. ಇದರಲ್ಲಿ ಏನೇನು ವಿಷಯಗಳಿವೆ ಅದರ ಮೇಲೆ ಅವರ ಮೇಲೆ ಅವರವರ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಅವರ ಅಭಿಪ್ರಾಯಗಳ ಬಗ್ಗೆ ನಾನು ಪುನರುಚ್ಚಾರಣೆ ಮಾಡದೆ ಒಂದೆರಡು ಮಾತುಗಳನ್ನು ಆಡಿ ನನ್ನ ಮಾತನ್ನು ಮುಗಿಸುತ್ತೇನೆ. ಈ ರಾಜ್ಯಪಾಲರ ಭಾಷಣಕ್ಕೂ ಈ ಬಡ್ಜೆಟ್ ಭಾಷಣಕ್ಕೂ ವ್ಯತ್ಯಾಸವುಂಟು. ರಾಜ್ಯಪಾಲರ ಭಾಷಣವನ್ನು ಮೊದಲು ತೆಗೆದುಕೊಂಡು ಬಡ್ಜೆಟನ್ನು ನಂತರ ತೆಗೆದುಕೊಂಡಿದ್ದರೆ ಸುಗಮವಾಗುತ್ತಿತ್ತು ; ಅದು ಸಂಪ್ರದಾಯವೂ ಕೂಡ. ಈಗ ರಾಜ್ಯಪಾಲರ ಭಾಷಣದ ತತ್ವ, ಗುರಿ ಏನೆಂದರೆ, ಈ ಸರ್ಕಾರ ಈ ವರ್ಷದಲ್ಲಿ ಮಾಡಬೇಕಾಗಿರತಕ್ಕಂಥ ಕಾರ್ಯಕ್ರಮಗಳ ಪಟ್ಟಿಯನ್ನು ಕೊಟ್ಟು ಈ ಕಾರ್ಯಕ್ರಮಗಳನ್ನು ನಿಷ್ಠೆಯಿಂದ ಕಾರ್ಯಗತ ಮಾಡುತ್ತೇವೆ ಎಂದು ಹೇಳತಕ್ಕಂಥಾದ್ದು ಈ ಒಂದು ಭಾಷಣದಲ್ಲಿ ಅಡಗಿರಬೇಕು. ರಾಜ್ಯಾಂಗದ ೧೭೬ನೇ ಕಲಮಿನಲ್ಲಿ ಅಡಗಿರತಕ್ಕಂಥಾದ್ದು. ಒಂದು ನನಗೆ ಖೇದವಾಗಿರತಕ್ಕ ಮಾತು ಅಂದರೆ, ರಾಜ್ಯಪಾಲರು, ಸರ್ಕಾರದವರು ತಿದ್ದಿ ಬರೆದುಕೊಟ್ಟಿರತಕ್ಕ ಭಾಷಣವನ್ನು ಈ ಸದನದಲ್ಲಿ ಬಂದುಬಿಟ್ಟು ಓದಿದ್ದಾರೆ. ಅವರ ಮೇಲೆ ಬಹಳ ದೊಡ್ಡ ಜವಾಬ್ದಾರಿ ಉಂಟು. ಬರೆದುಕೊಟ್ಟಿರತಕ್ಕ ಭಾಷಣ ಏನಿದೆ ಅದನ್ನು ಚಾಚೂತಪ್ಪದೆ ಓದುತ್ತಿದ್ದಾರೆ. ಅದು ಸರಿಯಲ್ಲ, ಸರ್ಕಾರದಲ್ಲಿ ಏನಾಗುತ್ತಿದೆ, ಅದರ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿ. ಕೂಲಂಕಷವಾಗಿ ನೋಡಿ ಅದನ್ನು ತಿದ್ದುಪಡಿ ಮಾಡಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನ್ನ ವಾದ.

ಒಬ್ಬ ಮಾನ್ಯ ಸದಸ್ಯರು.—ಕಳೆದ ೩೫ ವರ್ಷದಿಂದಲೂ ರಾಜ್ಯಪಾಲರು ಅದೇ ಮಾಡಿಕೊಂಡು ಬಂದಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ತಾವು ಇನ್ನೂ ಚಿಕ್ಕವರು ಇದ್ದೀರಿ. ದಯಮಾಡಿ ಕುಳಿತುಕೊಳ್ಳಬೇಕು. ರಾಜ್ಯಾಂಗದ ೧೫೪ ನೇ ಕಲಂನಲ್ಲಿ ಏನು ಇದೆ ಓದುತ್ತೇನೆ.

Artical-154.

"154 Executive power of State-(1) The Executive power of the State shall be vested in the Governor and shall

be exercised by him either directly or through officers subordinate to him in accosdance with the constitution.

ಕಾನ್‌ಸ್ಟಿಟ್ಯೂಷನ್ ಪ್ರಕಾರ ಅವರ ಮೇಲಿರತಕ್ಕ ಜವಾಬ್ದಾರಿ ನೋಡಬೇಕಾಗಿತ್ತು. ಆದ್ದರಿಂದ, ಭಾಷಣದಲ್ಲಿ ಏನು ಅಡಕವಾಗಿದೆ ಎನ್ನುವುದನ್ನು ಅವರು ನೋಡಬೇಕಾಗಿತ್ತು. ಅವರು ಅದನ್ನು ನೋಡದೇ ಬಂದು ಭಾಷಣ ಮಾಡಿದ್ದು ನನಗೆ ಸರಿಬೀಳಲಿಲ್ಲ. ರಾಜ್ಯಪಾಲರು ಈವರೆಗೆ ಏನೇನು ಕೆಲಸ ವಾಗಿದೆ ಎಂದು ನೋಡಿದರೆ ಒಳ್ಳೆಯದು. ಅವರ ಬಗ್ಗೆ ನಾನು ಹೇಳುವುದು, ಬಿಡುವುದು ಬೇರೆ ವಿಚಾರ, ಅವರು ಸರಿಯಾಗಿ ಕೆಲಸ ನಿರ್ವಹಣೆ ಮಾಡುತ್ತಿಲ್ಲ ಎಂದು ನನಗೆ ಮನವರಿಕೆಯಾಗಿದೆ. ಕಾಂಗ್ರೆಸ್ ಪಕ್ಷದ ಸರ್ಕಾರವಾಗಲಿ, ಜನತಾ ಪಕ್ಷದ ಸರ್ಕಾರವಾಗಲಿ, ಯಾವುದೇ ಪಕ್ಷದ ಸರ್ಕಾರ ನಡೆಸುತ್ತಿರಲಿ, ಸರ್ಕಾರ ನಡೆಸತಕ್ಕವರು ಜನಗಳಿಗೆ ಹೇಳಿದ್ದನ್ನು ಕಾರ್ಯಗತ ಮಾಡಿದ್ದಾರೆಯೇ ಅಥವಾ ಮಾಡಲಿಕ್ಕೆ ಆಗಿಲ್ಲವೇ ಅದರ ಬಗ್ಗೆ ಗಮನಿಸಬೇಕಾಗಿತ್ತು. ಇವರು ಗಮನಹರಿಸಲಿಕ್ಕೆ ಹೋಗುತ್ತಿಲ್ಲ. ಚುನಾವಣೆಯಾದ ನಂತರ ಸರ್ಕಾರ ಅಧಿಕಾರಕ್ಕೆ ಬಂದಿದ್ದರೆ ಆ ಮಾತು ಬೇರೆ. ಈ ಸರ್ಕಾರ ಎರಡು ವರ್ಷಗಳಿಂದ ಮುಂದುವರಿದುಕೊಂಡು ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳಾದಂಥ ರಾಮಕೃಷ್ಣ ಹೆಗಡೆಯವರು ಏನು ಹೇಳಿದ್ದರು ಅವರು ಏನು ಗೊತ್ತುಗುರಿ ಇಟ್ಟುಕೊಂಡಿದ್ದರು, ಅವುಗಳೆನ್ನೆಲ್ಲಾ ಕಾರ್ಯಗತ ಮಾಡಿಕೊಂಡು ಹೋಗಬೇಕಾಗಿತ್ತು. ಅದನ್ನು ಮಾಡದೆ, ಕಳೆದ ಎರಡು ವರ್ಷಗಳಲ್ಲಿ ಹೇಳಿದ್ದ ವಿಚಾರಗಳು ಕೆಲಸ ಮಾಡದೆ ಅದೇ ವಿಚಾರಗಳು ರಾಜ್ಯಪಾಲರ ಭಾಷಣದಲ್ಲಿ ಪುನಃ ಅಡಕವಾಗಿವೆ. ನಾನು ಶ್ರೀ ರಾಮಕೃಷ್ಣ ಹೆಗಡೆಯವರು ಇವರು ಮುಖ್ಯ ಮಂತ್ರಿಗಳು ಆದ ತಕ್ಷಣ ೧೨ನೇ ಜನವರಿ ೧೯೮೩ರ PATRIOT ಎನ್ನು ಪತ್ರಿಕೆಯಲ್ಲಿ ಹೇಳಿದ್ದನ್ನು ಓದುತ್ತಿದ್ದೇನೆ.

Hegde for probe into Cong-I graft cases.

"Karnataka Chief Minister Ramakrishna Hegde said here today that his Government would inquire into 'concrete cases of corruption' against the previous Congress-I Government.

In an interview to UNI, he said that the peoele of the State were "disillusioned and dissatisfied and obviously wanted a change of Government as they were disgusted with poltical and administrative corruption and non-performance of the previous Government." ಎಂದು ಹೇಳಿದ್ದಾರೆ. ಅನಂತರ ಇವರು ಯಾವರೀತಿಯಾಗಿ ಲಂಚರುಷುವತ್ತು ಇಲ್ಲದ ರೀತಿಯಲ್ಲಿ ಮಾಡಿದ್ದಾರೆಯೇ ? ನಾವು ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ಹಿಂದಿನ ಸರ್ಕಾರಕ್ಕೂ ಇವರು ಮಾಡಿರತಕ್ಕದ್ದಕ್ಕೂ ಯಾವ ವ್ಯತ್ಯಾಸ ಇಲ್ಲ ಎನ್ನುವುದು ಮನವರಿಕೆಯಾಗಿದೆ ಎಂದು ಮಾನ್ಯ ಸದಸ್ಯರೆಲ್ಲರೂ ವ್ಯಕ್ತಪಡಿಸಿದ್ದಾರೆ. ಇವೊತ್ತು ಕರ್ನಾಟಕ ರಾಜ್ಯದಲ್ಲಿ ಎಲ್ಲಿಯೇ ಹೋಗಲಿ, ಯಾವ ಕಛೇರಿಗೆ ಹೋಗಲಿ, ಯಾವ ಕ್ಷೇತ್ರವನ್ನೇ ತೆಗೆದುಕೊಳ್ಳಲಿ, ಮಾನ್ಯ ರಾಮಕೃಷ್ಣ ಹೆಗಡೆಯವರು ಎರಡು ವರ್ಷಗಳಿಂದ ಜನಗಳಿಂದ ಜನಗಳಿಗೆ ಏನು ಭರವಸೆ ಕೊಟ್ಟಿದ್ದರು ಅದನ್ನು ಕಾರ್ಯಗತ ಮಾಡಿದ್ದಾರೆಯೇ ಎಂದು ನೋಡಿದರೆ ಮಾಡಿಲ್ಲ ಎನ್ನುವುದು ಸ್ಪಷ್ಟವಾಗಿದೆ. On the economic front, the Chief Minister said his Government would concentrate an arr sting price rise, removal of poverty and providing employment to the unemployed. Industrialisation would go on unhampered. ಇದರಲ್ಲಿ ಪ್ರೈಸ್ ರೈಸ್ ಬಗ್ಗೆ ಮೂರು ಸದಸ್ಯರ ಸಮಿತಿಯನ್ನು ಮಾಡಿದ್ದರೂ ಅದು ಪರಿಣಾಮಕಾರಿಯಾಗಲಿಲ್ಲ. ನಾನು ಪೂರ್ಣವಾಗಿ ಅದರ ಬಗ್ಗೆ ವಿಚಾರ ಮಾಡಲಿಕ್ಕೆ ಹೋಗುವುದಿಲ್ಲ. Removal of poverty and providing emyloyment to the unemployed. ಎಷ್ಟು ಯಶಸ್ವಿಯಾಗಿದ್ದಾರೆ? ಪ್ರತಿಯೊಂದು ಕುಟುಂಬಕ್ಕೂ ಉದ್ಯೋಗ ಕೊಡುತ್ತೇವೆಂದು ಎರಡು ವರ್ಷದಿಂದಲೂ ಏನು ಹೇಳಿದ್ದಾರೆ ಅದನ್ನೇ ರಾಜ್ಯಪಾಲರ ಭಾಷಣದಲ್ಲಿ ಪುನುರಚ್ಚಾರ ಮಾಡಿದ್ದಾರೆಯೇ ಹೊರತು ಬೇರೆ ಹೊಸದು ಏನನ್ನೂ ಹೇಳಿಲ್ಲ. "Another task of the Government would be to

provide social justice to the downtrodden and neglected sections of society, Mr. Hegde said.'' ಈಗ ಸೋಷಿಯಲ್ ಜಸ್ಟಿಸ್ ಆಗಬೇಕೆಂದು ವ್ಯಕ್ತಪಡಿಸಿದರು. ಈ ಸರ್ಕಾರದ ಪ್ರಯತ್ನ ಮೊದಲಿನಿಂದ ಇಲ್ಲಿಯವರೆಗೂ ನಿರಂತರವಾಗಿ ಹಾಗೆ ನಡೆದುಕೊಂಡು ಬಂದಿದೆ. ಈ ದೇಶದಲ್ಲಿ ಸಾಹುಕಾರರು, ಹಣವಂತರು, ಭೂಮಾಲೀಕರು, ಮೇಲ್ದರ್ಜೆಯವರು ಯಾರು ಇದ್ದಾರೆ ಅವರು ಬೇರೆಯವರ ಮೇಲೆ ಹೊರೆ ಹೊರಿಸತಕ್ಕ ಕೆಲಸವನ್ನೇ ಮಾಡಿಕೊಂಡುಬಂದಿದ್ದಾರೆ. ಅನುಸೂಚಿತಜಾತಿ, ಅನುಸೂಚಿತ ಪಂಗಡ, ಹಿಂದುಳಿದ ವರ್ಗದವರು ಏನಿದ್ದಾರೆ ಅವರು ಬಹಳ ಕನಿಷ್ಟ ಅವಸ್ಥೆಯಲ್ಲಿ ಜೀವನ ಮಾಡುತ್ತಿದ್ದಾರೆ. ಇವತ್ತು ಶೇಕಡ ನಲವತ್ತು ಭಾಗದಷ್ಟು ಜನ ಈ ಬಡತನದ ಗೆರೆಯ ಕೆಳಭಾಗದಲ್ಲಿ ಜೀವನ ಮಾಡುತ್ತಿದ್ದಾರೆ. ಇವರು ಬಡತನ ಹೋಗಬೇಕೆಂದು ಈ ಭಾಷಣದಲ್ಲಿ ಹೇಳಿದರೆ. ಎರಡು ವರ್ಷಗಳ ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರ ಸ್ವೀಕಾರ ಮಾಡಿದ್ದರು. ಆಗ ಏನೇನು ಹೇಳಿದರು ಈಗಲೂ ಸಹ ಪುನಃ ಅದನ್ನೇ ಹೇಳುತ್ತಿದ್ದಾರೆ. ಗವರ್ನರ್ ಆಗಲೂ ಇದ್ದರು; ಈಗಲೂ ಇದ್ದಾರೆ, ಇವರು ಹಿಂದೆ ಏನು ಹೇಳಿದ್ದರು, ಏನು ಮಾಡಿದ್ದಾರೆ ಎನ್ನುವುದನ್ನು ಕೇಳುವುದಿಲ್ಲ. ಕಾನ್‌ಸ್ಟಿಟ್ಯೂಷನ್ನಿನ ಗೌರ್ನರವರು ೧೫೪ನೇ ಕಲಮ್ ಪ್ರಕಾರ ಪ್ರತಿ ಗವರ್ನರ್‌ಗೂ ಸ್ವಾಯತ್ತ ಅಧಿಕಾರ ಇದೆ. ೧೫೪ನೇ ಕಲಮ್ ಪ್ರಕಾರ ದೀರ್ಘವಾಗಿ ಯೋಚನೆ ಮಾಡಿ ಈ ಸರ್ಕಾರ ಹಿಂದೆ ಏನು ಹೇಳಿದ್ದರು ಮತ್ತು ಮಾಡಿದ್ದರು ಈ ಭಾಷಣದಲ್ಲಿ ಹೊಸದಾಗಿ ಏನು ಹೇಳಬೇಕಾಗಿದೆ ಎಂದು ನೋಡಬೇಕಾಗುತ್ತದೆ. ಇನ್ನು ಸೆಂಟ್ರಲ್ ಅಂಡ್ ಸ್ಟೇಟ್ ರಿಲೇಷನ್‌ಷಿಪ್ ಬಗ್ಗೆ ಹೇಳಬೇಕೆಂದರೆ, "Asked about Centre-State relations Mr. Hegde said, he expected the Centre to co-operate with his Government. He had said at his first press conference after assuming office yesterday that he did not believe in a confrontation with the ceatre, though he would not tolerate step-motherly attitude towards his Government.'' ಇನ್ನು ಕನ್‌ಫ್ರಾನ್‌ಟೇಷನ್ ಬೇಕಾಗಿಲ್ಲ ಎಂದು ಇವೊತ್ತು ಹೇಳಿದ್ದಾರೆ. ಮೊನ್ನೆ ನಮ್ಮ ಕೌನ್ಸಿಲ್‌ನಲ್ಲಿ ಕನ್‌ಫ್ರಾನ್‌ಟೇಷನ್‌ಗೆ ತಯಾರಾಗಿದ್ದೇನೆ ಎಂದು ಹೇಳಿದ್ದಾರೆ. ಕನ್‌ಫ್ರಾನ್‌ಟೇಷನ್ ಮೇಲೆ ರಾಜ್ಯಭಾರ ಮಾಡುವುದಾದರೆ ಎಲ್ಲಿಯವರೆಗೆ ಇದು ನಡೆಯುತ್ತದೆ ? ಈಗ ಮನುಷ್ಯ ಅಂದಮೇಲೆ ಸಿಟ್ಟು ಬರುವುದಿಲ್ಲವೇ ? ಇವರು ಕೇಂದ್ರ ಸರ್ಕಾರದವರು ಸಹಾಯ ಮಾಡಲಿಲ್ಲ ಎನ್ನುವ ವಾದ ಇದೆ. ಅವರು ಸಹಾಯ ಯಾವ ರೂಪದಲ್ಲಿ ಮಾಡಬೇಕು ಅದಕ್ಕೆ ಒಂದು ನೀತಿ ಇಲ್ಲವೇ ? ಕೆಲವು ಯೋಜನೆಗೆ ಒಳಪಟ್ಟ ಖರ್ಚುಗಳು ಇರುತ್ತವೆ, ಇವುಗಳನ್ನು ವಿನಾ ಖರ್ಚು ಮಾಡಲಿಕ್ಕೆ ಹೋದರೆ ಯಾವರೀತಿಯಲ್ಲಿ ಕೇಂದ್ರ ಸರ್ಕಾರ ಸಹಾಯ ಮಾಡುತ್ತದೆ. ಈಗ ಪ್ಲಾನ್ ಎಕ್ಸ್‌ಪೆಂಡಿಚರ್ ಮತ್ತು ನಾನ್‌ಪ್ಲಾನ್ ಎಕ್ಸ್‌ಪೆಂಡಿಚರ್ ಇರುತ್ತದೆ. ಹಲವಾರು ಖರ್ಚಿನ ಬಾಬುಗಳು ಬಜೆಟಿನಲ್ಲಿ ಇರುತ್ತವೆ. ರಾಜ್ಯಪಾಲರ ಭಾಷಣದಲ್ಲಿ ಹಲವಾರು ಖರ್ಚಿನ ಬಾಬುಗಳು ಇರುತ್ತವೆ. ಇದರಲ್ಲಿ ಯೋಜನೆಗೆ ಸಂಬಂಧಪಟ್ಟ ಬಾಬುಗಳು ಇಲ್ಲವೇ ಇಲ್ಲ. ಯೋಜನೆಗೆ ಬಾಹಿರವಾದ ಖರ್ಚು ಎಲ್ಲಿಯವರೆಗೆ ಮಾಡುತ್ತಿರುತ್ತೀರೋ ಅಲ್ಲಿಯವರೆಗೂ ಖೋತಾ ಬಜೆಟ್ ಇದ್ದೇ ಇರುತ್ತದೆ. ಯೋಜನೆಗೆ ಬಾಹಿರವಾಗಿರತಕ್ಕ ಬಾಬುಗಳನ್ನು ಕಡಿಮೆ ಮಾಡದೇ ಹೋದರೆ ಯಾವರೀತಿ ಸರಿಪಡಿಸುತ್ತೀರಾ ? ಈಗ ಆರುನೂರು ಕೋಟಿ ರೂಪಾಯಿ ಖೋತಾ ಇಟ್ಟುಕೊಂಡಿದ್ದೀರಿ ಇನ್ನು ಪುನಃ ಎಷ್ಟು ಆಗುತ್ತದ.

೫–೩೦ ಪಿ.ಎಂ.

ಯೋಜನಾ ಬಾಹಿರ ಖರ್ಚಾಗಿವೆ. ತಾಳಿ ಭಾಗ್ಯ ಯೋಜನೆ ಪ್ರಕಾರ, ನಾಲ್ಕು ಕೋಟಿ ಜನ ಸಂಖ್ಯೆಯಲ್ಲಿ ಒಂದು ವರ್ಷಕ್ಕೆ ಸರಾಸರಿ ಎರಡು ಲಕ್ಷ ಜನ ಮದುವೆ ಆಗುತ್ತಾರೆಂದು ಇಟ್ಟುಕೊಂಡರೂ ಎರಡು ಲಕ್ಷ ತಾಳಿಗೆ ಅರ್ಧ ಸವರನ್ ಬಂಗಾರದಂತೆ ಲೆಕ್ಕ ಹಾಕಿದರೂ ಒಂದು ಸಾವಿರ ಸವರನ್ ಬಂಗಾರ ಬೇಕಾಗುತ್ತದೆ. ಇದರ ಪ್ರಕಾರ ೨೦ ಕೋಟಿ ರೂಪಾಯಿ ಬೇಕಾಗುತ್ತದೆ, ಇನ್ನು ಸೀರೆ, ಧೋತಿ ಮತ್ತು ಪಾತ್ರೆಗಳಿಗೆ ತಲಾ ೪೦೦ ರೂಪಾಯಿ ಇಟ್ಟುಕೊಂಡರೂ...

ಶ್ರೀ ಆರ್. ಎಲ್. ಜಾಲಪ್ಪ.—ಮಾನ್ಯ ಅಧ್ಯಕ್ಷರೇ, ಇವರು ಆಕಾಶದಲ್ಲಿರತಕ್ಕ ನಕ್ಷತ್ರಗಳನ್ನು ಲೆಕ್ಕ ಹಾಕಿದಂತೆ ಹಾಕುತ್ತಾರೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ ೫೦ ಭಾಗದ ಜನ ಬಡತನ ರೇಖೆಯಿಂದ ಕೆಳಗೆ ಇದ್ದಾರೆ. ಇವರು ಎರಡು ಕೋಟಿ ಜನ ಆಗಬಹುದು ; ಒಂದು ಪರ್ಸೆಂಟ್‌ನಂತೆ ಲೆಕ್ಕ ಹಾಕಿದರೂ ಕೂಡ ಎಷ್ಟು ಆಗುತ್ತದೆ ?

ಶ್ರೀ ಬಿ. ಬಸವಲಿಂಗಪ್ಪ —ಇವರ ಮನಸ್ಸಿನಲ್ಲಿ ಕಸಿವಿಸಿಯಾಗುತ್ತಿದೆ. ಒಂದು ಕೋಟಿ ಹೆಣ್ಣು ಮಕ್ಕಳು ಮದುವೆಗೆ ಸಿದ್ಧರಾದರೆ ೨೦ ಕೋಟಿ ರೂಪಾಯಿ ತಾಳಿಗೆ ಬೇಕಾಗುತ್ತವೆ. ಇನ್ನು ಸೀರೆ, ಧೋತ್ರ ಹಾಗೂ ಪಾತ್ರೆಗಳಿಗೆ ೮ ಕೋಟಿ ರೂಪಾಯಿ ಬೇಕಾಗುತ್ತದೆ. ದುರ್ಬಲವರ್ಗದವರಿಗೆ ಎರಡೆರಡು ಜೊತೆಗೆ ಸೀರೆ, ಧೋತಿಗಳಿಗೆ ಒಂದು ಕೋಟಿ ಜನರಿಗೆ ಎಂದು ಲೆಕ್ಕ ಹಾಕಿದರೂ ೮೦ ಕೋಟಿ ರೂಪಾಯಿ ಆಗುತ್ತದೆ. ವಿಧವೆಯರಿಗೆ ಮಾಶಾಸನ ಕೊಡುತ್ತಿದ್ದೀರಿ, ಅರ್ಧ ಪರ್ಸೆಂಟ್ ಲೆಕ್ಕ ಹಾಕಿದರೂ ಎರಡು ಲಕ್ಷ ಜನರಿಗೆ ಮಾಶಾನ ಕೊಡಬೇಕಾದರೆ ೧೦ ಕೋಟಿ ರೂಪಾಯಿ ಬೇಕಾಗುತ್ತದೆ. ಗರ್ಭಿಣಿಯಾದ ಕೃಷಿ ಕಾರ್ಮಿಕ ಮಹಿಳೆಯರಿಗೆ ಇವರ ಅಂದಾಜು ಹತ್ತು ಲಕ್ಷ ಆಗಬಹುದು ; ಬೇಡ ೫ ಲಕ್ಷ ಹಾಕಿದರೂ ಮೂರು ತಿಂಗಳಿಗೆ ಮೂರು ಮುಕ್ಕಾಲು ಕೋಟಿ ಆಗುತ್ತದೆ. ಇನ್ನು ಎರಡು ರೂಪಾಯಿ ಅಕ್ಕಿ ಕೊಡುತ್ತೇವೆಂದು ಹೇಳಿದ್ದೀರಿ. ಒಬ್ಬ ಮನುಷ್ಯನಿಗೆ ಒಂದು ತಿಂಗಳಿಗೆ ೪ ಕೆ.ಜಿ. ಕೊಟ್ಟರೂ ೧೨ ತಿಂಗಳಿಗೆ ೪೮ ಕೆ.ಜಿ. ಕೊಡಬೇಕಾಗುತ್ತದೆ. ಇದರ ಬೆಲೆಯನ್ನು ಸರಾಸರಿ ಮೂರು ರೂಪಾಯಿ ಇಟ್ಟುಕೊಳ್ಳಿ, ಬಡತನದ ರೇಖೆಯಿಂದ ಕೆಳಗೆ ಇರತಕ್ಕವರು ೪೦ ಪರ್ಸೆಂಟ್ ಇದ್ದಾರೆ ; ಇದರಲ್ಲಿ ಕೃಷಿ ಕಾರ್ಮಿಕರು ೧೭ ಪರ್ಸೆಂಟ್ ಇದ್ದಾರೆ, ಒಂದು ರೂಪಾಯಿ ಸಬ್ಸಿಡಿ ಕೊಟ್ಟರೂ ೪೪ ಕೋಟಿ ರೂಪಾಯಿ ಆಗುತ್ತದೆ. ಇದೆಲ್ಲಾ ಒಟ್ಟು ಸೇರಿ ಸುಮಾರು ೨೮೪.೩೦ ಕೋಟಿ ರೂಪಾಯಿಗಳನ್ನು ಇವರು ಖರ್ಚು ಮಾಡಬೇಕಾಗುತ್ತದೆ. ಇದು ಯೋಜನ ಬಾಹಿರವಾದಂಥ ಖರ್ಚು.

ಶ್ರೀ ಆರ್. ಎಲ್. ಜಾಲಪ್ಪ.—ಕಳೆದ ಮೂವತ್ತು ವರ್ಷಗಳಿಂದ ರಾಜ್ಯಭಾರ ಮಾಡಿದವರ ಪರಿಣಾಮ ಬಡತನ ಹೆಚ್ಚಾಗಿದೆ, ಇವತ್ತು ಇದರ ಲೆಕ್ಕ ಹಾಕಿ ನಮಗೆ ಹೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ಸ್ವಾಮಿ, ಬಡತನದ ನಿವಾರಣೆ ಮಾಡುವ ಕೆಲಸವನ್ನು ಮಾನ್ಯ ರಾಮಕೃಷ್ಣ ಹೆಗಡೆಯವರು ಗುತ್ತಿಗೆ ತೆಗೆದುಕೊಂಡಿದ್ದಾರೆ,

ಶ್ರೀ ಆರ್. ಎಲ್. ಜಾಲಪ್ಪ.—ಗರೀಬಿ ಹಠಾವೋ ಯಾರು ಗುತ್ತಿಗೆ ತೆಗೆದುಕೊಂಡಿದ್ದರು !

ಶ್ರೀ ಬಿ. ಬಸವಲಿಂಗಪ್ಪ.—೨೦ ಅಂಶಗಳ ಕಾರ್ಯಕ್ರಮದ ಮೇರೆಗೆ ನಾವು ಕೆಲಸ ಮಾಡಿದ್ದೇವೆ. ನೀವು ಹಾಕಿರುವಂಥ ಯೋಜನೆಗಳು ೧೦೦ ಅಂಶಗಳಾಗುತ್ತವೆ. ೨೮೪ ಕೋಟಿ ರೂಪಾಯಿ ಖರ್ಚು ಮಾಡಿ, ಸರ್ಕಾರದ ವ್ಯವಹಾರವನ್ನು ಯಾವ ರೀತಿ ನಿರ್ವಹಿಸುತ್ತೀರಿ. ಈಗಾಗಲೇ ೬೨೦ ಕೋಟಿ ರೂಪಾಯಿ ಖೋತಾ ಇಟ್ಟುಕೊಂಡಿದ್ದೀರಿ. ಇದರ ಜೊತೆಗೆ ಅನಾವಶ್ಯಕವಾಗಿ ಖರ್ಚು ಮಾಡುವುದಕ್ಕೆ ಹೊರಟಿದ್ದೀರಿ. ಬಡವರಾಗಿರತಕ್ಕವರು ಯಾರು ಭಿಕ್ಷೆ ಬೇಡುವುದಿಲ್ಲ. ಅವರನ್ನು ಭಿಕ್ಷುಕರನ್ನಾಗಿ ಮಾಡುತ್ತೀರಲ್ಲ ಎಂದು ನನ್ನ ಮನಸ್ಸಿಗೆ ದುಃಖವಾಗುತ್ತಿದೆ. I don't want any of the poor people to beg in the State. I want them to work hard and earn living. This is my earnest feeling, ಬಡವರನ್ನು ಭಿಕ್ಷುಕರನ್ನಾಗಿ ಮಾಡತಕ್ಕ ಪ್ರವೃತ್ತಿ ಸರಿಯಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಯೋಜನಾಬಾಹಿರವಾದಂಥ ಖರ್ಚುಗಳನ್ನು ಮಾಡಿ ಕೇಂದ್ರವನ್ನು ಹಣ ಕೇಳಿದರೆ, ಅವರನ್ನು ಬೈದರೆ ಹಣ ಕೊಡುತ್ತಾರೆಯೆ ! ಎಲ್ಲಿಂದ ಕೊಡುತ್ತಾರೆ ? ಪ್ಲಾನಿಂಗ್ ಕಮಿಷನ್ ಮುಂದೆ ಎನ್.ಡಿ.ಸಿ. ಮುಂದೆ ನಿಮ್ಮ ಯೋಜನಾ ಬಾಹಿರವಾದ ಕೆಲಸಗಳ ಬಗ್ಗೆ ಹೇಳಿ ಹಣ ಪಡೆದುಕೊಂಡು ಬನ್ನಿ, ಬಹಿಷ್ಕಾರ ಹಾಕಿ ಬರಬೇಡಿ. ವಾಕೌಟ್ ಮಾಡಿ ಬರಬೇಡಿ. ಹಿಂದೆ ನೀವು ಹೇಳಿದಂಥ ಕೆಲಸಗಳಲ್ಲಿ ಒಂದು ವರ್ಷದ ಮೇಲೆ ಒಂದು ಕೆಲಸ ಮಾಡಿದ್ದೀರಿ. 'Rich promises and half-hearted action ! ಹಲವಾರು ವಿಷಯಗಳನ್ನು ಹೇಳಿದ್ದಾರೆ. ತಾವು ಪರವಾನಿಗೆ ಕೊಟ್ಟರೆ ಓದುತ್ತೇನೆ. ತಮಗೂ ಕೂಡ ಟೊಳ್ಳು ವಾಗ್ದಾನಗಳನ್ನು ಕೇಳಿ ಕೇಳಿ ಸಾಕಾಗಿರಬೇಕು.

ಅಧ್ಯಕ್ಷರು.—ಹಾಗೇನೂ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಕಳೆದ ಎರಡು ವರ್ಷಗಳು ಏನೇನು ಹೇಳಿದ್ದರೋ ಅದನ್ನೇ ಈ ಸಾರಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಒಂದೇ ಒಂದು ವ್ಯತ್ಯಾಸ ಇಲ್ಲ. ರಾಜ್ಯಪಾಲರು ತಮ್ಮ ಕೆಲಸವನ್ನೂ ಸರಿಯಾಗಿ ಮಾಡುತ್ತಾರೋ, ಇಲ್ಲವೋ ಎನ್ನುವ ಬಗ್ಗೆ ಸಂಶಯ ಬಂದಿದೆ.

ವಿಶ್ವವಿದ್ಯಾನಿಲಯಗಳು ಇವೆ. ಇವುಗಳಿಗೆ ವೈಸ್ ಚಾನ್ಸಲರನ್ನು ನೇಮಕ ಮಾಡಬೇಕು. ಮೈಸೂರು ವಿಶ್ವವಿದ್ಯಾನಿಲಯಕ್ಕೆ ನಿವೃತ್ತಿ ಹೊಂದಿದವರನ್ನು ವೈಸ್‌ಚಾನ್ಸಲರನ್ನಾಗಿ ನೇಮಿಸಿದ್ದಾರೆ. ಅನುಸೂಚಿತ ಜಾತಿಗೆ ಸೇರಿದಂಥ ಪ್ರೊಫೆಸರುಗಳು ಯಾರು ಇರಲಿಲ್ಲವೋ ? ನಿವೃತ್ತಿ ಹೊಂದಿದವರನ್ನೇ ಮುಂದುವರಿಸಿಕೊಂಡು ಹೋಗುವುದಕ್ಕೆ ಅಧಿಕಾರಿಗಳ ಅಭಾವ ಇದೆಯೆ ? ರಾಜ್ಯಪಾಲರು ವೈಸ್ ಚಾನ್ಸಲರುಗಳನ್ನು ನೇಮಕ ಮಾಡುವುದಕ್ಕೆ ಯಾವ ಮಾಪನ ಯಾವ ಅಳತೆಗೋಲು ಇಟ್ಟುಕೊಂಡಿದ್ದಾರೆ ? ರಾಜ್ಯಪಾಲರಿಗೆ ಸ್ವತಂತ್ರವಾಗಿ ಯೋಚನೆ ಮಾಡತಕ್ಕ ಬುದ್ಧಿ ಇಲ್ಲ ಎನ್ನುವುದು ಈ ಭಾಷಣದಿಂದಲೇ ಸ್ಪಷ್ಟವಾಗುತ್ತದೆ.

ಶ್ರೀ ಆರ್. ಎಲ್. ಜಾಲಪ್ಪ.—ರಾಜ್ಯಪಾಲರಿಗೆ ಸ್ವಂತ ಯೋಚನೆ ಮಾಡುವ ಬುದ್ಧಿ ಇಲ್ಲವೆನ್ನುವ ಅರ್ಥ ಬರುತ್ತದೆ. ದಯವಿಟ್ಟು ಅದು ರೆಕಾರ್ಡ್‌ಗೆ ಹೋಗುವುದು ಬೇಡ. ರಾಜ್ಯಪಾಲರನ್ನು ನೇಮಕ ಮಾಡಿದಂತಹ ಕೇಂದ್ರಸರ್ಕಾರಕ್ಕೆ ಒಳ್ಳೆಯ ಹೆಸರು ಬರಬೇಕು. ತಾವು ಕೇಂದ್ರಸರ್ಕಾರವನ್ನು ದೂರುವುದು ಬೇಡ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಜಾಲಪ್ಪನವರಿಗೆ ಏತಕ್ಕೆ ಈ ಬುದ್ಧಿ ಬಂತು ! ನೀವು ಏನು ಮಾಡಿದ್ದೀರಿ, ನಾವು ಏನು ಮಾಡಿದ್ದೇವೆಂಬುದನ್ನು ನೋಡೋಣ. ಕೇಂದ್ರದಲ್ಲಿ ನಿಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ೮೯ವರ್ಷ ವಯಸ್ಸಿನವರನ್ನು ಆಂಧ್ರಪ್ರದೇಶಕ್ಕೆ ರಾಜ್ಯಪಾಲರನ್ನಾಗಿ ನೇಮಕ ಮಾಡಿದ್ದೀರಿ.

ಶ್ರೀ ಆರ್. ಎಲ್. ಜಾಲಪ್ಪ.—ರಾಜ್ಯಪಾಲರಿಗೆ ಸ್ವಂತ ಬುದ್ಧಿ ಇಲ್ಲವೆಂದು ತಾವೇ ಹೇಳುತ್ತಿದ್ದೀರಿ...

ಶ್ರೀ ಕೆ. ಎಚ್. ಪಾಟೀಲ್.—ರಾಜ್ಯಪಾಲರ ಭಾಷಣವನ್ನು ನೋಡಿದರೆ ಹಾಗೆ ಅನಿಸುತ್ತದೆ. ರಾಜ್ಯಪಾಲರ ಭಾಷಣವನ್ನು ಬರೆದವರು ನೀವು, ಅವರಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಪಾಟೀಲ್‌ರವರ ವ್ಯಾಖ್ಯಾನ ಮಾನ್ಯ ಮಂತ್ರಿಗಳ ವ್ಯಾಖ್ಯಾನ ಕೇಳಿದ್ದೇನೆ. ರಾಜ್ಯಪಾಲರಾಗುವುದಕ್ಕೆ ಸ್ವಂತ ಬುದ್ಧಿ ಇರುವವರು ಯಾರೂ ಬರುವುದಿಲ್ಲ. ಸ್ವಂತವಾಗಿ ಜೀವನ ಮಾಡತಕ್ಕವರು ಯಾರೂ ಬರುವುದಿಲ್ಲ. ದೇಶಸೇವೆ ಮಾಡಬೇಕೆನ್ನುವ ಕೆಲವರು ಬರಬಹುದು. ನಾನು ರಾಜ್ಯಪಾಲರ ಭಾಷಣವನ್ನು ಓದಿದ ಮೇಲೆ ಸ್ಪಷ್ಟವಾಗಿ ಹೇಳುತ್ತೇನೆ, ಜೊತೆಗೆ ನನ್ನ ಅನುಭವದಲ್ಲಿ ಹೇಳುತ್ತಿದ್ದೇನೆ ಸ್ವಂತ ಬುದ್ಧಿ ಇರತಕ್ಕವರು ಯಾರೂ ರಾಜ್ಯಪಾಲರಾಗಿ ಬರುವುದಿಲ್ಲ. ಈ ಭಾಷಣದಲ್ಲಿ ಕಿಂಚಿತ್ತು ಕೂಡ ಅವರ ಕೈವಾಡ ಇಲ್ಲವೇ ಇಲ್ಲ. ಅವರ ಸಲಹೆಗಳನ್ನು ಇಲ್ಲಿ ಅಳವಡಿಸಿಲ್ಲ. ಮಾನ್ಯ ರಾಮಕೃಷ್ಣ ಹೆಗಡೆಯವರು ಅಲ್ಪಸಂಖ್ಯಾತರ ಬಗ್ಗೆ ಅನುಸೂಚಿತ ಜಾತಿ ಮತ್ತು ಪಂಗಡಗಳ ಬಗ್ಗೆ ಹೇಳಿದ್ದಾರೆ, ಅವರ ಬಗ್ಗೆ ಒಂದು ಪುಟ ಹೇಳಿದ್ದಾರೆ. ಇವರು ಅಧಿಕಾರಕ್ಕೆ ಬಂದಾಗಿನಿಂದಲೂ ಅದನ್ನೇ ಹೇಳುತ್ತಿದ್ದಾರೆ, ಅದನ್ನು ಈಗ ಓದುವುದಕ್ಕೆ ಸಮಯವಿಲ್ಲ. ಹಿಂದುಳಿದವರ ಕಲ್ಯಾಣ ಮಾಡುವ ಸಲುವಾಗಿ ಒಂದು ಆಯೋಗ ನೇಮಿಸುತ್ತೇವೆಂದು ಹೇಳಿ ಆಯೋಗ ನೇಮಿಸಿದ್ದಾರೆ. ಆ ಆಯೋಗದ ಅಧ್ಯಕ್ಷರನ್ನಾಗಿ ಯಾರನ್ನು ನೇಮಿಸಿದ್ದಾರೆ ? ಒಬ್ಬ ನಿವೃತ್ತ ಅಧಿಕಾರಿಯನ್ನು ನೇಮಿಸಿದ್ದಾರೆ. ಅವರಿಗೆ ಹಿಂದುಳಿದ ವರ್ಗದವರ ಕಲ್ಯಾಣ ಏನು ಬೇಕು. ಅವರಿಗೆ ಸಂಬಳ ಬೇಕು, ಒಳ್ಳೆಯ ಮನೆ ಬೇಕು. ಅಷ್ಟೆ ಇನ್ನು ನಾಲ್ಕಾರು ತಿಂಗಳಾದರೂ ಅವರು ರಿಪೋರ್ಟ್ ಕೊಡುವುದಿಲ್ಲ. ಕರ್ನಾಟಕ ರಾಜ್ಯದಲ್ಲಿ ಹಿಂದುಳಿದವರ ಬಗ್ಗೆ ಯಾವುದೇ ರಿಪೋರ್ಟ್ ಇಲ್ಲವೆ ? ಮಂಡಲ್ ಕಮಿಷನ್ ರಿಪೋರ್ಟ್‌ನ್ನು ಜಾರಿಗೆ ಕೊಡುತ್ತೇವೆಂದು ಹೆಗಡೆಯವರು ಹೇಳಿದ್ದಾರೆ, ಅದನ್ನು ನಾವು ಮಾಡೇ ಮಾಡುತ್ತೇವೆಂದು ಹೇಳಿದ್ದಾರೆ ಅದನ್ನು ಜಾರಿಗೆ ಕೊಡಿ. ನಮಗೆ ಆ ಒಂದು ಶಕ್ತಿ ಧೈರ್ಯ ನಮಗೆ ಇದೆಯೆಂದು ಹೇಳಿದ್ದೀರಿ. ಮಾನ್ಯ ಹಾವನೂರು ಕಮಿಷನ್ ರಿಪೋರ್ಟ್‌ನ್ನು ಕೈಬಿಟ್ಟಿದ್ದೀರಿ. ಈಗ ಒಂದು ಆಯೋಗ ನೇಮಕಮಾಡಿ ನಿವೃತ್ತ ಅಧಿಕಾರಿ ವೆಂಕಟಸ್ವಾಮಿ ಅವರನ್ನು ನೇಮಿಸಿದ್ದೀರಿ. ಅವರು ಎರಡೂ ವರ್ಷದಿಂದ ಏನು ಯೋಚನೆ ಮಾಡುತ್ತಿದ್ದಾರೆ ? ಏನು ಬರೆಯುತ್ತಿದ್ದಾರೆ? ಅದು ನನಗೆ ಅರ್ಥವಾಗುತ್ತಿಲ್ಲ. ಅವರಿಗೆ ನಿಜವಾಗಿಯು ಹಿಂದುಳಿದವರ್ಗಗಳ ಬಗ್ಗೆ ಅಭಿಮಾನವಿದ್ದರೆ, ಇಷ್ಟೊತ್ತಿಗೆ ರಿಪೋರ್ಟ್ ಕೊಡಬೇಕಾಗಿತ್ತು. ನಿಮಗೆ ಹಿಂದುಳಿದವರ್ಗದವರ ಬಗ್ಗೆ ಅಭಿಮಾನವಿದ್ದರೆ, ಅವರಿಗೆ ನೀವು ರಕ್ಷಣೆ ಕೊಡಬೇಕೆನ್ನುವ ಆಸೆಯಿದ್ದರೆ ವೆಂಕಟಸ್ವಾಮಿಯವರ ರಿಪೋರ್ಟನ್ನು ತರಿಸಿಕೊಂಡು ಜಾರಿಗೆ ಕೊಡಬೇಕು. ಅನುಸೂಚಿತ ಜಾತಿಗಳ ಬಗ್ಗೆ ಮಾನ್ಯ ರಾಮಕೃಷ್ಣ

ಹೆಗಡೆಯವರು ಮುಖ್ಯಮಂತ್ರಿಗಳಾದ ಮೇಲೆ ಬಹಳ ಕಳಕಳಿಯಿಂದ ಹೇಳಿದ್ದಾರೆ, ಹಿಂದುಳಿದವರ್ಗಗಳ ವರದಿ ಏನು ಇದೆ ಅದು ನಮ್ಮ ನೋಟೀಸ್ ಆಫೀಸಿನಲ್ಲಿದೆ, ಅದರಲ್ಲಿ ಅನುಸೂಚಿತಜಾತಿ ಮತ್ತು ಪಂಗಡಗಳವರಿಗೆ ಏನು ಮಾಡಬೇಕೆಂದು ಅದೆಲ್ಲವನ್ನು ಹೇಳಿದ್ದಾರೆ. ಅದರಲ್ಲಿಕಾರ್ಯಕ್ರಮಗಳೆಲ್ಲಾ ಇವೆ. ಅದನ್ನೆಲ್ಲಾ ಜಾರಿಗೆ ಕೊಡುತ್ತೇವೆಂದು ಹೇಳಿದ್ದೀರಿ. ಅದರಲ್ಲಿ ಎಷ್ಟು ಜಾರಿಗೆ ಕೊಟ್ಟಿದ್ದೀರಿ ಎಂದು ಕೇಳುತ್ತಿದ್ದೇನೆ. ಅದನ್ನು ಜಾರಿಗೆ ಕೊಡಲಿಕ್ಕೆ ನೀವು ಪ್ರಯತ್ನ ಮಾಡಲಿಲ್ಲ. ಇವತ್ತು ನಾವು ಹೊಸದಾಗಿ ಮಾಡುತ್ತೇವೆಂದು ಎರಡು ವರ್ಷಗಳಿಂದ ಹೇಳುತ್ತಾ ಅದನ್ನೇ ಪುನರುಚ್ಚಾರ ಮಾಡಿದ್ದೀರಿ. ನಿಮಗೆ ಅದರ ಬಗ್ಗೆ ಆಸಕ್ತಿಯಿಲ್ಲ. ಅದನ್ನು ಕಾರ್ಯಗತ ಮಾಡಲಿಕ್ಕೆ ನಿಮಗೆ ನಿಷ್ಠೆಯಿಲ್ಲ, ಅದನ್ನು ಜಾರಿಗೆ ಕೊಡುತ್ತೇವೆನ್ನುವ ಟೊಳ್ಳು ಭಾಷಣ ಮಾಡಿಕೊಂಡು ರಾಜ್ಯಭಾರ ಮಾಡಲಿಕ್ಕೆ ಹೊರಟಿದ್ದೀರಿ ಇದನ್ನು ನೀವು ಬಿಡಬೇಕು. ಅನುಸೂಚಿತ ಜಾತಿಗಳವರಿಗೆ ನೇರವಾಗಿ ಕೆಲಸ ಕೊಡುತ್ತೇವೆಂದು ಹೇಳುತ್ತಿದ್ದೀರಿ, ಅದರ ಬಗ್ಗೆ ಮಾನ್ಯ ಕೆ. ಎಚ್. ಪಾಟೀಲರು ಬಹಳ ಚೆನ್ನಾಗಿ ಹೇಳಿದ್ದಾರೆ. ನೀವು ಅವರ ಬಗ್ಗೆ ಏನು ಕೆಲಸ ಮಾಡುತ್ತಿದ್ದೀರಿ ? ಒಂದು ವರ್ಷದಲ್ಲಿ ೧೦ರಿಂದ ೧೫ಸಾವಿರ ವೇಕೆನ್ಸಿಯಾಗುತ್ತವೆ. ಆಗ ವರ್ಷಕ್ಕೆ ೧೨ಸಾವಿರ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುತ್ತಿತ್ತು. ನೀವು ಅಧಿಕಾರಕ್ಕೆ ಬಂದ ಮೇಲೆ ಮೂರು ವರ್ಷ ಸೇವಾವಧಿಯನ್ನು ಜಾಸ್ತಿ ಮಾಡಿದ್ದರಿಂದ ನಿರುದ್ಯೋಗಿಗಳಿಗೆ ಉದ್ಯೋಗ ದೊರೆಯುವ ಹಾಗೆ ಇಲ್ಲ. ಉಪಾಧ್ಯಾಯರ ಹುದ್ದೆಗಳನ್ನು ಭರ್ತಿಮಾಡುತ್ತೇವೆಂದು ಹೇಳುತ್ತೀರಿ, ಎಷ್ಟು ಹುದ್ದೆಗಳನ್ನು ಭರ್ತಿಮಾಡಿದ್ದೀರೋ ನಮಗೆ ಗೊತ್ತಿಲ್ಲ. ೧೦ ಸಾವಿರ ಹುದ್ದೆಗಳು ಖಾಲಿಯಿದ್ದರೆ ಅವುಗಳನ್ನು ಭರ್ತಿ ಮಾಡಿದಾಗ ೧೮೦೦ ಹುದ್ದೆಗಳು ಅನುಸೂಚಿತ ಜಾತಿ ಮತ್ತು ಪಂಗಡಗಳವರಿಗೆ ದೊರೆಯುತ್ತವೆ, ನಮ್ಮ ರಾಜ್ಯದಲ್ಲಿ ಸುಮಾರು ಮೂರುವರೆ ನಾಲ್ಕು ಲಕ್ಷ ಜನ ಸರ್ಕಾರಿ ನೌಕರರು ಇರಬಹುದು. ತಾವು ಹುದ್ದೆಗಳನ್ನು ಭರ್ತಿಮಾಡಿದರೆ ತಾನೇ ಇವರಿಗೆ ಹುದ್ದೆ ಸಿಗುವುದು. ಶೇಕಡ ೧೮ರಷ್ಟು ಮೀಸಲಾತಿಯನ್ನು ನೂರಾರು ವರ್ಷ ಇಟ್ಟುಕೊಳ್ಳಬೇಕೆನ್ನುವ ಆಸೆ ಆ ಒಂದು ಇಚ್ಛೆ ನಮಗಿಲ್ಲ. ಜಾಗ್ರತೆ ಅದನ್ನು ತೊಲಗಿಸಬೇಕೆಂಬುದೇ ನಮ್ಮ ಇಚ್ಛೆ. ೧೦ಸಾವಿರ ಹುದ್ದೆಗಳನ್ನು ಭರ್ತಿಮಾಡಿದರೆ ೧೮೦೦ ಹುದ್ದೆಗಳು ಅನುಸೂಚಿತಜಾತಿ ಮತ್ತು ಪಂಗಡಗಳವರಿಗೆ ದೊರೆಯುತ್ತವೆ. ಆಗ ೧೮ ಪರ್ಸೆಂಟ್ ಆಗುತ್ತದೆ. ಎಷ್ಟು ವರ್ಷಗಳಿಗೆ ನಾವು ಶೇಕಡ ೧೮ರಷ್ಟಕ್ಕೆ ಬರುವುದು ? ಬರಲಿಕ್ಕೆ ಆಗುವುದಿಲ್ಲ. ದೇಶಕ್ಕೆ ಸ್ವರಾಜ್ಯ ಬಂದು ೩೬ ವರ್ಷಗಳಾದರೂ ಆಗಿನಿಂದ ಸತತವಾಗಿ ಪ್ರಯತ್ನ ಮಾಡಿದರೂ ೭ — ೮ ಪರ್ಸೆಂಟ್‌ಗೆ ಬಂದಿದ್ದೇವೆ. ಇನ್ನೆಷ್ಟು ವರ್ಷಗಳ ಪ್ರಯತ್ನ ಮಾಡಬೇಕು ? ನಿಮಗೆ ಮೀಸಲಾತಿಯನ್ನು ಇನ್ನೂ ೩೦ ವರ್ಷಗಳು ಮುಂದು ವರಿಸಬೇಕೆಂದು ಇಚ್ಛೆಯಿದ್ದರೂ ಅದು ನಮಗೆ ಇಚ್ಛೆಯಿಲ್ಲ. ಸತತವಾಗಿ ಮೀಸಲಾತಿಯು ಮುಖಾಂತರ ಬರಲಿಕ್ಕೆ ನಮಗೆ ಇಚ್ಛೆಯಿಲ್ಲ. ಗುಜರಾತ್ ಮತ್ತು ಮಧ್ಯಪ್ರದೇಶಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ಕೊಡುವುದು ಬೇಡವೆನ್ನುವ ಬಗ್ಗೆ ಆಂದೋಳನ ನಡೆಯುತ್ತಿದೆ ಅವರು ಇನ್ನೂ ಗುಲಾಮರಾಗಿರಬೇಕೆನ್ನುವವರು ಆಂದೋಳನ ಮಾಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಅದಕ್ಕೆ ಕಾಂಗ್ರೆಸ್ ಸರ್ಕಾರ ಸೊಪ್ಪು ಹಾಕುವುದಿಲ್ಲ. ನಾನು ತಮಗೆ ಏನು ಹೇಳುತ್ತಿದ್ದೇನೆಂದರೆ ಮೀಸಲಾತಿ ನಿಯಮ ಏನಿದೆ ಅದು ಆದಷ್ಟು ಜಗ್ರತೆ ಕೊನೆಯಾಗಬೇಕು, ಆದಷ್ಟು ಬೇಗ ಶೇಕಡ ೧೮ರಷ್ಟು ಹುದ್ದೆಗಳನ್ನು ಭರ್ತಿ ಮಾಡಲಿಕ್ಕೆ ಸರ್ಕಾರ ಪಾರಂಭಮಾಡಬೇಕು. ಬಡ್ತಿ ಕೊಡುವ ವಿಚಾರದಲ್ಲಿ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಏನು ಮಾಡಿದ್ದೀರಿ ? ಅನುಸೂಚಿತಜಾತಿ ಮತ್ತು ಪಂಗಡಗಳವರಿಗೆ ಹೈಯರ್ ಪೋಸ್ಟ್‌ಗಳಲ್ಲಿ ಪ್ರಾತಿನಿಧ್ಯವಿಲ್ಲ. ಇವರಿಗೆ ಮೀಸಲಾತಿಯಿರಬೇಕೆಂದು ಕಾಂಗ್ರೆಸ್ ಸರ್ಕಾರದವರು ಮೀಸಲಾತಿಯನ್ನು ಇಟ್ಟಿದ್ದರು. ನೀವು ಅಧಿಕಾರಕ್ಕೆ ಬಂದ ತಕ್ಷಣ ಅದನ್ನು ಕಿತ್ತುಹಾಕಿದಿರಿ. ನೇಮಕಾತಿ ಮಾಡುವಾಗ ೨೫ ಪರ್ಸೆಂಟ್ ಮಾಡಿದ್ದೇವೆಂದು ಹೇಳಿದ್ದಿರಿ. ನೀವು ರಿಕ್ರೂಟ್‌ಮೆಂಟ್ ಮಾಡಿದರೆ ತಾನೇ ಪರ್ಸೆಂಟೇಜ್ ಬರುವುದು. ನೀವು ನೇರವಾಗಿ ನೇಮಕಾತಿಯನ್ನು ಮಾಡಿದರೆ ಮೀಸಲಾತಿ ದೊರೆಯುತ್ತದೆ. ನೀವು ನೇಮಕಾತಿಯನ್ನು ಮಾಡದೇ ಹೋದರೆ ಮೀಸಲಾತಿಯನ್ನು ಕೊಡುವುದಕ್ಕೆ ಆಗುವುದಿಲ್ಲ. ಕಳೆದ ೨ ವರ್ಷಗಳಿಂದ ನೇರವಾದ ನೇಮಕಾತಿಗಳನ್ನು ಎಷ್ಟು ಮಾಡಿದ್ದೀರಿ ಎಂಬುದನ್ನು ದಯಮಾಡಿ ತಾವು ಹೇಳಿಕೆ ಕೊಡುವಾಗ ಹೇಳಿ. ನೇಮಕಾತಿಯನ್ನು ಮಾಡದೇ ೨೫ಪರ್ಸೆಂಟ್ ಮಾಡಿದ್ದೇವೆಂದು ಹೇಳಿದರೆ ಏನು ಪ್ರಯೋಜನ ? ಹಳ್ಳಿಯ ಕಡೆ ಒಂದು ಗಾದೆ ಹೇಳುತ್ತಾರೆ ಅದೇನೆಂದರೆ 'ಹೇಳಿದ್ದೇ ಹೇಳೋ ಕಿಸಬಾಯಿದಾಸ'' ಎನ್ನುವ ಹಾಗೆ ನೀವು ಎರಡು ವರ್ಷಗಳಲ್ಲಿ ಹೇಳಿದ್ದನ್ನು ಅದೇ ಭಾಷಣವನ್ನು ಪುನರುಚ್ಚಾರ ಮಾಡಿ

ನಮ್ಮನ್ನು ಮರಳುಗೊಳಿಸುವುದಕ್ಕೆ ಹೋಗುವುದು ಬೇಡ. ಆ ರೀತಿ ಮಾಡಿದರೆ ಜನರು ನಿಮ್ಮನ್ನು ಸುಳ್ಳರು ಎಂದು ತಿಳಿದುಕೊಳ್ಳುತ್ತಾರೆ.

ಶ್ರೀ ಆರ್. ಎಲ್. ಜಾಲಪ್ಪ.—ನಾವು ಅಧಿಕಾರಕ್ಕೆ ಬರುವ ಮೊದಲು ಮೂರು ವರ್ಷಗಳ ಕಾಲ ಗುಂಡೂರಾಯರ ಕಾಲದಲ್ಲಿ ಎಷ್ಟು ನೇಮಕಾತಿಗಳನ್ನು ಮಾಡಿದ್ದಾರೆ ? ನಾವು ಅಧಿಕಾರಕ್ಕೆ ಬಂದ ಮೇಲೆ ೬೦೦ ಜನ ಇಂಜಿನಿಯರ್‌ಗಳನ್ನು ೮೦೦ ಜನ ಡಾಕ್ಟರುಗಳನ್ನು ಸುಮಾರು ೧೫-೨೦ ಸಾವಿರ ಉಪಾಧ್ಯಾಯರನ್ನು ನೇಮಕ ಮಾಡಿದ್ದೇವೆ. ಗುಂಡೂರಾಯರ ಕಾಲದಲ್ಲಿ ಯಾವುದೇ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಈಗ ನೀವು ಏನು ಮಾಡಿದ್ದೀರಿ ? ಶ್ರೀಮಾನ್ ಕೃಷ್ಣೇಗೌಡರು ಹೇಳಿದರು. ನಾವು ಮಾಡಿಲ್ಲ ಮನೆಗೆ ಹೋಗಿದ್ದೇವೆಂದು. ನೀವು, ಮಾಡುತ್ತೇವೆ ಮಾಡುತ್ತೇವೆ ಎಂದು ಭಾಷಣ ಮಾಡಿ ಬಂದಿದ್ದೀರಿ. ನೀವು ಎಷ್ಟು ನೇಮಕಾತಿಗಳನ್ನು ನೇರವಾಗಿ ಮಾಡಿದ್ದೀರಿ ಎನ್ನುವುದನ್ನು ನಾಳೆ ಅಂಕಿ ಅಂಶ ಕೊಡಿ

ಶ್ರೀ ಡಿ. ಟಿ. ಜಯಕುಮಾರ್.—ಐದು ವರ್ಷ ಕಾದು ನೋಡಿ, ನಿಮಗೆ ಅಧಿಕಾರ ಬಂದಾಗ ಮಾಡಲಿಲ್ಲ. ನಮಗೆ ಅಧಿಕಾರ ಬಂದಿದೆ ಕಾದು ನೋಡಿ.

ಶ್ರೀ ಬಿ. ಬಸವಲಿಂಗಪ್ಪ.—ಈಗ ಪುನಃ ವಾಗ್ದಾನ ಮಾಡುತ್ತಾರೆ, ಯಾವುದು ಕಾರ್ಯಗತ ಆಗಿಲ್ಲ. ಯಾರಿಗೆ ಸಹಾಯ ಮಾಡಿದ್ದೀರಿ? ಯಾರಿಗೂ ಸಹಾಯ ಮಾಡುವುದಕ್ಕಾಗುವುದಿಲ್ಲ ನಾನು ಬಹಳ ವರ್ಷಗಳಿಂದ ಈ ಸರ್ಕಾರದಲ್ಲಿ ಅನುಭವ ಹೊಂದಿದ್ದೇನೆ. ಯಾವ ಅಧಿಕಾರಿಗಳು ಕೂಡ ಸರಿಯಾಗಿ ಕೆಲಸತವನ್ನು ಮಾಡಲಿಲ್ಲ. ಯಾವುದಕ್ಕೂ ನಿಯಮ ಬೇಕಾಗುತ್ತದೆ. ನೀವು ಅಧಿಕಾರಕ್ಕೆ ಬಂದ ತಕ್ಷಣ ಅನುಸೂಚಿ ವರ್ಗದವರಿಗೆ ೫೭ ಜನರಿಗೆ ನೇರವಾಗಿ ನೇಮಕ ಮಾಡುತ್ತೇವೆಂದು ಹೇಳಿದ್ದೀರಿ. ಅದನ್ನು ಜಾರಿಗೆ ಕೊಡಲಿಕ್ಕೆ ಆಗಲಿಲ್ಲ. ಈ ರಾಜ್ಯದ ೧೮೯ನೇ ವಿಧಿ ಪ್ರಕಾರ ನಾವು ನಿಯಮಾವಳಿ ಮಾಡಲೇಬೇಕು. ೫೭ ಜನರಿಗೆ ನೇರವಾಗಿ ಅನುಸೂಚಿತ ವರ್ಗದವರಿಗೆ ನೇಮಕ ಮಾಡುತ್ತೇವೆಂದು ಹೇಳಿದಿರಿ. ಅದನ್ನು ಜಾರಿಗೆ ಕೊಡುವುದು ಕಾಗಲಿಲ್ಲ. ಮಾನ್ಯ ರಾಚಯ್ಯನವರು ಈಗತಾನೇ ಬಂದಿದೆ ಮಾಡುತ್ತೇವೆಂದು ಹೇಳಿದರು. ನಾನು ಹೇಳುತ್ತೇನೆ, ಯಾವ ಯಾವ ಖಾತೆಗೆ ಸಂಬಂಧಪಟ್ಟಿರತ ವಾಗ್ದಾನ ಇದೆ ಅವುಗಳ ವರದಿಯನ್ನು ಚಾಚು ತಪ್ಪದೆ ಇಲಾಖೆಯಿಂದ ತರಿಸಿಕೊಳ್ಳಬೇಕು. ಬಹಳ ವಿಷಯಗಳ ಮೇಲೆ ವಾಗ್ದಾನ ಮಾಡಿದ್ದಾರೆ. ಪ್ರತಿಯೊಂದನು ಕೂಡ ನೀವುಯಾವ ರೀತಿಯಲ್ಲಿ ಮಾಡುತ್ತಿದ್ದೀರಿ ಎನ್ನುವುದನ್ನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿದ್ದೇವೆ. ಜನಗಳ ಭರವಸೆಗಳನ್ನು ಈಡೇರಿಸದಿದ್ದರೆ ಮತ್ತೆ ಜನಗಳ ಹತ್ತಿರ ಹೋಗುವುದಕ್ಕೆ ನೀವು ಅಸಕ್ತರಾಗುತ್ತೀರಿ. ಯಾವ ಕೆಲಸವನ್ನೂ ಮಾಡಿಲ್ಲ ಎನ್ನತಕ್ಕದ್ದು ಜನಗಳಿಗೆ ಮನವರಿಕೆಯಾದಾಗ ಪುನ: ನಿಮಗೆ ಏನು ಬೇಕೋ ಅದನ್ನು ಮಾಡಲಿಕ್ಕೆ ಸಿದ್ಧರಾಗಿದ್ದಾರೆ. ನೀವು ಕೂಡ ಕಣ್ಣಲ್ಲಿ ಕಣ್ಣಿಟ್ಟು ಏನೇನು ವಾಗ್ದಾನ ಮಾಡಿದ್ದೀರೋ ಅದನ್ನು ಕಾರ್ಯಗತ ಮಾಡಿ ರಾಜ್ಯಪಾಲರ ಭಾಷಣದಲ್ಲಿ ಕಟುವಾಗಿ ಟೀಕೆ ಮಾಡಿದ್ದಾರೆ. ಅದು ಯೋಜನಾ ಬಾಹಿರವಾದ ಯೋಜನೆಗಳು ಅದನ್ನು ಅವರು ಹಿಡಿಯಬೇಕಾಗಿತ್ತು. ಅದು ಆಗುವುದಿಲ್ಲವೆಂದು ಹೇಳಿ ಈ ಭಾಷಣಕ್ಕೆ ಸರಿಯಾದ ತಿದ್ದುಪಡಿ ಮಾಡಿ ಭಾಷಣ ಮಾಡಬೇಕಾಗಿತ್ತು, ಆದರೆ ಆ ರೀತಿ ಆಗಿಲ್ಲ. ಆದುದರಿಂದ ಟೀಕೆ ಮಾಡುತ್ತೇನೆ. ಇಷ್ಟು ಹೇಳಿ ನನಗೆ ಇಷ್ಟು ಹೊತ್ತು ಮಾತನಾಡಲಿಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲಿನ ಚರ್ಚೆ ಮುಗಿಯಿತು. ೬—೪—೮೫ರಂದು ಶನಿವಾರ ೯ ಗಂಟೆಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುತ್ತಾರೆ.

(ಸಭೆಯು ಆರು ಘಂಟೆ ನಲವತ್ತೈದು ನಿಮಿಷಕ್ಕೆ ಮುಕ್ತಾಯವಾಗಿ, ಪುನಃ ದಿನಾಂಕ ೬ನೇ ಏಪ್ರಿಲ್ ೧೯೮೫ರ ಶನಿವಾರದಂದು ಒಂಭತ್ತು ಘಂಟೆಗೆ ಸೇರಲು ನಿಶ್ಚಯಿಸಲಾಯಿತು.)